ನೆನಪಿನ ನವರಸ



ಪದ್ಮಾಶ್ರೀಧರ್

ನೆನಪಿನ ನವರಸ

(ಕುತೂಹಲಕಾರೀ, ರೋಚಕ ನೆನಪುಗಳು)

ಶ್ರೀಮತಿ ಪದ್ಮಾ ಶ್ರೀಧರ್

ಕೀರ್ತಿ ಪ್ರಕಾಶನ
೨೩೦, ೧೬೭ ಕಟ್ಟಡ, ಕೆ. ಹೆಚ್. ಬಿ. ಶಿರ್ಕೆ ಅಪಾರ್ಟ್‌ಮೆಂಟ್ಸ್,
ಕೆಂಗೇರಿ ಉಪನಗರ, ಬೆಂಗಳೂರು- ೫೬೦೦೬೦.

NENAPINA NAVARASA- a collection of humarous memories by Smt. PADMA SHREEDHAR, M.A., 1246, 'chiguru', 7th B Cross, New Town, Yalahanka, Bangalore- 57
and published by Keerthi Prakashana, 230, Bld.167, KHB Sirke Apartments, Kengeri Upanagara, Bangalore 560060

Printed on Maplitho 70 GSM paper.
No.of Pages: 208+4=212, Crown1/8.
Printed on 70 GSM maplitho paper.
Year of first publication: 2012.

Price: Rs. 160/-

DTP: Smt. Asha Nayak

Printed at: Harshini Offset Printers, Bangalore-4

‘ ನೆನಪಿನ ನವರಸ ’ ಗಳನ್ನು
ಉಣಬಡಿಸುವ ಈ ಸಂಕಲನವನ್ನು
ಕಾಲೇಜಿನಲ್ಲಿ ನನ್ನ ಸಹಪಾಠಿಯಾಗಿದ್ದ

ದಿ॥ ಗುತ್ತಿಗೆ ಮಾನಪ್ಪನಿಗೆ

ಶ್ರದ್ಧಾಂಜಲಿಯಾಗಿ
ಅರ್ಪಿಸುತ್ತೇನೆ

–ಪದ್ಮಾ ಶ್ರೀಧರ್

ಮೊದಲ ನುಡಿ

'ನೆನಪಿನ ನವರಸ'ಗಳು ಪ್ರಸಂಗಗಳ ಸಂಕಲನ. ಕಂಡಿದ್ದು, ಕೇಳಿದ್ದ, ನೆನಪಿನ ನೆಲ ಮಾಳಿಗೆಯಲ್ಲಿ ಉಳಿದಿದ್ದ ಪ್ರಸಂಗಗಳನ್ನು, ವಿಷಯಗಳನ್ನು ಬರೆದಿದ್ದೇನೆ. ಯಾವುದೇ ವಿಷಯವನ್ನು ಹೇಳುವಾಗ, ಬರೆಯುವಾಗ, ಸವಿಸ್ತಾರವಾಗಿ ತಿಳಿಸುವ ಚಪಲ ನನ್ನದು. ಹಾಗಾಗಿ ಪ್ರಸಂಗಗಳಿಗೆ, ಪೀಠಿಕೆ, ಮಧ್ಯಭಾಗ ಹಾಗೂ ಹಿನ್ನುಡಿಗಳಿವೆ. ನನಗೆ ತಿಳುವಳಿಕೆ ಬಂದಾಗಿನಿಂದ, ಬೆಳೆಯುವಾಗ, ಓದುವಾಗ, ಓಡಾಡುವಾಗ, ಸಿಕ್ಕ ಅನೇಕ ವಿಷಯಗಳನ್ನು ಬರೆದಿದ್ದೇನೆ. ಹಳ್ಳಿಯಲ್ಲಿ ಬೆಳೆಯುವಾಗ, ದನಕರುಗಳು, ಕ್ರಿಮಿ ಕೀಟಗಳೊಡನೆ ಆದ ಅನುಭವಗಳು, ವಿದ್ಯಾಭ್ಯಾಸ ಮಾಡುವಾಗ, ಸ್ಕೂಲಿನಲ್ಲಿ ಕಾಲೇಜಿನಲ್ಲಿ ನಡೆದ ಫಜೀತಿಗಳು, ಮದುವೆಯಾಗಿ ಗಂಡನ ಮನೆಗೆ ನವವಧುವಾಗಿ ಹೋದ ಸಂದರ್ಭ, ಬೇರೆ ಬೇರೆ ಊರುಗಳಲ್ಲಿ ನಡೆದ ಘಟನೆಗಳು, ಪರದಾಟಗಳು, ಬೆಂಗಳೂರಿಗೆ ಬಂದು ಇರತೊಡಗಿದ ಮೇಲೆ, ಅಲ್ಲಿ ಇಲ್ಲಿ ವನವಿಹಾರ, ವಾಯುವಿಹಾರಕ್ಕೆಂದು ತೆರಳಿದಾಗ ನಡೆದ ತಮಾಷೆಯ ಸಂಗತಿಗಳು... ಎಲ್ಲವನ್ನು ಬರೆದಿದ್ದೇನೆ. ಇಲ್ಲಿ ನವರಸಗಳೆಲ್ಲವೂ ಇಲ್ಲದಿದ್ದರೂ, ರಸಮಯವಾಗಿರಬಹುದು ಎಂಬ ಅನಿಸಿಕೆ ನನ್ನದು.

ಇದುವರೆಗೆ, ಕತೆ ಕಾದಂಬರಿಗಳನ್ನಷ್ಟೇ ಬರೆದುದರಿಂದ, ಈ ಪ್ರಸಂಗಗಳನ್ನು ಕಥಾ ರೂಪದಲ್ಲಿ ರಚಿಸಿದ್ದೇನೆ. ಓದುಗರಿಗೆ ರುಚಿಸುತ್ತದೆಂಬ ನಂಬಿಕೆ ನನ್ನದು.

ಈ ಬರಹಗಳನ್ನು ಬರೆಯಲು ಪ್ರೋತ್ಸಾಹ ನೀಡಿದ, ಉತ್ಸಾಹದಿಂದ ಈ ಸಂಕಲವನ್ನು ಪ್ರಕಟಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿರುವ ಪ್ರಕಾಶಕ ಶ್ರೀ ಶಿವಾನಂದರವರಿಗೆ ನನ್ನ ಕೃತಜ್ಞತೆಗಳು. ಓದುಗರಿಗೆ ವಂದನೆಗಳು.

ಇತಿ,

ತಮ್ಮ ವಿಶ್ವಾಸಿ

೧೬-೧೦-೨೦೧೨ — ಪದ್ಮಾ ಶ್ರೀಧರ್

ಪರಿವಿಡಿ

* * * *

೧. ವರಾಹ ವೈಭವ

ಚಳಿಗಾಲದ ಸಾಯಂಕಾಲ ಸೂರ್ಯ ತನ್ನ ತಾಪವನ್ನು ಕಡಿಮೆ ಮಾಡಿಕೊಂಡಿದ್ದನಾದ್ದರಿಂದ ವಾತಾವರಣ ತಣ್ಣಗಾಗಿತ್ತು. ಮುಳುಗುತ್ತಿರುವ ಸೂರ್ಯನಿಗೆದುರಾಗಿ ಕೈ ಕಟ್ಟಿ, ಮಂಬಾಗಿಲ ಬಳಿ ನಿಂತಿದ್ದೆವು. ಸಮೀಪದಲ್ಲೇ ಎಲ್ಲಿಂದಲೋ ಚರಚರ ಎಂದು ಹುಲ್ಲನ್ನು ಕತ್ತರಿಸುವ ಮತ್ತು ಗುಟರ್ ಗುಟರ್ ಎನ್ನುವ ಸದ್ದು ಕೇಳಿಸಿತು. ನಮ್ಮ ಮನೆಯ ಪಕ್ಕದ ನಿವೇಶನ ಖಾಲಿ ಇದ್ದಿತು. ಅಲ್ಲಿ ಹುಲ್ಲು ಬೆಳೆದಿರಲಿಲ್ಲ. ಶತ್ತೆ ಬೆಳೆದಿತ್ತು. ಸಣ್ಣ ಸಣ್ಣ ಪೊದೆಗಳಿದ್ದವು. ಕಾಂಪೌಂಡ್ ಗೋಡೆಯ ಬಳಿ ನಿಂತು ಬಗ್ಗಿ ನೋಡಿದರೂ ಏನೂ ಗೊತ್ತಾಗಲಿಲ್ಲ. ಗುಟರ್ ಗುಟರ್ ಸದ್ದು ಮಾತ್ರ ಕೇಳಿ ಬರುತ್ತಿತ್ತು.

ಅಷ್ಟರಲ್ಲಿ ಯಾವುದೋ ಒಂದು ಪೊದೆಯ ಬಳಿಗೆ ನಾಲ್ಕಾರು ಹಂದಿ ಮರಿಗಳು ಬಂದವು. ಅವುಗಳ ಹಿಂದೆ ಒಂದು ದೊಡ್ಡ ಹಂದಿ. ಮರಿಗಳು ಬಾಯಲ್ಲಿ ಕತ್ತರಿಸಿದ ಸೊಪ್ಪನ್ನು ಹಿಡಿದಿದ್ದವು. ತಕ್ಷಣಕ್ಕೆ ಆಶ್ಚರ್ಯ ವಾಯಿತು. ಹಂದಿಗಳು ಹುಲ್ಲು ಸೊಪ್ಪನ್ನು ತಿನ್ನುವುದಿಲ್ಲ. ಏನಿದ್ದರೂ ಕೊಚ್ಚೆಯಲ್ಲಿ ಕೊಳೆತು ಬಿದ್ದ ಪದಾರ್ಥಗಳನ್ನು ತಿನ್ನುವುದನ್ನು ಕೇಳಿದ್ದೆವು. ಕಂಡಿದ್ದೆವು. ಈಗ ಇಲ್ಲಿ ಇದು ವಿಚಿತ್ರ ಎನಿಸಿತು. ನೋಡು ನೋಡುತ್ತಿದ್ದಂತೆಯೇ ಪೊದೆಯ ಸಂದಿಯಲ್ಲಿ ಸೊಪ್ಪನ್ನು ಹರಡಿ, ಬಾಯಿಂದ ಅಮುಕಿ ಸಮತಟ್ಟು ಮಾಡಿದವು. ಅವುಗಳು ಯಾಕೆ ಹಾಗೆ ಮಾಡಿದವು ಅಂತ ಅರ್ಥವಾಗಲಿಲ್ಲ.

ನನ್ನ ಜೊತೆಯಲ್ಲಿ ನಿಂತು ನೋಡುತ್ತಿದ್ದ ನಮ್ಮವರಿಗೆ ಅವುಗಳ ಕೆಲಸವನ್ನು ನೋಡಿ ರೇಗಿ ಹೋಯಿತು. 'ಮೊದ್ಲು ಇಲ್ಲಿಂದ ಓಡಿಸ್ಬೇಕು. ಇಲ್ದಿದ್ರೆ, ಇಲ್ಲೇ ವಾಸ ಮಾಡುಕ್ಕೆ ಶುರು ಮಾಡಿ ಬಿಡುತ್ವೆ' ಅಂತ ಹೇಳಿ ಕಲ್ಲು ಎಸೆದು ಹುಶ್ ಹುಶ್ ಎಂದು ಹೆದರಿಸಿ ಓಡಿಸಲು ನೋಡಿದರು.

ಅವುಗಳು ಇವರನ್ನ ವಿಚಿತ್ರವಾಗಿ ನೋಡಿ, ಹೆದರುತ್ತಾ ಗಿಡಗಳ ಸಂದಿಯಲ್ಲಿ ಎಲ್ಲೋ ಮರೆಯಾದವು. ಮತ್ತೆ ಬಂದರೆ ಹೊಡೆಯಲೆಂದು ಇವರು ಸಣ್ಣ ಸಣ್ಣ ಕಲ್ಲುಗಳನ್ನು ಆರಿಸಿಟ್ಟುಕೊಂಡರು.

"ರಾತ್ರಿಯೆಲ್ಲಾ ನಾವೇನೂ ಓಡಿಸ್ತಾನೆ ಇರೋಕೆ ಆಗುತ್ತಾ? ಹೋಗ್ಲಿ ಬಿಡಿ. ಕಲ್ಲು ಹೊಡೆದು ಪಾಪ ಯಾಕೆ ಕಟ್ಟಿಕೊಳ್ತೀರಿ. ಬೆಳಗಾದ ಮೇಲೆ ಈ ಹಂದಿಗಳನ್ನು ಯಾರು ಸಾಕಿದರೋ ಅವರು ಬಂದು ಹೊಡ್ಕೊಂಡು ಹೋಗ್ತಾರೆ." ಎಂದೆ.

ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಎಲ್ಲೋ ಒಂದು ಮಾಂಸಾಹಾರಿ ಹೋಟೆಲ್ಲು ಇತ್ತು. ಆ ಹೋಟೆಲ್ಲಿನ ಮಾಲೀಕ ಈ ಹಂದಿಗಳನ್ನು ಸಾಕಿದ್ದ ಎಂದು ಕೇಳಿದ ನೆನಪು. ಆ ಹಂದಿಗಳು ಗುಂಪು ಗುಂಪಾಗಿ ಕೊಚ್ಚೆ ಗುಂಡಿಗಳಲ್ಲಿ ತಿರುಗಾಡುತ್ತಿದ್ದವು. ಡಸ್ಟ್ ಬಿನ್ ಬಳಿ ಬಿದ್ದ ಕೊಳಕನ್ನು ತಿನ್ನುತ್ತಿದ್ದವು. ನಾಯಿಗಳು ಬೊಗಳಿ ಹೆದರಿಸುತ್ತಿದ್ದವು. ಇದನ್ನು ಕಂಡಿದ್ದೆವು. ಹಂದಿಗಳ ಸಂಸಾರ ಬಲು ದೊಡ್ಡದು. ವರ್ಷಕ್ಕೆ ಎಷ್ಟೋಸಾರಿ ಮರಿಗಳನ್ನು ಹಾಕುತ್ತವೆಯೋ. ಸಂಸಾರ ಬೆಳೆಯುತ್ತಲೇ ಇರುತ್ತದೆ.

ನನ್ನ ಮಾತನ್ನು ಕೇಳದ ನಮ್ಮವರು, ಹಂದಿಯನ್ನು, ಹಂದಿ ಮರಿಗಳನ್ನು ಹೆದರಿಸಿ ಅಲ್ಲಿಂದ ಓಡಿಸುವ ಪ್ರಯತ್ನವನ್ನು ಮುಂದುವರೆಸಿದರು. ಅವುಗಳು ರಸ್ತೆಯ ಕಡೆಗೆ ಓಡಿದವು. ಇವರು ಗೆದ್ದವರಂತೆ ಒಳಗೆ ಬಂದರು.

ಆದರೆ ಹತ್ತು ಹದಿನೈದು ನಿಮಿಷಗಳ ನಂತರ ಮತ್ತೆ ಅದೇ ಚರಚರ ಸದ್ದು. ಆದರೆ ಈಗಾಗಲೇ ಕತ್ತಲು ಆವರಿಸಿತ್ತು. ಪೊದೆಗಳ ಮರೆಯಲ್ಲಿ ತಮ್ಮ ಕೆಲಸವನ್ನು ಮುಂದುವರೆಸಿದ್ದ ಹಂದಿಗಳು ಸುಲಭವಾಗಿ ಕಾಣು

ವಂತಿರಲಿಲ್ಲ.

"ನಾನು ಹೋಗಿ ಪೊಲೀಸ್ ಕಂಪ್ಲೇಂಟ್ ಕೊಟ್ಟು ಬರ್ತೀನಿ. ಯಾರೋ ಯಾವ್ಯಾವುದೋ ಪ್ರಾಣಿಗಳನ್ನು ಸಾಕೋದು. ನಾವುಗಳು ತೊಂದರೆ ಅನುಭವಿಸೋದು ಅನ್ನುತ್ತಾ ಹೊರಟವರನ್ನು ನಾವುಗಳು ತಡೆದೆವು."

"ಬೆಳಿಗ್ಗೆ ನೋಡೋಣ. ಅಷ್ಟರೊಳಗೆ ಸಾಕಿದವನೇ ಬಂದು ಅಟ್ಕೊಂಡು ಹೋಗ್ತಾನೆ. .. . ಎಂದು ಹೇಳಿ ಸುಮ್ಮನಾಗಿಸಿದೆವು.

ಬೆಳಗಾದ ಮೇಲೆ, ಚಳಿ ಕಡಿಮೆಯಾದ ಮೇಲೆ, ಹಂದಿಗಳು ಇವೆಯೋ ಇಲ್ಲವೋ ಎಂದು ಪತ್ತೆ ಮಾಡಲು ಹೊರಬಂದೆವು.. ..ಪಕ್ಕದ ನಿವೇಶನದ ಕಡೆ ಇಣಿಕಿದೆವು. ಪೊದೆಯ ಬಳಿಯಿಂದ 'ಕುಯ್' ಗುಟ್ಟುವ ಸದ್ದು ಕೇಳಿ ಬಂತು. ಕಣ್ಣಲ್ಲಿ ಕಣ್ಣಿಟ್ಟು ನೋಡಿದೆವು. ಮಲಗಿರುವ ಹಂದಿಯ ಸುತ್ತ ಎಂಟ್ಹತ್ತು ಸಣ್ಣ ಸಣ್ಣ ಮರಿಗಳು! ಮುಲುಗುಟ್ಟುತ್ತಾ ಕುಯ್ ಕುಯ್ ಅಂತ ತಾಯಿ ಹಂದಿಯ ಬಳಿ ಹರಿದಾಡುತ್ತಿವೆ. ನನಗೆ ಆಶ್ಚರ್ಯವಾಗಿತ್ತು. ನಮ್ಮವರಕೋಪ ಹೆಚ್ಚಿತ್ತು!

ನೋಡಿದ್ಯಾ, ಈ ಹಂದಿ ತನ್ನ ಪರಿವಾರವನ್ನೇ ಇಲ್ಲಿಟ್ಟುಕೊಂಡು ವಾಸ ಮಾಡುತ್ತಿದೆ. ಇನ್ನು ಇಲ್ಲಿಂದ ಕಳಿಸಲು ಸಾಧ್ಯವಿಲ್ಲ. ಅನುಭವಿಸ ಬೇಕು.... ಗೊಣಗಿದರು.

ಸಾಕಿದವನಿಗೆ ತಿಳಿದರೆ ಖಂಡಿತಾ ಕರ್ಕೊಂಡು ಹೋಗ್ತಾನೆ. ಅವನು ಹುಡುಕ್ದೇ ಇರ್ತಾನಾ! ಹಂದಿ ಮರಿ ಹಾಕುವ ಸ್ಥಿತಿಯಲ್ಲಿದೆ ಅಂತ ಅವನಿಗೆ ಗೊತ್ತಿರುತ್ತಾ! ನಾನು ಹೇಳಿದೆ.

ಸಾಕಿದ್ಮೇಲೆ ಸರ್ಯಾಗಿ ನೋಡ್ಕೋಬೇಕು. ಬೇರೆಯವರಿಗೆ ತೊಂದರೆ ಆಗುವಂತೆ ಬಿಡ್ಬಾರ್ದು ಅಂತ ಅಷ್ಟೂ ಗೊತ್ತಾಗುಲ್ವಾ?... ಬೀದಿಯ ಆಳುಗಳನ್ನು ಕರೆದು ಇವುಗಳನ್ನೆಲ್ಲಾ ಎತ್ತಿ ಹಾಕಿಸ್ತೀನಿ..." ಗುಡುಗಿದರು.

ಬೇಡ ಬಿಡಿ. ಪಾಪ ನೋವು ಅನುಭವಿಸಿ ಮರಿಗಳನ್ನು ಹಾಕಿದೆ. ಇಂಥಾ ಸಮಯದಲ್ಲಿ ಅವುಗಳಿಗೆ ರೋಷ ಹೆಚ್ಚಾಗಿರುತ್ತೆ. ಮರಿಗಳನ್ನು

ರಕ್ಷಿಸುವುದಕ್ಕೆ ಸಿದ್ಧವಾಗಿರುತ್ವೆ, ಎತ್ತಲು ಬಂದವರನ್ನು ಕಚ್ಚಿ ಬಿಡಬಹುದು. ಅಲ್ಲದೇ ಆಳುಗಳು ಸಹಾ ಈ ಕಾರ್ಯಕ್ಕೆ ಕೈ ಹಾಕುವುದಿಲ್ಲ. ನಿಮಗೆ ಧೈರ್ಯ ವಿದ್ದರೆ ನೀವು ಒಂದು ಮರಿಯನ್ನು ಎತ್ತಿ ಬಿಸ್ಹಾಕಿ ನೋಡೋಣ" ನಾನೂ ಸವಾಲೆಸೆದೆ.

"ಹುಂ, ನಾನ್ಯಾಕೆ ಹಂದೀನ ಮುಟ್ಟಲಿ? ಕೊಳಕು ಪ್ರಾಣಿ... ಅದಕ್ಕೇ ಹೇಳಿದ್ದು. ನೆನ್ನೆ ರಾತ್ರಿಯೇ ಓಡಿಸಬೇಕಾಗಿತ್ತು ನಾನು ...."

"ಈಗೇನಾಯ್ತು? ಅದೇನು ನಮ್ಮ ಕಾಂಪೌಂಡ್‌ನಲ್ಲಿ ಬಂದು ಮರಿಗಳನ್ನು ಇಟ್ಟಿಲ್ವಲ್ಲಾ. ಇದು ಯಾರ ಸೈಟೋ.... ಎಷ್ಟೋ ವರ್ಷಗಳಿಂದ ಈ ಪೊದೆಯಲ್ಲಿ ಹಂದಿ ಸಂತಾನ ಬೆಳೆಯುತ್ತಿದೆಯೋ. ....ಅಕ್ಕ ಪಕ್ಕದವ ರೆಲ್ಲಾ ಸುಮ್ಮನಿಲ್ಲವಾ? ಹಾಗೇ ನಾವು ಸುಮ್ಮನಿದ್ದು ಬಿಟ್ರಾಯ್ತು... ಇದುವರೆಗೆ ಎಂದಾದ್ರು ಇಂಥಾ ಪ್ರಸಂಗವನ್ನು ಕಂಡಿದ್ವಾ! ತಾಯಿ ಹಂದಿಗೆ ದೊಡ್ಡ ಮರಿಗಳು ಹೇಗೆ ಸಹಾಯ ಮಾಡಿದವು? ಸೊಪ್ಪು ಸೆದೆಯನ್ನು ಬಾಯಲ್ಲಿ ಕಚ್ಚಿ ತಂದು ಹಾಕಿ ಮೆತ್ತೆಯಂತೆ ಮಾಡಿಕೊಟ್ಟಿವೆ.... ಅದನ್ನು ನಾವು ಮೆಚ್ಚಲೇ ಬೇಕು... ಇಂಥಾ ಒಂದು ಪ್ರಸವ ಪ್ರಸಂಗವನ್ನು ನಾನೆಂದೂ ಕೇಳಿರಲೇ ಇಲ್ಲ.

ಭಂಡ ಮರಿಗಳು! ವರ್ಷದಲ್ಲಿ ಎಷ್ಟು ಸಾರಿ ಈ ಹಂದಿ ಮರಿ ಹಾಕುತ್ತೋ... ಆಗೆಲ್ಲಾ ಇಲ್ಲೇ ಬಂದು ಬಿಡಾರ ಬಿಟ್ಟರೆ?....

"ಈ ಹಂದಿ ಸಂಸಾರದ ಫೋಟೋ ತೆಗೆಯೆಲಾ... ಸದಾ ನೆನೆಪಿನಲ್ಲಿ ರುತ್ತೆ." ನಗುತ್ತಾ ನಾನೆಂದೆ. ಯಾಕೋ ಏನೋ ನಮ್ಮವರು ಮೌನ ತಾಳಿದರು. ನಗಲಿಲ್ಲ.

* * * *

೨...

ಮೈಸೂರನ್ನು ಬಿಟ್ಟು ಬಂದ ಮೇಲೆ, ಮತ್ತೆ ಮೈಸೂರಿಗೆ ಹೋಗ

ಲಾಗಿರಲಿಲ್ಲ. ಒಂದು ದಿನ ಇದ್ದಕ್ಕಿದ್ದಂತೆ ಹೊರಡುವ ಯೋಜನೆಯನ್ನು ಹಾಕಿಕೊಂಡೆವು. ಬೆಳಗ್ಗೆ ಬೇಗನೇ ಹೊರಟು, ರಾತ್ರಿ ವಾಪಸ್ಸು ಬಂದು ಬಿಡಬೇಕೆಂದು, ಬಾಡಿಗೆಗೆ ಒಂದು ಕಾರನ್ನು ಗೊತ್ತು ಮಾಡಿಕೊಂಡೆವು.

ಆ ದಿನ ವೈಶಾಖ ಮಾಸದ ಶುದ್ಧ ತದಿಗೆ ಆಗಿತ್ತು. ಅಂದರೆ ಅಕ್ಷಯ ತದಿಗೆ. ಮುಂಚೆ, ಅಂದರೆ ನಾವುಗಳು ಚಿಕ್ಕವರಾಗಿದ್ದಾಗ ಅಕ್ಷಯ ತದಿಗೆ ಅಂದರೆ ಒಂದು ಶುಭದಿನ. ಬೇಸಿಗೆಯ ಬೇಗೆಯನ್ನು ತಂಪು ಗೊಳಿಸಲು, ಪಾನಕ ಕೋಸಂಬರಿಯನ್ನು ಮಾಡಿ, ದೇವರಿಗೆ ನೇವೇದ್ಯ ಮಾಡಿ, ಅಕ್ಕಪಕ್ಕದ ಮನೆಯ ಮುತ್ತೈದೆಯರನ್ನು ಕರೆದು ಅರಿಶಿಣ ಕುಂಕುಮ ಹೂವನ್ನು ಕೊಟ್ಟು, ಪಾನಕ. ಕೋಸಂಬರಿಯನ್ನು ಕೊಟ್ಟು ಸಂಭ್ರಮಿಸುವ ದಿನ. ಹಾಗೇ ಆ ದಿವಸಕ್ಕೆ ಪ್ರಾಶಸ್ತ್ಯವೂ ಇದ್ದುದರಿಂದ, ಕೆಲವು ಶುಭ ಕಾರ್ಯಗಳನ್ನು ನೆರವೇರಿಸಬಹುದೆಂದು ನಂಬಿಕೆ.

ಈಗಿನಂತೆ, ಚಿನ್ನ ಬೆಳ್ಳಿಯ ಅಂಗಡಿಯಲ್ಲಿ ವ್ಯಾಪಾರಗಳನ್ನು ಹೆಚ್ಚಿಸಿ ಕೊಂಡು, ಜನರು ಚಿನ್ನಬೆಳ್ಳಿ ಅಕ್ಷಯವಾಗಲಿ ಎಂಬಾಸೆಯಿಂದ ಕ್ಯೂನಲ್ಲಿ ನಿಂತು ಖರೀದಿಸುವ ದಿನವಾಗಿರಲಿಲ್ಲ. ಹಬ್ಬದ ಅಡಿಗೆ ಮಾಡಿ ಮನೆಯವ ರೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುವುದಕ್ಕಷ್ಟೇ ಸೀಮಿತವಾಗಿತ್ತು. ಇತ್ತೀಚಿನ ದಿನಗಳಲ್ಲಿ ಆ ದಿನವನ್ನು ಬಸವ ಜಯಂತಿ ಎಂದು ಘೋಷಿಸಿ, ಸರ್ಕಾರಿ ರಜೆಯನ್ನು ಕೊಡುವ ಪರಿಪಾಠ ಜಾರಿಯಾಗಿದೆ.

ಒಮ್ಮೆ ಮೈಸೂರಿನಲ್ಲಿದ್ದಾಗ, ಅಕ್ಷಯ ತದಿಗೆಯಂದು, ನನ್ನ ಅಕ್ಕನ ಮಗಳೊಡನೆ ಸಾಯಂಕಾಲ, ಅರಮನೆಯನ್ನು ತೋರಿಸಲೆಂದು ಕರೆದು ಕೊಂಡು ಹೋಗಿದ್ದೆವು. ಆರೂವರೆಯ ಹೊತ್ತಿನಲ್ಲಿ ಝಗ್ಗನೆ ಬೆಳಗಿದ ಅರಮನೆಯ ದೀಪಾಲಂಕಾರವನ್ನು ಎಂದಿಗೂ ಮರೆಯುವಂತಿಲ್ಲ. ಆಗ ಈ ಬಸವಜಯಂತಿ, ಅಥವಾ ಅಕ್ಷಯ ತದಿಗೆಯಂದು ಅರಮನೆಗೆ ದೀಪಾಲಂಕಾರವಿರುತ್ತದೆ ಎಂಬ ಕಲ್ಪನೆಯೇ ಇರಲಿಲ್ಲ. ಬಹುಶಃ ಎಲ್ಲಾ ಸರ್ಕಾರಿ ರಜಾ ದಿನಗಳಲ್ಲೂ, ಜನಾಕರ್ಷಣೆಗಾಗಿ ದೀಪಾಲಂಕಾರ ಮಾಡುತ್ತಾರೆಂದು ಭಾವಿಸಿದ್ದೆ. ನಂತರ ಅದು ನಿಜವಲ್ಲ ಎಂದು ತಿಳಿಯಿತು.

ಈ ಬಾರಿ ಮನೆ ಮುಂದೆ ಟ್ಯಾಕ್ಸಿ ಬಂದು ನಿಲ್ಲುವುದರೊಳಗೆ, ಸ್ನಾನ ಇತ್ಯಾದಿಗಳನ್ನು ಮುಗಿಸಿ, ಮಾಡಿದ ತಿಂಡಿಯನ್ನು ಡಬ್ಬಿಯೊಳಗೆ ಹಾಕಿಕೊಂಡು, ಥರ್ಮಾಸ್ ಫ್ಲಾಸ್ಕ್‌ಗೆ ಬಿಸಿ ಕಾಫಿಯನ್ನು ಹಾಕಿಕೊಂಡು, ತಟ್ಟೆ, ಬಟ್ಟಲು ಚಮಚಗಳನ್ನು ಕೈ ಒರೆಸಲು ಬಟ್ಟೆ ಪೇಪರುಗಳನ್ನು ತೆಗೆದಿಟ್ಟುಕೊಂಡು ಹೊರಡುವಷ್ಟರಲ್ಲಿ ಮಳೆ ಪ್ರಾರಂಭವಾಯಿತು. ರಸ್ತೆ ಉದ್ದಕ್ಕೂ ಈ ಮಳೆ ಇದ್ದೇ ಇರುತ್ತದೆ. ಬೇಗ ಹೋಗಿ ವಾಪಸ್ಸು ಬರೋಕೆ ಆಗದಿದ್ದರೆ ಎಂಬ ಆತಂಕ ಕಾಡಿತ್ತು.

ಮೈಸೂರು-ಬೆಂಗಳೂರು ಎಷ್ಟೋ ಬಾರಿ ಓಡಾಡಿದ್ದೇವೆ. ರಸ್ತೆಯುದ್ದಕ್ಕೂ ಅಕ್ಕ ಪಕ್ಕದ ಊರುಗಳಲ್ಲಿ ಅನೇಕ ಗುಡಿ ಗೋಪುರಗಳಿವೆ. ಹಾಗೆ ಚೆನ್ನಪಟ್ಟಣವನ್ನು ಸಮೀಪಿಸಿದಾಗಲೆಲ್ಲಾ ಮಳೂರಿನ ಅಪ್ರಮೇಯ ಸ್ವಾಮಿಯ ಹಾಗೂ ಅಂಬೆ ಕಾಲಿನ ಕೃಷ್ಣನ ದೇವಾಲಯ ನೆನಪಿಗೆ ಬರುತ್ತದೆ. ಆದರೆ ಈವರೆಗೆ ಒಮ್ಮೆಯೂ ಅಲ್ಲಿ ಇಳಿದು ದೇವಸ್ಥಾನಕ್ಕೆ ಹೋಗುವ ಯೋಗ ಒದಗಿರಲಿಲ್ಲ.

ಬೆಂಗಳೂರನ್ನು ಬಿಟ್ಟ ನಂತರ ಮೊದಲಿಗೆ ಸೀದಾ ಚಾಮುಂಡಿ ಬೆಟ್ಟವನ್ನು ತಲುಪಿದೆವು. ಆಗ ಸಮಯ ಹತ್ತೂವರೆಯಾಗಿತ್ತು. ಆರು ಗಂಟೆಗೆ ಮನೆಯನ್ನು ಬಿಟ್ಟ ನಾವು ನಾಲ್ಕೂವರೆ ಗಂಟೆಯ ಸಮಯವನ್ನು ತೆಗೆದುಕೊಂಡಿದ್ದೆವು. ರಜಾ ದಿನವಾದುದರಿಂದ ರಸ್ತೆಯಲ್ಲಿ ಹೆಚ್ಚು ವಾಹನ ಸಂಚಾರವಿರಲಿಲ್ಲವಾದರೂ ಮಳೆ ಸುರಿಯುತ್ತಲೇ ಇದ್ದುದರಿಂದ ಪ್ರಯಾಣ ನಿಧಾನವಾಗಿತ್ತು. ವಿಶೇಷ ದಿನವಾದವಾದುದರಿಂದ ದೇವಸ್ಥಾನದಲ್ಲಿ ಭಕ್ತಾದಿಗಳು ಸ್ವಲ್ಪ ಮಟ್ಟಿಗೆ ಇದ್ದರು. ಕ್ಯೂನಲ್ಲಿ ನಿಂತು ದೇವಿಯ ದರ್ಶನ ಮಾಡಿದ ನಂತರ ಅಲ್ಲಿಂದ ನಂಜನಗೂಡಿಗೆ ಹೊರಟೆವು.

ಅಲ್ಲಿಗೆ ಈ ಮೊದಲು ಕೆಲವು ಬರಿ ಹೋಗಿ ಬಂದಿದ್ದೆ. ನನ್ನ ಕಡೆಯ ನೆಂಟರು ಯಾರಾದರೂಬಂದರೆ, ಅವರೊಡನೆ ನಂಜನಗೂಡಿಗೆ ರೈಲಿನಲ್ಲಿ ಹೋಗಿ ಬರುತ್ತಿದ್ದೆವು. ಚಾಮರಾಜಪುರಂನ ರೈಲ್ವೇ ನಿಲ್ದಾಣದಲ್ಲಿ ರೈಲನ್ನು ಹತ್ತಿದರೆ, ನಂಜನಗೂಡಿನಲ್ಲಿ ಇಳಿದು ದೇವಸ್ಥಾನವನ್ನು ಒಮ್ಮೆ

ಸುತ್ತಾಡಿ, ದೇವರ ದರ್ಶನವನ್ನು ಮಾಡಿಕೊಂಡು ಪ್ರಸಾದ ತೆಗೆದುಕೊಂಡು, ಅಲ್ಲಿಯ ರೈಲ್ವೇ ಸ್ಟೇಷನ್ನಿನಲ್ಲಿ ಚಾಮರಾಜನಗರದದಿಂದ ಬರುತ್ತಿದ್ದ ರೈಲನ್ನು ಹತ್ತಿ ವಾಪಸ್ಸು ಮೈಸೂರಿಗೆ ಬರುತ್ತಿದ್ದೆವು. ಆ ದಿನಗಳು ನೆನಪಿಗೆ ಬಂದವು. ಮಾರ್ಗಮಧ್ಯದಲ್ಲಿ ಹುರಿದ ಕಡಲೇ ಕಾಯಿಯನ್ನು, ಸೀಬೆಹಣ್ಣು ಗಳನ್ನು ಕೊಂಡು ತಿಂದದ್ದೂ, ಹಾಗೇ ಕೆಲವೊಮ್ಮೆ ಟ್ರೈನಿನೊಳಗೆ ಮಾರಲು ತರುತ್ತಿದ್ದ ಮದ್ದೂರು ವಡೆಗಳನ್ನು ಕೊಂಡುಕೊಳ್ಳುತ್ತಿದ್ದುದೂ ನೆನಪಿಗೆ ಬಂತು. ರೈಲು ಪ್ರಯಾಣದ ಮಜವೇ ಬೇರೆ.

ಕಾರು ನಂಜನಗೂಡನ್ನು ತಲುಪಿದಾಗ ಸಾಕಷ್ಟು ಹೊತ್ತಾಗಿತ್ತು. ಆದರೆ ಆ ದಿನ ಅಕ್ಷಯ ತದಿಗೆ ಇದ್ದುದರಿಂದ ಜನ ಜಂಗುಳಿ ಇನ್ನೂ ಇತ್ತು, ಮೊದಲಿಗೆ ಕಪಿಲಾ ನದಿಯನ್ನು ದೂರದಿಂಲೇ ನೋಡಿ, ಶ್ರೀಕಂಠೇಶ್ವರನ ಸನ್ನಿಧಾನಕ್ಕೆ ಬಂದೆವು. ಅಲ್ಲಿ ಗುಡಿಯ ಮುಂಭಾಗದಲ್ಲಿ ಒಂದು ನಂದಿ ಇದೆ. ಹರಕೆ ಹೊತ್ತವರು ಧಾನ್ಯಗಳನ್ನು ಅಲ್ಲಿ ಕಟ್ಟುತ್ತಾರೆ. ಆಗ ಚಾಮುಂಡಿಯ ಬೆಟ್ಟದ ತಪ್ಪಲಿನಲ್ಲಿರುವ ದೊಟ್ಟ ನಂದಿ ನೆನಪಿಗೆ ಬಂತು. ವಾಪಸ್ಸು ಹೋಗುವಾಗ ಆ ನಂದಿಯನ್ನು ನೋಡಿಯೇ ಹೋಗಬೇಕೆಂದು ಕೊಂಡೆ.

ಅಲ್ಲಿ ದೇವಸ್ಥಾನದಲ್ಲಿ ಊಟದ ವ್ಯವಸ್ಥೆ ಇರಲಿಲ್ಲ. ಆದರೆ ಅಲ್ಲಲ್ಲೇ ಕೆಲವು ಬ್ರಾಹ್ಮಣರ ಮನೆಗಳಲ್ಲಿ ಊಟದ ವ್ಯವಸ್ಥೆ ಇರುತ್ತದೆ. ಅಂಥಾ ಒಂದು ಮನೆಗೆ ಹೋಗಿ ಊಟವನ್ನು ಮಾಡಿ, ಅಲ್ಲಿಂದ ಹೊರಟು, ಚಾಮುಂಡಿಯ ತಪ್ಪಲಲ್ಲಿದ್ದ ನಂದಿಯ ಬಳಿಗೆ ಬಂದೆವು. ಬೆಂಗಳೂರಿನ ಬಸವನ ಗುಡಿ ಬಡಾವಣೆಯಲ್ಲಿರುವ ದೊಡ್ಡ ಬಸವಣ್ಣನಷ್ಟೇ ಪ್ರಖ್ಯಾತಿ ಪಡೆದಿರುವ ಬಸವಣ್ಣ, ಪಕ್ಕದಲ್ಲೇ ಒಂದು ಗುಹೆ ಇದೆ. ಆ ಗುಹೆಯೊಳಗೆ ಯಾರೋ ಒಬ್ಬರು ಸನ್ಯಾಸಿ ವಾಸವಾಗಿದ್ದರಂತೆ. ಆದರೆ ಆ ಗವಿಯೊಳಕ್ಕೆ ಸುಲಭವಾಗಿ ಹೋಗಲು ಸಾಧ್ಯವಿರಲಿಲ್ಲ ಅರ್ಧ ಬಾಗಿಯೇ ಹೋಗ ಬೇಕಾಗಿತ್ತು. ಆದರಿಂದ ಹೋಗಲಿಲ್ಲ.

ಅಲ್ಲಿಂದ ಸೀದಾ ಮೈಸೂರಿಗೆ ಬಂದು ನಮ್ಮ ಪರಿಚಯದವರೊಬ್ಬರ್ನು

ಭೇಟಿಯಾದೆವು. ನಂತರ ಕಾರು ಅಲ್ಲಿಂದ ಹೊರಟಿತು. ಶ್ರೀರಂಗಪಟ್ಟಣದ ಸಮೀಪದ, ನಿಮಿಷಾಂಬ ದೇವಸ್ಥಾನಕ್ಕೂ ಹಾಗೇ ಸಂಗಮವನ್ನು ನೋಡುವುದಕ್ಕೆ ಹೋಗುವುದಿತ್ತು. ಅಲ್ಲಿಂದ ಹೊರಡುವಾಗಲೇ ಕತ್ತಲಾಗುತ್ತಾ ಬಂದಿತ್ತು. ಹಾಗೇ ಸಣ್ಣಗೆ ಮಳೆ ಸುರಿಯುತ್ತಲೇ ಇತ್ತು.

ಮದ್ದೂರನ್ನು ದಾಟಿ ಚೆನ್ನ ಪಟ್ಟಣವನ್ನು ಸಮೀಪಿಸುತ್ತಿದ್ದಂತೆಯೇ ದೂರದಿಂಲೇ ಅಪ್ರಮೇಯ ಸ್ವಾಮಿಯ ದೇವಸ್ಥಾನದ ಗೋಪುರದ ಮೇಲಿದ್ದ ದೀಪ ಕಂಡಿತು. ಇದೇ ರಸ್ತೇಲಿ ಅನೇಕ ಬಾರಿ ಓಡಾಡಿದ್ದೀವಿ. ಯಾವತ್ತೂ ಈ ದೇವಸ್ಥಾನಕ್ಕೆ ಬಂದು ಅಂಬೆಗಾಲಿನ ಕೃಷ್ಣನನ್ನು ನೋಡಿಲ್ಲ. ಹೇಗೋ ಇಲ್ಲಿಯ ತನಕ ಬಂದಿದೀವಿ. ಹೋಗಿ ಬರೋಣ. ನನ್ನ ಮಗಳ ಅಸೆಗೆ ನಾನೂ ಒಪ್ಪಿಕೊಟ್ಟೆ. ಕಾರು ಮಳೂರಿನ ದಾರಿಯಲ್ಲಿ ತಿರುಗಿತು. ಹೆದ್ದಾರಿಯ ಪಕ್ಕದ ಮಣ್ಣಿನ ದಾರಿಯಲ್ಲಿ ಸ್ವಲ್ಪವೇ ದೂರ ಸಾಗಿದ ನಂತರ ದೇವಸ್ಥಾನದ ಹೆಬ್ಬಾಗಿಲು ಕಂಡಿತು. ಮಳೆ ಬರುತ್ತಿದ್ದರಿಂದ, ಹಾಗೂ ಕತ್ತಲಾಗಿತ್ತೂ. ಅಲ್ಲದೇ ಪ್ರಕಾಶಮಾನವಾದ ದಾರಿ ದೀಪಗಳಿರಲಿಲ್ಲ. ಅಕ್ಕ ಪಕ್ಕ ಏನಿದೆ ಅಂತ ಕಾಣಲೂ ಇಲ್ಲ. ನಾವು ನೋಡಲೂ ಇಲ್ಲ. ಬೇರೇನನ್ನೂ ನೋಡಲು ಸಮಯವೂ ಇರಲಿಲ್ಲ. ದೇವಸ್ಥಾನದ ದೊಡ್ಡ ಬಾಗಿಲು ತೆರೆದಿತ್ತು. ಹಳೇ ಕಾಲದ ರಾಜ ಮಹಾರಾಜರ ಕಾಲದಲ್ಲಿ ಕಟ್ಟಿದ ಗಟ್ಟಿ ಮುಟ್ಟಾದ ದೇವಾಲಯದ ಹೊರಗೆ, ಒಳಗೆ ಕೂಲಂಕಷವಾಗಿ ನೋಡುವುದಕ್ಕಾಗಲಿಲ್ಲವಲ್ಲ ಎಂದು ಬೇಸರ ಇದ್ದೇ ಇದ್ದಿತು. ಒಳಗೆ ಕಾಲಿಡುತ್ತಿದ್ದಂತೆ, ಯಾರೋ ಯಾವುದೋ ಕಾವ್ಯವನ್ನು ಓದುತ್ತಿರುವುದು ಭಾಸವಾಯಿತು. ಎದುರಿಗೆ ಕಾಣುತ್ತಿರುವ ಅಪ್ರಮೇಯಸ್ವಾಮಿಗೆ ಕೈಮುಗಿದು, ಮನದಲ್ಲೇ ಪ್ರಾರ್ಥಿಸಿ, ಪಾರಾಯಣ ನಡೆಯುತ್ತಿದ್ದ ಕಡೆಗೆ ನಡೆದೆವು. ಅಲ್ಲಿ ಕೆಲವೇ ಮಂದಿ ಕೂತಿದ್ದರು. ಒಂದಿಬ್ಬರು ಓಡಾಡುತ್ತಿದ್ದರು. ನಮ್ಮನ್ನು ಆದರದಿಂದ ಕರೆದು ಕುಳಿತುಕೊಳ್ಳುವಂತೆ ಹೇಳಿ, ಹಾಸಿದ್ದ ಚಾಪೆಯ ಕಡೆ ಕೈ ತೋರಿಸಿದರು.

“ಇಲ್ಲಿ ಅಂಬೆಗಾಲು ಕೃಷ್ಣನ ಪ್ರತಿಮೆ ಎಲ್ಲಿದೆ. ಅದನ್ನು

ನೋಡಬೇಕೆಂದು ಬಂದಿದೀವಿ" ಅಲ್ಲಿದ್ದ ಅರ್ಚಕರನ್ನು ಕೇಳಿದೆ.

ದೇವಸ್ಥಾನವನ್ನು ಮುಚ್ಚುವ ಸಮಯವಾಗಿದೆ. ಒಂದು ಕಡೆಯಿಂದ ಬಾಗಿಲುಗಳನ್ನು ಹಾಕ್ತಾ ಬರ್ತಿದೀವಿ. ಆದರೂ, ದೂರದಿಂದ ಬಂದ ಭಕ್ತರನ್ನು ಹಾಗೇ ಕಳಿಸುವುದು ಸರಿಯಲ್ಲ. ನಿಮಗೆ ದರ್ಶನ ಮಾಡಿಸ್ತೀವಿ ಬನ್ನಿ" ಎಂದು ಆದರಣೆಯಿಂದ ದೇವಾಲಯದ ಒಳಾಂಗಣದಲ್ಲೇ ಇದ್ದ ಅಂಬೆಗಾಲು ಕೃಷ್ಣನ ಗುಡಿ ಇದ್ದ ಕಡೆಗೆ ಕರೆದುಕೊಂಡು ಹೋದರು. ದೀಪಗಳನ್ನು ಹಾಕಿ, ಗರ್ಭಗುಡಿಯ ಬಾಗಿಲನ್ನು ತೆರೆದರು. ಕೃಷ್ಣಶಿಲೆಯಲ್ಲಿ ಕಡೆದ ಮುದ್ದಾದ ಅಂಬೆಗಾಲು ಕೃಷ್ಣ ಮುದ್ದಾಗಿದ್ದ. ಹರಕೆ ಹೊತ್ತವರು., ಕಟ್ಟಿದ ಸಣ್ಣ ಸಣ್ಣ ತೊಟ್ಟಿಲುಗಳು ಮೇಲ್ಭಾಗದಲ್ಲಿ ತೂಗಾಡುತ್ತಿದ್ದವು. ಅಲ್ಲಿ ಜಗದ್ಧೋದ್ಧಾರನ ಆಡಿಸಿದಳು ಯಶೋದೆ ಎಂಬ ದಾಸರ ಪದವನ್ನು ಬರೆಸಿದ್ದಾರೆ. ಅದನ್ನು ಈ ಮುದ್ದು ಕೃಷ್ಣನಿಗಾಗಿಯೇ ದಾಸರು ರಚಿಸಿ ದರೇನೋ ಎನ್ನುವ ಅನುಭವವಾಗುತ್ತದೆ. ಇದೇ ತರಹದ ಅಂಬೆಗಾಲು ಕೃಷ್ಣನ ದೇವಾಲಯವೊಂದು ಮೈಸೂರಿನ ಅರಮನೆಯ ಆವರಣದಲ್ಲಿ ಇದ್ದುದನ್ನು ನೋಡಿದ್ದೆವು. ಅಲ್ಲಿ ಪ್ರಸಾದವಾಗಿ ರವೆ ಉಂಡೆಗಳನ್ನು ಇಟ್ಟಿರುತ್ತಿದ್ದುದು ನೆನಪಿಗೆ ಬಂದಿತು.

ಅಷ್ಟರಲ್ಲಿ ಪಾರಾಯಣದ ಮಂಗಳ ಶ್ಲೋಕವನ್ನು ಹಾಡುವ ಸಮಯ ಬಂದಿತ್ತು. ಶ್ರೀ ರಾಮಾನುಜಾಚಾರ್ಯರು ಬರೆದಿರುವ ವಿಶಿಷ್ಟಾದ್ವೈತದ ಸಾರವನ್ನು ಪಾರಾಯಣ ಮಾಡುತ್ತಿದ್ದಾರೆ ಬನ್ನಿ ಎಂದು ಹೇಳಿ ನಮ್ಮನ್ನು ಮತ್ತೆ ಪಾರಾಯಣ ನಡೆಯುತ್ತಿದ್ದ ಸ್ಥಳಕ್ಕೆ ಕರೆತಂದರು. ಆತ ತಮಿಳಿನಲ್ಲಿ ಕಾವ್ಯವನ್ನು ಓದುತ್ತಿದ್ದರು. ಮಂಗಳವನ್ನು ಹಾಡಿ ರಾಮಾನುಜಾರ್ಯರಿಗೆ ಮಂಗಳಾರತಿಯನ್ನು ಮಾಡಿ, ನೈವೇದ್ಯಕ್ಕೆಂದು ಇಟ್ಟುಕೊಂಡಿದ್ದ ತುಪ್ಪನ್ನ ವನ್ನೂ ಮೊಸರನ್ನವನ್ನು ಕೈತೊಂಬಾ ಕೊಟ್ಟರು. ನಾವು ದಕ್ಷಿಣೆಯನ್ನು ಹುಂಡಿಗೆ ಹಾಕಿ ಮತ್ತೊಮ್ಮೆ ಅಲ್ಲಿದ್ದ ದೇವರ ವಿಗ್ರಹಗಳಿಗೆ ಕೈ ಮುಗಿದು ಅಲ್ಲಿಂದ ಹೊರಟೆವು.

ದೇವಸ್ಥಾನಗಳಿಗೆ ಹೋದಾಗ, ಗುಡಿಯ ಬಾಗಿಲು ಹಾಕಿದ್ದರೆ,

ಮನಸ್ಸಿಗೆ ಪಿಚ್ಚೆನ್ನಿಸುತ್ತದೆ. ಆದರೆ ಇಲ್ಲಿ ಆದುದೇ ಬೇರೆ. ನಮ್ಮಂತಹ ಅಪರೂಪದ ಭಕ್ತರು ಬರುತ್ತಾರೆಂದು ಮೊದಲೇ ದೇವರಿಗೆ ತಿಳಿದಿತ್ತೇನೋ? ನಮ್ಮಗಳ ಭಾವನೆಗೆ ತಕ್ಕಂತೆ, ಯಾವ ಜನಜಂಗುಳಿಯೂ ಇರಲಿಲ್ಲ. ಅಪ್ರಮೇಯ ಸ್ವಾಮಿಯೊಂದಿಗೆ ಅಂಬೆಗಾಲು ಕೃಷ್ಣನನ್ನೂ ನೋಡಿಕೊಂಡು, ರಾಮಾನುಜಾಚಾರ್ಯರ ಸ್ತುತಿಯನ್ನು ಕೇಳಿಕೊಂಡು ಕೈ ತುಂಬಾ ತುಪ್ಪನ್ನ ಮೊಸರನ್ನ ಸ್ವೀಕರಿಸಿದ್ದು, ಎಂದೆಂದಿಗೂ ಮರೆಯಲಾಗದ ಒಂದು ಅವಿಸ್ಮರಣೀಯ ಸಂಗತಿ.

ಆದರೆ ಒಂದು ಪಿಚ್ಚೆನ್ನೆಸಿದ ವಿಷಯ ಎಂದರೆ ರಾಜ ಮಹಾರಾಜರು ಆಳಿದ ಕಾಲದಲ್ಲಿ ಕಟ್ಟಿಸಿದ ಪುರಾತನ ದೇವಾಲಯದ ಅಂದ ಚೆಂದವನ್ನು ಶಿಲಾನ್ಯಾಸಗಳನ್ನೂ ಕತ್ತಲೆಯಾದ್ದರಿಂದ ನೋಡಲಾಗಿರಲಿಲ್ಲ. ಆದರೂ ಎಷ್ಟೋ ದಿನಗಳ ನಂತರ ಮಳೂರಿಗೆ ಹೋಗಿ ಬರುವ ಯೋಗ ಸಿಕ್ಕಿತ್ತು.

* * * *

೨. ಚಾಚಾ ನೆಹರು

ಸುಮಾರು ಐವತ್ತೈದು ವರ್ಷಗಳ ಹಿಂದೆ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರಕಿ ಕೇವಲ ಕೆಲವೇ ವರ್ಷಗಳಾಗಿದ್ದ ಸಂದರ್ಭ... ಸ್ವಾತಂತ್ರ ಭಾರತದ ಪ್ರಪ್ರಥಮ ಪ್ರಧಾನ ಮಂತ್ರಿಗಳಾಗಿ, ಪಂಡಿತ್ ಜವಾಹರ ಲಾಲ ನೆಹರೂ ರವರು, ಪದವಿಯನ್ನು ಸ್ವೀಕರಿಸಿದ್ದರು. ಆ ಸಮಯದಲ್ಲಿ, ಮೈಸೂರು ಪ್ರಾಂತ್ಯದಲ್ಲಿ ಪ್ರವಾಸ ಕೈಗೊಂಡಿದ್ದು, ಒಂದು ದಿನ ಶಿವಮೊಗ್ಗಕ್ಕೆ ಬರುವವ ರಿದ್ದರು.

ಆಗ ನಾವುಗಳು ವಾಸವಾಗಿದ್ದುದು, ಶಿವಮೊಗ್ಗ ಸಮೀಪದ ಒಂದು ಚಿಕ್ಕ ಹಳ್ಳಿಯಲ್ಲಿ. ಅಲ್ಲಿ ನಮ್ಮ ತಂದೆಯವರು ವ್ಯವಸಾಯವನ್ನು ಮಾಡು ತ್ತಿದ್ದರು. ಆಗ ಅದು ಒಂದು ಕುಗ್ರಾಮವೇ. ಹಳ್ಳಿಯಲ್ಲಿ ಯಾವುದೇ ಸೌಕರ್ಯಗಳಿರಲಿಲ್ಲ. ಪ್ರಯಾಣ ಸೌಕರ್ಯಕ್ಕೆ ಇದ್ದುದು ರೈಲು ಒಂದೇ. ತಾಳಗುಪ್ಪದಿಂದ ಶಿವಮೊಗ್ಗಕ್ಕೆ. ಶೀವಮೊಗ್ಗದಿಂದ ತಾಳಗುಪ್ಪಕ್ಕೆ ಹೋಗಿ ಬರುವ ರೈಲು. ಬೆಳಿಗ್ಗೆ ಮತ್ತು ಸಾಯಂಕಾಲ ನಮ್ಮ ಹಳ್ಳಿಯ ಮುಖಾಂತ ರವೇ ಓಡಾಡುತ್ತಿದುದು.... ನಿಲ್ದಾಣದಲ್ಲಿ ನಿಲ್ಲುವ ಸಮಯ ಕೇವಲ ಎರಡು ನಿಮಿಷಗಳು!

ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಜರುಗಿದ ಎರಡನೇ ಮಹಾಯುದ್ಧದ ಸಮಯದಲ್ಲಿ ಭಾರತದ ಪ್ರಜೆಗಳು ಅನುಭವಿಸಿದ ಕಷ್ಟ ಕೋಟಲೆಗಳನ್ನು ಮನೆಯ ಹಿರಿಯರು ಆಗ್ಗಾಗ್ಗೆ ನೆನೆಪಿಸಿಕೊಳ್ಳುತ್ತಿದ್ದುದು ಕಿವಿಗೆ ಬಿದ್ದ ನೆನಪಿದೆ. ಯಾಕೆಂದರೆ ನನ್ನ ಜನ್ಮವಾದದ್ದು ಸ್ವಾತಂತ್ರ್ಯ ಬಂದ ನಂತರದಲ್ಲಿ.

ನಮ್ಮ ಮನೆಯಲ್ಲಿ ಒಂದು ಚರಕ ಇತ್ತು ಅದರಿಂದ ಹತ್ತಿಯ ನೂಲನ್ನು ಹೇಗೆ ತೆಗೆಯುತ್ತಿದ್ದರೆಂದು ನಮ್ಮಗಳಿಗೆ ನಮ್ಮ ತಂದೆ ತೋರಿಸಿಕೊಡುತ್ತಿದ್ದರು. ನಮ್ಮ ತಾಯಿ ದೇಶಭಕ್ತಿ ಗೀತೆಗಳನ್ನು ರಚಿಸಿ, ಹಾಡುವುದನ್ನು ಕಲಿಸಿ ಕೊಡುತ್ತಿದ್ದರು. ನಮ್ಮ ಮನೆಯ ನಡುಮನೆಯ ಗೋಡೆಯ ಮೇಲೆ, ಮೊಳೆಗೆ ನೇತು ಹಾಕಿದ್ದ. ಗಾಂಧಿ ಮಹಾತ್ಮರ ಫೋಟೋ ಸಹ ಇತ್ತು. ದೇಶಪ್ರೇಮ, ಮನೆ ಮನೆಯಲ್ಲೂ ವಿಜೃಂಭಿಸುತ್ತಿದ್ದ ಕಾಲ ಅದು.

'ತಾಯಿ ನಾಡು' ಎಂಬ ಕನ್ನಡ ದಿನ. ಪತ್ರಿಕೆಯೊಂದನ್ನು ತರಿಸುತ್ತಿದ್ದರು. ಅದರಲ್ಲಿ, ಬಹುಶಃ ಪ್ರಧಾನಮಂತ್ರಿಯವರು ಶಿವಮೊಗ್ಗಕ್ಕೆ ಬರಲಿದ್ದಾರೆ ಎಂಬ ವಾರ್ತೆ ಪ್ರಕಟವಾಗಿರಬಹುದು. ನಮ್ಮ ತಾಯಿಯವರ ಸಂಭ್ರಮ ಹೇಳತೀರದು. ಹಿಂದೆ ಮೈಸೂರು ರಾಜ್ಯವನ್ನು ಆಳುತ್ತಿದ್ದ ಕೃಷ್ಣರಾಜ ಒಡೆಯರಿಗೆ ಒಮ್ಮೆ ಆರತಿ ಎತ್ತಿ, ಹಾಡನ್ನು ಹೇಳಿಕೊಂಡು ಸ್ವಾಗತಿಸಿದ್ದರಂತೆ. ಈಗ ಜವಹರ ಲಾಲ ನೆಹರೂರವರನ್ನು ನೋಡಲೇ ಬೇಕು. ಮಕ್ಕಳಿಗೆ ಅವರನ್ನು ತೋರಿಸಲೇ ಬೇಕು. ಅವರ ಭಾಷಣವನ್ನು ಕೇಳಲೇ ಬೇಕು ಎಂಬ ಮಹೋತ್ಸಾಹ ನಮ್ಮ ತಾಯಿಗೆ. ಅಂತೆಯೇ ಆದಿನ ಮನೆ ಮಂದಿಯೆಲ್ಲಾ ಹೊರಡುವುದೆಂದು ತೀರ್ಮಾನವಾಯಿತು. ಆದಿನ ಶಿವಮೊಗ್ಗ ಜಿಲ್ಲೆಯ ಪ್ರತಿಯೊಂದು ಶಾಲೆಗೂ ರಜವನ್ನು ಘೋಷಿಸಲಾಗಿತ್ತು.

ಬೆಳಗಿನ ರೈಲಿಗೆ ಹೊರಡಲು, ನಮ್ಮ ಅಮ್ಮ ಎಲ್ಲರನ್ನು ಸಿದ್ಧಗೊಳಿಸಿದಳು. ರೈಲ್ವೇ ನಿಲ್ದಾಣದಲ್ಲಿ ಆಗಾಗಲೇ ಸಾಕಷ್ಟು ಜನರು ನೆರೆದಿದ್ದರು. ರೈಲ್ವೇ ಸ್ಟೇಷನ್ನಿನ ಸಣ್ಣ ಕಛೇರಿಯ (ಇದ್ದುದು ಎರಡೇ ಕೊಠಡಿಗಳು) ಮೇಳೆ ಭಾರತದ ಬಾವುಟ ಹಾರಾಡುತ್ತಿತ್ತು. ನೆರೆದಿದ್ದ ಮಂದಿ ಜಯ ಘೋಷವನ್ನು ಕೂಗುತ್ತಿದ್ದರು. ಭಾರತ ಮಾತಾಕಿ ಜೈ... ಪ್ರಧಾನ ಮಂತ್ರೀಕೀ ಜೈ... ಜಯಕಾರ ಮುಗಿಲನ್ನು ಮುಟ್ಟುತ್ತಿತ್ತು. "ಚಾಚಾ ನೆಹರೂ ಜಿಂದಾಬಾದ್ ಎಂದು ಕೂಗುತ್ತಿದ್ದ ಮಕ್ಕಳ ಕೈಯಲ್ಲಿ ಸಣ್ಣ ಸಣ್ಣ ಭಾರತದ ತಿರಂಗದ ಬಾವುಟ.

ತಾಳಗುಪ್ಪದ ರೈಲು ನಿಲ್ದಾಣವನ್ನು ಸಮೀಪಿಸುವ ಮೊದಲೇ ವೇಗವನ್ನು ಕಡಿಮೆ ಮಾಡಿಕೊಂಡು ಮಂದಗತಿಯಲ್ಲಿ ಹರಿದು ಬಂದಿತು. ಜೊತೆಯಲ್ಲೇ ಬಾಗಿಲ ಬಳಿ ನಿಂತಿದ್ದ, ಕಿಟಕಿಯಿಂದ ಇಣುಕಿ ನೋಡುತ್ತಿದ್ದ ಪ್ರಯಾಣಿಕರ ಜಯಕಾರ ಕೇಳಿ ಬರುತ್ತಿತ್ತು. ರೈಲು ನಿಂತಿತು. ಎಲ್ಲಾ ಬೋಗಿಗಳಲ್ಲೂ ಕಿಕ್ಕಿರಿದು ತುಂಬಿಕೊಂಡ ಜನ .... ಅವರುಗಳ ನಡುವೆ ನಾವುಗಳು ಕಷ್ಟಪಟ್ಟು ಹತ್ತಿದೆವು. ಜಯಘೋಷ, ದೇಶಭಕ್ತಿಗಳ ಗೀತೆಗಳನ್ನು ಹಾಡುವವರ ಗುಂಪಿನಲ್ಲಿ ನಾವುಗಳೂ ಸೇರಿಕೊಂಡೆವು.

ಶಿವಮೊಗ್ಗದ ರೈಲು ನಿಲ್ದಾಣದಲ್ಲಿ ನೆರೆದಿದ್ದ ಜನಸಂದಣಿ ಹೇಳ ತೀರದು. ಅಲ್ಲಿಂದ ನೆಹರೂ ಮೈದಾನದ ತನಕ ಸಾಗುವ ದಾರಿಯಲ್ಲಿ ಇಕ್ಕೆಲೆಗಳಲ್ಲಿ ಮರಗಳಿಗೆ ಅಂಟಿಸಿದ್ದ ಭಿತ್ತಿ ಪತ್ರಗಳು ಸ್ಕೂಲುಗಳ ಮೇಲೆ, ಸರಕಾರಿ ಕಟ್ಟಡಗಳ ಮೇಲೆ ಹಾರಾಡುತ್ತಿದ್ದ ತ್ರಿವರ್ಣ ಧ್ವಜ... ಬಿಳಿಯ ಉಡುಪನ್ನು ಧರಿಸಿದ ಕಾರ್ಯಕರ್ತರು... ಇಡೀ ಶಿವಮೊಗ್ಗ ನಾಡಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡಿತ್ತು. ಎಂತಹ ವಾತಾವರಣ ಅಬ್ಬಾ...! ಆ ದಿನ ಹಾಗಿತಾ ಅಂತ ನೆನಸಿಕೊಂಡರೆ ಈಗಲೂ ಮೈ ನವಿರೇಳುತ್ತದೆ.

ಆ ಜನಜಂಗುಳಿಯಲ್ಲಿ ಕಳೆದು ಹೋಗದಂತೆ ಎಚ್ಚರ ವಹಿಸಿ, ಒಬ್ಬರ ಕೈ ಒಬ್ಬರು ಹಿಡಿದು, ನೆಹರೂ ಮೈದಾನವನ್ನು ಸೇರಿದೆವು. ಅಲ್ಲಿ ಪ್ರಧಾನ ಮಂತ್ರಿಗಳ ಸ್ವಾಗತಕ್ಕಾಗಿ ಭಾರಿ ಸಿದ್ಧತೆಯೇ ನಡೆದಿತ್ತು. ಅಲಂಕೃತಗೊಂಡ ಒಂದು ವೇದಿಕೆ ಸಿದ್ಧವಾಗಿತ್ತು. ನಾವುಗಳು ಪ್ರಧಾನ ಮಂತ್ರಿಗಳ ಆಗಮನವನ್ನು ನಿರೀಕ್ಷಿಸುತ್ತಾ ನಿಂತಿದ್ದೆವು. ಸುತ್ತ ಮುತ್ತಲ ಊರು ಕೇರಿಗಳ ಜನರೆಲ್ಲಾ ಕೆಲಸ ಕಾರ್ಯಗಳನ್ನು ಬಿಟ್ಟು ಉತ್ಸಾಹದಲ್ಲಿ ಸೇರಿದ್ದರು. ಕಡೆಗೂ ಆ ಗಳಿಗೆ ಬಂತು... ನೆರೆದ ಸಮೂಹ ಜಯಕಾರ ಹಾಕುತ್ತಿದ್ದಂತೆ. ಅವರುಗಳು ನಡುವೆ ಪ್ರಧಾನ ಮಂತ್ರಿಯವರು ಆಗಮಿಸಿದರು. ವೇದಿಕೆಯನ್ನೇರಿ ತಮ್ಮ ದರ್ಶನಕ್ಕಾಗಿ ಕಾದು ನಿಂತಿದ್ದ ಜನರ ಕಡೆ, ಕೈ ಆಡಿಸಿ, ಕೈ ಮುಗಿದರು. ಎಂದಿನಂತೆ ಶುಭ್ರವಸ್ತ್ರ, ತಲೆಗೆ ಹಾಕಿದ್ದ ಬಿಳಿಯ ಟೋಪಿ, ಕೋಟಿಗೆ ಸಿಕ್ಕಿಸಿಕೊಂಡಿದ್ದ ಕೆಂಪು ಗುಲಾಬಿ

"ಚಾಚಾ ನೆಹರೂ ಜಿಂದಬಾದ್' ಎಂದು ಶಾಲೆಗೆ ಹೋಗುವ ಮಕ್ಕಳು ಕೂಗು ಹಾಕಿದರು. ಅವರೊಂದಿಗೆ, ನೆಹರೂರವರ ಮಗಳು ಇಂದಿರಾ ಪ್ರಿಯದರ್ಶಿನಿಯವರು ಸಹ ಹಾಜರಿದ್ದರು. ಸುಂದರಿ ಇಂದಿರಾವರು, ತಂದೆಯ ಮಗ್ಗುಲಲ್ಲಿ ನಿಂತು, ಹಸನ್ಮುಖಿಯಾಗಿ, ನಿಂತಿದ್ದ ಜನತೆಗೆ ಕೈಯಾಡಿಸಿದರು ... ಜೊತೆಗೆ ವೇದಿಕೆ ಮೇಲೆ ಅನೇಕ ಗಣ್ಯರೂ ಉಪಸ್ಥಿತ ರಿದ್ದರು.

ಸ್ವಾಗತವನ್ನು ಕೋರಿ, ಹಾರ ತುರಾಯಿಗಳನ್ನು ಸಮರ್ಪಿಸಿ, ಸ್ವಾಗತ ಭಾಷಣದ ನಂತರ, ಪ್ರಧಾನ ಮಂತ್ರಿಯವರು ಜನತೆಯನ್ನು ಉದ್ದೇಶಿಸಿ ಭಾಷಣವನ್ನು ಮಾಡಿದರು. ಭಾಷಣ ಎಷ್ಟರ ಮಟ್ಟಿಗೆ ಅರ್ಥವಾಯಿತೋ, ದೇವರೇ ಬಲ್ಲ! ಕಾರ್ಯಕ್ರಮದ ಕಡೆಯಲ್ಲಿ ಹಾಡಿದ "ಜನಗಣಮನ ಅಧಿ ನಾಯಕ.... ಜಯಹೇ.... ಗೀತೆಯಲ್ಲಿ ನಾವುಗಳೂ ದನಿಯನ್ನು ಸೇರಿಸಿದೆವು. ಒಟ್ಟಿನಲ್ಲಿ ಅದೊಂದು ಅಮೋಘ ಸಂದರ್ಭ... ಅದೇ ಮಹಾ ಸುದಿನ!

ಆ ಸಡಗರ, ಸಂಭ್ರಮ, ದೇಶಪ್ರೇಮ, ಇಷ್ಟು ವರ್ಷಗಳು ಕಳೆದು ಹೋಗಿದ್ದರೂ ನೆನಪಿನಲ್ಲಿ ಉಳಿದಿದೆ... ಸ್ಮೃತಿ ಪಟಲದ ಮೇಲೆ ಕುಣಿಯುತ್ತವೆ.

ಈಗಿನ ಪೀಳಿಗೆಯಲ್ಲಿ ಆ ಯಾವ ಉತ್ಸಾಹವೂ ಇಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ ... ದೇಶ ಪ್ರೇಮವೂ ಅಷ್ಟಕ್ಕಷ್ಟೇ...ಆಗಿನ ಹೋರಾಟಗಾರರಲ್ಲಿ ಅಡಗಿದ್ದ ದುಡಿತ ಮಿಡಿತಗಳು ಇಲ್ಲವಾಗಿವೆ. ಬರೀ ಬಡಿದಾಟವೇ ಎದ್ದು ಕುಣಿಯುತ್ತಿವೆ... ಒಗ್ಗಟ್ಟು ಇಲ್ಲವಾಗಿದೆ. 'ಯಥಾ ರಾಜ ... ತಥಾ ಪ್ರಜಾ" ಎಂಬ ಸುವಾಕ್ಯ ಉಚಿತವಾಗಿದೆ.

* * * *

೩. ಲೀಲೆ

ಬಾಣಸವಾಡಿಯಲ್ಲಿ ನಮ್ಮದೊಂದು ಬಿ.ಡಿ.ಎ ಸೈಟ್ ಇದೆ. ರಿಜಿಸ್ಟ್ರೇಷನ್ ಆದ ನಂತರವೂ, ಒಮ್ಮೆಯೂ ನೋಡಲು ಹೋಗಿರಲಿಲ್ಲ. ನಮ್ಮವರಿಗೆ ಅದೆಲ್ಲಾ ಇಷ್ಟವಿಲ್ಲ. ಸುಮ್ಮನೇ ಸೈಟ್‌ನ ನೋಡೋಕೆ ಹೋಗೋದು ಏನು ಅಂತ ನನ್ನ ಮಾತಿಗೆ ಕಿವಿ ಕೊಟ್ಟಿರಲಿಲ್ಲ.

ಬೆಂಗಳೂರಿನ ಬಡಾವಣೆಗಳು ಬೆಳೆಯುತ್ತಾ ಹೋದಂತೆ ಅನೇಕ ಊಹಾ ಪೋಹಗಳೂ ಬೆಳೆಯುತ್ತಿದ್ದಂತೆ ಒಮ್ಮೆ ಆ ಸೈಟು ಇದೆಯೋ ಇಲ್ಲವೋ ನೋಡಿಕೊಂಡು ಬರಬೇಕೆಂದುಎನಿಸುತ್ತಿತ್ತು. ಆ ಬಾರಿಯ ಕಂದಾಯ ತೆರಿಗೆಯನ್ನು ಕಟ್ಟಲು ಆ ವಾರ್ಡಿನಲ್ಲಿ ಸಂಬಂಧಿಸಿದ ದಾಖಲೆ ಗಳನ್ನು ನೋಡಬೇಕಾಗಿದ್ದುದರಿಂದ, ಬಾಣಸವಾಡಿಗೆ ಹೋಗಬೇಕಾಗಿ ಬಂತು. ಮಳೆಗಾಲದ ದಿನಗಳಾದುದರಿಂದ ಆಟೋ ರಿಕ್ಷಾದಲ್ಲಿ ಹೋಗಿ ಬರುವುದೆಂದು ಒಬ್ಬರೇ ಹೋಗಿ ಬರುವ ಬದಲು, ಎಲ್ಲರೂ ಹೊರಡುವು ದೆಂದು ಹೊರಟೆವು.

ರಿಂಗ್ ರೋಡಿನಲ್ಲಿ ಎಷ್ಟೋ ದೂರ ಹೋದ ನಂತರ ಬಾಣಸವಾಡಿ ಬಡಾವಣೆಯನ್ನು ತಲುಪಿದೆವು. ಸಾಕಷ್ಟು ಮನೆಗಳು ಎದ್ದಿದ್ದವು. ಆಟೋ ದಲ್ಲಿ ಎರಡು ಮೂರು ಸುತ್ತು ಸುತ್ತಿದರೂ, ನಮ್ಮ ಸೈಟ್‌ನ ಪತ್ತೆಯಾಗಲಿಲ್ಲ. ಹಾಗೆ ಸುತ್ತು ಹಾಕುವಾಗ, ಆಂಜನೇಯ ಸ್ವಾಮಿಯ ದೇವಸ್ಥಾನಕ್ಕೆ ದಾರಿ ಎಂಬ ಫಲಕ ಕಣ್ಣಿಗೆ ಬಿತ್ತು.

"ಇಲ್ಲೇ ಹತ್ತಿರಲ್ಲಿ ಆಂಜನೇಯ ದೇವಸ್ಥಾನವಿದೆ. ಹೇಗೂ ಇಲ್ಲಿಯ

ತನಕ ಬಂದಿದೀವಿ ಹೋಗೋಣ. ಇದು ಬಹಳ ಹಳೆಯ ದೇವಸ್ಥಾನ ಹಾಗೇ ಪ್ರಸಿದ್ಧವಾದದ್ದು... ಪದೇ ಪದೇ ಏನು ಇಲ್ಲಿಗೆ ಬರುಲ್ಲವಲ್ಲ." ನಮ್ಮವರನ್ನು ಒಪ್ಪಿಸಿದೆವು.

ಇವರಿಗೆ ದೇವಸ್ಥಾನಕ್ಕೆ ಹೋಗುವ ಇಷ್ಟ ಇತ್ತೋ ಇಲ್ಲವೋ. ಆಟೋ ದವನು ಅಲ್ಲಿಗೆ ಕರೆದುಕೊಂಡು ಹೋದ. ಹಳೆಯ ಕಾಲದ ದೊಡ್ಡ ದೇವಸ್ಥಾನ... ನಾವು ಅಲ್ಲಿಗೆ ಹೋದಾಗ ಹೆಚ್ಚು ಜನ ಭಕ್ತರೂ ಇರಲಿಲ್ಲ. ಕುತೂಹಲ ಭರಿತರಾಗಿ ಒಳಗೆ ಬಂಧೆವು. ಗರ್ಭಗುಡಿಯೊಳಗೆ ಅಲಂಕಾರ ಗೊಂಡ ಬೃಹದಾಕೃತಿಯ ಆಕಾರವನ್ನು ಹಾಗೇ ನೋಡುತ್ತಾ ನಿಂತೆವು. ಸುಮಾರು ಎತ್ತರದ ಹನುಮಂತನ ವಿಗ್ರಹ ಬೆಣ್ಣೆಯ ಅಲಂಕಾರ ದಿಂದ ವೈಭವಯುತವಾಗಿ ಗೋಚರಿಸುತ್ತಿತ್ತು. ನಿಜವಾಗಿಯೂ ಅದ್ಭುತ ಎನಿಸಿತು.

ಕೆಲವು ಭಕ್ತಾದಿಗಳು ಸೇವೆಗಳನ್ನು ಮಾಡಿಸಿದ್ದರು. ಆಂಜನೇಯನಿಗೆ ವಡೆಹಾರ, ವಿಳ್ಳೆದೆಲೆ ಹಾರ, ಬೆಣ್ಣೆ ಅಲಂಕಾರ, ಸಿಂಧೂರ ಅಲಂಕಾರ ಇವುಗಳನ್ನು ವಿಶೇಷ ದಿನಗಳಲ್ಲಿ ಹಾಗೂ ಹನುಮ ಜಯಂತಿಯ ಸಮಯ ದಲ್ಲಿ ಸಾಮಾನ್ಯವಾಗಿ ಎಲ್ಲ ಆಂಜನೇಯನ ದೇವಸ್ಥಾನಗಳಲ್ಲಿ ಮಾಡುವು ದುಂಟು. ಯಾರೋ ವಡೆಹಾರ ಹಾಕಿಸಿದ್ದರು. ಅವರು ಪ್ರಸಾದವನ್ನು ಅಲ್ಲಿದ್ದವರಿಗೆಲ್ಲಾ ಹಂಚಿದರು. ನಮಗೆ ಅನಿರೀಕ್ಷಿತವಾಗಿ ವಡೆಪ್ರಸಾದ ಸಿಕ್ಕಿದ್ದು ಸಂತೋಷವಾಗಿತ್ತು. ದೇವರಿಗೆ ಪ್ರದಕ್ಷಿಣೆ ನಮಸ್ಕಾರ ಹಾಕಿದ್ದಾ ಯಿತು. ಆ ನಂತರ ಯಾರೋ ಭಕ್ತರು ಅವರ ವಿದೇಶದಲ್ಲಿರುವ ಅವರ ಮಕ್ಕಳ ಪರವಾಗಿ, ವಡೆ ಹಾರದ ಸೇವೆಗೆ ಕೊಟ್ಟಿದ್ದರು ಅಂತ ಕಾಣುತ್ತೆ. ಆತ, ನಮ್ಮವರ ಕೈತುಂಬಾ ಬೊಗಸೆ ವಡೆಗಳನ್ನು ಕೊಟ್ಟರು. ಮತ್ತೆ ಹೆಚ್ಚುವರಿ ಪ್ರಸಾದ ಸಿಕ್ಕಿತ್ತು. ಬಾಣಸವಾಡಿಯಲ್ಲಿ ಒಂದು ದೊಡ್ಡ ಆಂ ಜನೇಯ ಸ್ವಾಮಿಯ ದೇವಸ್ಥಾನವಿದೆ ಎಂದು ತಿಳಿದಿದ್ದೆನೆ ಹೊರತು, ಈ ಮುಂಚೆ ಬಂದಿರಲಿಲ್ಲ. ಈ ದಿನ ಹನುಮಂತನ ವಿಶೇಷ ದರ್ಶನ, ಪ್ರಸಾದ ಎಲ್ಲವೂ ದೊರಕಿತು. ನಾವು ಬಂದ ಉದ್ದೇಶ ಬೇರೆಯಾಗಿತ್ತು ಆದರೆ ನೆರವೇರಿದ ಕಾರ್ಯ ಇದಾಗಿತ್ತು.

ಅಲ್ಲಿಯೇ ಪಕ್ಕದಲ್ಲಿದ್ದ ಶ್ರೀ ರಾಮನ ದೇವಸ್ಥಾನಕ್ಕೆ ಹೋಗಿ ನಮಸ್ಕಾರ ಮಾಡಿ, ತೀರ್ಥ ಪ್ರಸಾದವನ್ನು ತೆಗೆದುಕೊಂಡು ಅಲ್ಲಿಂದ ಹೊರಟೆವು. ರಿಕ್ಷಾದವನಿಗೂ ವಡೆಗಳನ್ನು ಕೊಟ್ಟೆವು. ಅವನು ಐಯ್ಯಂಗಾರ್ ಹುಡುಗ ನಾದುದರಿಂದ ಅವನಿಗೆ ಇದು ಗೊತ್ತಿದ್ದ ವಿಷಯವೇ.

ಅಲ್ಲಿಂದ ಕಾರ್ಪೊರೇಟರ್ ಆಫೀಸಿಗೆ ಬಂದೆವು. ಅವರನ್ನು ಭೇಟಿ ಯಾಗಲು ಸಾಕಷ್ಟು ಸಮಯ ಬೇಕಾಯಿತು. ಭೇಟಿಯ ನಂತರವೂ ಸುಲಭವಾಗಿ ಮಾತನಾಡುವರೆ! ಸಹನೆಯಿಂದ ಬೇಕಾದ ಮಾಹಿತಿಗಳನ್ನು ಕೇಳಿ ಪಡೆದು, ಹೊರಟೆವು. ಆದರೆ ನಾವು ಆ ದಿನ ಯಾವ ಕೆಲಸಕ್ಕೆಂದು ಹೋಗಿದ್ದೆವೋ ಅದು ಆಗಲಿಲ್ಲ. ಆದರೆ ಅನಾಯಾಸವಾಗಿ ಹನುಮಂತನ ದರ್ಶನವಾಗಿತ್ತು. ಕಂದಾಯ ತೆರಿಗೆಯನ್ನು ಕಟ್ಟಲು ಬೇರೆಲ್ಲಿಗೋ ಹೋಗ ಬೇಕಾಗಿತ್ತು. ಹಾಗಾಗಿ ಸೀದಾ ವಾಪಸ್ಸು ಮನೆಗೆ ಬಂದೆವು, ಬೊಗಸೆ ವಡೆಗಳನ್ನು ನಡೆದು!

ಹೋದ ಕೆಲಸವಾಗಲಿಲ್ಲ ಬೇಸರವಾಗಿದ್ದರೂ, ಬೇರೊಂದು ಕೆಲಸವೂ ಆಗಿತ್ತಾದ್ದರಿಂದ ಸ್ವಲ್ಪ ಮಟ್ಟಿಗೆ ಸಮಾಧಾನವಾಗಿತ್ತು. ಸ್ವಾಮಿ ಕಾರ್ಯದ ಉದ್ದೇಶವಿರಲಿಲ್ಲ. ಸ್ವಕಾರ್ಯದ ಉದ್ದೇಶ ನೆರವೇರಲಿಲ್ಲ. ಇದು ದೇವರ ಲೀಲೆ!.

* * * *

೫. ಕೋದಂಡ

ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ದೇವಸ್ಥಾನವಿದೆ, ಮುಖ್ಯರಸ್ತೆಯಲ್ಲೇ ದೇವಸ್ಥಾನದ ಹೆಬ್ಬಾಗಲು ಕಾಣುತ್ತದೆ. ಅದೇ ರಸ್ತೆಯಲ್ಲಿ ಓಡಾಡುವಾಗ ಒಮ್ಮೆ ಆ ದೇವಸ್ಥಾನಕ್ಕೆ ಹೋಗಿ ಬರಬೇಕೆನ್ನಿಸಿತು.

ದೇವಸ್ಥಾನದ ಹೆಬ್ಬಾಗಿಲನ್ನು ದಾಡಿ, ಒಳಗೆ ಗರುಡ ಗಂಭವನ್ನು ಸಮೀಪಿಸುತ್ತಿದ್ದಂತೆ ಶ್ರೀ ಕೋದಂಡರಾಮನ ಸನ್ನಿಧಿ ಎಂಬ ಫಲಕ ಕಾಣುತ್ತದೆ. ಅದನ್ನು ಓದಿಕೊಳ್ಳುತ್ತಿದ್ದಂತೆಯೇ ದೇವಸ್ಥಾನದ ಅರ್ಚಕರು, ಸಾಮವೇದರಾಗದಲ್ಲಿ "ಬನ್ನಿ ಬನ್ನಿ" ಎಂದು ಕೈಗಳನ್ನು ತೂಗಿಸುತ್ತಾ ಆಹ್ವಾನಿಸಿದರು. ಒಂದು ತರಹದ ಆನಂದವಾಯಿತು. ಯಾವ ದೇವಸ್ಥಾನದಲ್ಲೂ ಈ ರೀತಿ ಸ್ವಾಗತಿಸಿದ್ದು ಅನುಭವಕ್ಕೆ ಬಂದ ನೆನೆಪಿಲ್ಲ. ಅಜಾನುಭಾಹು, ಲಕ್ಷಣವಾದ ತೇಜಸ್ಸಿನ ಕಳೆಯ ಪಂಚೆ ಉಟ್ಟು ಶಲ್ಯವನ್ನು ಹೊದ್ದು, ನಿಂತಿದ್ದ ವ್ಯಕ್ತಿಯನ್ನು ಕಂಡು ಸಮಸ್ಕಾರ ಮಾಡಿದೆವು. ಅವರ ಬಗ್ಗೆ ಗೌರವ ಮೂಡಿತು.

ಹೆಬ್ಬಾಗಿಲ ಬಳಿ ಮಾರಾಟ ಮಾಡುತ್ತಿದ್ದವರಿಂದ ಹೂವು ಹಣ್ಣುಗಳನ್ನು ಕೊಂಡಿದ್ದೆ. ಅದನ್ನು ಗುಡಿಯ ಬಾಗಿಲಲ್ಲಿ ಇಟ್ಟು ದೇವರಿಗೆ ಕೈ ಮುಗಿದೆವು. ಅಲ್ಲಿ ಗೋಡೆಯ ಮೇಲೆ ರಾಮದೇವರನ್ನು ಪ್ರತಿಷ್ಠಾಪಿಸಿದ ದಿನಾಂಕವನ್ನು, ಸಂವತ್ಸರವನ್ನು ಕೊರೆಸಿದ್ದರು. ಅದನ್ನು ಓದಿ ಸಂತಸವಾಯಿತು. ನಾನು ಹುಟ್ಟಿದ ಸಂವತ್ಸರದಲ್ಲೆಲ್ಲ ರಾಮದೇವರ ಪ್ರತಿಷ್ಠಾಪನೆ ಆಗಿದೆ. ಅಂದರೆ ನನಗೆ ಆಗಿರುವಷ್ಟೇ ವಯಸ್ಸು ಆಗಿದೆ. ಎಂದುಕೊಳ್ಳು

ವಷ್ಟರಲ್ಲಿ ಅರ್ಚಕರು ಕರೆದಿದ್ದರು. 'ಅಮ್ಮಾ ಇಲ್ಲಿ ಬನ್ನಿ ಕೂತ್ಕೊಳ್ಳಿ' ಗೌರವದಿಂದ ಕರೆದರು. ಗರ್ಭಗುಡಿಯ ಹೊರಗೆ, ದೇವರ ಸಮೀಪದಲ್ಲಿ ಕೈ ಮುಗಿದು ಕುಳಿತೆವು. ಅರ್ಚಕರು, ಸಂಕಲ್ಪವನ್ನು ಮಾಡಿಸಿ, ನಮ್ಮಿಬ್ಬರ ಹೆಸರಿನಲ್ಲಿ ಅರ್ಚನೆ ಮಾಡಿದರು.

ದೇವಸ್ಥಾನದ ವಾತಾವರಣ ಬಹಳ ಹಿತವಾಗಿತ್ತು. ಗೌಜು ಗದ್ದಲ ಇರಲಿಲ್ಲ. ನೂಕು ನುಗ್ಗಲು ಇರಲಿಲ್ಲ, ಮಂಗಳಾರತಿಯನ್ನು ತೆಗೆದುಕೊಳ್ಳಲು ಯಾವ ಸರ್ಕಸ್ಸನ್ನು ಮಾಡಬೇಕಾಗಿರಲಿಲ್ಲ. ತೀರ್ಥಕ್ಕಾಗಿ ಅವರಿವರ ತಲೆಯ ಮೇಲೆ ಕೈ ಒಡ್ಡ ಬೇಕಾಗಿರಲಿಲ್ಲ. ಪ್ರಸಾದದ ಹೂವಿಗಾಗಿ ಕಿತ್ತಾಡಬೇಕಾಗಿರಲಿಲ್ಲ. ಎಷ್ಟು ಹೊತ್ತು ಬೇಕಾದರೂ ದೇವರ ಸನ್ನಿಧಿಯಲ್ಲಿ ಹಾಯಾಗಿ ಕುಳಿತಿರಬಹುದಾಗಿತ್ತು. ಇದ್ದಕ್ಕಿದ್ದಂತೆ ಮನದಲ್ಲಿ ಒಂದು ಆಸೆ ಉದಿಸಿತು. "ದೇವರ ನಾಮವನ್ನು ಹಾಡಬೇಕೆನಿಸಿದೆ, ಹಾಡಬಹುದೇ?" ಅರ್ಚಕರನ್ನು ಪ್ರಶ್ನಿಸಿದೆ.

ಅವರು ಮುಗುಳ್ನಕ್ಕರು. ಶ್ರೀ ರಾಮರು ಯಾವ ಸೇವೆಯನ್ನೇ ಆಗಲಿ ಸಂತೋಷದಿಂದ ಸ್ವೀಕರಿಸಿ ಆನಂದಿಸಿ ಆಶೀರ್ವದಿಸುತ್ತಾರೆ. ಹಾಡಿ" ಎಂದರು.

ನಾನು ವಿಜಯದಾಸರ "ರಾಮಾ ರಾಮಾ ಎಂಬೆರಡಕ್ಷರ... ಎಂಬ ದೇವರ ನಾಮವನ್ನು ಹಾಡಿದೆ. ನನ್ನ ಮಗಳೂ ದನಿಗೂಡಿಸಿದಳು. ಏನೋ ಒಂದು ರೀತಿಯ ಮಹದಾನಂದವಾಗಿತ್ತು. ಅಲ್ಲಿ ಇದ್ದುದು ನಾನು ಮತ್ತು ಶ್ರೀ ರಾಮದೇವರು ಮಾತ್ರ, ಹಾಡಿ ಮುಗಿಸಿದ ನಂತರ ದೇವರನ್ನು ನೋಡಿದೆ. ಇದುವರೆಗೆ ಯಾವುದೇ ದೇವಸ್ಥಾನಗಳಲ್ಲಿ ಇಷ್ಟು ಹತ್ತಿರದಿಂದ ದೇವರನ್ನು ನೋಡುವ ಅವಕಾಶ ಸಿಕ್ಕಿರಲಿಲ್ಲ. ಮಧ್ಯದಲ್ಲಿ ಕೋದಂಡರಾಮ, ಅವನ ಬಲಭಾಗದಲ್ಲಿ ಲಕ್ಷ್ಮಣ, ಎಡಭಾಗದಲ್ಲಿ ಸೀತಾ ದೇವಿ. ಕೆಳಗೆ ಮಂಡಿಯೂರಿ ಕುಳಿತ ರಾಮದಾಸ, ಅರ್ಥಾತ್ ಶ್ರೀ ಹನುಮಂತ. ಹೂವಿನಿಂದ ಅಲಂಕೃತಗೊಂಡ ಪ್ರತಿಮೆಗಳನ್ನು ಕಂಡು ಪುಳಕಿತಗೊಂಡಿದ್ದೆ. ಆ ಪ್ರಶಾಂತವಾದ ವಾತಾವರಣದಲ್ಲಿ ಎಷ್ಟು ಹೊತ್ತು

ಬೇಕಾದರೂ ಕುಳಿತಿರಬಹುದಾಗಿತ್ತು. ನನ್ನ ಹಾಡನ್ನು ಕೇಳಿಯೋ ಏನೋ ನಾಲ್ಕಾರು ಜನ ಭಕ್ತರು ಬಂದು ನಿಂತಿದ್ದರು.

ನಾವು ದೇವರಿಗೆ ಹಾಗೇ ಅರ್ಚಕರಿಗೆ ನಮಸ್ಕರಿಸಿದೆವು. ಅರ್ಚಕರು ತೀರ್ಥ ಪ್ರಸಾದಗಳನ್ನು ಕೊಟ್ಟರು. 'ಮತ್ತೆ ಮತ್ತೆ ರಾಮರ ದರ್ಶನಕ್ಕೆ ಬರುತ್ತಿರಿ. ಎಂದು ಆಶೀರ್ವದಿಸಿ, ಹರಸಿದರು.

ಮನೆಗೆ ವಾಪಸ್ಸು ಬಂದ ನಾವಿಬ್ಬರೂ ದೇವಸ್ಥಾನದ ಬಗ್ಗೆ ದೇವರ ದರ್ಶನದ ಬಗ್ಗೆ ಅರ್ಚಕರ ಬಗ್ಗೆ ಮನೆಯಲ್ಲಿ ಆ ದಿನವೆಲ್ಲಾ ಮಾತನಾಡಿದೆವು. ನಮ್ಮವರಿಗೂ ಒಮ್ಮೆ ಹೋಗಿ ಬನ್ನಿ ಎಂಡು ಉಪದೇಶ ನೀಡಿದೆವು.

ಎಷ್ಟೋ ದಿನಗಳ ನಂತರ ಮತ್ತೊಮ್ಮೆ ಈ ದೇವರ ದರ್ಶನಕ್ಕೆ ಹೋಗುವ ಅವಕಾಶ ಒದಗಿ ಬಂತು. ಈ ಬಾರಿ ನಮ್ಮವರು ನನ್ನೊಂದಿಗೆ ಬಂದಿದ್ದರು. ಇವರಿಗೂ ಹಳೇ ಕಾಲದ ಕಲ್ಲುಕಟ್ಟಡದ, ಪ್ರಶಾಂತವಾದ ವಾತಾವರಣದ ಗೌಜು ಗದ್ದಲವಿಲ್ಲದ ದೇವಸ್ಥಾನಗಳೆಂದರೆ ಆಸಕ್ತಿ. ಹಾಗಾಗಿ ಆಸಕ್ತಿಯಿಂದ ಹೆಬ್ಬಾಗಿಲನ್ನು ದಾಟಿ ಒಳಗೆ ಬಂದರು. ಸುತ್ತಲೂ ನೋಡಿದರು. ಒಳಗಿನಿಂದ ಬಂದ ಅರ್ಚಕರು. "ಬನ್ನಿ ಬನ್ನಿ ಹೀಗೆ ಬನ್ನಿ" ಎಂದು ಸಾಮವೇದರಾಗದಲ್ಲಿ ಮತ್ತೊಮ್ಮೆ ಸ್ವಾಗತಿಸಿದರು. ಗರ್ಭಗುಡಿಯ ಸಮೀಪದ ಒಳಾಂಗಣಕ್ಕೆ ಕರೆದೊಯ್ದರು.

ಸಂಕಲ್ಪವನ್ನು ಮಾಡಿಸಿ, ಹೂವು ಮಂತ್ರಾಕ್ಷತೆಯನ್ನು ಮುಟ್ಟಿಸಿ, ನಮ್ಮೆಲ್ಲರ ಹೆಸರಿನಲ್ಲಿ ಅರ್ಚನೆ ಮಾಡಿದರು. ಮಂಗಳಾರತಿಯನ್ನು ಕೊಟ್ಟು ತೀರ್ಥಪ್ರಸಾದವನ್ನು ನೀಡಿದರು. ಹೂವಿನ ಪ್ರಸಾದವನ್ನು ನೀಡಿದರು. ಹೂವಿನ ಪ್ರಸಾದವನ್ನು ಕೊಡುವಾಗ, ನಮ್ಮವರು ದೇವರ ವಿಗ್ರಹಗಳನ್ನೇ ನೋಡುತ್ತಿದ್ದರು. ಕಲ್ಲಿನ ವಿಗ್ರಹಗಳಿಗೆ ಕಂಚಿನ ಕವಚವನ್ನು ತೊಡಿಸಿದ್ದರು. ಗರ್ಭಗುಡಿಯ ಬೆಳಕಿನಲ್ಲಿ ಮೂರ್ತಿಗಳು ಬಂಗಾರದಂತೆ ಹೊಳೆಯುತ್ತಿದ್ದವು. ಹೂವಿನ ಅಲಂಕಾರದಿಂದ ಪ್ರತಿಮೆಗಳು ವಿರಾಜಿಸುತ್ತಿದ್ದವು. ಇದ್ದಕ್ಕಿದ್ದಂತೆ ನಮ್ಮವರಿಗೆ ಏನನ್ನಿಸಿತೋ ಏನೋ ಕೋದಂಡ ಎಲ್ಲಿ? ಕೋದಂಡ ಎಲ್ಲಿ? ಎಂದು ಅರ್ಚಕರನ್ನು ಪ್ರಶ್ನಿಸಿದರು. ಅವರು ಶಾಂತ

ಚಿತ್ತರಾಗಿ ಮುಗುಳ್ನಕ್ಕರು. ನನಗೆ ದಿಗ್ಭ್ರಮೆಯಾಗಿತ್ತು. ಇವರ‍್ಯಾಕೆ ಹೀಗೆ ಪ್ರಶ್ನಿಸುತ್ತಿದಾರೆ ಅಂತ.

"ಹೂವಿನ ಹಾರಗಳ ಅಲಂಕಾರಗಳ ನಡುವೆ ಕೋದಂಡ ಎದ್ದು ಕಾಣುತ್ತಿಲ್ಲ ಅಷ್ಟೇ. ಕೋದಂಡರಾಮ ಎಂದ ಮೇಲೆ, ಬಿಲ್ಲು ಬಾಣ ಇಲ್ಲದೇ ಇರುತ್ತಾ?" ನಾನು ಜಾಣತನದಿಂದ ಹೇಳಿದೆ". ..

"ಕೋದಂಡರಾಮ ಎಂದ ಮೇಲೆ ಕೋದಂಡ ಎದ್ದು ಕಾಣುವಂತಿರ ಬೇಕು. ಮುಚ್ಚಿಬಿಟ್ಟರೆ ನಮ್ಮಂಥೋರಿಗೆ ಹೇಗೆ ತಿಳಿಯುತ್ತದೆ?... ನಮ್ಮವರು ತಮ್ಮ ಮಾತನ್ನು ಸಮರ್ಥಿಸಿಕೊಂಡರು. ಕೋದಂಡವನ್ನು ನೋಡಲೇ ಬೇಕೆಂಬ ಹಠದ ದನಿಯಿತ್ತು.

ನಾನು ಅರ್ಚಕರ ಕಡೆ ಅನುಮಾನದಿಂದ ನೋಡಿದೆ. ಅವರ ಮುಖದಲ್ಲಿ ಅದೇ ಶಾಂತ ಕಳೆ. ಮುಗುಳ್ನಗೆ, ತಲೆಯಾಡಿಸುತ್ತಾ ದೇವರ ಕಡೆಗೆ ನಡೆದರು. ರಾಮದೇವರಿಗೆ ಹಾಕಿದ್ದ ಹೂವಿನ ಹಾರಗಳನ್ನು ತೆಗೆದರು. ಶ್ರೀ ರಾಮನ ಭುಜದ ಮೇಲಿದ್ದ ಹೂವಿನ ಹಾರವನ್ನು ಸರಿಸಿ ದರು. ಈಗ ರಾಮನು ತನ್ನ ಎಡಗೈಯಲ್ಲಿ ಹಿಡಿದಿದ್ದ ಬಿಲ್ಲು ಗೋಚರಿಸಿತು.

"ಇಲ್ಲಿ ನೋಡಿ ಇದು ಕೋದಂಡ ರಾಮನ ಕೋದಂಡ... ಎಂದು ಹೇಳಿ ಮೇಲಿನಿಂದ ಕೆಳಗೆ ಹೂವಿನ ಅಲಂಕಾರವನ್ನು ಸರಿಸುತ್ತಾ ತೋರಿ ಸಿದರು.

ನಾನು ಮುಜುಗರಗೊಂಡಿದ್ದೆ. ಆತಂಕವಾಗಿತ್ತು. ಆದರೆ ಅರ್ಚಕರು ಮಂದಸ್ಮಿತರಾಗಿ ಕೋದಂಡದ ದರ್ಶನವನ್ನು ಮಾಡಿಸಿದರು.

"ನೀವು ಏನು ತಿಳಿದ್ಕೊಂಡ್ರೋ".... ಅರ್ಚಕರಿಗೆ ನನ್ನ ಆತಂಕ ತಿಳಿಯಿತು. ಆದರೆ ಮತ್ತೆ ಅದೇ ಮಂದಹಾಸ.

ಇರಲಿ, ಯಾವ ಆಪತ್ತೂ ಇಲ್ಲ ....ಈ ಗುಡಿಯಲ್ಲಿ ಶ್ರೀ ರಾಮರಿಗೆ ಎಷ್ಟು ಪ್ರಾಮುಖ್ಯತೆ ಇದೆಯೋ ಅವರ ಕೋದಂಡಕ್ಕೆ ಅಷ್ಟೇ ಮಹತ್ವ ಇದೆ. ಅದನ್ನು ನೋಡಿ ತಿಳಿಕೊಳ್ಳಬೇಕಾದುದು ಭಕ್ತರ ಕರ್ತವ್ಯ. ಅದನ್ನು ತಿಳಿಸಬೇಕಾದುದು ನನ್ನ ಧರ್ಮ. ನಾನು ಅದನ್ನೇ ಅನುಸರಿಸಿದೀನಿ.

ನಿಮಗೆ ಯಾವ ಆತಂಕವೂ ಬೇಡ. ಆತ ಸಮಾಧಾನವನ್ನು ಹೇಳಿದರು.

ನಮ್ಮವರು ಕೋದಂಡವನ್ನು ನೋಡಿ ಸಂತುಷ್ಟರಾದರು. ಗೌರವದಿಂದ ಅರ್ಚಕರ ಕಡೆ ನೋಡಿ ಕೈ ಮುಗಿದರು. ಅರ್ಚಕರು ತೆಗೆದ ಹೂವಿನ ಹಾರವನ್ನು ನಮ್ಮವರ ಕೈಗಿತ್ತರು. ಈ ದೇವಸ್ಥಾನಕ್ಕೆ ಅನೇಕ ಜನ ಬಂದು ದೇವರ ಪೂಜೆಯನ್ನು ಮಾಡಿಸಿಕೊಂಡು ಹೋಗ್ತಾರೆ. ಆದರೆ ಯಾರೂ ಯಾವತ್ತೂ ರಾಮರು ಹಿಡಿದಿರುವ ಕೋದಂಡವನ್ನು ನೋಡುವ ಅಪೇಕ್ಷೆಯನ್ನು ತೋರಿರಲಿಲ್ಲ. ಈ ದಿನ ನಾನು ಧನ್ಯ. ಶ್ರೀ ರಾಮರ ಪೂರ್ಣರೂಪವನ್ನು ನಾನು ಇವರಿಗೆ ತೋರಿದೆ. ದೇವರಿಗೆ ಎಷ್ಟೋ ಬಾರಿ ಅಭಿಷೇಕ ಮಾಡಿದ್ದೇನೆ. ದಿನ ನಿತ್ಯವೂ ಅಲಂಕಾರ ಮಾಡುತ್ತೇನೆ. ಪೂಜೆ ಮಾಡುತ್ತೇನೆ, ಮಂಗಳಾರತಿ ಎತ್ತುತ್ತೇನೆ. ಆದರೆ ನನ್ನ ಕೈಂಕರ್ಯದಲ್ಲಿ ನಾನು ಎಂದೂ ಕೋದಂಡದ ಬಗ್ಗೆ ಇಷ್ಟು ಆಸಕ್ತಿಯನ್ನು ತೋರಿರಲಿಲ್ಲ, ಯಾಂತ್ರಿಕವಾಗಿ ನನ್ನ ಕೆಲಸ ಮಾಡುತ್ತಿದ್ದೆ. ನನಗೆ ಈ ದಿನ ಅಪರೂಪದ ಅನುಭವ ಉಂಟಾಗಿದೆ. ನೀವು ಬಹಳ ಅಪರೂಪದ ವ್ಯಕ್ತಿಗಳು. ನಾನು ವಂದನೆಗಳನ್ನು ತಿಳಿಸಬೇಕು" ಅರ್ಚಕರು ನಮ್ಮಿಬ್ಬರಿಗೂ ಕೈಮುಗಿದರು.

ಛೇ ಛೇ ಹಾಗೆಲ್ಲಾ ಕೈ ಮುಗಿಯಬೇಡಿ ಅರ್ಚಕರೇ, ನಿಮ್ಮ ಮುಂದೆ ನಾವೆಂಥವರು? ನೀವು ಮಹಾನುಭಾವರು. ದೇವರ ಸನ್ನಿಧಿಯಲ್ಲಿ ನಿತ್ಯವೂ ಸಮಯವನ್ನು ಸದುಪಯೋಗ ಪಡಿಸಿಕೊಳ್ಳುತ್ತೀರಿ. ನಾವು ದೇವಸ್ಥಾನಗಳಿಗೆ ಬರುವುದೇ ಅಪರೂಪ. ದಿನನಿತ್ಯದ ಜಂಝಾಟದಲ್ಲಿ ಸಮಯವನ್ನು ವ್ಯರ್ಥ ಮಾಡಿ ಕೊಳ್ತಿದೀವಿ. ಈ ದಿನ ನಿಮ್ಮ ಸದಾಚಾರದಿಂದ ಹಾಗೂ ಕೋದಂಡರಾಮನ ದರ್ಶನದಿಂದ ನಮಗೆ ಅತೀವ ಆನಂದವಾಗಿದೆ. ನೀವು ಅಪರೂಪದ ವ್ಯಕ್ತಿತ್ವವನ್ನು ಹೊಂದಿರುವ ಅರ್ಚಕರು. ನಿಮಗೆ ನಮ್ಮ ಕೃತಜ್ಞತೆಗಳು" ನಾನು ಹೇಳಿದೆ.

"ಇಲ್ಲ ತಾಯೀ, ಹಾಗೆ ಹೇಳಬೇಡಿ. ನಾನೂ ಸಾಮಾನ್ಯ ಮನುಷ್ಯನೇ. ಧರ್ಮ ಕರ್ಮ ಸಂಯೋಗದಿಂದ ಈ ಅರ್ಚಕ ವೃತ್ತಿ ಸಿಕ್ಕಿದೆ. ಇದರಿಂದ

ಸ್ವಾಮಿ ಕಾರ್ಯ ಸ್ವಕಾರ್ಯ ಎರಡೂ ನಡೆಯುತ್ತಿರುವುದು ನಿಜ. ಆದರೆ ಈ ದಿನ ನನಗೆ ಸುದಿನ. ನಿಮ್ಮಂಥ ಭಕ್ತರ ದರ್ಶನ ನನಗಾಯಿತು. ಆಗಾಗ್ಗೆ ಬರುತ್ತಿರಿ ಹಾರೈಸಿದರು.

ನಾವು ಹುಂಡಿಗೆ ಕಾಣಿಕೆಯನ್ನು ಹಾಕಿ, ಅರ್ಚಕರಿಗೆ ದಕ್ಷಿಣೆಯನ್ನು ಮಂಗಳಾರತಿಯ ತಟ್ಟೆಯಲ್ಲಿಟ್ಟು ಕೈ ಮುಗಿದು ಹೊರಗೆ ಬಂದೆವು. ದೇವಸ್ಥಾನದಲ್ಲಿ ವಾಡಿಕೆಯಂತೆ ಕೆಲ ಘಳಿಗೆ ಮೆಟ್ಟಿಲ ಮೇಲೆ ಕುಳಿತಿದ್ದು, ಪ್ರಾಂಗಣದಿಂದ ಹೊರಗೆ ಬಂದೆವು. ಹೊರಗಿನ ಜಗತ್ತಿಗೆ ಮತ್ತೆ ಸೇರಿದೆವು. ಆದರೆ ಈ ದಿನ ನಮಗಾದ ಸಾತ್ವಿಕ ಅನುಭವವನ್ನು ನಾವು ಎಂದೂ ಮರೆಯುವಂತಿಲ್ಲ.

* * * *

೬. ತಗಡಿನ ನಾಗಪ್ಪ.

ದೊಡ್ಡ ಬಳ್ಳಾಪುರದ ಮುಖ್ಯ ರಸ್ತೆಯ ಅಕ್ಕ ಪಕ್ಕಗಳಲ್ಲಿ ಅನೇಕ ಹಳ್ಳಿಗಳು ಬರುತ್ತವೆ. ಅವುಗಳಲ್ಲಿ ಒಂದು ಹಳ್ಳಿ "ಹಾರೋಹಳ್ಳಿ". ಅಲ್ಲಿ ಒಂದು ಶಿವ ದೇವಾಲಯವಿದೆ. ಅಲ್ಲಿ, ದೇವಸ್ಥಾನದಲ್ಲಿ ಆಗಾಗ್ಗೆ ವಿಶೇಷ ಪೂಜೆಗಳು ಜರುಗುತ್ತವೆ. ಹಾಗೊಮ್ಮೆ ಧನುರ್ಮಾಸದ ಪೂಜೆಯ ಸಮಯದಲ್ಲಿ ನಮ್ಮಂತಹ ಕಲಾವಿದರಿಗೆ ಸೇವೆ ಮಾಡುವ ಅವಕಾಶ ಸಿಕ್ಕಿತು. ನಾನು ನನ್ನ ಶಿಷ್ಯೆಯರೊಂದಿಗೆ 'ಶಿವಾನಂದ ಲಹರಿ' ಸ್ತೋತ್ರವನ್ನು ಹಾಡಿದ್ದೆ. ಆ ನಂತರ ನನ್ನ ಅಕ್ಕನನ್ನೂ ಕೇಳಿದ್ದೆ. ಅವಳು ತನ್ನ ಶಿಷ್ಯೆಯರೊಂದಿಗೆ ಬರಲು ಒಂದು ದಿನವನ್ನು ಕಾರ್ಯಕ್ರಮಕ್ಕಾಗಿ ಗೊತ್ತು ಮಾಡಿಕೊಂಡಳು. ಅವರುಗಳೇ ಹತ್ತು ಹದಿನೈದು ಜನರು ಒಂದು ವ್ಯಾನನ್ನು ಗೊತ್ತು ಮಾಡಿಕೊಂಡು, ಬೆಳಿಗ್ಗೆ ಘಾಟಿ ಸುಬ್ರಮಣ್ಯಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು, ಸಾಯಂಕಾಲದ ಹೊತ್ತಿಗೆ 'ಉಮಾ ಮಹೇಶ್ವರಸ' ದೇವಾಲಯಕ್ಕೆ ಬಂದು ದೇವರ ನಾಮಗಳನ್ನು ಹಾಡುವುದೆಂದು ನಿಶ್ಚಯಿಸಿಕೊಂಡರು.

ಅಂತೆಯೇ, ಮೊದಲಿಗೆ ಎಲ್ಲರೂ ಘಾಟಿ ಸುಬ್ಯಮಣ್ಯಕ್ಕೆ ತೆರಳಿದೆವು. ನಮ್ಮಕ್ಕ ಹಾಗೂ ಅವಳ ಶಿಷ್ಯೆಯರು ಕುಳಿತು ದೇವರ ನಾಮಗಳನ್ನು ಹಾಡುವಾಗ, ನಾನು ಹೊರಗೆ ಅಂಗಡಿ ಸಾಲುಗಳಿದ್ದಲ್ಲಿಗೆ ಬಂದೆ. ನನ್ನ ಮಗಳು ಅವಳಿಗೋಸ್ಕರ ಕೆಲವು ವಸ್ತುಗಳು ಬೇಕೆಂದು ಹೇಳಿದ್ದಳು. ನಾನು ಎಲ್ಲೆಲ್ಲಿ ಏನಿದೆ ಅಂತ ನೋಡುತ್ತಿರುವಾಗ, ನಾನು ನಿಂತ ಕಡೆ

ಮೇಲಿನಿಂದ ಏನೋ ಬಿದ್ದಂತಾಗಿ ಸದ್ದಾಯಿತು. ಕತ್ತೆತ್ತಿ ನೋಡಿದೆ. ಪ್ರಾಕಾರದ ಗೋಡೆಯ ಮೇಲೆ ಕುಳಿತಿದ್ದ ಕೋತಿಯೊಂದು ಕೆಳಕ್ಕೆ ಏನನ್ನೋ ಎಸೆದಿತ್ತು. ಬರೀ ಹೂವಲ್ಲ.... ಅದರೊಂದಿಗೆ ಏನೋ ಲೋಹದ ವಸ್ತುವೂ ಇದ್ದಿರಬಹುದು ಎಂದುಕೊಂಡು, ಹೂವಿನೊಂದಿಗೆ ಇದ್ದ ವಸ್ತುವನ್ನು ಕೈಗೆತ್ತಿಕೊಂಡು ನೋಡಿದೆ. ಅದೊಂದು ಲೋಹದ ನಾಗಪ್ಪ. ಬಹುಶಃ ತಗಡಿನಿಂದ ಮಾಡಿದ್ದಿರಬೇಕು. ಸುರುಳಿ ಸುತ್ತಿಕೊಂಡು ಹೆಡೆ ಬಿಚ್ಚಿ ಕುಳಿತ ನಾಗರಹಾವಿನ ಆಕಾರದಲ್ಲಿತ್ತು. ಅಲ್ಲಿಗೆ ಬಂದವರು, ಹರಕೆ ಹೊತ್ತವರು ಹುಂಡಿಗೆ ಹಾಕಿರಬಹುದಾದ ಅಥವಾ ವ್ಯಾಪಾರಸ್ಥರು, ಮಾರಲೆಂದು ಇಟ್ಟುಕೊಂಡಿದ್ದನ್ನು ಈ ಕೋತಿ ಎತ್ತಿಕೊಂಡಿರಬಹುದೇನೋ, ಮೇಲಿನಿಂದ ಕೆಳಕ್ಕೆ ಬೀಳಿಸಿರಬಹುದು. ಅದನ್ನು ನಾನು ಇಲ್ಲಿ ನಿಂತ ಸಮಯದಲ್ಲೇ ಬೀಳಿಸಬೇಕೇ, ಈ ಕಾರ್ಯ ಕಾರಣ ಏನು ಅಂತ ತಿಳಿಯದಾಯಿತು. ಕೈಗೆ ಎತ್ತಿಕೊಂಡದ್ದಾಗಿತ್ತು. ಅಲ್ಲೇ ಎಲ್ಲಾದರೂ ಬಿಟ್ಟು ಬಿಡಲು ಮನಸ್ಸಿಲ್ಲ. ಬಿಡಬೇಕೋ, ಇಟ್ಟುಕೊಳ್ಳಬೇಕೋ_ ಈಗ ಇದನ್ನು ಏನು ಮಾಡಬೇಕು, ಯಾರನ್ನು ಕೇಳಬೇಕು? ಯಾರಿಗೆ ಹೇಳಬೇಕು ಎಂದು ತಿಳಿಯದೇ ಸ್ವಲ್ಪ ಹೊತ್ತು ಯೋಚಿಸಿದೆ.

ನನ್ನ ಅಕ್ಕನಿಗಾಗಲೀ, ಅವಳ ವೃಂದದವರಿಗಾಗಲೀ ತಿಳಿದರೆ, ತಲಾ ತಟ್ಟಿ ಮಾತಾಡುತ್ತಾರೆ, ಅದರ ಬದಲು ಈಶ್ವರನ ದೇವಸ್ಥಾನದ ಅರ್ಚಕರನ್ನೇ ಕೇಳಿದರಾಯಿತು ಎಂದುಕೊಂಡು, ಹೂವಿನೊಂದಿಗೆ ಅದನ್ನು ನನ್ನ ಪರ್ಸಿನೊಳಗೆ ಇಟ್ಟೆ. ನಂತರ ಕೆಲವುವಸ್ತುಗಳನ್ನು ಖರೀದಿಸಿ ಮತ್ತೆ ಒಳಗೆ ಬಂದು, ಆ ವೃಂದದವರೊಂದಿಗೆ ಕುಳಿತೆ.

ಮಹಾ ಮಂಗಳಾರತಿ, ಪ್ರಸಾದ ಸ್ವೀಕಾರದ ನಂತರ, ಅಲ್ಲಿಯೇ ಒಂದು ಕಡೆ ಎಲ್ಲರೂ ಕುಳಿತು ಕಟ್ಟಿ ತಂದಿದ್ದ ಬುತ್ತಿಯನ್ನು ಬಿಚ್ಚಿ ಸಾವಕಾಶವಾಗಿ ಉಂಡಿದ್ದಾಯಿತು. ನಂತರ ಕೆಲ ಸಮಯವನ್ನು ಅಲ್ಲಿಯೇ ಕಳೆದು ವಾಪಸ್ಸು ಹೊರಟೆವು. ಹಾರೋಹಳ್ಳಿಯನ್ನು ತಲುಪಿದಾಗ ಸಾಯಂಕಾಲ ಆಗಿತ್ತು. ಅಲ್ಲಿಯೇ ಕೈ ಕಾಲು ಮುಖ ತೊಳೆದು, ಆಯಾಸ

ವನ್ನು ಪರಿಹರಿಸಿಕೊಂಡು, ದೇವಸ್ಥಾನದಲ್ಲಿ ಕುಳಿತೆವು.

ದೇವರನಾಮವನ್ನು ಹಾಡುವ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೊದಲು, ನಾನು ಅರ್ಚಕರನ್ನು ಪ್ರತ್ಯೇಕವಾಗಿ ಭೇಟಿಯಾದೆ. ಅವರು ದೇವಸ್ಥಾನಕ್ಕೆ ಅಂಟಿಕೊಂಡಿದ್ದಂತ ಮನೆಯಲ್ಲಿ ವಾಸವಾಗಿದ್ದರು. ನಿಮ್ಮನ್ನು ಒಂದು ವಿಷಯವನ್ನು ಕೇಳಬೇಕಾಗಿದೆ ಎಂದು ಹೇಳಿ ಘಾಟಿ ಸುಬ್ರಹ್ಮಣ್ಯೇಶ್ವರನ ದೇವಸ್ಥಾನದಲ್ಲಿ ನನಗೆ ಲಭ್ಯವಾದ ನಾಗಪ್ಪನ ಬಗ್ಗೆ ಹೇಳಿದೆ. ಈಗ ಅದನ್ನು ಏನು ಮಾಡಬೇಕು ಅಂತ ಗೊತ್ತಾಗ್ತಿಲ್ಲ. ಇಟ್ಕೋಬಹುದೋ ಇಟ್ಟುಕೋ ಬಾರದೋ ಅಂತ ತಿಳೀತಿಲ್ಲ. ನೀವು ಹೇಗೆ ಹೇಳ್ತೀರೋ ಹಾಗೆ ಮಾಡೀನಿ" ಎಂದು ಹೇಳಿದೆ.

ಕೆಲವು ವರ್ಷಗಳ ಹಿಂದೆ ಇದೇ ದೇವಸ್ಥಾನದಲ್ಲಿ 'ಸರ್ಪ ಸಂಸ್ಕಾರ' ವಿಧಿಯನ್ನು ಇವರ ನೇತೃತ್ವದಲ್ಲಿ ಆಚರಿಸಿದ್ದೆವು. ನೋಡೋಣ, ಸಧ್ಯಕ್ಕೆ ಇದು ನಿಮ್ಮ ಬಳಿಯೇ ಇರಲಿ, ಇಲ್ಲಿ ಹನುಮಂತನ ಸಂಕಲ್ಪ ಏನಿದೆಯೋ ಭಗವಂತನ ಉದ್ದೇಶ್ಯ ಏನಿದೆಯೋ? ಕೆಲವು ದಿನಗಳು ನಿಮ್ಮ ಮನೆಯಲ್ಲಿಟ್ಟುಕೊಂಡು, ಯಾವುದಾದರೂ ನದಿಯಲ್ಲಿ ಬಿಟ್ಟು ಬಿಡಿ. . . ಎಂದು ಆದೇಶವಿತ್ತರು. ಗುರುಮುಖೇನ ಬಂದ ವಾಣಿಗೆ ಒಪ್ಪಿದೆ. ಆದರೆ ನನ್ನ ಜತೆಯಲ್ಲಿದ್ದವರಿಗೆ ಯಾರಿಗೂ ಈ ವಿಷಯವನ್ನು ಹೇಳಲಿಲ್ಲ.

ದೇವರ ನಾಮವನ್ನು ಹಾಡುವ ಕಾರ್ಯಕ್ರಮ ಮುಗಿದಿತ್ತು. ಮಂಗಳಾರತಿ ತೀರ್ಥ ಪ್ರಸಾದದ ನಂತರ ಅಲಿಂದ ಹೊರಟೆವು, ನನ್ನ ಮನೆಯ ಹತ್ತಿರ ನನ್ನನ್ನು ಇಳಿಸಿ, ಉಳಿದವರೆಲ್ಲಾ ಮುಂದೆ ಹೊರಟು ಹೋದರು.

ಅನಿರೀಕ್ಷಿತವಾಗಿ ನನಗೆ ಸಿಕ್ಕಿದ ನಾಗಪ್ಪನನ್ನು ಗೂಡಿನಲ್ಲಿ ದೇವರ ಪಟದ ಪಕ್ಕದಲ್ಲಿಟ್ಟು, ನಡೆದ ಘಟನೆಯನ್ನು ನನ್ನ ಗಂಡ ಹಾಗೂ ಮಗಳಿಗೆ ಹೇಳಿದೆ. ನನ್ನ ಮಗಳು ಉತ್ಸುಕಳಾಗಿದ್ದಳು. ಆಗಾಗ್ಗೆ ನಾಗಪ್ಪನನ್ನು ನೋಡುತ್ತಿದ್ದಳು.

ಕೆಲವು ತಿಂಗಳುಗಳ ಹಿಂದೆ, ಅವಳ ಕೈಯಿಂದ ಒಂದು ಅಚಾತುರ್ಯ ನಡೆದಿತ್ತು. ನಮ್ಮ ಮನೆಯಲ್ಲಿ ಸುರಳಿ ಸುತ್ತಿಕೊಂಡು ಹೆಡೆ ಎತ್ತಿ ಕುಳಿತ

ಒಂದು ಬೆಳ್ಳಿ ನಾಗಪ್ಪ ಇತ್ತು. ಬಹಳ ಹಗುರವಾಗಿದ್ದುದರಿಂದ ನಿರ್ಮಾಲ್ಯಕ್ಕೆ ಅಂಟಿಕೊಂಡು ಬಿಡುತ್ತಿತ್ತು. ಹಾಗೆ ಒಮ್ಮೆ ನನ್ನ ಮಗಳ ಕೈಯಿಂದ ನಾಗಪ್ಪ ಎಗರಿ ಹೋಗಿ ಎಲ್ಲೋ ಸೇರಿಹೋಗಿ ಪತ್ತೆಯಾಗಲೇ ಇಲ್ಲ. ಮಣ್ಣಿನಲ್ಲಿ ಹೂತು ಹೋಯಿತೋ, ಗಿಡ ಪೊದೆಗಳ ಸಂದಿ ಅಡಗಿತೋ ಸಿಗಲೇ ಇಲ್ಲ, ಈಗ ಅವಳಿಗೆ ಅನ್ನಿಸಿದ್ದು, ಆಗ ಕಳೆದು ಹೋದದ್ದು, ಈಗ ಮತ್ತೆ ಸಿಕ್ಕಿದಂತಿದೆ. ಇದನ್ನು ನಾವೇ ಇಟ್ಟುಕೊಳ್ಳೋಣ ಅಂತ.

ನನಗೆ ಈ ಮಾತು ಒಪ್ಪಿಗೆಯಾಗಲಿಲ್ಲ. ಕೆಲವು ದಿನಗಳ ನಂತರ ಹರಿಯುವ ನೀರಿನಲ್ಲಿ ಬಿಟ್ಟು ಬಿಡಿ ಅಂದಿದಾರೆ. ಅವರು ಹೇಳಿದಂತೆ ಕೇಳಬೇಕು. ಮನಸ್ಸಿಗೆ ತೋಚಿದಂತೆ ಮಾಡಬಾರದು ಅಂತ ನನ್ನ ಅನಿಸಿಕೆ.

ಕೆಲವು ದಿನಗಳು ಕಳೆದವು. ಆ ನಾಗಪ್ಪನನ್ನು ಏನು ಮಾಡಬೇಕೆಂಬ ಜಿಜ್ಞಾಸೆ ಬಗೆಹರಿದಿರಲಿಲ್ಲ. ದಿನ ದಿನಕ್ಕೂ ಅದನ್ನು ಮನೆಯಲ್ಲೇ ಇಟ್ಟು ಕೊಳ್ಳಬೇಕೆಂಬ ವ್ಯಾಮೋಹ ನನ್ನ ಮಗಳಲ್ಲಿ ಬೆಳೆಯುತ್ತಿತ್ತು. ನಮ್ಮ ಮನೆಯ ಸಮೀಪದಲ್ಲಿದ್ದ ಗಣಪತಿಯ ದೇವಸ್ಥಾನಕ್ಕೆ ಹೋಗಿದ್ದ ಸಮಯದಲ್ಲಿ ಅಲ್ಲಿಯ ಅರ್ಚಕರಿಗೆ ಈ ವಿಷಯವನ್ನು ತಿಳಿಸಿ ಎಲ್ಲವನ್ನೂ ವಿವರಿಸಿದೆ.

ಆತನ ಮುಖದಲ್ಲಿ ಪ್ರಸನ್ನತೆ ಕಾಣಲಿಲ್ಲ, ಅದರಲ್ಲಿ ಯಾವ ಸಂಕಲ್ಪ, ಉದ್ದಿಶ್ಯ ಅಡಗಿದೆ ಅಂತ ನನಗೆ ತಿಳಿಯದು. ಯಾರೋ ಹರಕೆ ಹೊತ್ತವರು, ಅವರ ತಾಪತ್ರಯ ತೀರಲೆಂದು ಹಾಕಿದ್ದಿರಬಹುದು. ಒಣಗಿದ ಹೂವು ಗಳೊಂದಿಗೆ ಸೇರಿದ್ದು, ಕೋತಿ ಎತ್ತಿಕೊಂಡು ಬಿಸಾಕಿರಬಹುದು. ಅದನ್ನು ಇವತ್ತೇ ವಿಸರ್ಜನೆ ಮಾಡಿಬಿಡಿ." ಎಂದರು.

ಹೌದು ಆ ಅರ್ಚಕರೂ, ನದಿಯಲ್ಲಿ ಬಿಟ್ಟು ಬಿಡಿ ಎಂದಿದ್ದರು. ಇಲ್ಲಿ ಹತ್ತಿರ ಯಾವ ನದಿಯೂ ಇಲ್ಲ. ನಮ್ಮ ಮನೆಯಲ್ಲಿ ಬಾವಿ ಇದೆ. ಬಾವಿಯೊಳಕ್ಕೆ ಬಿಟ್ಟರೆ ಆಗುತ್ತಾಆ ಅಂತ ಕೇಳಿದೆ.

"ಧಾರಾಳವಾಗಿ ಬಿಡಬಹುದು. ಹೂವು ಮಂತ್ರಾಕ್ಷತೆಯೊಂದಿಗೆ ಬಾವಿಯಲ್ಲಿ ಬಿಟ್ಟುಬಿಡಿ. ಎಂದರು. ಮನೆಗೆ ಬಂದೊಡನೆಯೇ ಮೊದಲು ಆ ಕೆಲಸ ಮಾಡಿದೆ. ಆದರೆ ಇತ್ತಿಗೂ, ಘಾಟಿ ಸುಬ್ರಹ್ಮಣ್ಯದಲ್ಲಿ ಆ

ತಗಡಿನ ನಾಗಪ್ಪ ನನಗೇ ಸಿಕ್ಕ ಬೇಕಾಗಿತ್ತೆ! ಅದರ ಉದ್ದಿಶ್ಯ, ಸಂಕಲ್ಪ ಏನೆಂದು ನನಗೆ ತಿಳಿದಿಲ್ಲ. ಬಾವಿಯ ನೀರಿನಲ್ಲಿ ತಣ್ಣಗೆ ಕುಳಿತಿದೆ. ಯಾವುದೋ ಹೀಗೆ ಯಾವಾಗಲೋ ಒಂದು ಆಂಜನೇಯನ ಯಂತ್ರ ಸಿಕ್ಕಿತ್ತು. ಅದನ್ನೂ ಅದರೊಂದಿಗೆ ಬಾವಿಗೆ ಬಿಟ್ಟಿದ್ದೇನೆ.

* * * *

೭. ಯಕ್ಷ ಪ್ರಶ್ನೆ

ಶ್ರಾವಣ ಮಾಸದಲ್ಲಿ ಪ್ರತಿ ದಿನವೂ ಹಬ್ಬವೇ. ಶ್ರಾವಣ ಶುಕ್ರವಾರ ಹೆಣ್ಣು ಮಕ್ಕಳ ಹಬ್ಬ. ಲಕ್ಷ್ಮಿ ಪೂಜೆ. ಶ್ರಾವಣ ಶನಿವಾರ ಗಂಡು ಮಕ್ಕಳ ಹಬ್ಬ. ಪಡಿ ಬೇಡುವ ಪದ್ಧತಿ ಇರುವವರು. ಗಂಡು ಮಕ್ಕಳಿಗೆ ಅಭ್ಯಂಜನ ಮಾಡಿಸಿ, ಶಲ್ಯ ಉಡಿಸಿ, ವಲ್ಲಿ ಹೊಡೆಸಿ, ಹಣೆಗೆ ನಾಮವನ್ನಿಟ್ಟು, ದೇವರ ಮುಂದೆ ನಿಲ್ಲಿಸಿ ಪಡಿ ಬೇಡಿಸುವುದು. ಬೆಳ್ಳಿಯ ಚೊಂಬಿಗೆ ಕುಂಕುಮವನ್ನು ಹಚ್ಚಿ, ಹೂವಿನ ಮಾಲೆಯನ್ನು ಕಂಠಕ್ಕೆ ಸುತ್ತಿ ಗಂಡು ಹುಡುಗನ ಕೈಗೆ ಕೊಡುವುದು. ವೆಂಕಟೇಶಾಯ ಮಂಗಳಂ ಅಂತ ಹೇಳು ಅಂತ ಹೇಳಿಸುವುದು, ಮೊದಲಿಗೆ ತಾಯಿ ಭಿಕ್ಷೆ ಹಾಕುವುದು. ಇದು ತಿರುಪತಿ ತಿಮ್ಮಪ್ಪನ ಮನೆ ದೇವರು ಇರುವವರು ನಡೆಸುವ ಪದ್ಧತಿ. ಆಮೇಲೆ ಐದು ಜನರ ಮನೆಗೆ ಹೋಗಿ ಪಡಿ ಹಾಕಿಸಿಕೊಂಡು ಬರುವುದು ಪದ್ಧತಿ.

ಇದನ್ನು ಚಿಕ್ಕ ಗಂಡು ಮಕ್ಕಳು ಚಿಕ್ಕವರಿದ್ದಾಗ ಅಕರಾಸ್ತೆಯಿಂದ ಮಾಡುತ್ತಾರೆ. ಬೆಳೀತಾ ಬೆಳೀತಾ ಮನೆಮನೆಗೆ ಹೋಗಿ ನಿಂತು ವೆಂಕಟೇಶಾಯ ಮಂಗಳಮ್ ಅಂತ ಹೇಳಲು ನಾಚಿಕೆ ಸಂಕೋಚಗಳು ಅಡ್ಡ ಬರುತ್ತದೆ. ತಾಯಿಯೂ ಬಲವಂತ ಮಾಡುವುದಕ್ಕಾಗುವುದಿಲ್ಲ.

ಹಾಗೇ ಶ್ರಾವಣ ಮಾಸದಲ್ಲಿ ಮುಖ್ಯವಾಗಿ ಬರುವ ಗಂಡು ಮಕ್ಕಳ ಹಬ್ಬ ಗೋಕುಲಾಷ್ಟಮಿ. ಇದನ್ನು ಜನ್ಮಾಷ್ಟಮಿ ಅಂತಲೂ, ಕೃಷ್ಣಾಷ್ಟಮಿ ಅಂತಲೂ ಕರೆಯುತ್ತಾರೆ. ಈ ಹಬ್ಬದಲ್ಲಿ ಬಗೆ ಬಗೆಯ ತಿಂಡಿಗಳಿಗೇ ಪ್ರಾಧಾನ್ಯತೆ. ಶ್ರೀ ಕೃಷ್ಣನ ನೈವೇದ್ಯಕ್ಕೆ ಅವಲಕ್ಕಿಗೆ ಮಹತ್ವವಿದ್ದರೂ, ಚಕ್ಕುಲಿ,

ಕೋಡುಬಳೆ ಇತ್ಯಾದಿ ಕರಿದ ತಿಂಡಿಗಳೂ ಬಗೆ ಬಗೆಯ ಉಂಡೆಗಳೂ ಆಗಬೇಕು. ಈ ಹಬ್ಬವನ್ನು ಶ್ರೀ ವೈಷ್ಣವರೂ, ವೈಷ್ಣವರೂ, ಸ್ಮಾರ್ತರೂ ಅವರವರ ಪದ್ಧತಿಗೆ ಅನುಗುಣವಾಗಿ ಆಚರಿಸುವುದು ಉಂಟು. ಒಮ್ಮೊಮ್ಮೆ ಮೂರು ಪಂಗಡಕ್ಕೂ ಬೇರೆ ಬೇರೆ ದಿನಗಳಲ್ಲಿ ಹಬ್ಬದ ಆಚರಣೆಗೆ ಬಂದರೆ, ಒಮ್ಮೊಮ್ಮೆ ಮೂರು ಪಂಗಡದವರಿಗೂ ಒಂದೇ ದಿನದಲ್ಲಿ ಅಂದರೆ ಶ್ರಾವಣ ಬಹುಳ ಅಷ್ಟಮಿಯ ದಿನ ಬರುವುದುಂಟು. ಆದರೆ ಸ್ಕೂಲಿಗೆ ರಜ ಕೊಡುವುದು ಮಾತ್ರ ಒಂದೇ ದಿನ.

ಶ್ರಾವಣ ಮಾಸದಲ್ಲಿ ಪ್ರತಿ ದಿನವೂ ಹಬ್ಬದ ಅಡಿಗೆ ಮಾಡಿದರೂ, ಗೋಕುಲಾಷ್ಟಮಿಗೆ ಹೆಚ್ಚುವರಿ ತಿಂಡಿಗಳನ್ನು ಮಾಡುವುದು ವಾಡಿಕೆ. ನಮ್ಮ ತಾಯಿಯ ಮನೆಯಲ್ಲಂತೂ ಮೂರು ನಾಲ್ಕು ದಿನಗಳ ಮುಂಚಿನಿಂದಲೇ ಮಡಿಯಲ್ಲಿ ಕರಿದ ತಿಂಡಿಗಳನ್ನು ಮಾಡಿಡುತ್ತಿದ್ದದು ನೆನಪಿದೆ. ನಮ್ಮ ಅತ್ತೆಯ ಮನೆಯಲ್ಲಿ ಕೆಲವು ತಿಂಡಿಗಳನ್ನು ತಪ್ಪದೇ ಮಾಡುತ್ತಿದ್ದರು. ಅದೇ ಅಭ್ಯಾಸ ನನಗೂ ಬಂದುದರಿಂದ ಸುಲಭವಾಗಿ ಆಗುವ ಕೆಲವು ತಿಂಡಿಗಳನ್ನು ನಾನೂ ಮಾಡುತ್ತಿದ್ದೆ. ಮಕ್ಕಳಿಗೆ ಕಾಣದಂತೆ ಮಾಡಿ ಇಡುವುದು ಸುಲಭವಿರಲಿಲ್ಲ. ಆಸೆ ಪಟ್ಟು ಕೇಳಿದರೆ ಇಲ್ಲವೆನ್ನಲು ಆಗುತ್ತಿರಲಿಲ್ಲ. ಅಲ್ಲದೇ ನಮ್ಮ ತಾಯಿಯಂತೆ ಹೆಚ್ಚು ಮಡಿಯನ್ನು ಮಾಡಲು ನಮ್ಮ ಮನೆಯಲ್ಲಿ ಸಾಧ್ಯವಿರಲಿಲ್ಲ. ಮಕ್ಕಳು ಸ್ಕೂಲಿಗೆ ಹೋದ ಮೇಲೆ ಮಡಿಯುಟ್ಟು ಮಕ್ಕಳಿಗೆ ಇಷ್ಟವಾಗುವ ಒಂದೆರಡು ಬಗೆಯ ತಿಂಡಿಗಳನ್ನು ಮಾಡಿಡುವಷ್ಟರಲ್ಲಿ ಸಾಕಷ್ಟು ಸಮಯ ಬೇಕಾಗುತ್ತಿತ್ತು. ಊಟ ಮಾಡಿದ ಮೇಲೆ ಮಾಡಿಟ್ಟರೆ ನೈವೇದ್ಯಕ್ಕೆ ಬರುವುದಿಲ್ಲ. ಅಲ್ಲದೇ ಅಷ್ಟರಲ್ಲಿ ಮಧ್ಯಾಹ್ನ ಮಗನನ್ನು ಸ್ಕೂಲ್ನಿಂದ ವಾಪಸ್ಸು ಕರೆತರುವ ಸಮಯವಾಗಿ ಬಿಡುತ್ತಿತ್ತು. ನಮ್ಮದೇ ಚಿಕ್ಕ ಸಂಸಾರದಲ್ಲಿ ಮಕ್ಕಳನ್ನು ಸ್ಕೂಲಿಗೆ ಕಳಿಸುವ, ಸ್ಕೂಲಿನಿಂದ ಕರೆದುಕೊಂಡು ಬರುವ ಕೆಲಸಕ್ಕೆ ಪ್ರಾಧಾನ್ಯತೆ. ಬೆಳಿಗ್ಗೆ ಮಕ್ಕಳನ್ನು ಎಬ್ಬಿಸಿ, ಸಿದ್ಧ ಮಾಡಿ ಸ್ಕೂಲಿಗೆ ಬಿಟ್ಟು ಬರುವವರೆಗೂ ಬೇರೆ ಯಾವ ಕೆಲಸವನ್ನೂ ಮಾಡುವಂತಿಲ್ಲ. ಹಾಗೇ ವಾಪಸ್ಸು ಕರೆದುಕೊಂಡು ಬರುವ ವೇಳೆ

ಯಾದಾಗ ಯಾವ ಕೆಲಸವನ್ನು ಇಟ್ಟುಕೊಳ್ಳುವಂತಿಲ್ಲ. ಇದೇ ಅಭ್ಯಾಸ ವಾಗಿತ್ತು.

ನಮ್ಮ ಮನೆಯಲ್ಲಿ ದೇವರ ಮುಂದೆ ದೀಪ ಹಚ್ಚುವವಳೂ ನಾನೇ. ಅಲ್ಪ ಸ್ವಲ್ಪ ದೇವರ ಪೂಜೆ ಮಾಡುವವಳೂ ನಾನೇ. ಪಟಗಳಿಗೆ ಹೂವನ್ನಿಟ್ಟು ಊದಿನ ಕಡ್ಡಿ ಹಚ್ಚಿ ಮಂಗಳಾರತಿಗೆ ಮೊದಲು ನೈವೇದ್ಯ ಮಾಡಿ ಪ್ರದಕ್ಷಿಣೆ ನಮಸ್ಕಾರ ಹಾಕಿ, ಎಲ್ಲರ ಪರವಾಗಿ ಪ್ರಾರ್ಥನೆ ಮಾಡುವವಳು ನಾನೇ.

ಆಷಾಢ ಅಮಾವಾಸ್ಯಗೆ ಮೊದಲು ದೇವರುಗಳನ್ನು ತೊಳೆದು ಒರೆಸಿ, ರಂಗೋಲಿ ಇಟ್ಟು ಎಲ್ಲವನ್ನು ಸಜ್ಜಾಗಿ ಅಣಿಗೊಳಿಸುವುದು ಎಂದರೆ, ಅರ್ಧ ದಿನದ ಕೆಲಸ. ಚಿಕ್ಕ ಚಿಕ್ಕ ಬೆಳ್ಳಿಯ ವಿಗ್ರಹಗಳನ್ನು ಸಂಭಾಳಿಸಿ, ಇಡುವುದೇ ಒಂದು ಮುಖ್ಯ ಕೆಲಸ. ಈ.ಬಾರಿ ದೇವರನ್ನು ತೊಳೆದು ಇಡುವಾಗ ಒಂದು ಬೆಳ್ಳಿಯ ಅಂಬೆಗಾಲಿನ ಕೃಷ್ಣನ ವಿಗ್ರಹ ಇಲ್ಲದಿರುವುದು ಗಮನಕ್ಕೆ ಬಂದಿತು. ತೆಗೆದು ಹಾಕಿದ ನಿರ್ಮಾಲ್ಯದಲ್ಲಿ ಬೆರಳುಗಳನ್ನಾಡಿಸಿ ಆಡಿಸಿ ನೋಡಿದೆ. ಅಲ್ಲಿ ಸಿಗಲಿಲ್ಲ, ಮನಸ್ಸಿಗೆ ಬೇಸರವಾಯಿತು. ಮೊದಲೇ ಅತಿ ಸಣ್ಣ ವಿಗ್ರಹ ಎಲ್ಲಿ ಮಾಯವಾಯಿತೋ. ಈಗ ಎಲ್ಲಿ ಅಂತ ಹುಡುಕುವುದು! ಕಳೆದು ಹೋಗಿ ಎಷ್ಟು ದಿನಗಳಾಗಿನೆಯೋ. ಈ ಮೊದಲೇ ದಿನವೂ ತೆಗೆಯುವ ಒಣಗಿದ ಹೂವಿಗೆ ಅಂಟಿಕೊಂಡಿದ್ದು, ಹೂವನ್ನು ಗಿಡದ ಬುಡಕ್ಕೆ ಹಾಕುವಾಗ ಅದರೊಂದಿಗೆ ಸೇರಿಕೊಂಡು ಬಿಟ್ಟಿರಬಹುದು. ಈಗ ಯಾವ ಗಿಡದ ಬುಡ ಅಂತ ಹುಡುಕುವುದು! ನಾವು ಇದ್ದುದು ಮೇಲಿನ ಮನೆಯಲ್ಲಿ. ಅಲ್ಲಿಂದಲೇ ನಿರ್ಮಾಲ್ಯವನ್ನು ಕೆಳಕ್ಕೆ ಯಾರೂ ಓಡಾಡಿ ತುಳಿಯದ ಜಾಗಕ್ಕೆ ಎಸೆಯುತ್ತಿದ್ದುದು. ಅಲ್ಲಿ ವಾಸವಾಗಿದ್ದವರು ಓನರ್ ಅವರು ಆ ಜಾಗವನ್ನು ಆಗ ಈಗ ಕ್ಲೀನ್ ಮಾಡುತ್ತಿದ್ದರು. ಈಗ ಎಲ್ಲಿ ಅಂತ ಹುಡುಕುವುದು ಅಂತ ಚಿಂತೆಯಾಯಿತು..

ನಾವು ವಾಸವಾಗಿದ್ದ ಮನೆಯ ಕೆಳಗಿನ ಮನೆಯಲ್ಲಿ ಒಬ್ಬರು

ಕೊಂಕಣಿಯವರು ಬಾಡಿಗೆಗೆ ಇದ್ದರು. ಅವರ ಮನೆಯಾಕೆ ಹಾಗೂ ನಾನೂ ಒಟ್ಟೊಟ್ಟಿಗೆ ಗಂಟೆ ಗಟ್ಟಲೆ ಎಷ್ಟೋ ವಿಷಯಗಳನ್ನು ಮಾತನಾಡು ತ್ತಿದ್ದೆವು. ಸ್ನೇಹಿತೆಯರಂತೆ ಎಲ್ಲಾ ವಿಷಯಗಳನ್ನು ಮುಕ್ತವಾಗಿ ಮಾತ ನಾಡುತ್ತಿದ್ದೆವು. ಹಾಗೆ ಮಾತನಾಡುವಾಗ ಕಳೆದು ಹೋಗಿರುವ ಶ್ರೀ ಕೃಷ್ಣನ ವಿಗ್ರಹದ ಬಗ್ಗೆ ಹೇಳಿದೆ. "ಯಾವಾಗ ಕಳೆದು ಹೋಯ್ತು ಅಂತ ಗೊತ್ತೇ ಇಲ್ಲ. ಈಗ ಎಲ್ಲಿ ಅಂತ ಹುಡುಕೋದು? ಹೋಗಿದ್ರೆ ನಿರ್ಮಾಲ್ಯದ ಹೂವಿನ ಜೊತೆ ಕೆಳಗೆ ಯಾವುದೋ ಗಿಡದ ಪಾತಿಯಲ್ಲಿ ಬಿದ್ದಿರಬೇಕು. ಅಲ್ಲಿ ಹುಡುಕೋರು ಯಾರು! ಅಲ್ಲಿಯೇ ಇದೆಯೋ ಇಲ್ಲವೋ ಹುಡುಕಿಯೂ ಸಿಗದಿದ್ರೆ ಇನ್ನೂ ಬೇಜಾರಾಗುತ್ತೆ ಮನದಲ್ಲಿದ್ದುದನ್ನು ಆಕೆಗೆ ಹೇಳಿದೆ.

ನಮ್ಮಿಬ್ಬರ ಮಾತುಗಳನ್ನು ಅವರ ಹನ್ನೆರಡು ವರ್ಷದ ಮಗಳು ಕೇಳಿಸಿಕೊಂಡಿದ್ದಳು. ಅವಳು ಗಿಡಗಳ ಪಾತಿಗಳಲ್ಲಿ ಮಣ್ಣನ್ನು ಕೆದಕಿ ಹುಡುಕಲು ಶುರು ಮಾಡಿದಳು. ಆದರೆ, ಕಳೆದು ಹೋದ ವಿಗ್ರಹ ಸಿಗಬಹುದೆಂಬ ನಂಬಿಕೆ ಇರಲಿಲ್ಲ. ಆದರೆ ನನ್ನ ಅನಿಸಿಕೆ ಸುಳ್ಳಾಗಿತ್ತು. ಎರಡು ಮೂರು ದಿನಗಳ ಸತತ ಪ್ರಯತ್ನದ ನಂತರ ಆ ಹುಡುಗಿಗೆ, ಗಿಡವೊಂದರ ಪಾತಿಯ ಮಣ್ಣಿನಲ್ಲಿ ಹುದುಗಿದ್ದ ಕೃಷ್ಣನ ವಿಗ್ರಹ ಸಿಕ್ಕಿತು.ಅವರುಗಳ ಸಂತೋಷಕ್ಕೆ ಎಣೆ ಇಲ್ಲ! ನನ್ನ ಅಚ್ಚರಿಗೆ ಪಾರವಿಲ್ಲ!

'ಆಂಟೀ, ಆಂಟೀ, ಕೃಷ್ಣ ಸಿಕ್ಕ ಎನ್ನುತ್ತಾ ಕುಣಕುಣಿದು ಮೆಟ್ಟಿಲು ಗಳನ್ನೇರಿ ನಮ್ಮ ಮನೆಗೆ ಬಂದಳು. ಅವಳ ಹಿಂದೆ ಅವಳ ತಾಯಿಯೂ ಬಂದರು. "ಈಗ ಗೋಕುಲಾಷ್ಟಮಿ ಹಬ್ಬ ಮಾಡ್ಲೇ ಬೇಕು. ಕಳೆದು ಹೋಗಿದ್ದ ಕೃಷ್ಣ ಮತ್ತೆ ಸಿಕ್ಕಿದಾನೆ. ಆಕೆ ಸಂತಸದಿಂದ ಹಾಸಯಮಯವಾಗಿ ನುಡಿದಳು.

"ಹೌದು ಕೃಷ್ಣ ಸಿಕ್ಕಿದಾನೆ. ವಿಶೇಷವಾದ ಸಂಗತಿಯೇ. ಥ್ಯಾಂಕ್ಸ್ ನಿಮ್ಮಿಬ್ಬರಿಗೂ, ಧನ್ಯವಾದಗಳು."

ಆಂಟೀ ಕೊಬ್ಬರಿ ಮಿಠಾಯಿ ಮಾಡೋದನ್ನ ಮರೀಬೇಡಿ. ನೀವು

ತುಂಬಾ ಚೆನ್ನಾಗಿ ಮಾಡ್ತೀರಿ. ಬೆಳ್ಳಗೆ ದಪ್ಪ ದಪ್ಪ ಪೀಸುಗಳು. ಜ್ಯೂಸಿಯಾಗಿರುತ್ತದೆ. ನೀವು ತುಂಬಾ ದಿಲ್‌ದಾರ್" ಎಂದಳು. ಅವಳ ಹೊಗಳಿಕೆಗೆ ಉಬ್ಬಿ ಹೋದೆ. ಅಂಬೆ ಗಾಲ ಕೃಷ್ಣನನ್ನು ಕೈಯಲ್ಲಿ ಎತ್ತಿಕೊಂಡು ಅಡುಗೆ ಮನೆಗೆ ಬಂದು ಶುಭ್ರವಾಗಿ ತೊಳೆದು ಜೋಪಾನವಾಗಿ ದೇವರ ಬಳಿ ಇಟ್ಟೆ.

ನಮ್ಮ ಹಬ್ಬದ ದಿನ ಬಂತು. ಆದಿನ ಮಕ್ಕಳಿಗೆ ರಜವಿರಲಿಲ್ಲ. ಮಾರನೇ ದಿನಕ್ಕೆ ಕೊಟ್ಟಿದ್ದರು. ಇಬ್ಬರನ್ನೂ ಸ್ಕೂಲಿಗೆ ಕಳುಹಿಸಿ ಬಂದ ನಂತರ ಮನೆಗೆ ಬಂದು ಸ್ನಾನ ಮಾಡಿ ಒಗೆದ ರೇಷ್ಮೆ ಸೀರೆಯನ್ನು ಉಟ್ಟು ಕೃಷ್ಣನಿಗೆ ಪ್ರಿಯವಾದ ಕೆಲವು ತಿಂಡಿಗಳನ್ನು ಮಾಡಿ, ಮರೆಯದೇ ಕೊಬ್ಬರಿ ಮಿಠಾಯಿಯನ್ನು ಮಾಡಿ, ದೇವರ ಪೂಜೆಯನ್ನು ಮಾಡಿ ನೈವೇದ್ಯವನ್ನು ಇಟ್ಟು, ಮಂಗಳಾರತಿಯನ್ನು ಮಾಡಿ ದೇವರ ಪೂಜೆಯ ಕಾರ್ಯಕ್ರಮವನ್ನು ಪೂರೈಸಿ, ಮಗನನ್ನು ಸ್ಕೂಲಿನಿಂದ ಕರೆತರಲು, ಅದೇ ರೇಷ್ಮೆ ಸೀರೆಯನ್ನು ಉಟ್ಟು ಹೊರಟೆ.

ಸಾಮಾನ್ಯವಾಗಿ ಸ್ಕೂಲಿಗಾಗಲಿ, ಹೊರಗೆ ಎಲ್ಲಿಗಾದರೂ ಹೋಗುವಾಗ, ಆ ಕೆಲಸಕ್ಕೆಂದೇ ಇಟ್ಟುಕೊಂಡ ಸೀರೆಗಳನ್ನು ಉಡುವ ಅಭ್ಯಾಸ ನನ್ನದು. ಆದರೆ ಆ ದಿನ ಹಬ್ಬ, ರೇಷ್ಮೆ ಸೀರೆ ಉಟ್ಟಿರುವೆನೆಂದು ಹೆಮ್ಮೆ. ನನ್ನದೇ ಗುಂಗಿನಲ್ಲಿ ನಡೆದು ಹೋಗುವಾಗ, ಹಿಂದಿನಿಂದ ಯಾವುದೋ ಪ್ರಾಣಿಯೋ, ಅಥವಾ ಮಕ್ಕಳೋ ನನ್ನ ಬೆನ್ನ ಮೇಲೆ ಹತ್ತಿದಂತಾಯಿತು. ಇದ್ದಕ್ಕಿದ್ದಂತೆ ಆದ ಅನುಭವಕ್ಕೆ ಹೆದರಿ ಜೋರಾಗಿ ಕಿರುಚಿ, ಕಣ್ಣುಗಳನ್ನು ಮುಚ್ಚಿ ಹಾಗೆಯೇ ನಿಂತೆ. ನಾನು ನಿಂತಿದ್ದ ಕಡೆ, ರಸ್ತೆಯ ಬದಿಗೆ ಒಂದು ಟೈಲರಿಂಗ್ ಷಾಪ್ ಇತ್ತು. ಅಲ್ಲಿ ಬಟ್ಟೆ ಹೊಲಿಯುವ ತಂದೆ ಮಗ ಇಬ್ಬರೂ ರಸ್ತೆಯಲ್ಲಿ ವಾಸಮಾಡುವ ಎಲ್ಲರಿಗೂ ಪರಿಚಿತರು. ನನ್ನ ಕೂಗನ್ನು ಕೇಳಿ ಇಬ್ಬರೂ ಹೊರ ಬಂದಿದ್ದರು. ಹಾಗೆಯೇ ರಸ್ತೆಯ ಅನೇಕ ಜನರು ಸೇರಿದ್ದರು. ನನಗೆ ಅತಿ ಮುಜುಗರ ಆಯಿತು. ನಾಚಿಕೆ, ಸಂಕೋಚವೂ ಆಯಿತು. ಏನಾತ್ತು ಏನಾಯ್ತು ಅಂತ ಎಲ್ಲರೂ

ಕೇಳುವವರೇ......

"ಯಾವುದೋ ಪ್ರಾಣಿ ನನ್ನ ಬೆನ್ನ ಮೇಲೆ ಹತ್ತಿತ್ತು..." ಒಣಗಿದ ಗಂಟಲಿನಿಂದ ಧ್ವನಿ ಕೀಚಲಾಗಿತ್ತು.

ಆ ಆಕಸ್ಮಿಕವಾಗಿ ಕಣ್ಣಾರೆ ನೋಡಿದ್ದ ವ್ಯಕ್ತಿಯೊಬ್ಬ, ಈ ನಾಯಿ ಹತ್ತಿತ್ತು, ಏನಾದ್ರೂ ಕಚ್ಚಿ ಪರಚಿ ಗಾಯ ಆಗಿದೆಯಾ? ಮೊದಲು ನೋಡ್ಕೊಳ್ಳಿ ಎಂದು ಹೇಳಿ ಪಕ್ಕದ ಮೋರಿಯ ಬಳಿ ನಿಂತಿದ್ದ ನಾಯಿಯನ್ನು ತೋರಿದ.

ನನಗೆ ಹೇಗೆ ಹೇಗೋ ಆಯಿತು. ಥೂ ಬೀದಿ ನಾಯಿ. ದರಿದ್ರ ನಾಯಿ... ಕೊಳಕು ನಾಯಿ... ಎಂದೂ ಇಲ್ಲದ್ದು, ಇವತ್ತೇಕೆ ಮೈ ಮೇಲೆ ಹತ್ತಿತ್ತು... ನನಗೇನೂ ನಾಯಿಯ ಮೇಲೆ ಅಕ್ಕರೆ ಇಲ್ಲ. ಎಂದೂ ಬಿಸ್ಕತ್ತನ್ನು ಆಗಲೀ ಬ್ರೆಡ್‌ನಾಗಲೀ ಹಾಕಿರಲಿಲ್ಲ... ಹುಚ್ಚು ಗಿಚ್ಚು ಹಿಡಿದಿದ್ದರೆ? ಕಚ್ಚಿದೆಯೋ... ಪರಚಿದೆಯೋ... ಎಷ್ಟು ಇಂಜೆಕ್ಷನ್ ತೆಗೆದುಕೊಳ್ಳ ಬೇಕಾಗುತ್ತದೋ? ... ಒಂದು ವೇಳೆ ರೇಬೀಸ್ ಆಗಿದ್ದರೆ ಮುಂದೆ ನನ್ನ ಮಕ್ಕಳ ಗತಿ ಏನು? ಕ್ಷಣ ಮಾತ್ರದಲ್ಲಿ ಈ ಆಲೋಚನೆಗಳು ನುಗ್ಗಿ ನಿಂತಲ್ಲೇ ನಡುಗಿದೆ. ಮತ್ತೆಲ್ಲಿ ಆ ನಾಯಿ ಬಂದು ಬಿಡುವುದೋ... ಬಂದರೆ ಈ ಜನಗಳು ಇದಾರೆ ಓಡಿಸುತ್ತಾರೆ ಎಂದು ಸ್ವಲ್ಪ ಮಟ್ಟಿಗೆ ಧೈರ್ಯವನ್ನು ತಂದುಕೊಂಡು, ಎಲ್ಲರೂ ನೋಡುತ್ತಿದ್ದಂತೆಯೇ ಮಾತ ನಾಡದೇ ಸ್ಕೂಲಿನ ಕಡೆಗೆ ನಡೆದೆ. ಸ್ಕೂಲನ್ನು ಸೇರುವಷ್ಟರಲ್ಲಿ ಮನಃಸ್ಥಿತಿ ಸ್ವಲ್ಪ ಮಟ್ಟಿಗೆ ತಹ ಬದಿಗೆ ಬಂದಿತ್ತು. ಸಮಾಧಾನದ ಮುಖವಾಡವನ್ನು ಧರಿಸಿ, ಪರಿಚಯದವರೊಂದಿಗೆ ಮಾತಾಡಿದೆ. ಮಗನ ಕೈ ಹಿಡಿದು ಮನೆಯ ದಾರಿ ಹಿಡಿದೆ, ಈಗ ನನ್ನ ಆತಂಕ ಮತ್ತೂ ಹೆಚ್ಚಾಗಿತ್ತು.

ಮಗ ಚಿಕ್ಕವನು, ಅವನಿಗೂ ನಾಯಿ ಎಂದರೆ ಹೆದರಿಕೆಯೇ... ಮತ್ತೆ ಅ ನಾಯಿ ನಮ್ಮಿಬ್ಬರ ಮೇಲೆ ಧಾಳಿ ಮಾಡಿದರೆ? ಅವನ ಕೈಹಿಡಿದು ಅತ್ತಿತ್ತ ನೋಡುತ್ತಾ ವೇಗವಾಗಿ, ನಮ್ಮ ಮನೆಯ ತಿರುವಿನಲ್ಲಿ ತಿರುಗಿದಾಗ, ಆ ನಾಯಿ, ಒಬ್ಬರ ಮನೆಯ ಗೇಟಿನ ಬಳಿ ಮಲಗಿದ್ದನ್ನು ಕಂಡೆ...

ಹಾಗೆಯೇ ಆ ಮನೆಯಾಕೆ ಮೆಟ್ಟಿಲ ಮೇಲೆ ಕುಳಿತು ಏನನ್ನೋ ಹೊಲಿಯುತ್ತಿದ್ದಳು. ಈ ನಾಯಿ ಇವರದ್ದೇ ಇರಬೇಕು. ನಾಯಿಯನ್ನು ಸಾಕಿದ ಮೇಲೆ ಕಟ್ಟಿ ಹಾಕುವುದಕ್ಕೆ ಆಗುವುದಿಲ್ಲವೆ... ಬೀದೀಲಿ ಹೋಗೋರ ಮೇಲೆ ಎಗರ ಬಿದ್ದರೆ, ಇವರು ಗೊತ್ತಿದ್ದೂ ಗೊತ್ತಿಲ್ಲದವರಂತೆ ಸುಮ್ಮನಿದ್ದು ಬಿಡುತ್ತಾರೆ. ಈ ದಿನ ಕೇಳದಿದ್ದರೆ, ಹೇಳದಿದ್ದರೆ ಮತ್ತೆಂದೂ ಮಾತನಾಡ ಲಾಗುವುದಿಲ್ಲ ಎಂದು ಕೊಂಡು, ಅವರಮನೆಯ ಎದುರಿಗೆ ನಿಂತೆ. ಭಯವೂ ಇತ್ತು. ಆದರೆ ಆ ನಾಯಿ ಅಲ್ಲಾಡಿರಲಿಲ್ಲ. ನಿದ್ದೆಯನ್ನು ನಟಿಸು ವಂತೆ ಮಲಗೇ ಇತ್ತು.

ಆ ಮನೆಯಾಕೆ ಎದ್ದು ನಿಂತು ಗೇಟಿನ ಬಳಿಗೆ ಬಂದಳು. ಈ ನಾಯಿ ನಿಮ್ಮದಾ? ಸಾಕಿದ್ದೀರಾ ಕೇಳಿದೆ...

ಆಕೆ ಉರ್ದು ಮಿಶ್ರಿತ ಕನ್ನಡದಲ್ಲಿ ಹೌದು ಎನ್ನುವಂತೆ ಹೇಳಿದಾಗ ಅವರು ಮುಸ್ಲಿಂ ಪರಿವಾರದವರೆಂದು ತಿಳಿಯಿತು. ನನಗೆ ಹಿಂದಿ ಬರು ತ್ತಿದ್ದುದಾದ್ದರಿಂದ ಹಿಂದಿಯಲ್ಲಿ ಮತ್ತೊಮ್ಮೆ ಪ್ರಶ್ನಿಸಿ, ಕೆಲವೇ ನಿಮಿಷಗಳ ಮೊದಲೇ ನಡೆದ ಘಟನೆಯನ್ನು ತಿಳಿಸಿದೆ... ಆಕೆ ನಾಯಿಯ ಕಡೆ ನೋಡಿ ಮುಗುಳ್ನಕ್ಕಳು.

"ಈ ನಾಯಿ ಏನೂ ಮಾಡುವುದಿಲ್ಲ. ಪ್ರೀತಿಗೆ ಹಾಗೆ ಮಾಡಿರುತ್ತೆ. ನೀವು ಹೆದರ್ಬೇಡಿ" ಎಂದು ಹಿಂದಿಯಲ್ಲಿ ಹೇಳಿದಳು.

ನನಗೆ ಆಕೆಯ ಉತ್ತರ ಸರಿ ಎನಿಸಲಿಲ್ಲ. ನಮಗೆ ಆ ಪ್ರೀತಿ ಗೀತಿ ಏನೂ ಬೇಡ. ನಾಯಿ ಹತ್ತಿರ ಬಂದರೇ ಭಯ ಆಗುತ್ತೆ. ಅಂತಾದ್ರಲ್ಲಿ ಮೈ ಮೇಲೆ ಎಗರೋದು ಅಂದ್ರೆ! ಹೀಗೆಲ್ಲಾ ಜನರಿಗೆ ತೊಂದರೆ ಕೊಡ್ಬೇಡಿ. ದಯವಿಟ್ಟು ನಾಯಿಯನ್ನು ಕಟ್ಟಿ ಹಾಕಿ, ಮಕ್ಕಳು ಮುದುಕರು ಓಡಾಡುವ ರಸ್ತೆಯಲ್ಲಿ ನಾಯಿಯನ್ನು ಹೀಗೆ ಫ್ರೀಯಾಗಿ ಬಿಡಬೇಡಿ" ನಯವಾಗಿಯೇ ಹೇಳಿ ಮುಂದೆ ನಡೆದು ಟೈಲರ್ ಅಂಗಡಿಗೆ ಬಂದೆ.

"ನೀವೂ ಸ್ವಲ್ಪ ಅವರಿಗೆ ಹೇಳಿ ನಾಯಿಯನ್ನು ಒಳಗೆ ಕಟ್ಟಿ ಹಾಕಲಿ. ಇಲ್ದಿದ್ರೆ ನಾವು ಓಡಾಡೋದು ಹೇಗೆ?" ಅವನು ತಲೆಯಾಡಿಸಿದ.

"ನಿಮಗೇನಾದ್ರೂ ಪೆಟ್ಟಾಗಿದೆಯಾ! ಡಾಕ್ಟರ ಹತ್ತಿರ ಹೋಗ್ಬೇಕಾಗಿತ್ತು" ಆತ ಜ್ಞಾಪಿಸಿದ.

"ಮೊದಲು ಈಗ ಮನೆಗೆ ಹೋಗ್ತೀನಿ... ಎಂದೂ ಇಲ್ಲದ್ದು ಈ ನಾಯಿ ಯಾಕೆ ಹೀಗಾಡ್ತು ಅಂತ ಭಯವೂ ಆಗ್ತಿದೆ. ಆಶ್ಚರ್ಯವೂ ಆಗ್ತಿದೆ" ಎಂದು ಹೇಳಿ ಮನೆಯ ಕಡೆಗೆ ನಡೆದೆ. ಮನೆಗೆ ಬಂದವಳೇ ಮೊದಲು ಮಾಡಿದ ಕೆಲಸ ಎಂದರೆ, ಉಟ್ಟಿದ್ದ ಬಟ್ಟೆಗಳನ್ನು ಬಿಚ್ಚಿ ನೆನಸಿ, ತಲೆಗೆ ಸ್ನಾನ ಮಾಡಿ, ದೇವರಿಗೆ ದೀಪ ಹಚ್ಚಿದೆ, ಹಬ್ಬದ ದಿನ ಮತ್ತೆ ಈಗ ತಲೆಗೆ ಸ್ನಾನ ಮಾಡುತ್ತಿರುವುದು ಅತಿ ಬೇಸರ ತಂದಿತ್ತು. ಆದರೆ ವಿಧಿ ಇರಲಿಲ್ಲ. ನಾಯಿ ಮುಟ್ಟಿತು ಎಂದ ಮೇಲೆ, ಅಸಹ್ಯವೇ. ಯಾಕೆಂದರೆ ನಮಗೆ ನಾಯಿಯನ್ನು ಎತ್ತಿ ಮುದ್ದಾಡಿ ಮುಟ್ಟಿಸಿಕೊಳ್ಳುವ ಅಭ್ಯಾಸವೇ ಇರಲಿಲ್ಲ. ಆ ದಿನವೆಲ್ಲಾ ಅದೇ ಚಿಂತೆ. ಗೋಕುಲಾಷ್ಟಮಿಯ ದಿನ ಮುಸ್ಲಿಂ ಮನೆಯ ನಾಯಿ ನನ್ನ ಮೇಲೆ ಧಾಳಿ ಮಾಡಿದ್ದೇಕೆ! ಗೋಕುಲಾಷ್ಟಮಿಗೂ, ಇಮಾಂಸಾಬಿಗೂ ಎಲ್ಲಿಯ ನಂಟು? ಎಂಬ ಒಂದು ನಾಣ್ನುಡಿ ಇದೆ. ಪದೇ ಪದೇ ಈ [illegible] ರುತ್ತಿತ್ತು. ಹಿಂದೂಗಳಿಗೆ ಶ್ರಾವಣ ಮಾಸ ಪ್ರಾರಂಭವಾಗುತ್ತಿದ್ದಂತೇ ಮುಸ್ಲಿಂರಿಗೆ ರಂಜಾನ್ ಉಪವಾಸದ ದಿನಗಳು ಶುರುವಾಗುತ್ತದೆ. ಇದರಿಂದಲೇ ಈ ನಾಣ್ನುಡಿ ಹುಟ್ಟಿರಬಹುದು. ಇದೊಂದು ಯಕ್ಷಪ್ರಶ್ನೆ.

ನಮ್ಮವರು ಆಫೀಸಿನಿಂದ ಬಂದ ನಂತರ ನಡೆದುದನ್ನು ತಿಳಿಸಿದೆ. ಅವರೂ ಒಂದಿಷ್ಟು ಮನೆಯಲ್ಲೇ ಕೂಗಾಡಿದರು. ಬೆನ್ನ ಮೇಲೆ ಕಚ್ಚಿದ ಗಾಯವಾಗಲೀ, ಪರಚಿದ ಗಾಯವಾಗಲೀ ಇಲ್ಲ ಎನ್ನುವುದನ್ನು ಖಚಿತ ಪಡಿಸಿಕೊಂಡಿದ್ದಾಯಿತು. ಆದರೂ, ಈ ಮುಸ್ಲಿಂ ಮನೆಯ ನಾಯಿ, ಹಿಂದೂ ಬ್ರಾಹ್ಮಣ ಮಹಿಳೆಯ ಮೇಲೆ ಹಿಂದಿನಿಂದ ಎಗರಿದ್ದೇಕೆ ಎನ್ನುವುದು ನಿಗೂಢ ಪ್ರಶ್ನೆಯಾಗಿಯೇ ಉಳಿಯಿತು.

ಮಾರನೇ ದಿನ ಮಧ್ಯಾಹ್ನ ಸ್ಕೂಲಿಗೆ ಹೋಗುವಾಗ, ಆ ನಾಯಿ ಮನೆಯ ಮುಂದೆ ಮಲಗಿರಲಿಲ್ಲ, ಒಳಗೆ ಕಟ್ಟಿ ಹಾಕಿರಬಹುದು

ಎಂದುಕೊಂಡು ನೆಮ್ಮದಿಯ ಉಸಿರನ್ನು ಬಿಟ್ಟು ನಡೆದೆ. ವಾಪಸ್ಸು ಮನೆಗೆ ಬರುವಾಗ, ಟೈಲರಿಂಗ್ ಅಂಗಡಿಗೆ ಬಂದೆ. ಅವನು ಪೆಚ್ಚಾಗಿ ನಕ್ಕ.

"ಸದ್ಯ ಈಗಲಾದರೂ ಅವರಿಗೆ ಅರಿವಿಗೆ ಬಂತಲ್ಲ. ನಾಯಿಯನ್ನು ಕಟ್ಟಿ ಹಾಕಬೇಕು ಅಂತ. ಅಲ್ದಿದ್ರೆ ಈ ರಸ್ತೇಲಿ ಓಡಾಡೋದನ್ನ ಬಿಡ್ಬೇಕಾಗಿತ್ತು" ಎಂದೆ. ತಂದೆ ಮಗ ಮುಖ ಮುಖ ನೋಡಿಕೊಂಡರು. ತಂದೆ ನಿಧಾನವಾಗಿ ಮಾತನಾಡಿದ.

"ಇಲ್ಲ ತಾಯಿ ನೆನ್ನೆ ರಾತ್ರಿ ಆ ನಾಯಿ ಸತ್ತು ಹೋಯಿತಂತೆ... ಬೆಳಿಗ್ಗೆ ಎತ್ಕೊಂಡು ಹೋದ್ರಂತೆ..." ನನ್ನ ಗುಂಡಿಗೆ ನಿಂತಂತಾಗಿತ್ತು... ನಂಬಲು ಆಗದ ಸುದ್ದಿ! ಅವ್ಯಕ್ತ ಭಯ ಮನವನ್ನಾವರಿಸಿತು. ಅದೇ ನಾಯಿ ಏಕೆ ಸತ್ತಿತ್ತು?

"ನಿಜಾನಾ?" ತೊದಲುತ್ತಾ ಕೇಳಿದೆ. ಹೂಂ ಎನ್ನುವಂತೆ ತಲೆಯಾಡಿಸಿದ. ಮುಂದೇನು ಮಾತನಾಡಬೇಕೆಂದು ತಿಳಿಯಲಿಲ್ಲ. ಮತ್ತೊಂದು ಯಕ್ಷಪ್ರಶ್ನೆ ಹಾಗೇ ಉಳಿಯಿತು.

* * * *

೮. ನಾಯಿ ಪಾಡು

ನಮ್ಮ ಪರಿಚಯದವರೊಬ್ಬರ ಮನೆಯಲ್ಲಿ ನಾಯಿಗಳಿಗೆ ಪ್ರಾಮುಖ್ಯತೆ. ಮನುಷ್ಯರಿಗಿಂತ ಪ್ರಾಣಿಗಳು ಒಳ್ಳೆಯವು ಎಂಬ ಭಾವನೆ ಅವರುಗಳಲ್ಲಿ ಹೆಚಾಗಿಯೇ ಇದ್ದಿತು. ಹಾಗಾಗಿ ಅವರುಗಳು ಪ್ರಾಣಿ ದಯಾ ಸಂಸ್ಥೆಯ ಸದಸ್ಯರುಗಳಾಗಿದ್ದರು. ತೊಂದರೆಯಲ್ಲಿರುವ ಪ್ರಾಣಿಗಳಿಗೆ, ಅದರಲ್ಲೂ ಬೀದಿನಾಯಿಗಳಿಗೆ ಸಹಾಯ ಮಾಡುವುದರಲ್ಲಿ ಮುಂದಾಗುತ್ತಿದ್ದರು. ಬೀದಿಯಲ್ಲಿ ಅಪಘಾತಕ್ಕೆ ಸಿಕ್ಕಿ ಪೆಟ್ಟಾದ ಅಥವಾ ಮುನಿಸಿಪಾಲಿಟಿರವರು, ಹಿಡಿದುಕೊಂಡು ಹೋಗುವಾಗ, ದುಡ್ಡುಕೊಟ್ಟು ಬಿಡಿಸಿಕೊಂಡ ನಾಯಿ ಗಳನ್ನು ತಮ್ಮ ಮನೆಗೆ ಕರೆ ತಂದಿಟ್ಟುಕೊಂಡು ಸಾಕುತ್ತಿದ್ದರು. ಅವುಗಳಿಗಾಗಿ, ಒಂದೆರಡು ಲೀಟರ್ ಹಾಲು, ನಾಲ್ಕೈದು ಪೌಂಡ್ ಬ್ರೆಡ್ಡುಗಳನ್ನು ಕೊಳ್ಳು ತ್ತಿದ್ದರು. ಅವುಗಳಿಗೆ ಪಶುವೈದ್ಯರಿಂದ ಚಿಕಿತ್ಸೆಯನ್ನುಕೊಡಿಸುತ್ತಿದ್ದರು. ಅವುಗಳಿಗಾಗಿ ಜಮಖಾನ, ಹಳೆ ಬೆಡ್ ಶೀಟ್‌ಗಳನ್ನು ಹಾಸಿ ಮಲಗಲು ವ್ಯವಸ್ಥೆ ಮಾಡುತ್ತಿದ್ದರು. ಮನೆಯಲ್ಲಿ ಮನೆಯವರಿಗಿಂತ, ಪ್ರಾಣಿಗಳಿಗೆ ಹೆಚ್ಚು ಸಾಂತಂತ್ರ್ಯವನ್ನು ಕೊಡುತ್ತಿದ್ದರು. ಇದು ಉಳಿದವರಿಗೆ ವಿಚಿತ್ರ ತಮಾಷೆ ಅಂತ ಅನಿಸಿದರೂ, ಅದಕ್ಕೆ ಕಿವಿ ಕೊಡುತ್ತಿರಲಿಲ್ಲ. ಅವರು ಮಾಡುವ ಕಾಯಕವೇ ಅವರಿಗೆ ಕೈಲಾಸ ಎನಿಸಿತ್ತು. ಇದು ಮೆಚ್ಚಬೇಕಾದ ವಿಷಯವೇ. ಆದರೆ ಇದಕ್ಕೆ ಉಳಿದವರು ಇಳಿಯಲಾಗುತ್ತಿರಲಿಲ್ಲ ಹಾಗಿದ್ದು ದರಿಂದ ಉಳಿದವರಿಂದ ಸ್ವಲ್ಪ ದೂರ ದೂರವೇ ಇರುತ್ತಿದ್ದರು.

ಮನೆಯಲ್ಲಿ ಹತ್ತಾರು ನಾಯಿಗಳು ಅವುಗಳ ಜಗಳ ಕದನ, ಅವುಗಳ

ಮರಿಗಳು ಇರುಗಳ ಮಧ್ಯೆ ಆನಂದವಾಗಿ ಕಾಲ ಕಳೆಯುತ್ತಿದ್ದರು. ಹೊರಗೆಲ್ಲಾದರೂ ಹೋಗಿ ಬರಬೇಕೆನ್ನುವ ಸಮಯದಲ್ಲಿ ಕೆಲವು ನಾಯಿಗಳನ್ನು ಆಚೆಗೆ ಬಿಟ್ಟು, ಕೆಲವು ಮರಿಗಳನ್ನು ಒಳಗೆ ಬಿಟ್ಟು ಇನ್ನು ಕೆಲವನ್ನು ತಮ್ಮೊಡನೆ, ಕಾರಿನಲ್ಲಿ ಕೂರಿಸಿಕೊಂಡು ಕರೆದೊಯ್ಯುತ್ತಿದ್ದರು. ಆ ನಾಯಿಗಳು ರಾಂಗ್ ಮಾಡುವ ನಾಯಿಗಳು ಒಳಗೆ ಬಿಟ್ಟರೆ, ಮರಿಗಳನ್ನು ಕಚ್ಚಿ ಹಾಕುವುದು, ಹಾಸಿಗೆ ದಿಂಬುಗಳನ್ನು ಹರಿದು ಹಾಕುವುದು ಇಂಥಾ ಕೆಟ್ಟ ಕೆಲಸವನ್ನು ಮಾಡುತ್ತಿದ್ದವಂತೆ. ರಸ್ತೆಗೆ ಬಿಟ್ಟರೆ, ಎಲ್ಲಿಯೋ ನಾಪತ್ತೆ ಯಾಗಿ ಎರಡೆರಡು ದಿನಗಳ ನಂತರ ಇವರುಗಳೇ ಹುಡುಕಿಕೊಂಡು ಬರುತ್ತಿದ್ದರು. ಇದನ್ನು ತಪ್ಪಿಸಲು ಸಾಕಷ್ಟು ಬ್ರೆಡ್ಡು ಬಿಸ್ಕತ್ತುಗಳನ್ನು ತಮ್ಮೊಡನೆ ತೆಗೆದುಕೊಂಡು, ಅಂಥಾ ನಾಯಿಗಳನ್ನು ತಮ್ಮೊಡನೆ ಕೂರಿಸಿಕೊಂಡಿರು ತ್ತಿದ್ದರು. ಅವುಗಳ ಕೊರಳಿಗೆ ಬೆಲ್ಟ್ ಹಾಕಿರುತ್ತಿರಲಿಲ್ಲ. ಚೈನ್ ಇರುತ್ತಿರಲಿಲ್ಲ. ಯಾರಾದರೂ ಹೆದರಿ ಕೇಳಿದರೆ "ಏನೂ ಮಾಡುಲ್ಲ. ಒಳ್ಳೆಯ ನಾಯಿ ಎಂದು ಅವುಗಳ ಪರವಹಿಸಿ ಮಾತನ್ನಾಡುತ್ತಿದ್ದರು. ನಮ್ಮಂತಹವರಿಗೆ ಅದು ಸರಿ ಎನಿಸುತ್ತಿರಲಿಲ್ಲ.

ನಾವುಗಳು ಎಲ್ಲಾ ತಿಳಿದವರೇ ಆದರೂ, ನಮಗೆ ನಾಯಿಗಳ ಮೇಲೆ ಅನುಕಂಪ ಇದ್ದರೂ, ಅವುಗಳನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಮುಟ್ಟುವುದಂತೂ ದೂರದ ಮಾತು.

ಆಗ ಈಗ ಅವರುಗಳು ನಮ್ಮ ಮನೆಗೆ ಕಾರಿನಲ್ಲಿ ಕಾರಿನಲ್ಲಿ ಬರುತ್ತಿದ್ದರು. ಬಂದರೆ ಅದೂ ಇದೂ ಮಾತನಾಡುತ್ತಾ ತುಂಬಾ ಹೊತ್ತು ಕುಳಿತಿದ್ದರು. ಆದಿನ ಬಂದವರು, ಊಟ ಮಾಡಿ, ವಿಸಿ.ಆರ್.ನಲ್ಲಿ ಒಂದು ಸಿನಿಮಾ ನೋಡುತ್ತಾ ಬಹಳ ಹೊತ್ತು ಕಾಲ ಕಳೆದು ತಡವಾಗಿ ಹೊರಟರು. ನಾವು ಇದ್ದುದು ಮೊದಲ ಮಹಡಿಯ ಮನೆಯಲ್ಲಿ. ಅವರುಗಳು ಮೆಟ್ಟಿಲು ಇಳಿದು, ಗೇಟನ್ನು ದಾಟಿ ಕಾರಿನೊಳಗೆ ಕುಳಿತುಕೊಳ್ಳುವವರೆಗೂ, ಬಾಲ್ಕನಿ ಯಲ್ಲಿ ನಿಂತಿದ್ದು, ನಾನು ಒಳ ಬಂದು, ಬಾಗಿಲನ್ನು ಭದ್ರ ಪಡಿಸಿ ಬೀಗ ಹಾಕಿ ಮಲಗುವ ತಯಾರಿ ನಡೆಸಿದವು. ಆಗ ನಮ್ಮವರು ಬೇರೆ

ಊರಿನಲ್ಲಿದ್ದರು. ಮನೆಯಲ್ಲಿ ಇದ್ದುದು, ನಾನು ನನ್ನ ಇಬ್ಬರು ಮಕ್ಕಳು ಮಾತ್ರ.

ಅವರುಗಳು ಬಂದು ಹೋಗಿದ್ದು, ಊಟ ಮಾತುಕತೆ, ಇವುಗಳನ್ನೇ ಮೆಲುಕು ಹಾಕುತ್ತಾ ಮಲಗಿದ್ದವಳಿಗೆ ಸುಸ್ತಾಗಿ ಇನ್ನೇನು ನಿದ್ದೆ ಹತ್ತಿತು ಎನ್ನುವಾಗ, ಯಾರೋ ಬಾಗಿಲನ್ನು ಕೆರೆಯುತ್ತಿರುವಂತಹ ಸದ್ದು ಕೇಳಿಸಿರು. ಇಲಿಯೋ, ಬೆಕ್ಕೋ ಇರಬೇಕು ಎಂದುಕೊಂಡು ತಲೆ ಕೆಡಿಸಿಕೊಳ್ಳಲಿಲ್ಲ.

ಬೆಳಿಗ್ಗೆ ಎಚ್ಚರವಾದಾಗ, ಚೆನ್ನಾಗಿ ಬೆಳಕಾಗಿತ್ತು. ಆಚೆ ಬಾಗಿಲಲ್ಲಿ ಬಿದ್ದಿರುವ ದಿನಪತ್ರಿಕೆಯನ್ನು ತೆಗೆದುಕೊಳ್ಳಲೆಂದು ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ತೆರೆದು, ಅಗುಳಿಗಳನ್ನು ಸರಿಸಿ, ಆಕಳಿಸುತ್ತಾ ನಿದ್ದೆಯ ಮಂಪರಿನಲ್ಲಿ ಬಾಗಿಲನ್ನು ತೆರೆದಾಗ, ಎದುರಿಗೆ ಕುಳಿತಿದ್ದ ಆಕೃತಿಯನ್ನು ಕಂಡು, ಮೆಲ್ಲಗೆ ಚೀರಿ, ಎರಡು ಹೆಜ್ಜೆ ಹಿಂದೆ ಸರಿದು ಬಾಗಿಲನ್ನು ಅರೆಮುಚ್ಚಿ, ಸಣ್ಣ ಸಂದಿಯಿಂದ ನೋಡಿದೆ. ಅದು ನನ್ನನ್ನೇ ದಿಟ್ಟಿಸಿ ನೋಡುತ್ತಿತ್ತು. ಅದು ನಾಯಿಯೆಂದು ತಿಳಿಯಲು ಕೆಲವು ಕ್ಷಣಗಳು ಬೇಕಾಯಿತು. ಇದು ಯಾವ ನಾಯಿ? ಈ ಮೊದಲು ಎಂದೂ ಕಂಡಿರಲಿಲ್ಲ. ಇಲ್ಯಾಕೆ ಬಂದು ಕೂತಿದೆ? ಹೊರಗೆ ಹೋದರೆ, ನನಗೇನು ಅಪಾಯ ಮಾಡಿಬಿಡುತ್ತದೋ? ಅಥವಾ ಒಳಗೆ ಬಂದು ಬಿಡುತ್ತದೋ ಎಂದು ಹೆದರಿ, ಬಾಗಿಲನ್ನು ಭದ್ರಪಡಿಸಿ, ಕಿಟಕಿಯನ್ನು ಸ್ವಲ್ಪವೇ ತೆಗೆದು ನೋಡಿದೆ. ಒಂದು ಹತ್ತು ನಿಮಿಷ ಬಾಗಿಲನ್ನೇ ದಿಟ್ಟಿಸಿ ನೋಡುತ್ತಿದ್ದ ನಾಯಿ, ಕಿಟಕಿಯಿಂದ ಮರೆಯಾಯಿತು. ಧೈರ್ಯವಹಿಸಿ ಬಾಗಿಲನ್ನು ಸದ್ದಾಗದಂತೆ ತೆಗೆದು ಅತ್ತಿತ್ತ ನೋಡುವಾಗ, ಅದು ಬಾಲ್ಕನಿಯಿಂದ ಆಚೆಗೆ ಪಕ್ಕದ ಮನೆಯ ಟೆರೇಸ್‌ಗೆ ಹಾರಿ, ಅಲ್ಲಿಂದ ಹಿಂದೆ ಇದ್ದ ಕನ್ಸರ್‌ವೆನ್ಸಿಗೆ ಜಿಗಿದು ಎಲ್ಲೋ ಮರೆಯಾಯಿತು. ಮತ್ತೆ ಬಂದೀತೆಂದು ಆತಂಕ ಕಾಡಿತು. ಅದು ಮತ್ತೊಂದೆರಡು ಬಾರಿ ಮನೆಯತ್ತ ಸುಳಿದು ಅನುಮಾನಾಸ್ಪದವಾಗಿ ಓಡಾಡುತ್ತಾ ಇರುವಾಗ, ಅದು ಯಾರನ್ನೋ ಹುಡುಕುತ್ತಿದೆ ಎಂದೆನಿಸಿತು. ಆಗ ತಟ್ಟನೆ ನೆನಪಿಗೆ ಬಂದುದು ನಾಯಿಯನ್ನು ಸಾಕಿದ್ದ ನಮ್ಮ ಪರಿಚಯ

ದವರು. ಅವರು ಹಿಂದಿನ ರಾತ್ರಿಯಷ್ಟೇ ನಮ್ಮ ಮನೆಗೆ ಬಂದು ಬಹಳ ತಡವಾಗಿ ಹಿಂತಿರುಗಿದ್ದರು. ಅವರ ಜೊತೆ ಈ ನಾಯಿ ಬಂದಿರಬಹುದು. ಈಗ ಅವರನ್ನು ಹುಡುಕುತ್ತಿರಬಹುದು. ಅದಕ್ಕೆ ಮತ್ತೆ ಮತ್ತೆ ಇಲ್ಲಿ ಬಂದು ನನ್ನನ್ನು ಕಾಡುವ ಬದಲು, ಅವರನ್ನು ಈ ಬಗ್ಗೆ ಕೇಳುವುದು ಒಳ್ಳೆಯದು ಎನಿಸಿತು.

ಮಕ್ಕಳಿಬ್ಬರೂ ಸ್ಕೂಲಿಗೆ ಹೊರಟ ಮೇಲೆ, ಮನೆಗೆ ಬೀಗ ಹಾಕಿಕೊಂಡು ಕೆಳಗಿಳಿದು ಬಂದೆ. ಗೇಟಿನ ಬಳಿ ನಿಂತಿದ್ದ ನಾಯಿ ನನ್ನನ್ನು ನೋಡಿ ಓಡಿ ಹೋಯಿತು. ಹೀಗೆ ದಿಕ್ಕು ಗೆಟ್ಟ ನಾಯಿಯಂತೆ ಅಲೆದಾಡುವಾಗ, ಕಾರಿಗೋ ಸ್ಕೂಟರಿಗೋ ಸಿಕ್ಕಿ ಸತ್ತು ಹೋದರೆ ಆ ಪಾಪ ನನಗೆ ಅಂಟದೇ ಇರದು ಎಂದುಕೊಂಡು ಅವರಿಗೆ ಫೋನು ಮಾಡಲೆಂದು ಫೋನಿನ ಬೂತ್ ಕಡೆಗೆ ನಡೆದೆ. ಆಗ ನಮ್ಮ ಮನೆಯಲ್ಲಿ ಫೋನು ಇರಲಿಲ್ಲ, ಅವರು ಅನುಕೂಲಸ್ಥರಾದುದರಿಂದ ಅವರ ಮನೆಯಲ್ಲಿ ಫೋನು ಇತ್ತು. ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದ ನಂಬರನ್ನು ಹುಡುಕಿ, ಅವರ ಮನೆಗೆ ಫೋನು ಮಾಡಿದೆ.

ಮೊದಲಿಗೆ ಫೋನು ತೆಗೆದುಕೊಂಡವಳು ಯಜಮಾನಿಯೇ. ಸರಿಯಾಗಿ ಉತ್ತರ ನೀಡಲಿಲ್ಲ. ಯಾವುದೋ ಒಂದು ನಾಯಿ, ಬೆಳಿಗ್ಗೆ ಮನೆ ಬಾಗಿಲ ಬಳಿ ಕುಳಿತಿತ್ತು. ಮತ್ತೆ ಮತ್ತೆ ಬಂದಿದೆ. ನಿಮ್ಮ ಜೊತೆ ನಿಮ್ಮ ಮನೆ ನಾಯಿ ಯಾವುದಾದ್ರೂ ಬಂದಿತ್ತಾ. ಅಂತ ಕೇಳಿದಾಗ ಇಲ್ಲ ಎಂದಳು. "ಹಾಗಾದ್ರೆ ಮುನಿಸಿಪಾಲಿಟಿಯವರಿಗೆ ತಿಳಿಸ್ತೀನಿ. ಅವರು ಬಂದು ಹಿಡಿದುಕೊಂಡು ಹೋಗುತ್ತಾರೆ... ಸುಮ್ಮನೆ ಬರ್ತಿದ್ರೆ ಅದ್ರಿಂದ ನಮಗೆ ತೊಂದರೆ ಆಗುತ್ತೆ" ಎಂದೆ.

ಆಗ, "ತಡೀ ನೋಡ್ತೀನಿ. ನಮ್ಮ ಮನೇಲಿ ಎಷ್ಟೋ ನಾಯಿಗಳಿವೆ. ನೋಡ್ಬಿಟ್ಟು ತಿಳಿಸ್ತೀನಿ" ಎಂದಳು. "ಪಬ್ಲಿಕ್ ಬೂತಿನಿಂದ ಮಾಡ್ತಿದೀನಿ. ಅಷ್ಟು ಹೊತ್ತು ಕಾಯಕ್ಕಾಗುಲ್ಲ. ನಿನ್ನ ಮಗನ್ನ ಕೇಳು" ಎಂದೆ.

ಅಷ್ಟರಲ್ಲಿ ಮಗನ ಧ್ವನಿ ಕೇಳಿಸಿತು. ನೆನ್ನೆ ನಮ್ಮ ಜೊತೇಲಿ ಸುಶೀಲ

ಬಂದಿದ್ಲಲ್ಲ. ಕಾರಿನಿಂದ ಇಳಿಯುವಾಗ ಅವಳನ್ನು ಇಳಿಸಿದ್ವಲ್ಲ. ಮರೆತು ಬಿಟ್ಯ! ನಾವು ಬರುವಾಗ, ಕಾರಿನ ಹತ್ರ ನಾಯಿ ಇರ್ಲಿಲ್ಲ ಅಂತ ನೀನೇ ಹೇಳ್ದೆ."

ಒಂದು ಗಳಿಗೆ ಅವರವರು ಏನು ಮಾತಾಡಿಕೊಂಡ್ರೋ, "ಮತ್ತೆ ಆ ನಾಯಿ ನಿಮ್ಮ ಮನೆ ಬಳಿಗೆ ಬಂದರೆ ಹೆದರ್ಬೇಡಿ. ಸುಶೀಲ ಅಂತ ಹತ್ತಿರಕ್ಕೆ ಕರೆದು ಬ್ರೆಡ್ ಹಾಕಿ ಅಲ್ಲೇ ಇಟ್ಕೊಳ್ಳಿ. ನಾನು ನನ್ನ ಮಗನನ್ನೋ ಸೊಸೆಯನ್ನೋ ಕಳಿಸ್ತೀನಿ. ಅವರು ಬರೋವರ್ಗ್ಗೋ ಮುನಿಸಿಪಾಲಿಟಿರವರಿಗೆ ಹೇಳ್ಬೇಡಿ" ಎಂದಳು.

ಸರಿ, ಎಂದು ಹೇಳಿ ಮನೆಗೆ ಬಂದೆ. ಮನೆಯ ಬಳಿ ಯಾವ ನಾಯಿಯೂ ಇರಲಿಲ್ಲ, ಅವರಿಗಾಗಿ, ಮತ್ತೆ ನಾಯಿಯನ್ನು ಕಾಯುವ ಕೆಲಸ ನನ್ನದಾಗಿತ್ತು. ಈ ನಾಯಿಗೆ ಸುಶೀಲ ಎಂತ ಬೇರೆ ಹೆಸರು. ಶೀಲವಿಲ್ಲದ ನಾಯಿ, ಎಲ್ಲೆಲ್ಲೋ ಓಡಿ ಹೋಗುತ್ತೆ. ಎಂದು ನನ್ನಲ್ಲೇ ಹೇಳಿಕೊಂಡು ಕಾಲಿಂಗ್ ಬೆಲ್ ಆಗುವುದನ್ನು ಎದುರು ನೋಡುತ್ತಿದ್ದೆ.

ಕಡೆಗೆ ಅವರುಗಳು ಬಂದರು. ನಾಯಿ ಓಡಾಡಿದ ವಿವರಣೆಯನ್ನು ತಿಳಿಸಿದೆ. ಇಬ್ಬರೂ ಒಂದೊಂದು ದಿಕ್ಕಿನಲ್ಲಿ ನಾಯಿಯನ್ನು ಹುಡುಕಲು ಹೊರಟರು. ನಾಯಿ ಸಿಕ್ಕರೆ ನನಗೆ ಒಂದ್ಮಾತು ತಿಳಿಸೋದನ್ನ ಮರೆಯಬೇಡಿ" ಹೇಳಿ ಕಳಿಸಿದೆ.

ಎಷ್ಟೋ ಹೊತ್ತಿನ ನಂತರ ಮತ್ತೆ ಕಾಲಿಂಗ್ ಬೆಲ್ ಆಯಿತು. ಎದುರಿಗೆ ಅವರುಗಳು ನಿಂತಿದ್ರು, ಅವರೊಂದಿಗೆ ಸುಶೀಲಳೂ ನಿಂತಿದ್ದಳು. "ಥ್ಯಾಂಕ್ಸ್ ನೀವು ಹೇಳಿದ್ದಕ್ಕೆ, ಇಲ್ಲದಿದ್ರೆ ಅಮ್ಮ ನಾಯಿ ಕಳೆದು ಹೋಯಿತು ಅಂತ ದೊಡ್ಡ ರಂಪ ಮಾಡಿರುತ್ತಿದ್ದರು" ಸೊಸೆ ಹೇಳಿದಳು.

ನಿಮ್ಮ ಅತ್ತೆಯ ಪಾಡು ಇರಲಿ, ನಾನು ದಿನಾ ನಾಯೀನಾ ಕಾದೂ, ಕಾದೂ ಕ್ರಮೇಣ ಈ ನಾಯಿಯನ್ನು ನಾವು ಸಾಕಬೇಕಾದ ಪಾಡು ಬರುತ್ತಿತ್ತೇನೋ" ಎಂದು ಮನದಲ್ಲೇ ಹೇಳಿಕೊಂಡೆ. ಮನಸ್ಸು ನಿರಾಳವಾಗಿತ್ತು.

* * * *

೯. ಅತಿಥಿ

ಶ್ರಾವಣ ಮಾಸದ ಮಳೆಯ ಅನುಭವ ಎಲ್ಲರಿಗೂ ಆಗಿರುತ್ತದೆ. ಒಟ್ಟೊಟ್ಟಿಗೆ, ಎರಡು ಮೂರು ದಿನಗಳು ಬಿಟ್ಟು ಬಿಟ್ಟು ಬರುವ ಮಳೆ, ಒಮ್ಮೊಮ್ಮೆ ಧಾರಾಕಾರವಾಗಿ, ಒಮ್ಮೊಮ್ಮೆ ಜಿನುಗುವ ಮಳೆ. ಮೋಡ ಕವಿದಿರುವ ವಾತಾವರಣ ಬಿಸಿಲಿನ ಹೆಸರಿಲ್ಲ. ಅಂಥಾ ದಿನಗಳಲ್ಲಿ ಸ್ವಲ್ಪ ಹೊಳವಾಗಿ ಬಿಸಿಲಿನ ಛಾಯೆ ಕಂಡು ಬಂದರೂ ಸಾಕು, ಪೊಟರೆಗಳಲ್ಲಿ, ಬಿಲಗಳಲ್ಲಿ ಅಡಗಿ ಕುಳಿತಿರುವ ಹಾವು ಹಲ್ಲಿ, ಕಪ್ಪೆ ಇಲಿ ಇತ್ಯಾದಿಗಳು ಹೊರಕ್ಕೆ ಆಹಾರವನ್ನು ಹುಡುಕಿಕೊಂಡು ಬರುವುದು ಸಹಜ. ಹಾಗೇ ಹಿತವಾದ ಬಿಸಿಲಿಗೆ ಮೈ ಒಡ್ಡಿ ಮಲಗಲೆಂದು ಹೊರಬರುವ ಹಾವುಗಳು ಕಂಡು ಬರುತ್ತವೆ.

ಆ ದಿನ ಶ್ರಾವಣ ಮಾಸದ ಷಷ್ಟಿಯ ದಿನ. ಚೌತಿ, ಪಂಚಮಿ ಹಾಗೂ ಷಷ್ಠಿಗಳಂದು ಬೆಳ್ಳಿ ನಾಗಪ್ಪನಿಗೆ, ಹುತ್ತಗಳಿಗೆ ಹಾಲನ್ನು 'ತನಿ' ಎರೆಯುವ ವಾಡಿಕೆ ಹಿಂದೂಗಳಲ್ಲಿ ಉಂಟು. ಹಾವು ಯಾವುದಾದರೇನು? ಹಾವು ಕಣ್ಣಿಗೆ ಬಿದ್ದಿತೆಂದರೆ ಏನೋ ಆತಂಕ ಭಯ. ಆ ದಿನವೂ ಹಾಗೇ ಆಯಿತು. ಸುಮಾರು, ಬೆಳಗಿನ ಹತ್ತು ಗಂಟೆಯ ಸಮಯ. ಕಾಂಪೌಂಡ್ ಗೋಡೆಯ ಮೇಲೆ ಬಿಸಿಲನ್ನು ಕಾಯಿಸುತ್ತಾ ಮಲಗಿದ್ದ ಹಸಿರು ಹಾವಿನ ಮರಿಯೊಂದು ನಮ್ಮವರ ಕಣ್ಣಿಗೆ ಬಿತ್ತು. ನನ್ನನ್ನು ಕರೆದು ತೋರಿಸಿದರು. ಇವರ ಸ್ವಭಾವದ ಅರಿವಿದ್ದ ನಾನು, ಹೊಡೀಗಿಡೀ ಬೇಡಿ. ಬಿಟ್ಬಿಡಿ. ಅದರ ಪಾಡಿಗೆ ಅದು ಹೋಗುತ್ತೆ" ಎಂದೆ.

'ಒಳಗೆಲ್ಲಾದ್ರೂ ಬಂದು ಸೇರ್ಕೊಂಡು ಬಿಟ್ರೆ, ಆಮೇಲೆ ಓಡ್ಸೋರು ಯಾರು?" ಇವರು ತಮ್ಮ ಅಸಮಾಧಾನವನ್ನು ವ್ಯಕ್ತ ಪಡಿಸಿದರು.

"ಕಿಟಕಿ ಬಾಗಿಲುಗಳನ್ನು ಮುಚ್ಚಿ ಬಿಟ್ಟರಾಯಿತು.... ಯಾಕಾದರೂ ಮನುಷ್ಯರ ಕಣ್ಣಿಗೆ ಬೀಳುತ್ತೋ ಅವುಗಳ ಪಾಡಿಗೆ ಅವು ಮರೆಯಲ್ಲಿ ಎಲ್ಲಾದ್ರೂ ಇದ್ದರೆ ಆಗುಲ್ವಾ...." ನಾನೂ ಹೇಳಿದೆ.

"ಸರಿ ಈಗೇನು ಮಾಡೋದು! ಅದೇನು ಮಾಡುತ್ತೆ ಅಂತ ನೋಡ್ತಾ ಇಲ್ಲೇ ಕಾಯ್ತಾ ಇರುಕ್ಕೆ ಆಗುಲ್ಲವಲ್ಲ. ಪಕ್ಕದ ಕಾಂಪೌಂಡ್‌ಗೆ ತಳ್ಳಿ ಓಡಿಸಿ ಬಿಡ್ತೀವಿ. ಹೇಗೂ ಆ ಸೈಟು ಖಾಲಿ ಬಿದ್ದಿದೆಯಲ್ಲ."

"ಬೇಡ ಬೇಡ ಮುಟ್ಬೇಡಿ, ಬಿಟ್ಬಿಡಿ ಅಂತ ಹೇಳಿದೆ. ನಮ್ಮಿಬ್ಬರ ಚರ್ಚೆಯ ನಡುವೆ ಅದು ಎಲ್ಲಿಗೆ ಇಳಿದು ಹೋಯ್ತೋ.... ಅಂತೂ ಅಲ್ಲಿ ಇರಲಿಲ್ಲ. ಮಾಯವಾಗಿತ್ತು. ಒಂದು ಗಳಿಗೆ ಸಮಾಧಾನವಾದರೂ, ಎಲ್ಲಿ ಎತ್ತ ಹೋಯಿತೋ, ಮತ್ತೆ ಎಲ್ಲಿ ಪ್ರತ್ಯಕ್ಷವಾಗುತ್ತೋ ಎನ್ನುವ ಆತಂಕ ಕಾಡತೊಡಗಿತು.

ಮತ್ತೆ ಕಾಣುತ್ತೇನೋ ಎನ್ನುವ ದಿಗಿಲಿನಿಂದ ಕಿಟಕಿಯಿಂದಾಚೆ ಆಗಾಗ ನೋಡುವುದೇ ಒಂದು ಕೆಲಸವಾಯಿತು. ಅಡುಗೆ ಕೆಲಸದ ಮೇಲೆ ನಿಗಾ ಇಲ್ಲವಾಯಿತು.

ಅಡಿಗೆ ಮನೆಯ ಪಕ್ಕಕ್ಕೆ ನಮ್ಮ ಎಡಗಡೆಯ ದಿಕ್ಕಿಗೆ ಪಕ್ಕದ ಮನೆ ಇದ್ದಿತು. ಈ ಕಿಟಕಿಗೆ ಎದುರಾಗಿ ಸರಿಯಾಗಿ ಅವರ ಮನೆಯ ಹಿಂಬಾಗಿಲು ಇದ್ದಿತು. ಅತ್ತ ಕಣ್ಣು ಹೊರಳಿದ ಕೂಡಲೇ ಮೊದಲು ಕಂಡಿದ್ದು. ಆ ಕಡೆಯ ಕಾಂಪೌಂಡ್ ಗೋಡೆಯ ಮೇಲೆ ಮಲಗಿದ್ದ ಹಾವಿನ ಮರಿ! ಉಸಿರು ನಿಂತಂತಾಯಿತು. ಆ ಕಡೆ ಮಾಯವಾದ ಹಾವಿನ ಮರಿ ಈ ಕಡೆ ಇಲ್ಲಿ ಪ್ರತ್ಯಕ್ಷ. ಅಥವಾ ಇದು ಬೇರೆ ಇನ್ನೊಂದು ಮರಿಯೋ ಎಂಬ ಅನುಮಾನವೂ ಕಾಡಿತು. ಅಷ್ಟರಲ್ಲಿ ಪಕ್ಕದ ಮನೆಯ ಸೊಸೆ ಹಿಂಬಾಗಿಲನ್ನು ತೆರೆದು ಹೊರಕ್ಕೆ ಬಂದಳು. ಸದ್ದಿಗೆ ಗೆದರಿದ ಹಾವಿನ ಮರಿ ಸರ್ರನೆ ಇತ್ತ ಇಳಿಯಿತು. ಅಷ್ಟರಲ್ಲಿ ಮರಿಯನ್ನು ಕಂಡಿದ್ದ ಆಕೆ,

ಬಗ್ಗಿ ನೋಡಿದಳು. ಅಷ್ಟರಲ್ಲಿ ನಾನೂ ಹಿಂಬಾಗಿಲು ತೆಗೆದು ಹೊರಕ್ಕೆ ಬಂದಿದ್ದೆ. ಅಷ್ಟರೊಳಗೆ ಆ ಮರಿ ಟೆರೇಸ್ ಮೇಲಿಂದ ಕೆಳಕ್ಕೆ ನೀರು ಇಳಿಯುವ ಪೈಪಿನೊಳಗೆ ನುಸುಳಿತು. ಅಲ್ಲಿಂದ ಮೇಲಕ್ಕೆ ಹತ್ತಿದರೆ, ಎರಡನೇ ಮಹಡಿ ಅಲ್ಲಿಂದ ಕೆಳಗೇ ಇಳಿದು ಬರಬೇಕು. ಮತ್ತೆ ಅದು ಯಾವಾಗ ಇಳಿದು ಕೆಳಗೆ ಬರುತ್ತದೋ ಎಂದು ಕಾಯುವಂತಾಯಿತು. ಅಲ್ಲಿಂದ ಬಚ್ಚಲು ಮನೆಯ ಬಚ್ಚಲಿಗೋ ಅಥವಾ ಮನೆಯ ಬಚ್ಚಲಿಗೋ ಬಂದರೆ, ಅಲ್ಲಿಂದ ಎಲ್ಲಿಗೆ ಹೋಗುತ್ತದೆಯೋ, ಅಥವಾ ಅಲ್ಲಿಯೇ ಕುಳಿತು ಬಿಡುತ್ತೋ ಎಂದು ಮತ್ತೆ ಆತಂಕ ಕಾಡಲಾರಂಭಿಸಿತು.

ಅಷ್ಟರಲ್ಲಿ ಪಕ್ಕದ ಮನೆಯವರು ಮಾತಾಡಿದರು. ಹೀಗೇ ಕಾಯ್ತಾ ನಿಂತಿದ್ರೆ ಅದು ಹೊರಕ್ಕೆ ಬರುವುದೇ ಇಲ್ಲ. ಸ್ವಲ್ಪ ಹೊತ್ತು ಬಿಟ್ಟು ನೋಡೋಣ ಹೊರಕ್ಕೆ ಬಂದ ಮೇಲೆ ಆಚೆಗೆ ಓಡಿಸಿದರೆ ಆಯ್ತು. ಕೆಳಕ್ಕೆ ಇಳಿದು ಬರದೇ ಇನ್ನೆಲ್ಲಿಗೆ ಹೋಗುತ್ತೆ? ಎಂದರು.

ಆದರೆ ಎಷ್ಟು ಹೊತ್ತಿನ ತನಕ ಕಾಯೋದು? ಬೇರೆ ಎಲ್ಲಾ ಕೆಲವನ್ನು ಬಿಟ್ಟು ಈ ಮರಿಯನ್ನು ಕಾಯುತ್ತಾ ಇರೋದೆ? ಬೇಗ ಅತ್ಲಾಗೆ ಹೊರಗೆ ಬರಬಾರದೇ ಅಂತ ಅನ್ನಿಸತೊಡಗಿತು. ಇಷ್ಟೆಲ್ಲಾ ಚರ್ಚೆ ನಡೆಯುವಾಗ ಮೇಲಿನ ಮನೆಯಲ್ಲಿ ವಾಸವಾಗಿದ್ದವರು ಕೆಳಗೆ ಇಳಿದು ಬಂದರು. ಅವರಿಗೆ ಮತ್ತೊಮ್ಮೆ ಎಲ್ಲವನ್ನು ವಿವರಿಸಿ ಹೇಳಿದ್ದಾಯಿತು. ಆಕೆ ಒಂದು ಉತ್ತಮವಾದ ಸಲಹೆಯನ್ನು ಕೊಟ್ಟರು. ಹಾವು ಹಿಡಿಯೋರಿಗೆ ಹೇಳಿದರೆ ಬಂದು ಹಿಡಿದುಕೊಂಡು ಹೋಗ್ತಾರೆ. ಅವರು ಬರೋವರ್ಗೂ, ಹಾವು ಇಲ್ಲಿಂದ ಕದಲದ ಹಾಗೆ ನೋಡ್ಕೋ ಬೇಕು ಅಷ್ಟೇ... ಆಮೇಲೆ ಮೇಲಿಂದ ಒಂದು ಬಕೆಟ್ ನೀರು ಸುರಿದರೆ, ಕೆಳಕ್ಕೆ ಬರುತ್ತೆ.

"ಇಲ್ಲಿ ಹಾವು ಹಿಡಯೋರು ಯಾರು? ಎಲ್ಲಿ ಸಿಗ್ತಾರೆ ಅಂತ ನಮಗೆ ಗೊತ್ತಿಲ್ಲ. ಅಲ್ಲದೇ ಅವರು ಸಿಕ್ಕಿದ್ರೂ ಎಷ್ಟೊತ್ತಿಗೆ ಬರ್ತಾರೋ... ಎಲ್ಲಿದಾರೋ ಅವರ ಪತ್ತೆ ಹಚ್ಚೋದು ಹೇಗೆ? ಅಲ್ಲಿವರ್ಗೂ ಈ ಹಾವು ಇಳಿಯುತ್ತೋ ಇಲ್ಲವೋ...?"

"ಎದುರು ಮನೇಲಿ, ಒಂದು ಸಾರಿ ಹಾವು ಬಂದಿತ್ತು ಅಂತ ಹಾವು ಹಿಡಿಯೋರನ್ನ ಕರೆಸಿದ್ರು, ಅವರನ್ನು ಕೇಳಿದ್ರೆ ಅವರು ಯಾರು, ಎಲ್ಲಿ ಸಿಗ್ತಾರೆ ಅಂತ ತಿಳಿಯುತ್ತೆ" ಪಕ್ಕದ ಮನೆಯ ಹಿರಿಯಾಕೆ ಹೇಳಿದರು.

ನಮಗೆ ಅವರ ಪರಿಚಯವಿರಲಿಲ್ಲ. ಅವರನ್ನು ಸಂಪರ್ಕಿಸುವುದು ಹೇಗೆ ಅಂತ ತಲೆ ಓಡಿಸುವಾಗ, ಫೋನು ಮಾಡಿ ಯಾಕೆ ಕೇಳಬಾರದು? ಎಂಬ ಅಂಶ ಹೊಳೆಯಿತು.

ಅವರ ಹೆಸರೇನು ಅಂತ ಕೇಳಿ ತಿಳಿದುಕೊಂಡೆ. ಒಳ ಬಂದು ಟೆಲಿಫೋನ್ ಡೈರೆಕ್ಟರಿಯಲ್ಲಿ ಆತನ ಹೆಸರನ್ನು ಹುಡುಕಿ, ಅವರ ಮನೆಯ ಫೋನ್ ನಂಬರನ್ನು ಬರೆದಿಟ್ಟುಕೊಂಡು ಅವರ ಮನೆಗೆ ಡಯಲ್ ಮಾಡಿದೆ. ಫೋನನೆತ್ತಿಕೊಂಡವರು, ಆತನ ಪತ್ನಿ. ಮೊದಲಿಗೆ ನನ್ನ ಪರಿಚಯವನ್ನು ಹೇಳಿಕೊಂಡು, ವಿಷಯವನ್ನು ತಿಳಿಸಿ, ಹಾವು ಹಿಡಿಯುವವನ ಬಗ್ಗೆ ವಿಚಾರಿಸಿದೆ. ಆಕೆ ತಕ್ಷಣವೇ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದ ಆತನ ಮನೆಯ ನಂಬರನ್ನು ಕೊಟ್ಟರು. ಅವರು ಹೆಸರು 'ಸ್ನೇಕ್ ಬಾಬಾ' ಅಂತ. ಅವರು ಎಲ್ಲಿಯೇ ಇದ್ದರೂ, ವಿಷಯ ತಿಳಿದ ಕೂಡ್ಲೆ ತಕ್ಷಣ ಬರ್ತಾರೆ. ಈಗ್ಲೇ ಫೋನು ಮಾಡಿ. ಎಂದು ಧೈರ್ಯ ಹೇಳಿದರು.

ನಾನು ಥ್ಯಾಂಕ್ಸ್ ಹೇಳಿ 'ಸ್ನೇಕ್ ಬಾಬಾ' ನ ಮನೆಗೆ ಫೋನು ಮಾಡಿದೆ. ಮನೆಯವರು ಯಾರೋ ಫೋನನ್ನೆತ್ತಿದರು. ಅವನು ಮನೇಲಿಲ್ಲ, ಹೊರಗೆ ಹೋಗಿದಾನೆ, ಬಂದ ತಕ್ಷಣ ಕಳಿಸ್ತೀವಿ. ನಿಮ್ಮ ಮನೆಯ ಅಡ್ರೆಸನ್ನು ಫೋನು ನಂಬರನ್ನು ಕೊಡಿ, ಎಂದು ಹೇಳಿ ಬರೆದಿಟ್ಟುಕೊಂಡರು.

ಈಗ 'ಸ್ನೇಕ್ ಬಾಬಾ' ನಿಗಾಗಿ ಕಾಯುವ ಸರದಿ. ಕೆಲ ಸಮಯದ ನಂತರ, ಫೋನು ರಿಂಗಾಯಿತು. ಸ್ನೇಕ್ ಬಾಬಾನಿಂದ ಕರೆ ಬಂದಿತ್ತು. ಮತ್ತೊಮ್ಮೆ ವಿವರಗಳನ್ನು ವಿಳಾಸವನ್ನು ತಿಳಿದುಕೊಂಡು "ಈಗ್ಲೇ ಬರ್ತೀನಿ. ವರಿ ಮಾಡ್ಕೋಬೇಡಿ" ಎಂದು ಹೇಳಿದರು. ಮತ್ತೆ ಈಗ ಸ್ನೇಕ್ ಬಾಬಾನಿಗಾಗಿ ಕಾಯುವುದಾಯಿತು.

ಮನೆ ಮುಂದೆ ಆಟೋ ರಿಕ್ಷಾ ನಿಂತ ಸದ್ದಾಯಿತು. ಈ ಸಮಯದಲ್ಲಿ ಯಾವ ಅತಿಥಿ ಬಂದರಪ್ಪಾ ಎಂದುಕೊಂಡು, ವೆರಾಂಡದ ಕಿಟಕಿಯಿಂದ ನೋಡಿದೆ. ಆಟೋ ರಿಕ್ಷಾದ ಡ್ರೈವರ್ ಸೀಟ್‌ನಿಂದ ಇಳಿಯುತ್ತಿದ್ದ ವ್ಯಕ್ತಿಯನ್ನು ನೋಡಿ ಒಂದು ತರಹ ಕಸಿ ಬಿಸಿ ಆಯಿತು.

ಮಧ್ಯ ವಯಸ್ಕನಿಗಿಂತ ಚಿಕ್ಕವನಿರಬಹುದು, ಸದೃಢವಾದ ಶರೀರ, ತಲೆಗೆ ಒಂದು ಬಣ್ಣ ಬಣ್ಣದ ಬಟ್ಟೆಯನ್ನು ಕಟ್ಟಿಕೊಂಡಿದ್ದನು. ಹೂವು ಹೂವಿನ ಡಿಸೈನ್ ಇಡುವ ಬುಷ್‌ಶರ್ಟ್ ಹಾಗೂ ಪ್ಯಾಂಟನ್ನು ಧರಿಸಿದ್ದನು. ನೋಡಿದರೆ, ಫ್ಯಾನ್ಸಿ ಡ್ರೆಸ್ ವೇಷ ಹಾಕಿರುವಂತೆ ಅನ್ನಿಸಿತು. ಮುಂಬಾಗಿಲು ತೆರೆದು, ಬಾಗಿಲಲ್ಲಿ ನಿಂತು ಆತನ ಕಡೆ ನೋಡಿದೆ. ವಿಳಾಸ ಸರಿಯಾಗಿದೆಯೋ ಇಲ್ಲವೋ ಎನ್ನುವಂತೆ ಗೇಟಿನಲ್ಲೇ ನಿಂತು ವಿಳಾಸವನ್ನು ಓದಿಕೊಳ್ಳುತ್ತಿದ್ದ. ನನ್ನನ್ನು ಕಂಡು ನಮಸ್ಕಾರ ಎನ್ನುವಂತೆ ಕೈ ಮುಗಿದು ಗೇಟನ್ನು ತೆರೆದು ಒಳಬಂದ. ಎರಡೂ ಕೈಗಳ ಹತ್ತೂ ಬೆರಳಿಗೆ ಬಗೆ ಬಗೆಯ ಉಂಗುರಗಳು, ಬಲ ಕೈಯಲ್ಲಿ ಒಂದು ಲೋಹದ ಬಳೆ, ಕೊರಳಲ್ಲಿ ದೊಡ್ಡ ದೊಡ್ಡ ಮಣಿಯ ಸರಗಳು ಶೋಭಿಸುತ್ತಿತ್ತು.

ಯಾರೋ ಏನನ್ನೋ ಕೇಳಲು ಬಂದಿರಬಹುದು ಅಂತ ಅಂದುಕೊಳ್ಳುವಷ್ಟರಲ್ಲಿ "ಹಾವು ಹಿಡೀಬೇಕು ಅಂತ ನೀವೇ ಅಲ್ವಾ ಫೋನು ಮಾಡಿದೋರು..." ಕೇಳಿದ.

"ಸುಮ್ಮನೆ ಅವನನ್ನೇ ನೋಡಿ ತಲೆಯಾಡಿಸಿದೆ...."

"ಗಾಬರಿ ಆಗಿರುವ ಹಾಗಿದೆ. ... ಹಾವಿಗೇಕೆ ಹೆದರಬೇಕು? ಗಾಬರಿ ಮಾಡ್ಕೋಬೇಡಿ. ಎಲ್ಲಿದೆ ಅಂತ ಹೇಳ್ತೀರಾ?" ನಿಧಾನವಾಗಿ ಸಮಾಧಾನದಿಂದ ಕೇಳಿದ. ನನಗೆ ಆತಂಕ ಹೆಚ್ಚಾಯಿತು. ಬಂದಿರೋದು ಹಾವನ್ನು ಹಿಡಯೋಕೆ. ಎಷ್ಟು ಸಮಾಧಾನದಿಂದ ಮಾತಾಡ್ತಾನಲ್ಲ ಅಂತ ಅನ್ನಿಸಿತು. 'ಬನ್ನಿ' ಎಂದು ಒಳಕ್ಕೆ ಕರೆದೆ.

ಒಳಕ್ಕೆ ಬರುತ್ತಿದಂತೆಯೇ ಮನೆಯನ್ನೆಲ್ಲಾ ಒಮ್ಮೆ ನೋಡಿ, ನೀವು ಯಾವ ಪೈಕಿ? ಎಷ್ಟು ಜನರು ಇದೀರಿ? ಎಷ್ಟು ವರ್ಷದಿಂದ ವಾಸ

ವಾಗಿದೀರಿ? ಅಂತೆಲ್ಲಾ ಕೇಳಿದ.

ಇದೆಲ್ಲಾ ಇವನಿಗ್ಯಾಕೆ ಅಂತ ಅನ್ನಿಸಿದರೂ, ಉತ್ತರ ಕೊಟ್ಟೆ. ನಂತರ ತನ್ನ ಬಗ್ಗೆ ಹೇಳಿಕೊಂಡ. ಹಾಗೆ ಸ್ನೇಕ್ ಬಾಬಾನ ಪರಿಚಯ ನಮಗಾಯಿತು. ಇದುವರೆಗೂ ತಾನು ಸಾಕಷ್ಟು ಹಾವುಗಳನ್ನು ಹಿಡಿದಿರುವುದಾಗಿ ಹೇಳಿದ. ಮಾತಾಡುತ್ತಾ ಮಾತಾಡುತ್ತಾ ನಾವುಗಳು ಹಿತ್ತಲ ಕಡೆಗೆ ಬಂದಿದ್ದೆವು. ಅಲ್ಲಿ ನಮ್ಮವರು ಹಾಗೂ ಪಕ್ಕದ ಮನೆಯವರು, ಹಾವು ಆಚೆಗೆ ಬಂದಿತೇನೋ ಅಂತ ಕಾಯುತ್ತಾ ನಿಂತಿದ್ದರು.

"ಈತ ಪ್ಯಾಂಟಿನ ಎರಡೂ ಜೇಬುಗಳಲ್ಲಿ ಕೈಗಳನ್ನು ಇಳಿಬಿಟ್ಟು ನಿಧಾನವಾಗಿ ಅಲ್ಲಿಗೆ ನಡೆದ. ಅಷ್ಟರಲ್ಲಿ ಎಲ್ಲರೂ ಒಕ್ಕೊರಲಿನಿಂದ ಅಲ್ಲಿ, ಇಲ್ಲಿ ಆ ಫೈಪಿನೊಳಗೆ ..." ಎಂದರು.

"ಇರ್ಲಿ ನಾನು ನೋಡ್ಕೋತೀನಿ. ಯಾರೂ ಟೆನ್ಷನ್ ಮಾಡ್ಕೋಬೇಡಿ." ಎಂದು ಹೇಳಿ ಪೈಪ್ ಬಳಿಗೆ ಹೋಗಿ ಕೆಳಗಿನಿಂದ ಇಣುಕಿದ. ನಂತರ ಬೆಪ್ಪನಂತೆ ಇತ್ತ ನೋಡಿದ.

"ಅಲ್ಲಿ ಇಲ್ವಲಾ? ಎಲ್ಹೋಯ್ತು?" ಎಲ್ಲರ ದನಿಯಲ್ಲೂ ಗಾಬರಿ ಕುಣೀತಿತ್ತು.

"ಯಾಕ್ಹಾಗೆ ಆತುರ ಪಡ್ತೀರಿ? ಎಲ್ಲೂ ಹೋಗಿಲ್ಲ. ಇಲ್ಲೇ ಇದಾನೆ ನಮ್ಮ ಮಿತ್ರ" ಎನ್ನುತ್ತಾ ಸ್ನೇಕ್ ಬಾಬಾ ಪೈಪ್‌ನೊಳಗೆ ಕೈ ತೂರಿಸಿದ. ಎಲ್ಲರೂ ಉಸಿರು ಬಿಗಿ ಹಿಡಿದು ನಿಂತಿದ್ದೆವು. ಕೈಯನ್ನು ಹೊರಕ್ಕೆ ತಂದ. ಅವನ ಕೈಯಲ್ಲಿ ಹಸಿರು ಹಾವಿನ ಮರಿ! ಅವನು ನೆಟ್ಟಗೆ ನಿಲ್ಲುವಷ್ಟರಲ್ಲಿ ನಾವು ಎರಡು ಹೆಜ್ಜೆ ಹಿಂದಕ್ಕೆ ಸರಿದಿದ್ದವು.

ಸ್ನೇಕ್ ಬಾಬಾ ಹಾವನ್ನು ಆಕಡೆ ಈಕಡೆ ತಿರುಗಿಸಿ ನೋಡುತ್ತಾ ಇದಕ್ಕೆ ಹೆದರಿದಿರಾ? ಎನ್ನುವಂತೆ ನಮ್ಮ ಕಡೆ ನೋಡಿ, ನಸು ನಕ್ಕು ಸಾವಾಕಾಶವಾಗಿ ಮನೆಯೊಳಕ್ಕೆ ಬಂದ. ಡೈನಿಂಗ್ ಟೇಬಲ್ ಮೇಲೆ ಹಾವನ್ನು ಇಟ್ಟು ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತ.

"ಅಲ್ಲಿಡ್ಬೇಡಿ..." ನಾನು ಕೂಗಿದೆ.

"ಏನೂ ಆಗುಲ್ಲ. ಎಲ್ಲಿಗೂ ಓಡಿ ಹೋಗುಲ್ಲ. ವಿಷ ಕಕ್ಕಲ್ಲ, ಹೆದರ್ಬೇಡಿ."

"ಪ್ಲೀಸ್ ಇಡ್ಬೇಡಿ, ಅಲ್ಲಿಂದ ಇಳಿದು ಹೋಗಿ ಮನೆಯೊಳಗೆ ಎಲ್ಲಾದ್ರೂ ಸೇರ್‍ಕೊಂಡು ಬಿಟ್ರೆ?... ನಮಗೆ ನಿಮ್ಮ ಹಾಗೆ ಧೈರ್ಯವಿಲ್ಲ" ಮತ್ತೆ ಹೇಳಿದೆ.

"ಅವೂ ನಮ್ಮ ಹಾಗೆ ಜೀವಿಗಳೇ... ಅವಕ್ಕೂ ನಮ್ಮನ್ನು ಕಂಡರೆ ಭಯ." ಅವನು ಇಲ್ಲೇ ಎಲ್ಲಾದರೂ ಅದನ್ನು ಗಿಡಗಂಟೆಗಳ ನಡುವೆ ಬಿಟ್ಟು ಹೋದರೆ ಎಂಬ ಭೀತಿ ಕಾಡಿದರೂ, ಹಾಗೆ ಮಾಡಲಾರ ಎನ್ನುವ ದೃಢ ನಂಬಿಕೆ ಇತ್ತು. ಆದಷ್ಟು ಬೇಗ ಯಾವುದಾದರೂ ಕಾಡಿನಲ್ಲಿ ಬಿಟ್ಟು ಬಿಡಲಿ ಎಂದು ಹಾರೈಸುತ್ತಾ, ಆ ದಿನವೆಲ್ಲಾ ಆ ಘಟನೆಯನ್ನೇ ನೆನೆದೆವು.

* * * *

೧೦. ಸರ್ಪ ಸಂಸ್ಕಾರ ಭಾಗ-೧

"ನಿಮ್ಮ ಮಗಳಿಗೆ ಸರ್ಪದೋಷವಿದೆ. ಅದಕ್ಕೆ ಒಂದು ಪರಿಹಾರವಿದೆ" ನನ್ನ ವೈದ್ಯೆ ಸ್ನೇಹಿತೆ ಹೇಳಿದಾಗ, ನಾನು ಅದೇನೆಂದು ಕೇಳಲಿಲ್ಲ. ಆಕೆಯೇ ಮುಂದುವರೆಸಿದಳು. ಆಕೆಯ ಸ್ವಭಾವವೇ ಅಂತಹುದು. ಕೇಳದಿದ್ದರೂ ಹೇಳುವವಳು.

ಮಂಗಳೂರಿನ ಮಂಗಳಾದೇವಿಯ ಸನ್ನಿಧಾನಕ್ಕೆ ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ನಿವೇದನೆ ಮಾಡಬೇಕು. ಹಾಗೇ ಇವಳು ಹುಟ್ಟಿದ ಸ್ಥಳದಲ್ಲಿರುವ ದೇವಸ್ಥಾನಕ್ಕೆ ಕರೆದೊಯ್ದು ಇವಳನ್ನು ಒಪ್ಪಿಸಿ, ಪ್ರಾರ್ಥಿಸಿ ಬರಬೇಕು ಎಂದು ಹೇಳಿದಳು, ತಾನಾಗಿಯೇ ನಾನು ಕೇಳ ದಿದ್ದರೂ.

ಈಕೆ ಏನೋ ಸುಲಭವಾಗಿ ಹೇಳಿಬಿಟ್ಟಳು. ಆದರೆ ಅದು ಅಷ್ಟು ಸುಲಭ ಸಾಧ್ಯವಿಲ್ಲ ಎಂದು ನನಗೆ ಗೊತ್ತು. ಯಾಕೆಂದರೆ ಮೊದಲಿಗೆ ನಮ್ಮವರಿಗೆ ಎಲ್ಲಾದರೂ ಹೋಗಿ ಬರುವುದೆಂದರೆ ಅಲರ್ಜಿ. ಅದೂ ಅಲ್ಲದೇ ಈ ರೀತಿ ದೇವಸ್ಥಾನಗಳಿಗೆ ಹೋಗಿ ಬರಲು ಖಂಡಿತಾ ಒಪ್ಪು ವುದಿಲ್ಲ ಎಂದು ನನಗೆ ತಿಳಿದಿತ್ತು. ಅದನ್ನೇ ಹೇಳಿದೆ. ಆದರೆ ಆಕೆ ಒಪ್ಪದೇ ಮತ್ತೆ ಮತ್ತೆ ನುಡಿದಳು.

"ಹಾಗೆ ಆಗುಲ್ಲ ಅಂತ ಹೇಳಿದರೆ? ಯಾಕೆ ಆಗುಲ್ಲ! ಅದನ್ನು ನೀವು ಸಾಧಿಸಬೇಕು. ಇವತ್ತೇ ನೀವು ನಿಮ್ಮ ದೇವರ ಮುಂದೆ ಒಂದು ಅರಿಶಿನದ ಬಟ್ಟೆಯಲ್ಲಿ ಒಂದು ರೂಪಾಯಿಯ ನಾಣ್ಯವನ್ನು ಕಟ್ಟಿಡಿ.

ಇನ್ನೂ ನಲವತ್ತು ದಿನಗಳೊಳಗೆ ಹೋಗಿ ಬರುವಂತಾಗುತ್ತೆ" ಎಂದು ಒತ್ತಿ ನುಡಿದಳು.

ನನ್ನ ಮಗಳು ಈ ಮಾತುಗಳನ್ನು ಕೇಳಿಸಿಕೊಂಡಿದ್ದಳು. ಅವಳು ಅದನ್ನೇ ಒತ್ತಾಯ ಮಾಡಿದಳು. ಅದರಂತೆ ಆ ದಿನವೇ ಅರಿಕೆ ಹಣವನ್ನು ಅರಿಶಿನದ ಬಟ್ಟೆಯಲ್ಲಿ ಕಟ್ಟಿಟ್ಟು, ನನ್ನ ಮಗಳ ಒಳಿತಿಗಾಗಿ, ಹೋಗಿ ಬರುವಂಥ ಅವಕಾಶವನ್ನು ಒದಗಿಸಿಕೊಡು ಎಂದು ದೇವರಲ್ಲಿ ಪ್ರಾರ್ಥಿಸಿದೆ. ಇದು ನೆರವೇರ ಬಹುದು ಎನ್ನುವ ವಿಶ್ವಾಸ ಕಡಿಮೆ ಯಾಗಿದ್ದಿತು. ಯಾಕೆಂದರೆ ನನ್ನ ಗಂಡನ ಸ್ವಭಾವ ನನಗೆ ಚೆನ್ನಾಗಿ ಗೊತ್ತು. ಇವರ ಹತ್ತಿರ ಹೇಗೆ ಮಾತಾಡಬೇಕು? ಹೇಗೆ ಒಪ್ಪಿಸಬೇಕು? ಅದರ ಬಗ್ಗೆಯೇ ಚಿಂತೆಯಾಗ ತೊಡಗಿತು. ನಾನು ಫಜೀತಿಗೆ ಸಿಕ್ಕಿ ಬಿದ್ದಿದ್ದೆ.

ನನ್ನ ಶಿಷ್ಯೆಯೊಬ್ಬಳ ತವರೂರು ಮಂಗಳೂರು. ಅವಳಿಂದ ನನ್ನ ಮಗಳು ಜ್ಯೋತಿಷ್ಯಾಸ್ತ್ರವನ್ನು ಕಲಿಯುತ್ತಿದ್ದಳು. ಅವಳಿಗೆ ಈ ವಿಚಾರವನ್ನು ಇವಳೇ ತಿಳಿಸಿರಬಹುದು. ಅವಳು ತಾನಾಗಿಯೇ, ತಾನು ಊರಿಗೆ ಹೋಗುವಾಗ ನಮ್ಮನ್ನು ಕರೆದುಕೊಂಡು ಹೋಗುವುದಾಗಿ ಹೇಳಿದಳು. ನನ್ನ ಗಂಡನ ಒಪ್ಪಿಗೆ ಯಿಲ್ಲದೇ ಎಲ್ಲಿಗೂ ಹೋಗುವಂತಿಲ್ಲ. ಸಮಯ ಸಾಧಿಸಿ, ಈ ವಿಷಯದ ಬಗ್ಗೆ ಪ್ರಸ್ತಾಪಿಸಿದೆ. ಇವರು ಒಪ್ಪಲಿಲ್ಲ. ನೀವುಗಳು ಬೇಕಾದ್ರೆ ಏನು ಬೇಕಾದ್ರೂ ಮಾಡ್ಕೊಳ್ಳಿ" ಎಂದು ಅಡ್ಡ ಗೋಡೆಯ ಮೇಲೆ ದೀಪವನ್ನಿಟ್ಟಂತೆ ಮಾತಾಡಿದರು. ನನ್ನ ಮಗಳ ಒತ್ತಾಯ, ನನ್ನ ಗಂಡನ ನಿರಾಕರಣೆ, ಈ ಮಧ್ಯೆ ಹದಿನೈದು ಇಪ್ಪತ್ತು ದಿನಗಳು ಕಳೆದು ಹೋದವು.

ಈ ಮಧ್ಯೆ ನನ್ನ ಶಿಷ್ಯೆ ಮಂಗಳೂರಿಗೆ ಟಿಕೆಟ್ ಬುಕ್ ಮಾಡಿಸಿದ್ದಳು. ನನ್ನ ಮಗಳು ಕುಣಿದಳು. ಮತ್ತೊಮ್ಮೆ ನಮ್ಮಿಬ್ಬರ ಮದ್ಯೆ ಭಾರಿ ಚರ್ಚೆ. ನಡೆಯಿತು. ನಾನೂ ನನ್ನ ಮಗಳ ಒಳಿತಿಗಾಗಿ ಭಂಡತನದಿಂದ ಹೊರಟೇ ಬಿಟ್ಟೆ. ಪ್ರಯಾಣಕ್ಕೆ ಸಿದ್ಧತೆಗಳನ್ನು ಮಾಡಿಕೊಂಡೆ. ಎಲ್ಲವನ್ನೂ ಗಮನಿಸುತ್ತಿದ್ದವರು ಒಂದೇ ಒಂದು ಮಾತನ್ನಾಡಿರಲಿಲ್ಲ. 'ಮೌನಂ ಸಮ್ಮತಿ ಲಕ್ಷಣಂ' ಎಂದುಕೊಂಡು ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಯಾವ

ಅಸಮಾಧಾನ, ಚರ್ಚೆ ಇಲ್ಲದೇ ನಾನು ಎಲ್ಲಿಗೂ ಹೋಗುವಂತಿರಲಿಲ್ಲ. ಇದೇ ನನ್ನ ಹಣೇ ಬರಹ ಎನ್ನಿಸಿತು. ನನ್ನ ಶಿಷ್ಯೆಯೇ ಒಂದು ಆಟೋ ರಿಕ್ಷಾ ಗೊತ್ತು ಮಾಡಿಕೊಂಡು ಬಂದಳು. ನಾವಿಬ್ಬರೂ ಹತ್ತಿದೆವು. ಆಟೋ ಹೊರಟಿತು. ಮನದಲ್ಲಿ ಅಳುಕಿತ್ತು. ಆದರೂ ಆ ವೈದ್ಯೆಯ ಮಾತು ನಮ್ಮನ್ನು ಹೊರಡಿಸಿತಲ್ಲ ಎಂದು ಅಚ್ಚರಿಯೂ ಆಗಿತ್ತು.

ಮಾರನೇ ಬೆಳಿಗ್ಗೆ ಮಂಗಳೂರನ್ನು ತಲುಪಿದೆವು. ಆದಿನ ಪ್ರಯಾಣದ ಆಯಾಸವನ್ನು ಪರಿಹರಿಸಿಕೊಂಡೆವು. ಅವರ ಮನೆಯ ಅತಿಥಿ ಸತ್ಕಾರ ಸದಾಕಾಲವೂ ನೆನಸಿಕೊಳ್ಳುವಂಥದ್ದು. ಇಡ್ಲಿ, ಮಾವಿನ ಹಣ್ಣಿನ ಹಣ್ಣಿನ ಗೊಜ್ಜು ರುಚಿಯಾಗಿತ್ತು. ಕುಡಿಯಲು ಬಾವಿಯ ನೀರಾದರೂ, ಸಿಹಿ ಯಾಗಿತ್ತು. ತಂಪಾಗಿತ್ತು. ಮನೆಯ ಸದಸ್ಯರೇ ಎಂಟು ಹತ್ತು ಜನ. ಜೊತೆಗೆ ಕೆಲಸದ ಆಳುಗಳು ವಾತಾವರಣ, ನನ್ನ ಬಾಲ್ಯದ ದಿನಗಳನ್ನು ನೆನಪಿಗೆ ತರುವಂತೆ ಇತ್ತು.

ಮೊದಲ ದಿನ, ಕಟೀಲಿಗೆ ಬಂದೆವು. ಅಲ್ಲಿ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನವಿದೆ. ನದಿಯೂ ಇದೆ. ಅಲ್ಲಿ ಚೀಟಿ ಬರೆಸಿ, ಅರ್ಚನೆ ಮಾಡಿಸಿ, ಮಂಗಳಾರತಿ, ತೀರ್ಥಪ್ರಸಾದಗಳನ್ನು ತೆಗೆದು ಕೊಂಡೆವು. ನಂತರ ಭೋಜನ ಶಾಲೆಗೆ ಬಂದೆವು. ಊಟದ ನಂತರ ನನ್ನ ಶಿಷ್ಯೆ ನಮ್ಮನ್ನು ಒಬ್ಬ ಜ್ಯೋತಿಷ್ಯಿಗಳ ಬಳಿಗೆ ಕರೆದೊಯ್ದಳು. ಅವರು ಹೇಳೋದೆಲ್ಲಾ ನಿಜವಾಗಿರುತ್ತದೆ. ಅವರು ಏನು ಹೇಳ್ತಾರೋ ಹಾಗೇ ಮಾಡೋಣ ಎಂದಳು.

ನಮ್ಮ ಸರದಿ ಬಂದಾಗ, ನನ್ನ ಮಗಳ ಭವಿಷ್ಯದ ಬಗ್ಗೆ ಕೇಳಿದೆ. ಅವರು ಒಂದು ಅರ್ಧ ಹಿಡಿಯಷ್ಟು ಅಕ್ಕಿಯನ್ನು ತಮ್ಮ ಮುಂದಿದ್ದ ಟೇಬಲ್ ಮೇಲೆ ಹರಡಿ, ಅದನ್ನು ಕೆಲವು ಭಾಗಗಳಾಗಿ ವಿಂಗಡಿಸಿದರು. ಏನೋ ಗುಣಾಕಾರ ಹಾಕಿ ನಮಗೆ ಉತ್ತರವಿತ್ತರು.

ಹೌದು ನಾಗದೋಷವಿರುವುದು ನಿಜ. "ಸರ್ಪಸಂಸ್ಕಾರ" ಮಾಡಿದರೆ ದೋಷ ಪರಿಹಾರವಾಗುತ್ತದೆ ಎಂದರು.

"ನಿಮ್ಮ ಮನೆಯ ಹಿರಿಯರು ಯಾರೋ ನಾಗರಹಾವಿಗೆ ನೋವನ್ನುಂಟು ಮಾಡಿದಾರೆ ಆ ಕಾರಣದಿಂದ ಈ ದೋಷ ಉಂಟಾಗಿದೆ. ಅವರು ಕಡೆಗಾಲದಲ್ಲಿ ಲಕ್ವ ಹೊಡೆದು ತೀರಿಕೊಂಡಿದ್ದಾರೆ...." ಆತ ಮುಂದುವರೆದು ನುಡಿದಾಗ, ನಾಣು ನನ್ನ ಮಗಳು ಮುಖ ಮುಖ ನೋಡಿಕೊಂಡೆವು. ನನಗೆ, ತೀರಿಹೋದ ನನ್ನ ಮಾವನವರ ನೆನಪಾಗಿತ್ತು. ಅವರು ಚಿಕ್ಕವರಾಗಿದ್ದಾಗ, ಹುತ್ತದೊಳಕ್ಕೆ ಕೈ ಹಾಕಿ ಹಾವುಗಳನ್ನು ಹಿಡಿದು ಇತರರನ್ನು ಹೆದರಿಸುತ್ತಿದ್ದರಂತೆ. ಅದನ್ನು ಅವರೇ ಹೆಮ್ಮೆಯಿಂದ ಹೇಳಿ ಕೊಂಡಿದ್ದರು. "ನನಗೆ ಗರುಡ ಮಚ್ಚೆ ಇದೆ. ಯಾವ ಹಾವೂ ಏನೂ ಮಾಡುತ್ತಿರಲಿಲ್ಲ ಎಂದಿದ್ದರು. ಅವರು ಕಡೆಗಾಲದಲ್ಲಿ ಲಕ್ವ ಹೊಡೆದು, ಎರಡು ದಿನ ನರಳಿ ತೀರಿಕೊಂಡಿದ್ದರು. ನನ್ನ ಮೈ ಬೆವರಿತು. ಉಸಿರು ಸಿಕ್ಕಿಕೊಂಡಂತಾಗಿತ್ತು. ನನ್ನ ಮಗಳು ಕಣ್ಣೀರು ಸುರಿಸಿದಳು.

"ಈ ದೋಷ ನನಗೇ ಯಾಕೆ ಬಂತು? ನಮ್ಮ ಮನೆಯಲ್ಲಿ ಇನ್ಯಾರಿಗೂ ಇಲ್ಲ" ಮಗಳೆಂದಳು.

"ಯಾರ ಗ್ರಹಬಲ ಗಟ್ಟಿಯಾಗಿರುಲ್ಲವೋ, ಅವರನ್ನು ಈ ದೋಷಗಳು ಅಂಟಿಕೊಳ್ಳುತ್ತವೆ. ಈಗ ಪರಿಹಾರ ಹೇಳಿದೆನಲ್ಲ ಅದನ್ನು ಶಾಸ್ತ್ರೋಕ್ತವಾಗಿ ಮಾಡಿದರೆ ದೋಷ ಪರಿಹಾರವಾಗುತ್ತದೆ." ಎಂದರು.

ನನಗೆ ಮತ್ತೆ ಯೋಚನೆಗಿಟ್ಟುಕೊಂಡಿತು. ಇಂಥಾ ವಿಷಯಗಳಲ್ಲಿ ನಂಬಿಕೆಯೇ ಇಲ್ಲದ ನನ್ನ ಗಂಡನಿಂದ ಸರ್ಪಸಂಸ್ಕಾರ ಮಾಡಿಸುವು ದಾದರೂ ಹೇಗೆ. ಅವರನ್ನು ಒಪ್ಪಿಸುವುದು ಹೇಗೆ? ಎಂದುಕೊಂಡು ಅದೇ ಪ್ರಶ್ನೆಯನ್ನು ಕೇಳಿದೆ.

ಗಂಡಸರು, ಅದರಲ್ಲೂ ಮನೆಯ ಹಿರಿಯ ಗಂಡಸರು, ಈ ವಿಧಿ ಯನ್ನು ಮಾಡಬೇಕಾಗುತ್ತದೆ. ತಕ್ಷಣಕ್ಕೆ ಇನ್ನೊಂದು ಪರಿಹಾರವಿದೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ 'ಆಶ್ಲೇಷಬಲಿ' ಸೇವೆಯನ್ನು ಮಾಡಿಸಿ ತೀರ್ಥ ಸ್ನಾನವನ್ನು ಮಾಡಿಸಿ, ಅದರಿಂದಲೂ ತಾತ್ಕಾಲಿಕವಾಗಿ ದೋಷ ಪರಿಹಾರ ವಾಗುತ್ತದೆ" ಎಂದರು. ಕೈಮುಗಿದು ಅಪ್ಪಣೆ ಪಡೆದು ನಾವುಗಳು ಹೊರ

ಬಂದೆವು. ನನ್ನ ಮನಸ್ಸು ಕೆಟ್ಟಿತ್ತು.

ಅತ್ತಿತ್ತ ನೋಡುವಾಗ, ಸಮೀಪದಲ್ಲೇ ಒಂದು ದೊಡ್ಡ ಹುಲ್ಲಿನ ಛಾವಣಿಯ ಕೆಳಗೆ ಒಂದು ದೊಡ್ಡ ಆನೆಯನ್ನು ಸರಪಣಿಗಳಿಂದ ಕಟ್ಟಿ ಹಾಕಿದ್ದರು. ಆನೆ ಭುಸುಗುಟ್ಟುತ್ತಾ, ಸೊಂಡಿಲನ್ನು ಅತ್ತಿಂದಿತ್ತ ತೂಗಾಡುತ್ತಾ, ಪರದಾಡುತ್ತಾ ಇತ್ತು, ಅದರ ಮುಂದೆ, ಬಾಳೆ ಹಣ್ಣಿನ ಗೊನೆಗಳು ಬಿದ್ದಿದ್ದವು. ಆದರೆ ಅದು ತಿಂದಿರಲಿಲ್ಲ. ಅಲ್ಲಿ ಮಾವುತನೂ ಇದ್ದ. ಅವನನ್ನು ಕೇಳಿದೆವು.

"ಈ ಆನೇ ದೇವಸ್ಥಾನದ್ದು ತಾನೇ? ಯಾಕೆ ಹೀಗಾಡ್ತಿದೆ? ಬಾಳೆ ಹಣ್ಣುಗಳನ್ಯಾಕೆ ತಿಂದಿಲ್ಲ!"

" ಈ ಆನೆಗೆ ಬಾಳೆಹಣ್ಣುಗಳನ್ನು ಕಂಡರೆ ರೋಷ ಉಕ್ಕುತ್ತದೆ. ಅದಕ್ಕೆ ಹೀಗಾಡ್ತಿದೆ. ಭಕ್ತರು ಬೇಡವೆಂದರೂ ಆನೆಗೆ ಬಾಳೆಹಣ್ಣುಗಳನ್ನು ತಂದು ರಾಶಿ ರಾಶಿ ಹಾಕ್ತಾರೆ. ಇವು ತಿನ್ನುವುದಿಲ್ಲ."

"ನಮಗೆ ಅಚ್ಚರಿ ಎನಿಸಿತು. ಆನೆ ಶಾಕಾಹಾರಿ. ಅದಕ್ಕೆ ಬಾಳೆಹಣ್ಣುಗಳೆಂದರೆ ಪ್ರಿಯ. ಮೊದಲಾಗಿ ಇದು ದೇವಸ್ಥಾನದ ಆನೆ...." ನಮ್ಮ ಆಲೋಚನೆಯನ್ನು ಅರಿತವನಂತೆ ಅವನು ಮತ್ತೆ ನುಡಿದ.

ಈ ಆನೆ ಮರಿಯಾಗಿದ್ದಾಗ, ಕೆಲವು ವರ್ಷಗಳ ಹಿಂದೆ, ಯಾರೋ ಭಕ್ತನೊಬ್ಬ ಕೊಟ್ಟ ಬಾಳೆಹಣ್ಣಿನಲ್ಲಿ ಒಂದು ಸೂಜಿ ಸಿಕ್ಕಿಕೊಂಡಿತ್ತು. ತಿನ್ನುವಾಗ ಆ ಸೂಜಿ ಚುಚ್ಚಿ ಫಜೀತಿಯಾಗಿ ಬಹಳ ನೋವನ್ನು ಅನುಭವಿಸಿತ್ತು. ಪಶು ವೈದ್ಯಕೀಯ ಚಿಕಿತ್ಸೆಯಿಂದ ಎಲ್ಲಾ ಸರಿ ಹೋಯಿತು. ಆದರೆ ಅಂದಿನಿಂದ ಈ ಆನೆ ಬಾಳೆಹಣ್ಣುಗಳನ್ನು ತಿನ್ನುವುದನ್ನೇ ಬಿಟ್ಟು ಬಿಟ್ಟಿದೆ. ಬಾಳೆಹಣ್ಣುಗಳನ್ನು ಕಂಡರೆ ಕೋಪದಿಂದ ಹೀಗೆ ವರ್ತಿಸುತ್ತದೆ.

ಆನೆಯ ಬಗೆಗೆ ಅಯ್ಯೋ ಎನಿಸಿತು. ಬೃಹದಾಕಾರದ ಪ್ರಾಣಿ. ಒಂದು ಸೂಜಿಯ ಮೊನೆಯಿಂದ ಹಿಂಸೆಯನ್ನು ಅನುಭವಿಸಿ, ತನಗೆ ಪ್ರಿಯವಾದ ಹಣ್ಣುಗಳನ್ನು ತಿನ್ನುವುದನ್ನೇ ಬಿಟ್ಟಿದೆ ಎಂದರೆ?... ಆ ಕ್ಷಣದಲ್ಲಿ ನಾವುಗಳು ನಮ್ಮ ಆತಂಕವನ್ನು ಮರೆತಿದ್ದೆವು.

ಮಾರನೇ ದಿನ, ಬೆಳಿಗ್ಗೆ ಬೇಗ ಎದ್ದು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೊರಟೆವು. ಬಸ್ಸಿನಲ್ಲೇ ಬರಬೇಕಾಗಿದ್ದುದರಿಂದ ಸ್ವಲ್ಪ ತಡವೇ ಆಯಿತು. ತಲುಪಿದ ತಕ್ಷಣವೇ ಆಶ್ಲೇಷ ಬಲಿಯ ಸೇವೆಗೆ, ಹಾಗೇ ತೀರ್ಥಸ್ನಾನಕ್ಕೆ ಚೀಟಿಗಳನ್ನು ಬರೆಸಿದೆವು.

ಆಶ್ಲೇಷ ಬಲಿಯ ಪೂಜೆಯನ್ನು ಸಾಮೂಹಿಕವಾಗಿ ಮಾಡಿಸುತ್ತಿದ್ದುದರಿಂದ ಪೂಜೆ ಪ್ರಾರಂಭವಾಗಿತ್ತು. ನಾವುಗಳೂ ಸೇರಿಕೊಂಡೆವು. ಪೂಜೆಯ ನಂತರ, ಅದಕ್ಕೆ ಸಂಬಂಧಿಸಿದ ಪ್ರಸಾದವನ್ನು ತೆಗೆದುಕೊಂಡು ದೇವರ ದರ್ಶನವನ್ನು ಮಾಡಿ, ತೀರ್ಥಸ್ನಾನವನ್ನು ಮಾಡಿಸುವ ಸ್ಥಳಕ್ಕೆ ಬಂದೆವು.

ದೇವರ ಗರ್ಭಗುಡಿಯ ಎದುರಿಗಿರುವ ಮಹಾದ್ವಾರದ ಕಡೆ ನದಿಗೆ ಹೋಗಿ ಬರಲು ಮೆಟ್ಟಿಲುಗಳಿವೆ. ದೇವಸ್ಥಾನದ ಪ್ರಾಕಾರದಲ್ಲೇ ಒಂದು ಬಾವಿ ಇದೆ. ಕೊಡದಲ್ಲಿ ಬಾವಿಯ ನೀರನ್ನು ಸೇದಿ ತಂದು, ಸೇವಾರ್ಥಿಗಳ ಮೇಲೆ ಚುಮುಕಿಸುತ್ತಾರೆ. ನಾವು ಕಡೆಯಲ್ಲಿ ಸ್ವಲ್ಪ ತಡವಾಗಿ ಬಂದಿದರಿಂದ ಒಂದು ಕೊಡ ಪೂರ್ತಿ ತೀರ್ಥವನ್ನು ನನ್ನ ಮಗಳ ತಲೆಯ ಮೇಲೆ ಸ್ಲೋಕವನ್ನು ಹೇಳುತ್ತಾ ಸುರಿದರು. ಆ ಕಾರ್ಯಕ್ರಮ ಚೆನ್ನಾಗಿ ಜರುಗಿತು. ಅಲ್ಲಿಂದ ಮೂಲ ದೇವರನ್ನು ನೋಡಲೆಂದು ಬಂದೆವು. ಆನಂತರ ಅಲ್ಲಿಂದ ಭೋಜನ ಶಾಲೆಗೆ ಬಂದು ಮಹಾಪ್ರಸಾದವನ್ನು ಸ್ವೀಕರಿಸಿ, ವಾಪಸ್ಸು ಹೊರಟೆವು.

ಸಂಜೆಯಾಗಲು, ಇನ್ನೂ ಸಾಕಷ್ಟು ಸಮಯ ಉಳಿದಿತ್ತಾದ್ದರಿಂದ ಅಲ್ಲಿಂದ 'ಮಂಗಳಾದೇವಿ' ದೇವಸ್ಥಾನಕ್ಕೆ ಬಂದೆವು. ಇಲ್ಲಿಗೆ ಬರುವುದೇ ಮುಖ್ಯ ಉದ್ದೇಶವಾಗಿದ್ದಿತು. ನನ್ನ ವೈದ್ಯ ಸ್ನೇಹಿತೆ ಹೇಳಿದ್ದುದೇ ಮಂಗಳಾ ದೇವಿಯ ಸನ್ನಿಧಿಗೆ ಹೋಗಿ ಬನ್ನಿ ಎಂದು. ಆ ಉದ್ದೇಶವೂ ನೆರವೇರಿತು. ಅದ್ಭುತ ಎನಿಸಿತ್ತು. ಹೇಗೂ ಮನೆಯಿಂದ ಹೊರಟು, ಈ ಊರಿಗೆ ಬಂದುದಾಗಿದೆ. ಮುರುಡೇಶ್ವರ ಹತ್ತಿರವಾಗಿದ್ದರೆ, ಅಲ್ಲಿಗೆ ಹೋಗಿ ಬರಬೇಕೆಂದು ನನ್ನ ಮನಸ್ಸಿನಲ್ಲಿತ್ತು. ಎಲ್ಲಾ ಊರಿಗೂ ಬಸ್ಸಿನಲ್ಲಿ ಹೋಗಿ

ಬರಲು ಸಾಕಷ್ಟು ಸಮಯ ಹಿಡಿಯುತ್ತದೆ. ಅದರ ಬದಲು, ಒಂದು ಬಾಡಿಗೆ ಕಾರನ್ನು ಗೊತ್ತು ಮಾಡಿಕೊಂಡು ಇನ್ನೂ ಒಂದೆರಡು ಪುಣ್ಯ ಕ್ಷೇತ್ರಗಳಿಗೆ ಹೋಗಿ ಬರಬಹುದೆಂದು ನನಗೆ ಅನ್ನಿಸಿದ್ದನ್ನು ನನ್ನ ಶಿಷ್ಯೆಗೆ ಹೇಳಿ ಒಪ್ಪಿಸಿದ್ದೆ.

ಮಾರನೇ ಬೆಳಿಗ್ಗೆ ಬೇಗ ಎದ್ದು, ಬಾಡಿಗೆಯ ಕಾರು ಬರುವಷ್ಟರಲ್ಲಿ ಎಲ್ಲರೂ ಸ್ನಾನ ಮಾಡಿ, ತಿಂಡಿ ತಿಂದು ಸಿದ್ಧರಾಗಿದ್ದೆವು. ಅವರ ಮನೆಯಲ್ಲಿ ಬೆಳಗಾಗೆದ್ದ ಮೇಲೆ, ಮನೆ ಮಂದಿಯೆಲ್ಲಾ ಹೊಟ್ಟೆ ತುಂಬಾ ತಿಂಡಿ, ಹಾಗೂ ಟೀ, ನಂತರ ಎಲ್ಲರೂ ವರವರ ಕೆಲಸದ ಕಡೆಗೆ ಗಮನ ಕೊಡುತ್ತಿದ್ದರು. ಆ ದಿನ ಶುಕ್ರವಾರವಾಗಿತ್ತು. ಮೊದಲು ಕೊಲ್ಲೂರಿಗೆ ಹೋಗಿ ಬರುವುದೆಂದು ನಿರ್ಧರಿಸಿದೆವು. ಅಂತೆಯೇ ಕೊಲ್ಲೂರನ್ನು ತಲುಪಿದೆವು.

ಕೊಲ್ಲೂರಿನ ಮುಕಾಂಬೆಗೆ ಮುಖ್ಯವಾದ ಸೇವೆ ಎಂದರೆ ದೀಪಗಳನ್ನು ಬೆಳಗಿಸುವುದು. ಅಂತೆಯೇ ದೀಪಗಳನ್ನು ಹಚ್ಚಿ, ಪ್ರಸಾದಗಳನ್ನು ಸ್ವೀಕರಿಸಿ ಅಲ್ಲಿಂದ ಹೊರಟೆವು. ಅಲ್ಲಿಂದ ಮೊದಲು ಉಡುಪಿಗೆ ಹೋಗುವುದೋ, ಮುರುಡೇಶ್ವರಕ್ಕೆಹೋಗುವುದೋ ಎಂಬ ಜಿಜ್ಞಾಸೆಯಲ್ಲಿದ್ದಾಗ, ಮಧ್ಯ ದಾರಿಯಲ್ಲಿ ಕಾರು ಕೆಟ್ಟು ನಿಂತಿತ್ತು. ಕಾರು ತಕ್ಷಣಕ್ಕೆ ರಿಪೇರಿಯಾಗು ವುದಿಲ್ಲವೆಂದು, ತಡವಾಗಿ ಬಂದ ಮೆಕಾನಿಕ್ ಹೇಳಿದಾಗ, ದಾರಿ ತಪ್ಪಿ ದಂತಾಗಿತ್ತು. ಆಗ ಬಸ್ಸಿಗೆ ಕಾಯುತ್ತಾ ನಿಂತೆವು. ಬಂದ ಬಂದ ಬಸ್ಸಿಗೆ ಕೈ ಮಾಡಿದರೂ ತಕ್ಷಣಕ್ಕೆ ಬಸ್ಸು ಸಿಗಲಿಲ್ಲ. ಅಲ್ಲಿಯ ಬಸ್ಸುಗಳ ಪರಿಚಯ ನನಗೆ ಇರಲೇ ಇಲ್ಲ. ಸತತ ಪ್ರಯತ್ನದ ನಂತರ ಒಂದು ಬಸ್ಸು ನಿಂತಿತು. ಕಾರಿನ ಡ್ರೈವರಿನ ಹೊರತಾಗಿ ಉಳಿದವರೆಲ್ಲರೂ ಹತ್ತಿದೆವು. ಆ ನಂತರ ಇಳಿದದ್ದು ಸಾಲಿಗ್ರಾಮ ಎಂಬ ಊರಿನಲ್ಲಿ.... ಅಲ್ಲಿನ ಗುರು ನರಸಿಂಹ ದೇವಾಲಯ ಪ್ರಸಿದ್ಧವಾದದ್ದು. ಆ ದಿನ ಆ ದೇವಸ್ಥಾನದ ಬ್ರಹ್ಮ ಗೋಪುರದ ಕಲಶೋತ್ಸವ ನಡೆಯುತ್ತಿತ್ತು. ನಾವು ಹೋಗಿ ತಲುಪುವ ಹೊತ್ತಿಗೆ ಎಲ್ಲಾ ಕಾರ್ಯಕ್ರಮಗಳೂ ಮುಗಿದು, ಗರ್ಭಗುಡಿಯ ಬಾಗಿಲನ್ನೂ

ಸಹಾ ಹಾಕಿ ಬಿಟ್ಟಿದ್ದರು. ಆದರೆ ಮಹಾ ಪ್ರಸಾದದ ಭೋಜನಕಡೇ ಪಂಕ್ತಿಯ ಊಟಕ್ಕೆ ಎಲೆಗಳನ್ನು ಹಾಕಿದ್ದರು. ಯಾರೋ ಬಂದು ನಮ್ಮನ್ನು ಭೋಜನ ಶಾಲೆಗೆ ಕರೆದೊಯ್ದರು. ಆ ದಿನ ಕೊಂಕಣಿ ಬ್ರಾಹ್ಮಣರ ಸೇವಾ ಕೈಂಕರ್ಯವಿತ್ತು. ಭೂರಿ ಭೋಜನ ಬಹಳ ಭಾರಿಯಾಗಿತ್ತು. ದೇವಾಲಯಗಳಲ್ಲಿ ನಿತ್ಯ ನಡೆಯುವ ಸಮಾರಾಧನೆಯ ಊಟವೇ ಸೊಗಸಾಗಿರುತ್ತದೆ. ಈ ದಿನದ ಭೋಜನ ಬಹಳ ಸೊಗಸಾಗಿತ್ತು. ಬಗೆ ಬಗೆಯ ಸಿಹಿ ಭಕ್ಷ್ಯಗಳು ರುಚಿಯಾಗಿತ್ತು. ಊಟ ಮುಗಿಸಿ ಎದ್ದಾಗ ಮಧ್ಯಾಹ್ನ ಮೂರುವರೆ, ನಾಲ್ಕು ಗಂಟೆಯ ಸಮಯ. ಅಲ್ಲಿಯ ಸಿಬ್ಬಂದಿಗಳು ನಮ್ಮಗಳಿಗಾಗಿ, ದೇವಸ್ಥಾನದ ಗರ್ಭಗುಡಿ ಬಾಗಿಲನ್ನು ತೆರೆದು, ದೇವರ ದರ್ಶನ ಮಾಡಿಸಿದರು. ಎಂತಹಾ ಸುದಿನ! ಮೊದಲಿಗೆ ರುಚಿಕರವಾದ ಮಹಾಭೋಜನ! ನಂತರ ಗುರು ನರಸಿಂಹನ ದಿವ್ಯ ದರ್ಶನ!! ಅಲ್ಲಿಂದ ಉಡುಪಿಗೆ ಹೋಗಲು ಸಮಯ ಸಾಕಾಗುತ್ತಿರಲಿಲ್ಲ ವಾದ್ದರಿಂದ, ಬಸ್ಸು ಹಿಡಿದು, ಸಮೀಪದಲ್ಲಿದ್ದ ಪಣಂಬೂರು ಬೀಚಿಗೆ ಬಂದೆವು. ಆಗ ಸಮಯ ಐದು ಐದೂವರೆಯಾಗಿತ್ತು, ಬಿಸಿಲು ಕಡಿಮೆ ಯಾಗಿತ್ತು. ಸೂರ್ಯ ಕೆಂಪು ಬಣ್ಣಕ್ಕೆ ತಿರುಗುತ್ತಿದ್ದ. ಆ ದೃಶ್ಯ ಮನ ಮೋಹಕ. ಸಮುದ್ರದ ನೀರಿನ ಮೇಲ್ಮೈಯೆಲ್ಲಾ ಕೆಂಬಣ್ಣದ ಓಕುಳಿಯಂತೆ ಕಾಣುತ್ತಿತ್ತು. ಅಲೆಗಳ ಭೋರ್ಗರೆತ ಮನಸ್ಸನ್ನು ಅರಳಿಸುತ್ತಿತ್ತು. ಅಲೆಗಳೊಂದಿಗೆ ಕಲೆತು ಆಡುವಾಗ, ಆ ಜಾಗವನ್ನು ಬಿಟ್ಟು ಬರುವ ಮನಸ್ಸೇ ಆಗುತ್ತಿರಲಿಲ್ಲ. ನೋಟ ಹರಿಯುವವರೆಗೂ, ಸಮುದ್ರದ ಜಲವೆಲ್ಲಾ ಕೆಂಪು ಕೆಂಪಾಗಿರು ವಾಗ ಆ ಜಲದ ಮಧ್ಯೆ ಸೂರ್ಯ ಇಳಿದು ಹೋಗಲು ಸನ್ನದ್ಧನಾಗಿದ್ದ. ನೋಡ ನೋಡುತ್ತಿದ್ದಂತೆಯೇ ಅಗಾಧವಾದ ನೀರಿನಲ್ಲಿ ಮುಳುಗಿ ಹೋದ ಸೂರ್ಯನ ಬಿಂಬವನ್ನು ಕಣ್ಣಿನಲ್ಲಿ ತುಂಬಿಕೊಳ್ಳುತ್ತಾ, ಮನಸ್ಸಿಲ್ಲದ ಮನಸ್ಸಿನಲ್ಲಿ ಅಲ್ಲಿಂದ ಹೊರಟೆವು.

ಮನೆಗೆ ವಾಪಾಸ್ಸಾದಾಗ, ನನ್ನ ಶಿಷ್ಯೆಯ ಅತ್ತಿಗೆ, ಕರಿದ ಹಲಸಿನ ಚಿಪ್ಸನ್ನು, ಕಾಫಿಯನ್ನು ತಂದಿತ್ತರು. ಆ ಗರಿಗರಿ ಚಿಪ್ಸನ್ನು ತಿನ್ನುವಾಗ, ಆ

ದಿನ ನಡೆದದ್ದೆಲ್ಲಾ ಮೆಲುಕು ಹಾಕಿದೆ. ಹೋಗಬೇಕೆಂದು ಆಸೆ ಇದ್ದದ್ದು ಮುರುಡೇಶ್ವರಕ್ಕೆ.... ಆದರೆ, ಹೋಗಿದ್ದು ಸಾಲಿಗ್ರಾಮದ ಗುರುನರಸಿಂಹನ ಸನ್ನಿಧಿಗೆ, ನಂತರ ಅರಬ್ಬೀ ಸಮುದ್ರದ ತಡಿಗೆ. ಉಡುಪಿಗೆ ಹೋಗಲಾಗಲಿಲ್ಲ ಅಂತ ಅನ್ನಿಸಿದರೂ, ಯಾವ ಕೊರತೆಯೂ, ಬೇಸರವೂ ಆಗಿರಲಿಲ್ಲ. ಕಾರು ಕೈ ಕೊಡದೇ ಇದ್ದಿದ್ದರೆ, ಮುರುಡೇಶ್ವರಕ್ಕೆ ಹೋಗಿರುತ್ತಿದ್ದೆವೋ ಏನೋ? ಆದರೆ ನಾವು ಅಂದುಕೊಂಡದ್ದೇ ಬೇರೆ. ನಡೆದದ್ದೇ ಬೇರೆ. ಇದು ದೇವರ ಆಟ!

ಆ ರಾತ್ರಿ ಕಳೆಯಿತು. ಬೆಳಿಗ್ಗೆ ಅಲ್ಲಿಂದ, ನಾನು ನನ್ನ ಮಗಳು ಶಿವಮೊಗ್ಗಕ್ಕೆ ಹೊರಟೆವು. ನನ್ನ ಶಿಷ್ಯೆ ಬೆಂಗಳೂರಿನ ಬಸ್ಸನ್ನು ಹತ್ತಿದಳು. ಸುಮಾರು ಆರು ಗಂಟೆಯ ಪ್ರಯಾಣದ ನಂತರ, ಶಿವಮೊಗ್ಗವನ್ನು ತಲುಪುವ ಹೊತ್ತಿಗೆ ನನಗೆ ನೆಗಡಿ, ಜ್ವರ ಕಾಡಿತ್ತು. ಎರಡು ದಿನ ನನ್ನ ಅಕ್ಕನ ಮನೆಯಲ್ಲಿ ವಿಶ್ರಾಂತಿ ತೆಗೆದುಕೊಂಡೆ. ನನ್ನ ಅಕ್ಕನ ಹತ್ತಿರ ಮಾತಾಡಿ, ದೊಡ್ಡಾಸ್ಪತ್ರೆಯ ಕಾಂಪೌಂಡ್‌ನಲ್ಲಿದ್ದ ಶ್ರೀ ಚೌಡೇಶ್ವರಿ ದೇವಾಲಯದ ಬಗ್ಗೆ ತಿಳಿದುಕೊಂಡೆ. ನನ್ನ ಮಗಳು ಮೆಗ್ಗಾನ್ ಆಸ್ಪತ್ರೆಯಲ್ಲಿ ಹುಟ್ಟಿದಾಗ ಅಲ್ಲಿ ಯಾವ ದೇವಸ್ಥಾನವೂ ಇರಲಿಲ್ಲ. ಆದರೆ ಅಲ್ಲಿ ಈಗ ಒಂದು ಶ್ರೀ ಚೌಡೇಶ್ವರಿಯ ದೇವಸ್ಥಾನವನ್ನು ಕಟ್ಟಿದ್ದರು. ಅಲ್ಲಿಗೆ ಹೋಗಿ ಹಣ್ಣು ಕಾಯಿ ಒಡೆಸಿ, ನನ್ನ ಮಗಳ ನಾಗದೋಷ ಪರಿಹಾರವಾಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿದೆ.

ಎರಡು ದಿನಗಳ ನಂತರ, ಶಿವಮೊಗ್ಗದಿಂದ ಬೆಂಗಳೂರಿಗೆ ಹೊರಟೆವು. ಬಸ್ಸಿನಲ್ಲಿ ಕುಳಿತುಕೊಳ್ಳುವರೆಗೂ, ನಾನು ಆ ಯಾತ್ರಾ ಲೋಕದಲ್ಲಿಯೇ ಇದ್ದೆ. ಬಸ್ಸು ಬೆಂಗಳೂರಿನ ದಾರಿಯನ್ನು ಹಿಡಿದು ಓಡುವಾಗ, ನಾನು ಆ ಲೋಕದಿಂದ ಈ ವಾಸ್ತವ ಲೋಕಕ್ಕೆ ಬಂದೆ. ಮುಂದೆ ನನ್ನ ಗಂಡನನ್ನು ಒಪ್ಪಿಸಿ, ಸರ್ಪ ಸಂಸ್ಕಾರ ಮಾಡಿಸುವುದೇ ಒಂದು ಯಾಗ ಮಾಡಿದಷ್ಟು ಪರಿಶ್ರಮದ ಕೆಲಸ ಎಂದು ನನಗೆ ಚಿಂತೆ ಯಾಗಲಾರಂಭಿಸಿತು. ಹೇಗೆ ಮಾತನ್ನು ಪ್ರಾರಂಭಿಸಬೇಕು. ಯಾವ

ಉಪಾಯವನ್ನು ಹುಡುಕಬೇಕು. ಒಪ್ಪುವರೊ ಇಲ್ಲವೋ, ಒಪ್ಪದಿದ್ದರೆ ಏನು ಮಾಡಬೇಕು. ನನ್ನ ಮಗಳಿಗೆ ಏನು ಸಮಾಧಾನ ಹೇಳಬೇಕು... ಎಲ್ಲಕ್ಕಿಂತ ಮೊದಲು, ನನ್ನ ವೈದ್ಯ ಸ್ನೇಹಿತೆಗೆ, ನಾವು ಯಾತ್ರೆ ಹೋಗಿ ಬಂದ ವಿಷಯವನ್ನು ತಿಳಿಸಬೇಕು. ಕ್ಷೇಮವಾಗಿ ಹೋಗಿ ಬಂದದ್ದಕ್ಕೆ ನನ್ನ ಶಿಷ್ಯೆಗೆ ಧನ್ಯವಾದಗಳನ್ನು ತಿಳಿಸಬೇಕು. ... ಹೀಗೆ ಒಂದಾದ ನಂತರ ಇನ್ನೊಂದು ಆಲೋಚನೆಗಳ ಮಾರ್ಗದಲ್ಲಿ ಬಸ್ಸು, ಬೆಂಗಳೂರಿನ ದಾರಿಯನ್ನು ಸವೆಸುತ್ತಿತ್ತು.

* * * *

೧೧. ಸರ್ಪ ಸಂಸ್ಕಾರ ಭಾಗ - ೨

ಒಂದು ವಾರದ ನಂತರ, ವಾಪಸ್ಸು ಮನೆಗೆ ಬಂದು ಸೇರಿದರೂ, ನನ್ನ ಗಂಡನ ಕೋಪ ಕಡಿಮೆಯಾಗಿರಲಿಲ್ಲ. ಎಲ್ಲೆಲ್ಲಿ ಹೋಗಿದ್ದಿರಿ? ಪ್ರಯಾಣ ಹೇಗಿತ್ತು ಅಂತ ಸೌಜನ್ಯದ ಮಾತುಗಳಲ್ಲಿ ಈ ಮುಂಚೆಯ ಎಂದೂ ವಿಚಾರಿಸಿದವರಲ್ಲ. ಹಾಗಾಗಿ ನನಗೆ ಏನೂ ಅನ್ನಿಸಲಿಲ್ಲ. ಮೌನವಾಗಿರುವುದೇ ಒಳ್ಳೆಯದು ಅಂತ ಅನ್ನಿಸಿತ್ತು. ಅಲ್ಲದೇ, ಬಾವಿಯ ನೀರನ್ನು ಕುಡಿದೋ ಅಥವಾ, ಹವಾ ಬದಲಾವಣೆಯೋ ನನ್ನ ಧ್ವನಿ ಹೂತು ಹೋಗಿತ್ತು. ನನ್ನ ಮಗಳ ಪಾಡೂ ಇದೇ ಆಗಿತ್ತು. ಆದರೆ ಅವಳು ಸುಮ್ಮನಿರಲಿಲ್ಲ, "ನಿಮ್ಮ ತಂದೆ ಮಾಡಿದ ಪಾಪದಿಂದಾಗಿ ನಾನು ಹಿಂಸೆ ಅನುಭವಿಸಬೇಕಾಗಿದೆ. ನೀವು ಸರ್ಪಸಂಸ್ಕಾರ ಮಾಡಲೇ ಬೇಕು. ಇಲ್ಲದಿದ್ದರೆ, ನನಗಿರುವ ದೋಷ ಪರಿಹಾರವಾಗುವುದಿಲ್ಲವೆಂದು ಕೂಗಾಡಿದಳು.

ಏನ್ಹೇಳ್ತಿದಾಳೆ ಇವಳು? ನಾನ್ಯಾಕೆ ಇದನ್ನೆಲ್ಲಾ ಮಾಡ್ಬೇಕು? ಎಲ್ಲೆಲ್ಲೋ ಹೋಗಿ, ಯಾರ್‍ಯಾರೋ ಏನೇನೋ ಹೇಳ್ತಾರೆಅದನ್ನೆಲ್ಲಾ ನಾನು ಮಾಡುಕ್ಕಾಗುಲ್ಲ ನನಗೆ ಇದರಲ್ಲೆಲ್ಲಾ ನಂಬಿಕೆ ಇಲ್ಲ. ಅಂತ ಭುಸುಗುಟ್ಟಿದರು. ನಿಜಕ್ಕೂ ಮಧ್ಯದಲ್ಲಿ ಸಿಕ್ಕಿ ಬಿದ್ದಿದ್ದವಳು ನಾನು. ಇವರನ್ನು ಒಪ್ಪಿಸಲಾರೆ. ಇವಳಿಗೆ ಸಮಾಧಾನ ಹೇಳಲಾರೆ. ನಾನು ಮತ್ತೆ ದೇವರ ಮೊರೆ ಹೋಗ ಬೇಕಾಯಿತು. ಕುಕ್ಕೆ ಸುಬ್ರಹ್ಮಣ್ಯದ ಆಡಳಿತಾಧಿಕಾರಿಗೆ ಒಂದು ಪತ್ರವನ್ನು ಬರೆದು, ಸಮಸ್ಯೆಯನ್ನು ತಿಳಿಸಿ ಉಪಾಯವನ್ನು ಕೇಳಿದೆ. ಪ್ರಾರ್ಥನಾ

ಸೇವೆಗೆ ಅಲ್ಲಿಗೇ ಹೋಗಿ, ಚೀಟಿ ಬರೆಸಿ, ಪ್ರಾರ್ಥಿಸಬೇಕೆಂದು ತಿಳಿಸಿದರು. ಅದು ತಕ್ಷಣಕ್ಕೆ ಸಾಧ್ಯವಿಲ್ಲದ ಕೆಲಸವಲ್ಲವೆಂದು ತಿಳಿದಿತ್ತು.

ಮತ್ತೆ ಮತ್ತೆ ಇದರ ಬಗೆಯೇ ಮನೆಯಲ್ಲಿ ಮಾತುಕತೆಗಳು ಚರ್ಚೆಗಳು ನಡೆದವು. ಒಂದು ದಿನ ಬೇಸತ್ತು ಇವರು ನುಡಿದರು. ಕುಕ್ಕೆ ಸುಬ್ರಹ್ಮಣ್ಯದ ತನಕ ನಾಲ್ಕು ನಾಲ್ಕು ದಿನಕ್ಕೊಸ್ಕರ ಹೋಗಿ ಬರುವ ಮಾತಿಲ್ಲ. ಇಲ್ಲೇ ಯಾರಾದರೂ ಮಾಡಿಸುವುದಾದರೆ ನೋಡೋಣ" ಇಷ್ಟು ಮಾತು ಇವರಿಂದ ಹೊರಬಂದಿತ್ತು. ಅಷ್ಟೇ ಸಾಕು ಎಂಬಂತೆ ನಾನು, ಹಾರೋ ಹಳ್ಳಿಯ, ಉಮಾಮಹೇಶ್ವರನ ದೇವಸ್ಥಾನದ ಅರ್ಚಕರೊಡನೆ ಮಾತಾಡಿದೆ. ನಮ್ಮವರಿಗೂ ಇವರ ಬಗ್ಗೆ ವಿಶ್ವಾಸ. ಆತನ ಪಾಂಡಿತ್ಯದ ಮೇಲೆ ಅಪಾರ ಗೌರವ. ಅವರು ತಾವು ಸರ್ಪಸಂಸ್ಕಾರದಿಂದ ಮಾಡಿಸುವುದಾಗಿ ಹೇಳಿದರು. ಅಲ್ಲಿಗೆ ಒಂದು ಮಾತು ಪಕ್ಕಾ ಆಗಿತ್ತು. ಅಂತೂ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದಾಗಿತ್ತು. ಆನಂತರ ಮಾಡುವ ಕ್ರಮ, 'ಖರ್ಚುವೆಚ್ಚದ ಬಗ್ಗೆ ಮಾತಾಡಿ, ಒಂದು ದಿನವನ್ನೂ ಸಹ ಗೊತ್ತು ಮಾಡಿಕೊಟ್ಟರು. ಎರಡನೇ ಹೆಜ್ಜೆಯೂ ಸರಿದಿತ್ತು. ನನ್ನ ಮಗಳಿಗೆ ಸ್ವಲ್ಪ ಮಟ್ಟಿಗೆ ಸಮಾಧಾನವಾಗಿತ್ತು. ಈ ಸಮಯದಲ್ಲಿ ನನಗೆ ಒಂದು ಸಂಶಯ ಕಾಡಿತ್ತು. ಸರ್ಪ ಸಂಸ್ಕಾರವನ್ನು ಕುಟುಂಬದ ಹಿರಿಯ ವ್ಯಕ್ತಿ ಮಾಡಬೇಕು ಎಂಬುದು. ಇವರ ಅಣ್ಣ ಅಮೆರಿಕಾದಲ್ಲಿದ್ದರು. ಅವರನ್ನು ಈ ಕೆಲಸಕ್ಕಾಗಿ ಕರೆಸುವುದು ಸಾಧ್ಯವಿರಲಿಲ್ಲ. ಅಲ್ಲದೇ ಅವರ ಆರೋಗ್ಯವೂ ಸಮರ್ಪಕ ವಾಗಿರಲಿಲ್ಲ. ಅರ್ಚಕರನ್ನು ಈ ಬಗ್ಗೆ ವಿಚಾರಿಸಿದಾಗ, ಅವರು ಆ ಬಗ್ಗೆ ಯಾವ ಅನುಮಾನವನ್ನೂ ಪ್ರಕಟಿಸಲಿಲ್ಲ. "ಅದೇನೂ ತೊಂದರೆ ಇಲ್ಲ. ಅಣ್ಣ ತಮ್ಮಂದಿರು ಒಟ್ಟಿಗೆ ಏನೂ ವಾಸ ಮಾಡುತ್ತಿಲ್ಲವಲ್ಲ. ಏನೂ ಪರವಾಗಿಲ್ಲ" ಎಂದರು.

ಇದೇ ಸಮಯದಲ್ಲಿ ನನ್ನ ನಾದಿನಿ ಅಮೆರಿಕಾದಿಂದ ಬಂದಿದ್ದಳು. ಅಮೆರಿಕಾದಲ್ಲಿದ್ದ ಇವರ ಅಣ್ಣನಿಗೆ ಆರೋಗ್ಯ ಸರಿಯಿಲ್ಲ. ಆಪರೇಷನ್ ಆಗಲಿದೆ ಎಂದು ತಿಳಿಸಿದಳು. ಅವಳಿಗೆ ಈ ವಿಧಿ ವಿಧಾನಗಳ ಬಗ್ಗೆ

ಅರ್ಧ ನಂಬಿಕೆ, ಭಯ, ಆತಂಕ, ಚಡಪಡಿಕೆ.

ಮೊದಲ ದಿನ ಸರ್ಪಸಂಸ್ಕಾರದ ವಿಧಿ. ಬೆಳಿಗ್ಗೆ ಬೇಗನೇ ಎದ್ದು ಹೋಗಿದ್ದ, ನಮ್ಮವರು. ಮಧ್ಯಾಹ್ನವಾದರೂ ಮನೆಗೆ ಬಂದಿರಲಿಲ್ಲ. ನಾದಿನಿಯ ಚಡಪಡಿಕೆ ನೋಡಲಾರದೆ ಮತ್ತೆ ಮತ್ತೆ ಅವರ ಮನೆಗೆ ಫೋನು ಮಾಡಿದಾಗ, ಅವರು ಅಲ್ಲಿಯೇ ಊಟ ಮಾಡಿಕೊಂಡು ಬರುತ್ತಾರೆಂದು ಹೇಳಿದರು.

"ಮೂರುದಿನ ಅಶೌಚವಿರಬೇಕು. ಅಂದರೆ ನಾವೇ ಅಡಿಗೆ ಮಾಡುವಂತಿಲ್ಲ" ಎಂದು ತಿಳಿಸಿದ್ದರಿಂದ ನಮ್ಮ ಪರಿಚಯದ, ಬ್ರಾಹ್ಮಣರ ಮನೆಯಿಂದ ತಿಂಡಿಗೆ ಊಟಕ್ಕೆ ವ್ಯವಸ್ಥೆ ಮಾಡಿದ್ದೆವು. ಅವರು ಮನೆಗೇ ತಂದು ಕೊಡುತ್ತಿದ್ದರು. ಅಪರೂಪಕ್ಕೆ ಮನೆಗೆ ಬಂದಿದ್ದ ನಾದಿನಿಗೆ, ಬೇಕು ಬೇಕಾದ, ಅಡಿಗೆ ತಿಂಡಿಗಳನ್ನು ಮಾಡುವುದಕ್ಕಾಗಿರಲಿಲ್ಲ. ಅವಳು ತನ್ನ ಇನ್ನೊಬ್ಬ ಅತ್ತಿಗೆಯ ಮನೆಗೆ ಹೊರಟು ಹೋಗಿದ್ದಳು.

ಮೂರು ದಿನಗಳ ಅಶೌಚದ ನಂತರ ಶುಭಸ್ನಾನ ಮಾಡಿ, "ಸರ್ಪ ಶಾಂತಿ ಹೋಮವನ್ನು ಮಾಡಬೇಕೆಂದು ತಿಳಿಸಿದ್ದರು. ಆದರೆ ಈ ಮೊದಲೇ ಆತಂಕ ಪಟ್ಟಂತೆ, ಮಾರನೇ ದಿನ, ನನ್ನ ಭಾವನವರು ತೀರಿ ಹೋದರೆಂಬ ವರ್ತಮಾನ ಬಂದಿತು. ಆಪರೇಷನ್ ನಡೆದ ಮಾರನೇ ದಿನ ಅವರು ತೀರಿ ಹೋಗಿದ್ದರು. ನಮಗೆ ಹತ್ತು ದಿನದ ಸೂತಕ ಬಂದಿತ್ತು. ಸರ್ಪ ಸಂಸ್ಕಾರದ ನಂತರ ಮಾಡಬೇಕಾದ ಸರ್ಪಶಾಂತಿ ಹೋಮಕ್ಕೆ ಅಡ್ಡಿ ಒದಗಿತ್ತು.

ಆ ದಿನ ಅಲ್ಲಿ ಒಂದು ಅಚ್ಚರಿ ಸಂಗತಿ ನಡೆದಿತ್ತೆಂದು ನನ್ನ ನಾದಿನಿಗೆ ತಿಳಿಯಿತು. ಅಮೆರಿಕಾದಲ್ಲಿ ತೀರಿ ಹೋದ ಅಣ್ಣನ ಅಳಿಯ, ಅಂತ್ಯ ಸಂಸ್ಕಾರ ಮಾಡಿದ. ಆ ಸಂಬಂಧ ಅಲ್ಲಿಯ ದೇವಸ್ಥಾನದ ಅರ್ಚಕರೊಬ್ಬರನ್ನು ಕೇಳಲು ಹೋದಾಗ, ಮೊದಲಿಗೆ ಆತ, ಒಪ್ಪಿರಲಿಲ್ಲವಂತೆ. ಆದರೆ ಆ ದೇವಸ್ಥಾನದಲ್ಲಿ ಅಪರೂಪದ ಘಟನೆ ನಡೆಯಿತಂತೆ. ಅದೇನೆಂದರೆ, ಆ ದೇವಸ್ಥಾನ ಪ್ರಾರಂಭವಾದಾಗಿನಿಂದ, ಎಂದೂ ಕಾಣಿಸಿ

ಕೊಂಡಿರದ, ಸರ್ಪವೊಂದು, ಗರ್ಭಗುಡಿಯಿಂದ ಹೊರಬಂದಾಗ ಅರ್ಚಕರಿಗೆ ದರ್ಶನ ಕೊಟ್ಟಿತಂತೆ. ಆ ನಂತರ ಅರ್ಚಕರು ಅಂತ್ಯ ಸಂಸ್ಕಾರ ಮಾಡಿಸಲು ಒಪ್ಪಿಕೊಂಡರಂತೆ. ಇದು ನಂಬಲಸಾಧ್ಯವಾದ ವಿಷಯ ಅನ್ನಿಸಿದ್ದರೂ, ನಡೆದದ್ದು ನಿಜ. ಇಲ್ಲಿ ನಮ್ಮವರು ಸರ್ಪ ಸಂಸ್ಕಾರ ಮಾಡಿದರು. ಅಮೆರಿಕಾದ ದೇವಸ್ಥಾನದಲ್ಲಿ ಸರ್ಪ ಕಾಣಿಸ ಕೊಂಡಿತೆಂದರೆ? ಒಂದಕ್ಕೊಂದು ಏನು ಸಂಬಂಧ ಅಂತ ಊಹಿಸುವುದೂ ಅಸಾಧ್ಯ. ಆದರೆ ಯಾಕೆ ಹಾಗಾಯಿತು ಎನ್ನುವುದು ಅರ್ಥವಾಗದ ಒಗಟು.

ಆ ನಂತರ ಒಂದು ಪಕ್ಷ ಕಳೆದ ಮೇಲೆ, ಹದಿನೆಂಟನೆಯ ದಿನ, ಸರ್ಪ ಶಾಂತಿಯ ಹೋಮವನ್ನು ಮಾಡಿಸಿದರು. ಎಲ್ಲಾ ವ್ಯವಸ್ಥೆಯೂ ಅರ್ಚಕರದ್ದೇ. ನಾವು ಬೇರೆ ಯಾರಿಗೂ ಈ ವಿಷಯಗಳನ್ನು ತಿಳಿಸಿರಲಿಲ್ಲ. ನನ್ನ ಮಗಳ ನಾಗದೋಷದ ಪರಿಹಾರಕ್ಕೆಂದು ಸರ್ಪ ಸಂಸ್ಕಾರದ ವಿಧಿಯನ್ನು ನನ್ನ ಗಂಡನನ್ನು ಒಪ್ಪಿಸಿ, ನೇರವೇರಿಸಿದರೂ, ಪೂರ್ತಿ ಸಮಾಧಾನಾಗಿರಲಿಲ್ಲ. ಮಧ್ಯದಲ್ಲಿ ಹೀಗ್ಯಾಕೆ ಅಡ್ಡಿ ಬಂತು? ನಮ್ಮವರ ಅಣ್ಣ ಯಾಕೆ ತೀರಿ ಹೋದರು! ಆಕಸ್ಮಿಕವಾಗಿ ಅಮೆರಿಕಾದಲ್ಲಿ ಅದೇ ದಿನ ಕಂಡ ಸರ್ಪದ ಸಂಕೇತವೇನು? ಒಂದೂ ತರ್ಕಕ್ಕೆ ನಿಲುಕದ್ದು. ಇವೆಲ್ಲ ನಡೆದು ವಾರಗಳೇ ಕಳೆದಿದ್ದವು. ಆದರೂ ಮನಸ್ಸು ಈ ಘಟನೆಯ ಸುತ್ತ ಮುತ್ತವೇ ಸುತ್ತುತ್ತಿತ್ತು.

ಏಳು ಹೆಡೆಯ ಅಗಲದಷ್ಟು ಒಂದು ದಪ್ಪ ಹೆಡೆಯ ದಪ್ಪನೆಯ ಹಾವೊಂದು, ಪಕ್ಕದ ಓಣಿಯಲ್ಲಿದ್ದ ಮರದ ಕಾಂಡದ ಬುಡದಲ್ಲಿ ಕಣ್ಣಿಗೆ ಬಿತ್ತು. ನೋಡು ನೋಡುತ್ತಿದ್ದಂತೆಯೇ ಆ ಭಾರಿ ಹಾವು, ಪಕ್ಕದ ಕಾಂಪೌಂಡ್ ನೊಳಕ್ಕೆ ಇಳಿಯಿತು. ಇಳಿದ ಹಾವು ಅವರ ಮನೆಯ ಕಾರಿನ ಶೆಡ್ ಬಳಿ ತನ್ನ ರೂಪವನ್ನು ಬದಲಾಯಿಸಿಕೊಳ್ಳುತ್ತದೆ. ಒಂದು ಚಿಕ್ಕ ಹುಡುಗಿಯಾಗಿ ಚೀಟಿ ಬಟ್ಟೆಯ ಲಂಗ ರವಿಕೆಯನ್ನು ಧರಿಸಿ, ಎರಡು ಜಡೆಗಳನ್ನು ಹೆಣೆದುಕೊಂಡು, ಬಣ್ಣದ ರಿಬ್ಬನ್‌ಗಳನ್ನು ಕಟ್ಟಿಕೊಂಡು,

ನೋಡು ನೋಡುತ್ತಿದ್ದಂತೆ ಹಾಗೇ ಮಾಯವಾಗಿ ಬಿಡುತ್ತದೆ. ಕನಸು ಎಷ್ಟರ ಮಟ್ಟಿಗೆ ಸ್ಪಷ್ಟವಾಗಿರುತ್ತದೆ ಎಂದರೆ, ನಿಜವಾಗಿಯೂ ಇಂಥ ಚಮತ್ಕಾರವನ್ನು ಕಣ್ಣಾರೆ ಕಾಣುತ್ತಿದ್ದೇನೆ ಎಂಬಂತೆ. ಎಚ್ಚರವಾದರೂ ಕನಸ್ಸಿನಲ್ಲಿ ಕಂಡ ಆ ಚಿತ್ರಣವನ್ನು ಮರೆಯಲಾಗಲಿಲ್ಲ.

ಸರ್ಪದೋಷ, ಸರ್ಪಸಂಸ್ಕಾರ ಇದರ ಗುಂಗಿನಲ್ಲಿಯೇ ಇದ್ದೆನಾದ್ದರಿಂದ ಅಂತಹ ಕನಸು ಬಿದ್ದಿರಬಹುದೆಂದುಕೊಂಡೆ. ಆದರೂ ಕನಸು ಒಂದು ತರಹ ಎಂದಿಗೂ ಮರೆಯುವಂಥದ್ದು.

ಸರ್ಪ ಸಂಸ್ಕಾರದ ವಿಧಿಯನ್ನು ಎಷ್ಟೋ ಜನ ಆಚರಿಸಿರಬಹುದು. ಆದರೆ, ನಮ್ಮ ಮನೆಯಲ್ಲಿ ಅನಿರೀಕ್ಷಿವಾಗಿ, ನಾವಾಗಿಯೇ ಕೇಳದೇ ಇದ್ದರೂ, ಅನಿರೀಕ್ಷಿತ ವಿಸ್ಮಯಗಳಿಂದ ಈ ವಿಧಿ ನೆರವೇರಿತು. ಇದನ್ನು ಇನ್ನೊಬ್ಬರಿಗೆ ಪವಾಡದಂತೆ, ಕತೆಯಂತೆ ಹೇಳಬಹುದು. ಕೇಳಿದವರು ಈ ಅನುಭವಕ್ಕೆ ಮತ್ತೂ ಬಣ್ಣ ಹಚ್ಚಿ ಅವರವರ ಭಾವಕ್ಕೆ, ಅವರವರ ಭಕುತಿಗೆ ತಕ್ಕಂತೆ ಹೇಳುವಾಗ ಒಂದು ರೀತಿಯ ಅನುಭವವಾಗುತ್ತದೆ.

ಈ ಘಟನೆಗಳು ನಡೆದು ಏಳೆಂಟು ವರ್ಷಗಳಾದವು. ಆದರೂ ಒಂದೊಂದು ವಿಷಯವೂ ಇತ್ತೀಚೆಗೆ ನಡೆದಷ್ಟೆ ನಿಚ್ಚಳವಾಗಿದೆ. ಆ ವೈದ್ಯೆ ಹೇಳಿದ್ದು, ಪ್ರಯಾಸದಿಂದ ಪುಣ್ಯ ಕ್ಷೇತ್ರಗಳಿಗೆ ಹೋಗಿ ಬಂದ್ದು, ಸರ್ಪ ಸಂಸ್ಕಾರವನ್ನು ಮಾಡಲು ಇವರನ್ನು ಒಪ್ಪಿಸಿದ್ದು, ಅದೇ ಸಮಯದಲ್ಲಿ ನನ್ನ ಭಾವ ತೀರಿಹೋದದ್ದು, ಅಮೆರಿಕಾದ ದೇವಸ್ಥಾನದಲ್ಲಿ ಅಚ್ಚರಿಯಂತೆ ಸರ್ಪವೊಂದು ಗರ್ಭಗುಡಿಯ ಒಳಗೆ ಕಂಡದ್ದು, ಸಂಸ್ಕಾರದ ವಿಧಿ ನೆರವೇರಿದ್ದು... ಎಷ್ಟೋ ದಿನಗಳ ನಂತರ ವಿಚಿತ್ರ ಕನಸು ಬಿದ್ದದ್ದು. ಎಲ್ಲವೂ ಒಂದು ಸೋಜಿಗದ ದೃಶ್ಯಗಳಂತೆ ಮನದ ಪಟಲದಲ್ಲಿ ಬಿತ್ತರಗೊಂಡಾಗ, ಪ್ರತಿ ಬಾರಿಯೂ ಇದೆಲ್ಲಾ ಏನು? ಯಾಕೆ ಅಂತ ಅನ್ನಿಸದೇ ಇರುವುದಿಲ್ಲ.

* * * *

೧೨. ಸ್ವಾಮಿದೇವನೇ

ನಮ್ಮವರ ಹತ್ತಿರದ ನೆಂಟರೊಬ್ಬರ ಪೈಕಿ, ಒಬ್ಬರ ಮನೆಯಲ್ಲಿ ಐದು ಜನ ಅಕ್ಕ ತಂಗಿಯರು, ತಂದೆ ತಾಯಿ ಇಬ್ಬರೂ ಇರಲಿಲ್ಲ. ಹಿರಿಯವರು ಮೂರು ಮಂದಿ ಮದುವೆ ಆಗಿರಲಿಲ್ಲ, ಐದನೆಯವಳಿಗೆ ಹೇಗೋ ಏನೋ ಕಷ್ಟ ಪಟ್ಟು ಮದುವೆ ಮಾಡಿದ್ದರು. ಆದರೆ ಕೇವಲ ನಾಲ್ಕು ತಿಂಗಳೊಳಗೆ ಅವಳು ವಾಪಸ್ಸಾಗಿದ್ದಳು. ಡೈವೋರ್ಸ್ ಆಯಿತೆಂದು ಹೇಳಿದ್ದರು. ನಾಲ್ಕನೆಯವಳು ಯಾರನ್ನೋ ಪ್ರೀತಿಸಿದ್ದಳು. ಅವರು ಬೇರೆ ಜಾತಿಯವನಾದುದರಿಂದ ಮದುವೆಯ ನಂತರವೂ ಅವಳು ಇಲ್ಲಿ ಅಕ್ಕ ತಂಗಿಯರೊಂದಿಗೆ ಇದ್ದಳು. ಅವಳಿಗೆ ಒಬ್ಬಳು ಮಗಳೂ ಇದ್ದಳು. ಐದನೆವಳಿಗೆ ಮತ್ತೆ ಮದುವೆ ಮಾಡಲು ವರನನ್ನು ಹುಡುಕುತ್ತಿದ್ದಾರೆಂದು ತಿಳಿಯಿತು.

ನನ್ನ ಅಕ್ಕನ ಪರಿಚಯದವರೊಬ್ಬರು ಮೂಡುಬಿದರಿಯಲ್ಲಿ ಇದ್ದರು. ಅವರ ಮನೆಯ ಹುಡುಗನೊಬ್ಬನನ್ನು ನಾನು ಇವಳಿಗೆ ಗೊತ್ತು ಮಾಡಿ ಕೊಟ್ಟೆ, ವರನ ಕಡೆಯವರು ನನ್ನೊಡನೆ ಘೋನಿನಲ್ಲಿ ಮಾತನಾಡಿ, ಹುಡುಗಿಯ ಹಾಗೂ ಅವರ ಮನೆಯವರ ಬಗ್ಗೆ ಎಲ್ಲಾ ವಿವರಗಳನ್ನು ತಿಳಿದುಕೊಂಡಿದ್ದರು. ಅವರ ಅನಾನುಕೂಲತೆ ಹಾಗೂ ಅಸಹಾಯ ಕತೆಯನ್ನು ತಿಳಿಸಿದ್ದೆ. ಹಾಗಾಗಿ ಅವರು ಎರಡೂ ಖರ್ಚುಗಳನ್ನು ಹಾಕಿ ತಮ್ಮ ಊರಿನಲ್ಲೇ ಮದುವೆಯ ಮಂಗಳ ಕಾರ್ಯವನ್ನು ಮಾಡಿಕೊಳ್ಳಲು ಒಪ್ಪಿಕೊಂಡಿದ್ದರು.

ಹುಡುಗಿ ನಮ್ಮ ಕಡೆಯವಳೇ ಆದರೂ, ಮದುವೆಂಗಾಗಿ ಅಷ್ಟು ದೂರ ಹೋಗಿ ಬರಲು ನಮ್ಮವರಿಗೆ ಸುತಾರಾಂ ಇಷ್ಟವಿರಲಿಲ್ಲ, ಮೂರು ನಾಲ್ಕು ದಿನಗಳು ಮನೆಗೆ ಬೀಗ ಹಾಕಿ ಎಲ್ಲಿಗೂ ಹೋಗುವುದು ಬೇಡ ಎಂದು ಬಿಟ್ಟಿದ್ದರು. ಹುಡುಗಿಯ ತಾಯಿಯ ಕಡೆಯ ನೆಂಟನೊಬ್ಬ ತಾನು ಇವರುಗಳೊಂದಿಗೆ ಹೋಗಿ ಧಾರೆ ಎರೆದು, ಹುಡುಗಿಯನ್ನು ಒಪ್ಪಿಸಿಕೊಟ್ಟು ಬರಲು ಒಪ್ಪಿಕೊಂಡಿದ್ದ. ಆದರೆ ಅವನದು ಸ್ವಲ್ಪ ತಕರಾರೂ ಇತ್ತಂತೆ.

ಮದುವೆಗೆ ಎರಡು ದಿನ ಇದೆ ಎನ್ನುವಾಗಲೇ ಈ ಐದು ಜನ ಅಕ್ಕ ತಂಗಿಯರು, ತಮ್ಮ ಆಪ್ತ ಸ್ನೇಹಿತೆಯರಿಬ್ಬರೊಂದಿಗೆ ಮಂಗಳೂರಿಗೆ ಹೊರಟಿದ್ದರು. ಕಡೇ ಗಳಿಗೆಯಲ್ಲಿ ತನಗೆ ಬರುಕ್ಕಾಗುಲ್ಲ ಎಂದು ಅವನು ಹೇಳಿ ಬಿಟ್ಟಿದ್ದನಂತೆ, ಹಾಗಾಗಿ ಇವರು ಬರೀ ಹೆಂಗಸರೇ ಹೋಗುವುದು ಹೇಗೆ ಎಂದುಕೊಂಡು ನಮ್ಮ ಮನೆಗೆ ಫೋನು ಮಾಡಿದರು. ಆಗಲಾದರೂನಾವು ಅವರುಗಳೊಂದಿಗೆ ಹೋಗೋಣ ಎಂದು ನಮ್ಮವರು ಹೇಳಲಿಲ್ಲ. ಏನೂ ತಿಳಿಯದವರಂತೆ ಸುಮ್ಮನಾಗಿ ಬಿಟ್ಟೆವು.

ಈ ಸ್ತ್ರೀ ಪಾಳಯ ಅಲ್ಲಿಗೆ ಹೋಗಿ ಸೇರಿದ ಮೇಲೆ ಗಂಡಿನ ಮನೆಯವರು ತಬ್ಬಿಬ್ಬಾಗಿ ಹೋದರಂತೆ, ತಕ್ಷಣವೇ ನಮ್ಮ ಮನೆಗೆ ಫೋನು ಮಾಡಿದರು.

ಹುಡುಗಿಯ ಕಡೆಯವರು, ಕೇವಲ ಎಂಟು ಜನ, ಬರೀ ಹೆಂಗಸರು ಬಂದಿಳಿದಿದಾರೆ. ಒಂದೇ ಒಂದು ಗಂಡು ಪಿಳ್ಳೆ ಇಲ್ಲ. ಇದೆಂಥಾ ವಿಚಿತ್ರ! ಮದುವೆಗೆ ಮುಹೂರ್ತವನ್ನು ಗೊತ್ತು ಮಾಡಿದ್ದಾಗಿದೆ. ಖರ್ಚು ವೆಚ್ಚವೆಲ್ಲಾ ನಮ್ಮದೇ, ನಮ್ಮದು ಯಾವ ಡಿಮ್ಯಾಂಡೂ ಇಲ್ಲ. ಮದುವೆಗೆ ನಮ್ಮ ನೆಂಟರಿಷ್ಟರೆಲ್ಲಾ ಬರ್ತಾರೆ. ಹೆಣ್ಣಿನ ಕಡೆಯಲ್ಲಿ ಯಾವ ಗಂಡಸೂ ಇಲ್ಲ; ಬರೀ ಹೆಂಗಸರೇ ಅಂದರೆ ಅವರೆಲ್ಲಾ ಏನೆಂದು ಕೊಳ್ತಾರೆ? ಕೇಳಿದವರಿಗೆ ಏನು ಹೇಳೋಣ! ನಮ್ಮ ಮರ್ಯಾದೆ ಏನು ಉಳಿಯುತ್ತದೆ?" ಹುಡುಗನ ಕಡೆಯವರು ಸ್ವಲ್ಪ ಹೆಚ್ಚೇ ಮಾತಾಡಿದರು.

"ಹೀಗಾಗುತ್ತೆ ಅಂತ ನಮಗೇನು ಗೊತ್ತಿತ್ತು? ಕಡೇ ಗಳಿಗೇಲಿ ಆ ಮನುಷ್ಯ ಕೈ ಕೊಡ್ತಾನೆ ಅಂತ ನಮಗೇನು ಗೊತ್ತಿರಲಿಲ್ಲ. ನೀವೇ ಇನ್ನೊಂದು ಸಲ ಮಾತಾಡಿ, ಕೇಳಿ, ಒಪ್ಪಿದರೂ ಒಪ್ಪಬಹುದು" ಎಂದು ನಾನು ಹೇಳಿದೆ.

"ಆಯ್ತು, ಅದೂ ಆಯ್ತು. ಯಾವುದೇ ರೀತಿಯಿಂದಲೂ ಅವರು ಬರಲು ಸಿದ್ಧರಿಲ್ಲ. ಈಗ ನಾವು ಏನ್ಮಾಡ್ಬೇಕು ನೀವೇ ಹೇಳಿ" ಆತನೆಂದರು.

"ನಾನೇನು ಹೇಳ್ಲಿ. ಆ ಮನುಷ್ಯನ ನಂಬರನ್ನು ಕೊಡಿ. ನಾನು ಅವರ ಹತ್ತಿರ ಮಾತಾಡಿ ಪರಿಸ್ಥಿತಿಯನ್ನು ವಿವರಿಸಿ ಹೇಳ್ತೀನಿ"

"ಬೇಡ ಬಿಡಿ. ಆತ ತಕರಾರಿನ ಮನುಷ್ಯ. ಅವರವರಲ್ಲಿ ಏನು ಮಾತುಕಡೆ ನಡೆದಿದೆಯೋ. ಈಗ ನಮ್ಮ ಸ್ಥಿತಿ ಏನು? ಮರ್ಯಾದೆ ಹೋಗುವ ಪರಿಸ್ಥಿತಿ ಬಂದಿದೆಯಲ್ಲ, ಈಗ ನೀವೇ ಒಂದು ಉಪಕಾರ ಮಾಡ್ಬೇಕು"

"ಏನದು?" ಕೇಳಿದೆ.

'ನೀವೇ ದಂಪತಿಗಳು ಬಂದು ಕಾರ್ಯವನ್ನು ನೆರವೇರಿಸಿ ಕೊಡಿ" ಕನ್ಯಾದಾನವನ್ನು ನೀವೇ ಮಾಡಿಕೊಡಿ." ಎಂದರು.

ನನಗೆ ಶಾಕ್ ಆದಂತಾಯಿತು. ಈ ಬಗ್ಗೆ ನನಗೆ ಕಲ್ಪನೆಯೇ ಇರಲಿಲ್ಲ, ಮದುವೆಗೆ ಹೋಗುವ ಮಾತನ್ನೇ ನಾವು ಆಡಿರಲಿಲ್ಲ, ಮದುವೆಯ ಖರ್ಚಿಗೆಂದು ಸ್ವಲ್ಪ ಹಣವನ್ನು ಉಡುಗೊರೆಗಳನ್ನು ಹುಡುಗಿಯರಿಗೆ ಕೊಟ್ಟಿದ್ದಾಗಿತ್ತು. ಈಗ ನೋಡಿದರೆ ಈತ ಹೀಗೆ ಮಾತಾಡ್ತಿದಾರೆ. ಎಂಥಾ ಫಜೀತಿಗೆ ಸಿಕ್ಕಿಬಿದ್ದೆನಲ್ಲ ಅಂತೆನ್ನಿಸಿತು.

"ದಯವಿಟ್ಟು, ನಿಮ್ಮ ಯಜಮಾನರನ್ನ ಒಪ್ಪಿಸಿ, ಈ ಮಂಗಳ ಕಾರ್ಯವನ್ನು ನೆರವೇರಿಸಿಕೊಡಿ" ಆತ ಕೇಳಿಕೊಂಡರು. ಎಂಥಾ ಒಳ್ಳೆಯ ಜನ. ಒಬ್ಬ ಹುಡುಗಿಗೆ ಬಾಳು ಕೊಡಲು, ತಾವೇ ಖರ್ಚು ವೆಚ್ಚ ವಹಿಸಿ ಕೊಂಡಿದ್ದಾರೆ. ಆದರೆ ಕಡೇ ವೇಳೆಯಲ್ಲಿ ಯಾಕೆ ಹೀಗಾಗ್ತಿದೆ. ನಾನು ಯಾಕಾದರೂ ಗಂಡು ಹೆಣ್ಣಿನ ಮಧ್ಯಸ್ತಿಕೆ ವಹಿಸಿದೆನೋ ಅಂತ ಅನ್ನಿಸದೇ ಇರಲಿಲ್ಲ.

ನಾನು ನನ್ನ ಗಂಡನನ್ನು ಒಪ್ಪಿಸುವುದು ಸುಲಭವಲ್ಲ ಎಂದು ನನಗೆ ತಿಳಿದಿತ್ತಾದ್ದರಿಂದ "ಅವರಿಗೆ ಫೋನು ಕೊಡ್ತೀನಿ, ನೀವೇ ಅವರ ಹತ್ತಿರ ಮಾತಾಡಿ" ಎಂದು ಹೇಳಿದೆ. ಇವರಿಗೆ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿ, ಫೋನಿನಲ್ಲಿ ಮಾತಾಡುವಂತೆ ಹೇಳಿದೆ. ಇವರು ಹುಬ್ಬು ಗಂಟಿಕ್ಕಿ ಕೊಂಡೇ ರಿಸೀವರ್‌ನೆತ್ತಿಕೊಂಡರು. ಏನಾಡಿ ಬಿಡ್ತಾರೋ, ಒರಟಾಗಿ ಎಂದು ಭಯಗೊಂಡಿದ್ದೆ.

"ನಂಗೆ ಹುಶಾರಿರಲಿಲ್ರೀ, ನಾನು ದೂರ ಪ್ರಯಾಣ ಮಾಡೋದನ್ನ ಬಿಟ್ಟು ಬಿಟ್ಟಿದ್ದೀನಿ. ಅಲ್ಲದೇ ಈಗ ಸಮಯವೂ ಇಲ್ಲ. ಬಸ್ಸಿಗೆ ಟಿಕೆಟ್ ಸಿಗುಲ್ಲ. ನನಗೆ ತೊಂದರೆ ಆಗುತ್ತೆ, ದಯವಿಟ್ಟು ಬಲವಂತ ಮಾಡ್ಬೇಡಿ." ಇವರು ಹೇಳುತ್ತಿದ್ದರು. ನನ್ನನ್ನು ನೋಡಿ ನನ್ನ ಕೈಗೆ ರಿಸೀವರ್‌ನ ಕೊಟ್ಟು, "ನೀನೇ ಮಾತಾಡು ನಮಗೆ ಬರುಕ್ಕಾಗುಲ್ಲ ಅಂತ ಹೇಳ್ಬಿಡು" ಎಂದರು.

ನಾನು ಮತ್ತೆ ರಿಸೀವರ್‌ನ್ನೆತ್ತಿಕೊಂಡ ಕೂಡಲೇ ಆತ ದೈನ್ಯವಾಗಿ ಕೇಳಿಕೊಂಡರು. "ನಾಡಿದ್ದೇ ಮದುವೆ, ಈಗ ಧಾರೆ ಎರೆದುಕೊಡುಕ್ಕೆ ಯಾರೂ ಇಲ್ಲ ಅಂತಂದ್ರೆ ನಮ್ಮ ಮರ್ಯಾದೆ ಹೋಗುಲ್ವಾ? ಕನ್ಯಾದಾನ ಪುಣ್ಯದ ಕೆಲಸ, ಆ ಪುಣ್ಯ ನಿಮಗೆ ಸಿಗುತ್ತೆ... ನಿಮ್ಮ ಯಜಮಾನರನ್ನು ಒಪ್ಪಿಸಿ."

"ನಮ್ಮವರಿಗೆ ಕೆಲವು ತಿಂಗಳ ಹಿಂದೆ ಹುಶಾರಿರಲಿಲ್ಲ. ನಿಶ್ಶಕ್ತವಾಗಿ ದಾರೆ. ಪ್ರಯಾಣ ಕಷ್ಟವಾಗುತ್ತದೆ...." ನಾನು ಹೇಳಿದೆ.

"ಅವರಿಗೆ ಏನೂ ತೊಂದರೆ ಆಗದ ಹಾಗೆ ನಾವು ನೋಡ್ಕೊಳ್ತೀವಿ. ಅಲ್ಲೇ ನನ್ನ ಅಣ್ಣ ಇದಾನೆ. ನಿಮ್ಮಗಳನ್ನು ಸುರಕ್ಷಿತ ಕರೆದುಕೊಂಡು ಬರುವ ಜವಾಬ್ದಾರಿಯನ್ನು ಅವನಿಗೆ ವಹಿಸಿಕೊಡ್ತೀನಿ. ನಿಮಗೆ ಯಾವ ಆತಂಕವೂ ಬೇಡ" ಆತ ಮತ್ತೆ ಮತ್ತೆ ಅದೇ ಮಾತನ್ನಾಡಿದಾಗ, ಏನು ಮಾಡಬೇಕೆಂದು ತೋಚಲಿಲ್ಲ.

"ಆಯ್ತು ಅವರನ್ನು ಒಪ್ಪಿಸುವುದಕ್ಕೆ ನೋಡ್ತೀನಿ. ಇನ್ನು ಕಾಲು ಗಂಟೆಯ ನಂತರ ನಾನೇ ಫೋನು ಮಾಡ್ತೀನಿ" ಎಂದು ಹೇಳಿ

ಫೋನನ್ನಿಟ್ಟೆ. ಇವರು ಮೊದಮೊದಲು ನನ್ನ ಮಾತಿಗೆ ಸುತಾರಾಂ ಒಪ್ಪಲಿಲ್ಲ,

"ನನಗೆ ಇಷ್ಟವಿಲ್ಲದ ಕೆಲಸವನ್ನು ನಾನ್ಯಾಕೆ ಮಾಡ್ಬೇಕು? ಕಡೇ ಗಳಿಗೇಲಿ ಕೈ ಕೊಟ್ಟವನನ್ನು ಯಾರೂ ದೂಷಿಸುವುದಿಲ್ಲ. ನನ್ನನ್ನ ಬಲವಂತ ಮಾಡಿ ಕೆಟ್ಟವನನ್ನಾಗಿ ಮಾಡ್ತೀರಿ.... ಏರು ದನಿಯಲ್ಲಿ ಹೇಳಿದರು.

ಹುಡುಗನ್ನ ಗೊತ್ತು ಮಾಡಿಕೊಟ್ಟ ಒಂದೇ ಒಂದು ಕಾರಣದಿಂದ ಅವರು ನಮ್ಮನ್ನು ಕೇಳಿ ಕೊಳ್ತಿದಾರೆ. ನನಗೂ ಏನೂ ಆಗಬೇಕಾಗಿಲ್ಲ. ಮದುವಣಗಿತ್ತಿ. ನಿಮ್ಮ ಸಂಬಂಧದವಳು. ನನಗೂ ಅವಳಿಗೂ ಏನು ಸಂಬಂಧ? ಸರಿಯಾಗಿ ಮಾತಾಡಿ.... ಇನ್ನು ಹತ್ತು ನಿಮಿಷಕ್ಕೆ ಆತ ಫೋನು ಮಾಡ್ತಾನೆ. ಆಗ ನೀವೇ ಆಗುಲ್ಲ ಅಂತ ಹೇಳ್ಬಿಡಿ. ಹುಡುಗಿ ಡೈವೋರ್ಸಿ, ಅವಳಿಗೆ ಇದು ಎರಡನೇ ಮದುವೆ, ಅಪ್ಪ ಅಮ್ಮ ಇಲ್ಲ, ಅನುಕೂಲವಂತರಲ್ಲ, ಎಲ್ಲಾ ಖರ್ಚು ಗಂಡಿನವರದೇ, ಅವರನ್ನ ಎಲ್ಲರೂ ಒಳ್ಳೆಯವರು ಅಂತ ಹೊಗಳ್ತಾರೆ. ನಮಗೆ ಯಾವ ಶ್ರಮವೂ ಇಲ್ಲ. ಖರ್ಚೂ ಇಲ್ಲ. ನಿಮ್ಮನ್ನು ಎಲ್ಲರೂ ಹೊಗಳ್ತಾರೆ" ಉಬ್ಬಿಸಲು ನೋಡಿದೆ.

"ಯಾವ ಹೊಗಳಿಕೆ, ತೆಗಳಿಕೆ ನನಗೆ ಬೇಕಿಲ್ಲ. ಆತ ಮತ್ತೆ ಮತ್ತೆ ಫೋನು ಮಾಡೋದು ಬೇಡ. ನೀನೇ ಫೋನು ಮಾಡಿ, ಬಸ್ಸಿಗೆ ಟಿಕೆಟ್ ಸಿಕ್ಕರೆ ಬರ್ತೀವಿ. ಇಲ್ಲದಿದ್ದರೆ ಬೇರೆ ವ್ಯವಸ್ಥೆ ಮಾಡ್ಕೊಳ್ಳಿ ಅಂತ ಹೇಳಿಬಿಡು. ಇವರ ಮಾತಿನಿಂದ ಅರ್ಧ ಸಮ್ಮತಿ ಇದೆ ಎಂದು ನನಗೆ ತಿಳಿಯಿತು. ಆತನಿಗೆ ಫೋನು ಮಾಡಿದೆ. ಇವರು ಹೇಳಿದ್ದನ್ನು ಹೇಳಿದೆ. ಆತನಿಗೆ ಸಮಾಧಾನವಾಗಿರಬೇಕು.

"ಟಿಕೆಟ್‌ಗಾಗಿ ನಾಳೆ ದಿನ ಬಸ್‌ಸ್ಟ್ಯಾಂಡ್‌ಗೆ ಹೋಗಿ ಕ್ಯೂ ನಲ್ಲಿ ನಿಂತು ಟಿಕೆಟ್ ತೊಗೊಳ್ಳೋದೇನೋ ಬೇಡ. ನನ್ನ ಅಣ್ಣನಿಗೆ ಹೇಳ್ತೀನಿ.ಅ ವನು ಟಿಕೆಟ್ ಬುಕ್ ಮಾಡಿಸ್ತಾನೆ. ಅವನು ನಿಮಗೆ ಫೋನು ಮಾಡಿ ಮೆಜೆಸ್ಟಿಕ್‌ಗೆ ಎಷ್ಟು ಹೊತ್ತಿಗೆ ಬರ್ಬೇಕು ಅಂತ ತಿಳಿಸ್ತಾನೆ. ನೀವು ಹೊರಡಲು ಸಿದ್ಧತೆ ಮಾಡ್ಕೊಳ್ಳಿ, ನಿಮ್ಮ ಯಜಮಾನರಿಗೆ ಧನ್ಯವಾದವನ್ನು ತಿಳಿಸಿ

ಬಿಡಿ...." ಎಂದು ಒಂದೇ ಉಸಿರಿಗೆ ಹೇಳಿದ.

ನನಗೂ ಸಾಕೆನ್ನಿಸಿತ್ತು. ಆತ ಪದೇ ಪದೇ ಫೋನು ಮಾಡುವುದು, ಇವರು ರೇಗುವುದು, ಎಲ್ಲಕ್ಕೂ ಒಂದು ಮುಕ್ತಾಯ ಹಾಡಬೇಕೆನ್ನಿಸಿತು. ಆತ ಹೇಳಿದ್ದನ್ನು ಹೇಳಿದೆ. ಇವರು ಹಾಂ ಹೂಂ ಎನ್ನಲಿಲ್ಲ. ಕೆಲವೇ ನಿಮಿಷಗಳಲ್ಲಿ ಆತನ ಅಣ್ಣನ ಫೋನು ಬಂದಿತ್ತು.

ನನ್ನ ಹೆಸರು ವಿನಾಯಕ ಅಂತ. ತನ್ನ ಪರಿಚಯವನ್ನು ಹೇಳಿಕೊಂಡು ತಾನು ಮಾರನೇ ದಿನದ ರಾತ್ರಿಯ ಬಸ್ಸಿಗೆ ಬುಕ್ ಮಾಡಿರುವುದಾಗಿ ತಿಳಿಸಿದ. ಒಂಭತ್ತೂವರೆಯ ಹೊತ್ತಿಗೆ, ಮೆಜೆಸ್ಟಿಕ್ ಬಸ್ ಸ್ಟ್ಯಾಂಡಿಗೆ ರಾಜ ಹಂಸ ಡೀಲಕ್ಸ್ ಬಸ್ ನಿಲ್ಲುವ ಸ್ಥಳಕ್ಕೆ ಬನ್ನಿ. ಅಲ್ಲಿ ನಾನು ಕಾಯುತ್ತಿರ್ತೀನಿ ಎಂದು ಹೇಳಿದ.

"ನಿಮ್ಮನ್ನು ಗುರುತು ಹಿಡಿಯೋದು ಹೇಗೆ? ಈ ಮೊದಲು ನಾನು ನಿಮ್ಮನ್ನು ನೋಡಿಲ್ಲವಲ್ಲ" ಎಂದೆ.

"ನಾನೇ ನಿಮ್ಮನ್ನು ಗುರುತು ಹಚ್ತೇನಿ. ನಿಮಗೆ ಆತಂಕ ಬೇಡ. ಇಲ್ಲದಿದ್ದರೆ, ಬಸ್ ಬಳಿ ನಿಂತಿರಿ, ಗೊತ್ತಾಗುತ್ತೆ ಎಂದು ಹೇಳಿ ಬಸ್ಸಿನ ನಂಬರನ್ನು ತಿಳಿಸಿದ.

ಮೂರು ನಾಲ್ಕು ದಿನಗಳಿಗೆ ಆಗುವಷ್ಟು ಬಟ್ಟೆಯನ್ನು ಪ್ಯಾಕ್ ಮಾಡಿ ಕೊಂಡು, ಬಾಗಿಲು ಕಿಟಕಿಯನ್ನು ಭದ್ರ ಪಡಿಸಿ ಹೊರಟಿದ್ದಾಯಿತು. ಮೆಜೆಸ್ಟಿಕ್ ತಲುಪಿ, ಮಂಗಳೂರಿಗೆ ಹೊರಡುವ ಬಸ್ಸುಗಳು ನಿಲ್ಲುವ ಫ್ಲಾಟ್ ಫಾರಂ ಬಳಿ ಕಾಯುತ್ತಾ ನಿಂತೆವು. ಕೆಲವೇ ನಮಿಷಗಳಲ್ಲಿ ಸಣ್ಣ ದೊಂದು ಕಿಟ್‌ಬ್ಯಾಗ್ ಹಿಡಿದು ಒಬ್ಬ ವ್ಯಕ್ತಿ ನಮಗೆ ಅನತಿ ದೂರದಲ್ಲಿ ನಿಂತು ನಮ್ಮ ಕಡೆಯೇ ನೋಡುತ್ತಿದ್ದ, ಕುಳ್ಳಗೆ, ಬೆಳ್ಳಗೆ ದಪ್ಪವೆನಿಸುವ ಮೈಕಟ್ಟಿನ ವ್ಯಕ್ತಿಯೇ ವಿನಾಯಕನಾಗಿರಬೇಕೆಂದು ನನಗೆ ಅನಿಸಿತು. ಕೆಳದನಿಯಲ್ಲಿ ಇವರನ್ನು ಕೇಳಿದೆ.

"ಅವನೇ ವಿನಾಯಕನಿರಬೇಕು, ಕೇಳಿ ನೋಡ್ತೀರಾ?

"ಅವನೇ ಬಂದು ಕೇಳಲಿ, ಅವನು ತಾನೇ ಬರೋಕೆ ಹೇಳಿರೋದು"

ಇವರು ಗುಡುಗಿದರು. ಆವ್ಯಕ್ತಿ ಅನುಮಾನಿಸುತ್ತಾ ಹತ್ತಿರಕ್ಕೆ ಬಂದ.

"ನೀವು ಮೂಡಬಿದರೆಗೆ ಹೊರಟಿರಾ?" ಪ್ರಶ್ನಿಸಿದ.

" ಹೌದು... ನೀವು ವಿನಾಯಕ ತಾನೆ?" ಕೇಳಿದೆ.

"ಹೌದು, ನಾನೇ ವಿನಾಯಕ. ನಮಸ್ಕಾರ, ನಾವು ಹೋಗುವ ಬಸ್ಸು ಅಲ್ಲಿದೆ, ಅಲ್ಲಿಗೆ ಹೋಗಿ ಹತ್ತುವ...." ಎನ್ನುತ್ತಾ ನಮ್ಮ ಲಗೇಜನ್ನು ಎತ್ತಿಕೊಂಡ. ಅವನು ಮುಂದೆ ಮುಂದೆ.... ನಾವು ಅವನ ಹಿಂದೆ ಹಿಂದೆ. ಬಸ್ಸು ನಿಂತಿದ್ದೆಡೆಗೆ ಬಂದೆವು. ಅವನೇ ಮೊದಲು ಬಸ್ಸನ್ನು ಹತ್ತಿ ಲಗೇಜನ್ನು ಸರಿಯಾಗಿಟ್ಟು ಮತ್ತೆ ಕೆಳಗಿಳಿದು ಬಂದ.... ಇವರ ಕೈ ಹಿಡಿದು ಬಸ್ಸನ್ನು ಹತ್ತಿಸಲು ಅನುವಾದ. ಇವರು ಕೈ ಎಳೆದು ಕೊಂಡರು.

"ನಾನೇ ಹತ್ತೀನಿ. ಏನೂ ಪರವಾಗಿಲ್ಲ." ಹತ್ತಲು ಹೊರಟರು.

"ನಿಮಗೆ ಹುಷಾರಿರಲಿಲ್ಲ,, ಜೋಪಾನವಾಗಿ ಕರೆದುಕೊಂಡು ಬಾ ಅಂತ ನನ್ನ ತಮ್ಮ ಹೇಳಿದಾನೆ. ಬಸ್ಸು ಹತ್ತೋಕೆ ಕಷ್ಟವಾದರೆ ನನ್ನ ಕೈ ಹಿಡಿದು ಹತ್ತಿ, "ವಿನಾಯಕ ವಿನಯದಿಂದ ಹೇಳಿದ, ಇವರು ಬಸ್ಸನ್ನೇರಿ, ಇವರು ಇವರ ಸೀಟಿನಲ್ಲಿ ಕುಳಿತುಕೊಳ್ಳುವವರೆಗೂ ಅವನು ಇವರ ಹಿಂದೆಯೇ ನಿಂತಿದ್ದ. ನಾವುಗಳೂ ಕುಳಿತ ಮೇಲೆ, ನನ್ನ ಸೀಟು ಈ ಕಡೆ ಇದೆ. ಏನು ಬೇಕಾದರೂ ಕರೀರಿ. ನೀವು ಶ್ರಮ ತಗೋಬೇಡಿ ಎಂದವನು. ತನ್ನ ಸೀಟಿನ ಕಡೆ ನಡೆದ. ಬಸ್ಸು ಸಮಯಕ್ಕೆ ಸರಿಯಾಗಿ ಹೊರಟಿತು. ಅವನು ಆಗಾಗ್ಗೆ ನಮ್ಮ ಕಡೆ ನೋಡಿ, ನಮಗೇನೂ ತೊಂದರೆ ಯಾಗುತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುತ್ತಿದ್ದ. ಒಂದೆರಡು ಬಾರಿ ನೀರು ಬೇಕಾ? ಕಾಫಿ ಬೇಕಾ? ಎಳೆನೀರು ಬೇಕಾ ಎಂದು ವಿಚಾರಿಸಿದ. ಬಾಳೆ ಹಣ್ಣನ್ನು ಕೊಟ್ಟ. ಒಟ್ಟಿನಲ್ಲಿ ಎಚ್ಚರದಿಂದ ಜೋಪಾನವಾಗಿ ನಮ್ಮಗಳನ್ನು ಕರೆದುಕೊಂಡು ಹೋಗುವ ಜವಾಬ್ದಾರಿ ಅವನಾಗಿತ್ತು.

ಮಧ್ಯೆ ಒಂದು ಕಡೆ ಬಸ್ಸನ್ನು ಹೋಟೆಲ್ಲಿನ ಬಳಿ ನಿಲ್ಲಿಸಿದರು. ಹತ್ತು ಹದಿನೈದು ನಿಮಿಷ ಅಲ್ಲಿ ಸಮಯವಿತ್ತು. ಇವರು ಟಾಯ್ಲೆಟ್‌ಗೆ ಹೋಗಲೆಂದು ಇಳಿದರು. ತಕ್ಷಣವೇ ವಿನಾಯಕ ಚಂಗ್ ಅಂತ ಎದ್ದು

ಇವರ ಹಿಂದೆ ಹಿಂದೆಯೇ ಹೋದ. ಇವರು ಹೊರಗೆ ಬರುವವರೆಗೂ ಅಲ್ಲಿಯೇ ಕಾದು ನಿಂತಿದ್ದು, ಇವರು ಬಸ್ಸನ್ನು ಹತ್ತಿ ಒಳಗೆ ಬಂದು ಕುಳಿತುಕೊಳ್ಳುವವರೆಗೂ ಇವರನ್ನು ತನ್ನ ಗಮನದಿಂದ ಬಿಟ್ಟಿರಲಿಲ್ಲ. ಅಷ್ಟರಮಟ್ಟಿಗೆ ಇವರನ್ನು ನೋಡಿಕೊಳ್ಳುತ್ತಿದ್ದ. ಇದು ಇವರನ್ನು ಮತ್ತೂ ಸಿಟ್ಟಿಗೆಬ್ಬಿಸುತ್ತಿತ್ತು. ನಾನೇನೂ ಕೈಲಾಗದವನೇ....ಹಿಂದೆ ಹಿಂದೇನೇ ಬರ್ತಾನೆ..." ಗೊಣಗಿದರು.

"ಇವನಿಗೆ ಹೆದರಿಕೆ, ನೀವು ತಪ್ಪಿಸ್ಕೊಂಡು ಎಲ್ಲಿ ಹೊರಟು ಹೋಗ್ತೀರೋ ಅಂತ, ನೋಡ್ತಿರಿ ಮದುವೆ ಆಗೋವರ್ಗೂ ಇವನು ಹಿಂದೆ ಮುಂದೆಯೇ ಇರ್ತಾನೆ..." ನಾನೂ ಗೇಲಿ ಮಾಡಿದೆ.

ಮಂಗಳೂರನ್ನು ಸೇರಿದಾಗ, ಗಂಡಿನ ಕಡೆಯವರಿಂದ ನಮಗೆ ಆದರದ ಸ್ವಾಗತ ಸಿಕ್ಕಿತು ನಮಗೆ ಉಪಚಾರದ ಮೇಲೆ ಉಪಚಾರ ಒಂಥರಾ ತಯಾಷೆಯಾಗಿತ್ತು. ನಮಗೆ ಮಂಗಳೂರಿನ ಬಗ್ಗೆ ಹೆಚ್ಚು ಪರಿಚಯವಿಲ್ಲ. ಅವರ ಕೈಗೆ ಸಿಕ್ಕಿ ಬಿದ್ದ ಮೇಲೆ ಅವರು ಹೇಳಿ ಹೇಳಿದಂತೆ ಕೇಳಲೇಬೇಕಾಗಿತ್ತು.

ಕಾಫಿ, ಸ್ನಾನವಾದ ಮೇಲೆ, ಉಪಹಾರದ ವೇಳೆಯಲ್ಲಿ ನಮ್ಮಿಬ್ಬರನ್ನು ಎಲ್ಲರಿಗೂ ಪರಿಚಯ ಮಾಡಿಕೊಟ್ಟರು. "ನಿಮ್ಮ ಪದ್ಧತಿ, ಸಂಪ್ರದಾಯದ ಬಗ್ಗೆ ನಮಗೆ ಏನೂ ತಿಳಿಯದು. ನೀವು ಹೇಗೆ ಹೇಳ್ತೀರೋ ಹಾಗೆ. ಆದರೆ ಕಲಾಪ, ಶಾಸ್ತ್ರಗಳು ಸ್ವಲ್ಪ ಸರಳವಾಗಿರಲಿ." ನಾವು ಹೇಳಿದೆವು.

"ಹೌದು, ಹೌದು, ನಿಮಗೆ ಹೆಚ್ಚು ತ್ರಾಸ ಕೊಡುವ ಉದ್ದೇಶ ನಮಗಿಲ್ಲ. ನಾನು ಎಲ್ಲಾ ನೋಡ್ಕೋತೀನಿ. ನೀವು ನಿಶ್ಚಿಂತೆಯಾಗಿರಿ. ಆತ ಭರವಸೆಯನ್ನು ಕೊಟ್ಟರು.

ನಾವು ಸಮಯಕ್ಕೆ ಸರಿಯಾಗಿ ತಲುಪಿದ್ದು ಆ ಹುಡುಗಿಯರಿಗೂ ಸಮಧಾನವಾಗಿತ್ತು. "ಮದುವೆಗೆ ಬನ್ನಿ ಅಂತ ಕರೆದಾಗ ಆಗುಲ್ಲ ಅಂತ ಅಂದುಬಿಟ್ರಿ ಈಗ ನೋಡಿ, ದೇವರು ನಿಮ್ಮನ್ನು ಹೇಗೆ ಕರೆಸ್ಕೊಂಡ" ಎಂದು ಹುಡುಗಿಯ ಹಿರಿ ಅಕ್ಕ ಹೇಳಿದಳು.

ಇದನ್ನೇ ದೈವ ನಿಯಾಮಕ ಅನ್ನುವುದು. ನೀವುಗಳು ಇಲ್ಲಿಗೆ ಬರುವುದು ಇತ್ತು... ಈ ಪ್ರಾಂತ್ಯದಲ್ಲಿ ನೋಡತಕ್ಕ ಸ್ಥಳಗಳು ಬೇಕಾದಷ್ಟಿವೆ. ನಮ್ಮಲ್ಲಿ ಹತ್ತು ದಿನಗಳು ಉಳಿದುಕೊಂಡು ಸುತ್ತಾಡಿ ಬರೋರಂತೆ" ಆತ ಹೇಳಿದರು.

"ಬೆಂಗಳೂರಿನಂತಹ ಊರಿನಲ್ಲಿ ಹೆಚ್ಚುದಿನ ಮನೆಗೆ ಬೀಗ ಹಾಕುವಂತಿಲ್ಲ. ಈಗ ಆರಾಮಾಗಿ ತಿಂಡಿ ಕಾಫಿ, ತಗೊಳ್ಳಿ...." ನಮಗೆ ಸಂಕೋಚವಾಗುವಷ್ಟು ಉಪಚಾರ. ಆದರ...

ನಂತರ ಮದುವೆಯ ಕಲಾಪಗಳು ಪ್ರಾರಂಭವಾದುವು. ಎಲ್ಲಾ ಸಿದ್ಧತೆಯೂ ಅವರದ್ದೇ. ನಮಗಂತೂ ಯಾವ ಜವಾಬ್ದಾರಿಗಳೂ ಇಲ್ಲ. ಯಾವ ಕೆಲಸವೂ ಇಲ್ಲ. ಅವರು ಹೇಳಿದಂತೆ ಕೇಳುವುದಷ್ಟೇ. ನಮ್ಮ ಕೆಲಸ.

ಮದುವಣಗಿತ್ತಿಗೂ ಅವರ ಮನೆಯವರೇ ಯಾರೋ ಹೆಂಗಸರು ಬಂದು ಸಿಂಗಾರ ಮಾಡಿದರು. ಅವರೇ ತಂದಿದ್ದ ಸೀರೆಯನ್ನು ಉಡಿಸಿದರು. ಒಡವೆ ತೊಡಿಸಿದರು. ಧಾರೆ ಮಂಟಪಕ್ಕೆ ಕರೆತಂದರು. ಅವರ ಪದ್ಧತಿಯಂತೆ, ಶಾಸ್ತ್ರಗಳೊಂದಿಗೆ ಮಂಗಳ ಕಾರ್ಯವನ್ನು ನೆರವೇರಿಸಿದರು.

ಆ ನಂತರ ಭೂರಿ ಭೋಜನ. ಅವರ ಕಡೆಯ ಪದ್ಧತಿಯ ಅಡಿಗೆಗಳು, ಭಕ್ಷ್ಯಗಳು ನಾವುಗಳೇ ಮೊದಲ ಪಂಕ್ತಿಯಲ್ಲಿ ಊಟಕ್ಕೆ ಕುಳಿತಿದ್ದೆವು. ನಮಗೆ ಉಪಚರಿಸಿ ಬಡಿಸಿದರು. ಒಟ್ಟಿನಲ್ಲಿ ಈ ಹುಡುಗಿ ಪುಣ್ಯ ಮಾಡಿದ್ದಳು. ಎರಡನೇ ಮದುವೆಯಾದರೂ.

ಅದೇ ದಿನ ಸಾಯಂಕಾಲದ ಹೊತ್ತಿಗೆ ಎಲ್ಲರೂ ಛತ್ರದಿಂದ ಅವರ ಮನೆಗೆ ತೆರಳಿದೆವು. ರಾತ್ರಿಯ ಬಿಸಿ ಬಿಸಿ ಅಡಿಗೆಯ ಊಟದ ನಂತರ, ನಮಗೆಲ್ಲರಿಗೂ ಹಾಸಿಗೆ ದಿಂಬು, ಮೇಲು ಹೊದಿಕೆಗಳನ್ನು ಕೊಟ್ಟು ಮಲಗಲು ವ್ಯವಸ್ಥೆ ಮಾಡಿಕೊಟ್ಟರು. ಹೊಸ ಜಾಗ, ಹೊಸ ಜನ ನಿದ್ದೆಯಂತೂ ಬರಲಿಲ್ಲ. ಅಷ್ಟರಲ್ಲಿ, ಗಂಡಿನ ಕಡೆಯ ಮುಖ್ಯ ವ್ಯಕ್ತಿಬಂದು, ಎಲ್ಲಾ ಸರಿಯಾಗಿದೆಯೆ? ಅಂತ ವಿಚಾರಿಸಿದರು. ನಾಳೆ ದಿನ ಸತ್ಯ

ನಾರಾಯಣನ ಪೂಜೆ, ಹಾಗೂ ಬೀಗರ ಔತಣದ ಕಾರ್ಯಕ್ರಮವಿದೆ. ಎಂದು ತಿಳಿಸಿದರು. "ಹೇಗೂ ಇಲ್ಲಿಯ ತನಕ ಬಂದಿದ್ದೇವೆ. ನಾಳೆ ದಿನ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ಬರ್ತೀವಿ. ಒಂದು ಬಾಡಿಗೆಯ ಕಾರನ್ನು ಗೊತ್ತು ಮಾಡಿಕೊಡುಕ್ಕೆ ಆಗುತ್ತಾ? ಎಷ್ಟು ದೂರ ಆಗುತ್ತೆ? ಎಷ್ಟು ಸಮಯ ಬೇಕಾಗುತ್ತೆ ಅಂತ ಕೇಳಿದೆವು. ಬೆಳಿಗ್ಗೆ ಬೇಗ ಹೋಗಿ ದೇವರ ದರ್ಶನ ಮಾಡಿಕೊಂಡು ಮಂಗಳಾ ರತಿಯ ಹೊತ್ತಿಗೆ ವಾಪಸ್ಸು ಬಂದು ಬಿಡಬೇಕು. ನಮ್ಮ ಪರಿಚಯದವರದ್ದೇ ದೊಡ್ಡ ಕಾರು ಇದೆ. ಗೊತ್ತು ಮಾಡಿಕೊಡ್ತೀವಿ. ಕಂಡೀಷನ್ ಹಾಕಿ, ಒಪ್ಪಿಗೆ ಕೊಟ್ಟರು.

ಬೆಳಿಗ್ಗೆ ಬೇಗ ಎದ್ದು, ಹಂಡೆಯಲ್ಲಿ ಚೆನ್ನಾಗಿ ಕಾದಿದ್ದ ಬಿಸಿನೀರಿನಲ್ಲಿ ಸ್ನಾನ ಮಾಡಿ, ಕಾಫಿಯನ್ನು ಕುಡಿದು ಕುಕ್ಕೆ ಸುಬ್ರಹ್ಮಣ್ಯದ ಕಡೆಗೆ ಹೊರಟೆವು. ಆಗ ಇನ್ನೂ ಬೆಳಕು ಹರಿದಿರಲಿಲ್ಲ. ಹೋಗ್ತಾ ಹೋಗ್ತಾ, ಬೆಳಗಿನ ಝಾವದ, ಸೂರ್ಯೋದಯದ, ರಮಣೀಯ ಸುಂದರ ದೃಶ್ಯಗಳನ್ನು ಕಣ್ಣು ತುಂಬಾ ತುಂಬಿಕೊಳ್ಳುತ್ತಾ ಸುಬ್ರಹ್ಮಣ್ಯವನ್ನು ಸೇರಿದೆವು.

ಈ ಮೊದಲು ನಾನು ಒಂದೆರಡು ಬಾರಿ ಸುಬ್ರಹ್ಮಣ್ಯಕ್ಕೆ ಬಂದಿದ್ದೆ. ನಮ್ಮವರಿಗೆ ಇದು ಮೊದಲ ಅನುಭವ. ಬಯಲು ಸೀಮೆಯಲ್ಲಿ ಬೆಳೆದು ಬಂದವರು. ಗುಡ್ಡ, ಬೆಟ್ಟ, ಕಾಡು ಪ್ರದೇಶಗಳನ್ನು ನೋಡಿದ ಅನುಭವ ಇವರಿಗಾಯಿತು. ದೇವರ ದರ್ಶನವನ್ನು ಪಡೆದು, ವಾಪಸ್ಸು ಹೊರಟೆವು. ರಸ್ತೆ ಮಾರ್ಗದಲ್ಲಿ ಸಿಕ್ಕಿದ ದೊಡ್ಡ ಗಣಪತಿಯ ದೇವಸ್ಥಾನವನ್ನು ವನ ದುರ್ಗದೇವಿಯ ದೇವಸ್ಥಾನವನ್ನು ನೋಡಿ, ವೇಣೂರಿಗೆ ಬಂದೆವು. ವೇಣೂರಿನ ಬೃಹತ್ ಬಾಹು ಬಲಿಯ ದರ್ಶನವನ್ನು ಜೈನ ಬಸದಿಗಳನ್ನು ನೋಡುವಷ್ಟರಲ್ಲಿ, ಡ್ರೈವರ್ ಹೊತ್ತಾಯಿತೆಂದು ಅವಸರಿಸಿದ. ಸೀದಾ ಬೀಗರ ಮನೆಗೆ ಬಂದೆವು.

ಶ್ರೀ ಸತ್ಯನಾರಾಯಣ ಪೂಜೆಯ ಕಾರ್ಯಕ್ರಮ ಜರುಗುತ್ತಿತ್ತು. ಕೆಲವೇ ನಿಮಿಷಗಳ ನಂತರ, ಕಥಾ ಪ್ರಾರಂಭವಾಯಿತು. ಔತಣದ ಊಟಕ್ಕೆ ಮೊದಲು, ಮಂಗಳಾರತಿ, ಪ್ರಸಾದದ ನಂತರ ನಮಗೆಲ್ಲರಿಗೂ ಉಡುಗೊರೆ

ಗಳನ್ನು ಕೊಟ್ಟರು. ಔತಣಕ್ಕೆ ಅವರ ಕಡೆಯ ವಿಶೇಷ ಅಡುಗೆಗಳನ್ನು ಮಾಡಿಸಿದ್ದರು.

ಊಟದ ನಂತರ, ಸ್ವಲ್ಪ ಹೊತ್ತು ಸುಧಾರಿಸಿಕೊಂಡು, ಹೊರಡುವು ದೆಂದು ಮೊದಲೇ ಹೇಳಿದ್ದೆವು. ನಮಗೆಲ್ಲರಿಗೂ ಮದುವೆಯ ತಿಂಡಿಗಳನ್ನು ಪ್ಯಾಕ್ ಮಾಡಿಕೊಟ್ಟರು. ಅಲ್ಲಿಂದ ಧರ್ಮಸ್ಥಳಕ್ಕೆ ಬಂದೆವು. ಅಲ್ಲಿಯ ಒಂದು ರೂಮಿನಲ್ಲಿ ಇಳಿದುಕೊಂಡೆವು. ಆ ಸಾಯಂಕಾಲ ಶ್ರೀ ಮಂಜು ನಾಥೇಶ್ವರನ ದರ್ಶನ ಪಡೆದು, ಅಲ್ಲಿಯೇ ಊಟ ಮಾಡಿದೆವು. ಆ ರಾತ್ರಿ ಅಲ್ಲಿಯೇ ತಂಗಿದೆವು.

ಉಡುಪಿಗೆ ಹೋಗಿ, ಶ್ರೀ ಕೃಷ್ಣ ಮಠವನ್ನು ನೋಡಬೇಕೆಂಬ ಆಸೆಯನ್ನು ನಮ್ಮವರು ವ್ಯಕ್ತ ಪಡಿಸಿದರು. ಸೀದಾ ಬಸ್ಸಿನಲ್ಲಿ ಮಂಗಳೂರಿಗೆ ಬಂದು, ಅಲ್ಲಿಂದ ಉಡುಪಿಗೆ ಹೋಗುವ ಬಸ್ಸನ್ನು ಹಿಡಿದೆವು. ಅದ್ಯಾ ವುದೋ ತಮಿಳ್ನಾಡಿನಿಂದ ಬಂದ ಬಸ್ಸು ಹೆಚ್ಚು ರಷ್ ಇರಲಿಲ್ಲ. ಬಸ್ಸಿನ ಕುಲುಕಾಟ ಹೆಚ್ಚಾಗಿತ್ತು. ಅಲ್ಲಿಯ ರಸ್ತೆಗಳಲ್ಲಿ ದಿಣ್ಣೆ, ತಗ್ಗುಗಳು ಜಾಸ್ತಿ ಇದ್ದಕ್ಕಿದ್ದಂತೆ ಡ್ರೈವರ್ ಬ್ರೇಕ್ ಹಾಕಿದಾಗ, ನಾನು ಮುಂದಕ್ಕೆ ಬಿದ್ದು, ಎರಡು ಸೀಟುಗಳ ನಡುವೆ ಸಿಕ್ಕಿಕೊಂಡು ಬಿಟ್ಟೆ. ಕುಳಿತಿದ್ದ ಭಂಗಿಯಲ್ಲೇ. ನಾನು ಕಿರುಚಿಕೊಂಡೆ. ಡ್ರೈವರು ಬಸ್ಸನ್ನೇನೂ ನಿಲ್ಲಿಸಲಿಲ್ಲ. ಕಂಡಕ್ಟರ್ ಏನಾಯಿತೆಂದು ವಿಚಾರಿಸಲಿಲ್ಲ, ನನ್ನ ಗತಿ ಮುಗಿಯಿತು ಎಂದುಕೊಂಡೆ. ಪಕ್ಕದ ಸೀಟಿನಲ್ಲಿ ಕುಳಿತಿದ್ದ ನಮ್ಮವರು ಎದ್ದು ಬಂದು, ನನಗೆ, ಏಳಲು ಸಹಾಯ ಮಾಡಿದರು. ಬಲವಂತವಾಗಿ ಕಾಲನ್ನ ಮಡಿಸಿಕೊಂಡಿದ್ದರಿಂದ ಎರಡು ಕಾಲಿನ ಮಂಡಿಗಳು ನೋಯುತ್ತಿದ್ದವು. ಏನೋ ಆಗಿ ಹೋಯ್ತು ನಡೆಯುವುದಕ್ಕೆ ಆಗುತ್ತೋ ಇಲ್ಲವೋ ಎಂಬ ಆತಂಕ ಕಾಡಿತು. ಉಡುಪಿಯ ಬಸ್‌ಸ್ಟ್ಯಾಂಡ್‌ನವರೆಗೂ ಬಸ್ಸು ನಿಲ್ಲಲಿಲ್ಲ.

ಬಸ್ಸು ನಿಂತಾಗ, ಇಷ್ಟು ದೂರ ಬಂದು, ನನ್ನಿಂದಾಗಿ ಇವರಿಗೆ ಉಡುಪಿಯ ದೇವಸ್ಥಾನಕ್ಕೆ ಹೋಗದಂತಾಗುತ್ತದೆಯೋ ಏನೋ ಅಂತಂದು ಕೊಂಡು ಆತಂಕದಿಂದ ಎದ್ದು ನಿಂತು ಹೆಜ್ಜೆಯನ್ನು ಎತ್ತಿಟ್ಟೆ, ಏನಾಶ್ಚರ್ಯ!

ಏನೂ ಆಗಿಯೇ ಇಲ್ಲವೇನೋ ಎಂಬಂತೆ, ಯಾವ ನೋವೂ ಇರಲಿಲ್ಲ. ಬಸ್ಸಿನಿಂದ ಇಳಿಯುವಾಗಲೂ ಏನೂ ತೊಂದರೆ ಆಗಲಿಲ್ಲ. ಶ್ರೀ ಕೃಷ್ಣನ ಮಾಯೆ!

ಕನಕನ ಕಿಂಡಿಯಿಂದ, ಕಡೆಗೋಲು ಕೃಷ್ಣನ ಮೂರ್ತಿಯನ್ನು ನೋಡಿ, ಪಕ್ಕದಲ್ಲೇ ಇದ್ದ ಆಂಜನೇಯ ಹಾಗೂ ಸುಬ್ರಹ್ಮಣ್ಯೇಶ್ವರನ ದರ್ಶನವನ್ನು ಮಾಡಿ, ಗೋಶಾಲೆಯ ಬಳಿಗೆ ಬಂದೆವು. ಅಲ್ಲಿ ಕುಳಿತಿದ್ದಾಗ, "ಎಂದು ಕಾಂಬೆನೋ ಎನ್ನ ಸಲಹುವ ತಂದೆ ಉಡುಪಿಯ ಜಾಣನಾ...." ಎಂದು ಹಾಡುವ್ತ ಆಸೆಯನ್ನು ನೆರವೇರಿಸಿಕೊಂಡೆ.

ಅಷ್ಟರಲ್ಲಿ ಭೋಜನ ಶಾಲೆಯ ಬಳಿ ನಿಂತಿದ್ದ ಅಲ್ಲಿಯ ಸಿಬ್ಬಂದಿ ಯವರು, ಊಟಕ್ಕೆ ಬನ್ನಿ, ಇದೇ ಕಡೆಯ ಪಂಕ್ತಿ ಎಂದು ಆತ್ಮೀಯವಾಗಿ ಕರೆದರು. ಮಹಾಪ್ರಸಾದದ ಭೋಜನ ಅದ್ಭುತವಾಗಿತ್ತು. ಅದರಲ್ಲೂ ಶಾಲ್ಯಾನ್ನ, ಮತ್ತೆ ಮತ್ತೆ ನೆನೆಸಿಕೊಳ್ಳುವಷ್ಟು ರುಚಿಯಾಗಿತ್ತು. ಊಟದ ನಂತರ ಕೈ ತೊಳೆದು ಬರುವಷ್ಟರಲ್ಲಿ ಉಳಿದ ಅಡಿಗೆ ಪದಾರ್ಥಗಳನ್ನು ಅಲ್ಲಿಯ ಕೆಲಸಗಾರರು ಪಾತ್ರೆಗಳಿಗೆ ತುಂಬಿಸಿಕೊಳ್ಳುತ್ತಿರುವುದನ್ನು ಕಂಡೆ. ತಕ್ಷಣ ರಾತ್ರಿಯ ಊಟದ ನೆನಪಾಗಿತ್ತು. ಒಂದು ಬಾಳೆ ಎಲೆಯ ಮೇಲೆ ಸಾಕಷ್ಟು ಶಾಲ್ಯಾನ್ನವನ್ನು ಹಾಕಿಸಿಕೊಂಡೆ.

ಅಲ್ಲಿಂದ ಹೊರಡುವಾಗ, ಅಲ್ಲಿಗೆ ಸಮೀಪದಲ್ಲಿರುವ ಬೀಚ್‌ಗೆ ಹೋಗಿ ಬರಬೇಕೆಂದುಕೊಂಡು, ಹೋಗಿ ಬರಲು ಒಂದು ಆಟೋ ರಿಕ್ಷಾವನ್ನು ಗೊತ್ತು ಮಾಡಿಕೊಂಡೆವು. ಅದು 'ಕಾಪು' ಎಂಬ ಸಮುದ್ರ ತಡಿ. ಇಲ್ಲಿ ಸಿನಿಮಾ ಚಿತ್ರೀಕರಣ ನಡೆಯುತ್ತದಂತೆ. ಅಲೆಗಳೊಡನೆ ಸಾಕಷ್ಟು ಆಟವಾಡಿದೆವು. ಸೂರ್ಯಾಸ್ತಮದವರೆಗೂ ಅಲ್ಲಿಯೇ ಇರುವ ಆಸೆಯಾದರೂ, ಸಮಯ ಸಾಕಷ್ಟು ಇರಲಿಲ್ಲ. ಅದೇ ರಾತ್ರಿ ನಮ್ಮೂರಿಗೆ ವಾಪಸ್ಸು ಹೊರಡ ಬೇಕಾಗಿತ್ತು. ಮತ್ತೆ ಧರ್ಮಸ್ಥಳಕ್ಕೆ ವಾಪಸ್ಸು ಬಂದೆವು. ಅಲ್ಲಿಂದ ಬೆಂಗಳೂರಿನ ಬಸ್ಸನ್ನು ಹತ್ತಿದೆವು... ಕಳೆದ ಮಧುರ ಸಮಯಗಳ ಮೆಲುಕು ಹಾಕುತ್ತಾ....

*

೧೩. ಬಸದಿಗಳ ನಡುವೆ

ಸುಮಾರು ನಲವತ್ತು ನಲವತ್ತೈದು ವರ್ಷಗಳ ಹಿಂದಿನ ಘಟನೆ ಇದು. ನಾವುಗಳೆಲ್ಲರೂ ನಮ್ಮ ತಾಯಿಯ ಚಿಕ್ಕಪ್ಪನ ಮಗನ ಮದುವೆಗೆಂದು ಹಾಸನಕ್ಕೆ ಹೋಗಿದ್ದೆವು. ನಾವು ಗಂಡಿನ ಕಡೆಯವರಾದುದರಿಂದ, ನಮಗೆ ಇಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಹಾಸನದ ಸಮೀಪ ನೋಡತಕ್ಕ ಅನೇಕ ಪ್ರೇಕ್ಷಣೀಯ ಐತಿಹಾಸಿಕ ಸ್ಥಳಗಳಿವೆ. ಅವುಗಳಲ್ಲಿ ಶ್ರವಣ ಬೆಳಗೊಳವೂ ಒಂದು. ಗೊಮ್ಮಟನ ಬೃಹತ್ ಮೂರ್ತಿಯನ್ನು ಕಣ್ಣು ತುಂಬಾ ತುಂಬಿಕೊಳ್ಳಲು ನೋಡಲು ಹೋಗದ ಪ್ರೇಕ್ಷಕರೇ ಇಲ್ಲ. ಕುತೂಹಲದಿಂದ ಕಲಾವಂತಿಕೆಯ ಭಾವನೆಯಿಂದ ಭಕ್ತಿಯಿಂದ ಹೋಗಿ ನೋಡಿ, ಭಾವ ಮುಗ್ಧರಾಗಿ ಹಿಂತಿರುಗುವರು.

ನಮಗೆಲ್ಲಾ ಮಲಗಿಕೊಳ್ಳಲು ಒಂದು ದೊಡ್ಡ ಹಾಲಿನಲ್ಲಿ ಜಮಖಾನವನ್ನು ಹಾಸಿಕೊಟ್ಟು ಹೊದಿಕೆ ದಿಂಬುಗಳ ವ್ಯವಸ್ಥೆ ಮಾಡಿಕೊಟ್ಟಿದ್ದರು. ನಾವುಗಳು, ಹೆಚ್ಚು ಕಡಿಮೆ ಒಂದೇ ವಯಸ್ಸಿನ ಹುಡುಗಿಯರು, ಒಂದೇ ಕಡೆ ಮಲಗಿ ಪಿಸು ಪಿಸು ಮಾತು, ಕಿಸಿ ಕಿಸಿ ನಗುತ್ತಾ ನಿದ್ದೆಯನ್ನು ದೂರ ಮಾಡಿಕೊಂಡಿದ್ದೆವು. ಹಿರಿಯವರು ಯಾರೋ, ಜಾಗ ಬದಲಾಯಿಸಿದ್ದರಿಂದ ನಿದ್ದೆ ಬಾರದೇ ಹೊರಳಾಡುತ್ತಿದ್ದವರು ಗದರಿದರು. ಸುಮ್ನೆ ಮಲಗ್ರೇ ಏನು ಕಿಸಿ ಕಿಸಿ ನಗಾಟ? ಬೆಳಿಗ್ಗೆ ಬೇಗ ಏಳ್ಬೇಕು. ಆ ಮಾತು ಎಲ್ಲರನ್ನೂ ಕುರಿತುದ್ದಾಗಿತ್ತು.

"ಬೆಳಿಗ್ಗೆ ಬೇಗ ಎದ್ದು ಏನ್ಮಾಡ್ಬೇಕು? ನಾವು ತಿಂಡಿ ಕಾಫಿ ತಿಂದು,

ಅಲಂಕಾರ ಮಾಡ್ಕೊಂಡು, ಶೆಕೆಯೊಳಗೆ ಬೆವರು ಸುರಿಸುತ್ತಾ ಮದುವೆಯ ಕಲಾಪಗಳನ್ನು ನೋಡುತ್ತಾ ಕೂಡುವ ಬದಲು, ಹೊರಗೆ ಎಲ್ಲಾದರೂ ತಿರುಗಾಡಿ ಬಂದರೆ ಹೇಗೆ ಅಂತ ಮಾತಾಡಿಕೊಂಡೆವು. ವರಪೂಜೆಯ ಕಲಾಪದಲ್ಲಿ ನಮ್ಮ ವಯಸ್ಸಿನವರಿಗೆ ಯಾವ ಕೆಲಸವೂ ಇರಲಿಲ್ಲ, ಮೊದಲಿಗೆ, ತಿಂಡಿ ಕಾಫಿಯ ಉಪಚಾರ, ನಂತರ ವರಪೂಜೆಯ ಸಡಗರ. ಹಿರಿಯ ಸಂಬಂಧಿಕರನ್ನು ಪರಿಚಯಿಸುವುದು, ಆದರಿಸುವುದು, ವರನ ವರೋಪಚಾರ, ಆರತಿ ಇವುಗಳನ್ನೆಲ್ಲಾ ದೂರದಲ್ಲಿ ಕುಳಿತು ನೋಡಿದೆವು. ಇವೆಲ್ಲಾ ಬೇಗ ಮುಗಿದು, ಊಟ ಹಾಕಬಾರದೇ ಅಂತ ಕಾಯುತ್ತಿದ್ದುದು ಉಂಟು. ಯಾಕೆಂದರೆ ವರಪೂಜೆಯ ಬಿಸಿಲಡಿಗೆಯ ಊಟ ಬಹಳ ಬಹಳ ಭಾರಿಯಾಗಿರುತ್ತದೆ. ಬೀಗರನ್ನು ಮೆಚ್ಚಿಸಲು ಬಗೆ ಬಗೆಯ, ರುಚಿ ರುಚಿಯ ಖಾದ್ಯಗಳನ್ನು ಉಪಚರಿಸುತ್ತಾ ಬಲವಂತವಾಗಿ ಬಡಿಸಿ, ತೃಪ್ತಿ ಪಡಿಸುವ ಪ್ರಯತ್ನ ಮಾಡುತ್ತಾರೆ.

ಅಡಿಗೆಯವರನ್ನು ಎಷ್ಟೋ ಬಾರಿ ಕಾಫಿಯನ್ನು ಕೇಳಿದರೂ ಇಲ್ಲ ಎನ್ನುವುದಿಲ್ಲ ಎಂಬುದನ್ನು ತಿಳಿದಿದ್ದ ನಾವುಗಳು ಅಡಿಗೆ ಮನೆಯ ಕಡೆಗೆ ಹೋಗಿದ್ದೆವು. ಅಲ್ಲಿ ರಾತ್ರಿಯ ಅಡಿಗೆಯ ಭಾರಿ ತಯಾರಿಯೇ ನಡೆದಿತ್ತು. 'ಭರೋ' ಎಂದು ಉರಿಯುವ ಸ್ಟವ್‌ನ ಸದ್ದು ತುಂಬಿಕೊಂಡಿತ್ತು. ನನ್ನ ಸೋದರ ಮಾವನ ಮಗಳು ಅವಳಿಗೆ ಬೆನ್ನು ಮಾಡಿ ಕುಳಿತಿದ್ದ ಹುಡುಗನನ್ನು ಚಿಟಕೆ ಹೊಡೆದು ಕರೆದಳು. ಅವನು ಬಾಳೆಎಲೆಗಳನ್ನು ಒರೆಸಿ ಇಡುತ್ತಿದ್ದ. ಇವಳು ಕರೆದದ್ದು ಅವನಿಗೆ ಕೇಳಿಸಿರಲಿಲ್ಲ. ಇವಳು ಅವನ ಬೆನ್ನ ಹಿಂದೆ ನಿಂತು ಒಂದ್ಲೋಟ ನೀರು ಕೊಡ್ತೀಯೋನೋ ಮರಿ ಎನ್ನುತ್ತಾ ಅವನ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು, ಆ ಹುಡುಗನ ಮುಖವನ್ನು ನೋಡಿ ಸಣ್ಣಗೆ ಚೀರಿ ಹೆದರಿ ಕೈ ಬಿಟ್ಟು ಹಿಂದೆ ಸರಿದಳು. ಅವಳ ಮುಖ ಕೆಟ್ಟು ಹೋಗಿತ್ತು. ಆ ಹುಡುಗ ಹೆದರಿ ನಾಚಿಕೆಯಿಂದ ಎದ್ದು ಓಡಿ ಹೋಗಿದ್ದ. ನಾವುಗಳು ನಕ್ಕಿದ್ದೆವು. ಉಳಿದವರು ತಿರುಗಿ ನೋಡಿದ್ದರು.

ಅವನು ಚಿಕ್ಕ ಹುಡುಗನಾಗಿರಲಿಲ್ಲ. ಮೀಸೆ ಗಡ್ಡ ಬೆಳೆದ ಯುವಕ ನಾಗಿದ್ದ. ಕುಳ್ಳ ನಾದುದರಿಂದ ಚಿಕ್ಕವನೆಂದು ಭಾವಿಸಿದ್ದೆವು. ಅದೇ ವಿಷಯವನ್ನು ಮತ್ತೆ ಮತ್ತೆ ಆಡಿಕೊಂಡು ಕಿಸಿ ಕಿಸಿ ನಗುವಾಗ, ಹಿರಿಯ ರಿಂದ ಬೈಸಿಕೊಂಡಿದ್ದೆವು. ಮುಸುಕಿನೊಳಗೆ ಮಾತಾಡುತ್ತಾ ಮಲಗಿದ್ದೆವು.

ಮಾರನೆಯ ದಿನ ಬೆಳಿಗ್ಗೆ ವಾಲಗದವರು ಓಲಗವನ್ನು ಊದಿ ಎಲ್ಲರಿಗೂ ಸುಪ್ರಭಾತವನ್ನು ಕೋರಿದ್ದರು. ಅಡಿಗೆಯವರು ಬಿಸಿಬಿಸಿ ಕಾಫಿಯನ್ನು ತಂದು ಎಲ್ಲರನ್ನು ಎಬ್ಬಿಸಿದರು. ಮುಖ ತೊಳೆದು ಬಂದು ಕಾಫಿಯನ್ನು ಕುಡಿಯುವಾಗ, ಅಡಿಗೆಯವನ ಮುಖ ನೋಡಲು ಹಿಂಜರಿಕೆ! ಅಲ್ಲಿ ಆ ಮೀಸೆ ಗಡ್ಡದ ಮರಿ ಇದ್ದರೆ? ಆದರೆ ಆ ಯುವಕ ಆ ದಿನ ಯಾರ ಕಣ್ಣಿಗೂ ಬೀಳಲೇ ಇಲ್ಲ. "ನಿನಗೆ ಹೆದರಿ ಅವನು ಪರಾರಿಯಾಗಿದ್ದಾನೆ," ನಾವು ಇವಳನ್ನು ಚುಡಾಯಿಸಿದ್ದೇ ಚುಡಾಯಿಸಿದ್ದು.

"ಎಲ್ಲಾ ಬೇಗ ಬೇಗ ಸ್ನಾನ ಮಾಡಿ, ಅಲಂಕಾರ ಮಾಡ್ಕೊಂಡು ರೆಡಿಯಾಗಿ. ಮುಹೂರ್ತದ ಹೊತ್ತಿಗೆ ಎಲ್ಲರೂ ಅಲ್ಲಿರಬೇಕು. ಹಿರಿಯರು ಕಿರಿಯರಿಗೆ ಆಣತಿ ಇತ್ತರು. ದೊಡ್ಡವರೆಲ್ಲಾ ಬೇಗ ಬೇಗ ಸಿದ್ಧರಾಗಿ ಮದುವೆ ಮಂಟಪಕ್ಕೆ ಹೊರಟು ಹೋಗಿದ್ದರು. ಪಡ್ಡೆ ಹುಡುಗಿಯರು ನಮ್ಮಗಳ ಅಲಂಕಾರಕ್ಕೆ ಸ್ವಲ್ಪ ಹೆಚ್ಚು ಸಮಯ ಬೇಕು. ಅವರುಗಳೆಲ್ಲಾ ಹೋದ ಮೇಲೆ ನಿಧಾನವಾಗಿ ಒಬ್ಬರನ್ನೊಬ್ಬರು ಕೀಟಲೆ ಮಾಡುತ್ತ, ಕನ್ನಡಿಗಳನ್ನು ಹಿಡಿದು ಅಲಂಕರಿಸಿಕೊಳ್ಳತೊಡಗಿದೆವು. ಅಳ್ಳಕವಾಗಿ ಜಡೆ ಹೆಣೆದುಕೊಂಡು ಹೆಣ್ಣಿನ ಮನೆಯವರು ತಂದಿಟ್ಟಿದ್ದ ಹೂವುಗಳನ್ನು ಮುಖಕ್ಕೆ ಒಪ್ಪುವಂತೆ ಮುಡಿಗೇರಿಸಿ, ಸ್ನೋ ಪೌಡರ್‌ಗಳನ್ನು ಹಗುರವಾಗಿ ಹಚ್ಚಿಕೊಂಡು ಸಿಂಗರಿಸಿಕೊಳ್ಳುತ್ತಿರುವಾಗ, ಇದ್ದಕ್ಕಿದ್ದಂತೆ ನಮ್ಮ ಪೈಕಿ ಒಬ್ಬಳು ಅಳುತ್ತಾ ಎತ್ತರದ ಧ್ವನಿಯಲ್ಲಿ ನುಡಿದಳು. ಅಯ್ಯೋ ನನ್ನ ಒಂದು ವಾಲೆ ಎಲ್ಲೋ ಬಿದ್ದು ಹೋಗಿದೆ. ತಿರುಪು ಮಾತ್ರ ಇದೆ. ಅಮ್ಮಂಗೆ ಗೊತ್ತಾದ್ರೆ ಬೈತಾಳೆ, ಈಗ ಏನೇ ಮಾಡೋದು?"

"ಗಾಬರಿಯಾಗ್ಬೇಡ, ಇಲ್ಲೇ ಎಲ್ಲೋ ಬಿದ್ದಿರುತ್ತೆ. ಹುಡುಕೋಣ.

ನಮ್ಮ ಪೈಕಿ ತಿಳುವಳಿಕೆ ಉಳ್ಳವಳು ನುಡಿದಳು.

"ಸ್ನಾನ ಮಾಡುವಾಗ ಬಿದ್ದು ಹೋಗಿದ್ರೆ," ಅಡ್ಡ ದನಿ ಹಾಕಿದಳು. "ಅದೇನು ಬಚ್ಚಲು ಮನೇಲೇ ಬಿದ್ದಿರುತ್ತಾ! ಬೇರೆ ವಾಲೆ ತಂದಿದ್ರೆ ಹಾಕ್ಕೋ."

"ಅಪಶಕುನ ನುಡೀಬೇಡ. ನನಗೆ ಪ್ರಾಣ ಹೋಗ್ತಿದೆ. ಅಮ್ಮ ಹೊಸ್ದಾಗಿ ತೆಗೆಸಿಕೊಟ್ಟಿದ್ಲು. ಬೇರೆ ವಾಲೆ ಎಲ್ಲಿದೆ ನನ್ಹತ್ರ... ನೀವೆಲ್ಲಾ ಹೋಗಿ. ನಾನು ಇಲ್ಲೇ ಕುಕ್ಕರು ಬಡಿದಿರ್ತೀನಿ" ಅವಳು ಬಿಕ್ಕುತ್ತಾ ಅಂದಳು.

"ಹುಡುಕಿ ನೋಡೋಣ, ಅಳೋದ್ಯಾಕೆ? ಇಲ್ಲೇ ಎಲ್ಲೋ ಬಿದ್ದಿರುತ್ತೆ. ಸಿಗದಿದ್ದರೆ ನನ್ನ ಹತ್ರ ಇನ್ನೊಂದು ಜೊತೆ ವಾಲೆ ಝುಮುಕಿ ಇದೆ. ಅದನ್ನು ಹಾಕ್ಕೊಳುವಂತೆ" ಮತ್ತೊಬ್ಬಳು ನುಡಿದಳು.

"ಅಮ್ಮಂಗೆ ಗೊತ್ತಾದ್ರೆ ಜನ್ಮ ಜಾಲಾಡಿ ಬಿಡ್ತಾಳೆ ಕಣೇ ಎನ್ನುತ್ತಾ ಅವಳು ಓಲೆಯನ್ನು ಹುಡುಕಲು ಪ್ರಾರಂಭಿಸಿದಳು. ಎಲ್ಲರೂ ಅವಳಿಗೆ ಸಹಾಯಕರಾದರು. ಮೊದಲಿಗೆ ಜಮಖಾನವನ್ನು ನಿಧಾನವಾಗಿ ಸರಿಸಿ ನೋಡಿದ್ದಾಯಿತು. ನಂತರ ಸುತ್ತಿಟ್ಟ, ಹಾಸಿಗೆ, ಮಡಿಸಿಟ್ಟ ಬೆಡ್ ಶೀಟ್‌ನ್ನು ಕೊಡವಿ, ನೋಡಿದ್ದಾಯಿತು. ದಿಂಬುಗಳನ್ನು ಎತ್ತಿಟ್ಟು, ನೋಡಿದ್ದಾಯಿತು. ಆಮೇಲೆ ಜಮಖಾನವನ್ನು ಸುತ್ತಿಟ್ಟು, ನೆಲವನ್ನು ಗುಡಿಸಿದ್ದಾಯಿತು. ಕಡೆಗೆ, ಚಪ್ಪಲಿ ಬಿಟ್ಟಿದ್ದ ಜಾಗಕ್ಕೆ ತಳ್ಳಿದ್ದಾಯಿತು. ಒಂದೊಂದೇ ಚಪ್ಪಲಿಯನ್ನು ಕೊಡವಿ, ಇನ್ನೊಂದು ಕಡೆಗೆ ಎತ್ತಿಟ್ಟು ಕಸವನ್ನು ಗುಡ್ಡೆ ಮಾಡಿ, ಕೆದಕಿದ್ದಾಯಿತು. ಎಲ್ಲಿಯೂ ಇಲ್ಲ. ಆದರೆ ಆ ಕೋಣೆ ಸ್ವಚ್ಛವಾಗಿತ್ತು. ಮೈ ಬೆವೆತು, ಅಲಂಕಾರವೆಲ್ಲಾಕೆಟ್ಟು ಹೋಗಿತ್ತು "ಏನ್ರೇ ಹುಡ್ಗೀರಾ, ಇನ್ನೂ ನಿಮ್ಮ ಅಲಂಕಾರ ಮುಗಿಲಿಲ್ವೇನ್ರೇ... ಹೊರಗಿನಿಂದ ಬಾಗಿಲ ಬಳಿ ನಿಂತು ಹಿರಿಯ ಹೆಂಗಸೊಬ್ಬರು ವಿಚಾರಿಸಿದಾಗ ನಾವುಗಳು ಮುಖ ಮುಖ ನೋಡಿ ತಲೆ ತಗ್ಗಿಸಿದೆವು.

ಆಕೆ ಹೆಚ್ಚು ವಿಚಾರಿಸದೇ ತನಗೆ ಬೇಕಾದುದನ್ನು ಸೂಟ್ ಕೇಸಿನಿಂದ ತೆಗೆದುಕೊಂಡು ಹೊರಟು ಹೋದರು. ಬಾಗಿಲನ್ನು ಹಾಕೇ... ಮತ್ತೆ

ಮತ್ತೆ ಯಾರಾದ್ರೂ ಬಂದಾರು... ಮತ್ತೆ ಮುಖ ತೊಳೆದು ಅಲಂಕಾರ ಮಾಡ್ಕೊಳ್ಳೋಕೆ ನಂಗಂತೂ ಬೇಜಾರು. ಮುಸುಕ್ಹಾಕಿ ಮಲಗ್ತೀನಿ, ಯಾರಾದ್ರೂ ಕೇಳಿದ್ರೆ ಇವಳಿಗೆ ಹುಶಾರಿಲ್ಲ ಅಂತ ಹೇಳ್ಬಿಡಿ" ಅವಳು ಹೇಳುತ್ತಿದ್ದಂತೆಯೇ ಬಾಗಿಲ ಬಳಿ ಬಂದವಳೊಬ್ಬಳು 'ಸಿಕ್ತು' ಅಂತ ಜೋರಾಗಿ ಹೇಳಿದಳು.

"ಏನು ಸಿಕ್ತೇ" ಎನ್ನುತ್ತಾ ನಾವುಗಳು ಒಂದಿಬ್ಬರು ಅವಳು ಇದ್ದಲ್ಲಿಗೆ ಬಂದೆವು. ಅವಳು ಬಾಗಿಲ ಬಳಿ ಹೊಸ್ತಿಲಾಚೆ ಬಿದ್ದಿದ್ದ ಚಿನ್ನದ ವಾಲೆಯನ್ನು ಎತ್ತಿಕೊಂಡು ಇವಳ ಕಡೆ ತೋರಿಸಿದಳು.

"ನಾನು ಹುಡುಕಿ ಕೊಟ್ಟಿದ್ದೀನಿ. ನನ್ಗೇನು ಕೊಡ್ತಿಯೇ" ಕೈಯಲ್ಲಿ ಹಿಡಿದು ತಿರುಗಿಸುತ್ತಾ ಕೇಳಿದವಳ ಬಳಿಗೆ ಅವಳು ಬಂದಳು.

"ಇಡೀ ಛತ್ರದ ಹಾಲ್‌ನೆಲ್ಲಾ ಕ್ಲೀನ್ ಮಾಡಿ ಸುಸ್ತಾಗಿದೀವಿ. ಸುಮ್ನೆ ಸತಾಯಿಸಬೇಡ. ನಿನಗೆ ಒಳ್ಳೇ ಊಟ ಹಾಕಿಸ್ತೀನಿ. ಸಧ್ಯ ಅಮ್ಮನಿಂದ ಬೈಸಿ ಕೊಳ್ಳುವುದು ತಪ್ತು" ಎನ್ನುತ್ತಾ ಅವಳ ಕೈಯಿಂದ ತೆಗೆದುಕೊಳ್ಳಲು ನೋಡಿದಳು.

"ನೀನೇನಮ್ಮಣ್ಣಿ ಊಟ ಹಾಕ್ಸೋದು? ಮದುವೆ ಮನೇಲಿ ಎಲ್ರಿಗೂ ಭಾರಿ ಊಟಾನ ನೀನು ಕೇಳದಿದ್ರೂ ಹಾಕ್ತಾರೆ. ನಮ್ಮನ್ನೆಲ್ಲಾ ಒಂದು ಒಳ್ಳೆ ಪಿಕ್ಚರಿಗೆ ಕರ್ಕೊಂಡ್ಹೋಗು. ಹತ್ರಾನೇ ಒಂದು ಥಿಯೇಟರ್ ಇದೆ".

"ಸರಿ, ಕರ್ಕೊಂಡ್ಹೋಕ್ತೀನಿ, ಈಗ ವಾಲೇನ ಕೊಡು ಮಾರಾಯ್ತಿ"

"ಪ್ರಾಮಿಸ್ ಮಾಡು"

"ಸರಿ ಪ್ರಾಮಿಸ್ ಮಾಡ್ತೀನಿ, ಆದರೆ ಈ ವಿಷಯಾನ ಯಾರಿಗೂ ಹೇಳ್ಬಾರ್ದು. ನಮ್ಮ ನಮ್ಮಲ್ಲೇ ಇರ್ಬೇಕು. ಹಾಗಂತ ಎಲ್ರೂ ಪ್ರಾಮಿಸ್ ಮಾಡಿ" ಎನ್ನುತ್ತಾ ಅವಳ ಎಲ್ಲರ ಮುಂದೂ ಕೈ ನೀಡಿದಳು.

ಅದನ್ನು ಹೇಳ್ಬೇಕಾ? ಎನ್ನುತ್ತಾ ಎಲ್ಲರೂ ಅವಳ ಕೈ ಮೇಲೆ ಕೈಯನ್ನಿಟ್ಟು ಪ್ರಾಮಿಸ್ ಮಾಡಿದೆವು. ಎಲ್ಲರೂ ಮತ್ತೆ ಮುಖ ತೊಳೆದು ಬೇಗ ಬೇಗ ಅಲಂಕರಿಸಿಕೊಂಡು ಮದುವೆ ಮಂಟಪಕ್ಕೆ ಬಂದೆವು.

ಎಲ್ಲರೂ ನಮ್ಮಗಳನ್ನೇ ಕುತೂಹಲದಿಂದ ನೋಡುತ್ತಿದ್ದಾರೆಂದೆನಿಸಿ, ಮುಜುಗರ ಉಂಟಾಗಿತ್ತು.

"ಯಾಕ್ರೇ ಎಲ್ಲರ ಮುಖವೂ ಬಾಡಿ ಹೋಗಿದೆ. ಜಗಳ ಆಡ್ತಿದ್ರಾ? ಚಿಕ್ಕಮ್ಮ ಕೇಳಿದಾಗ ಇಲ್ಲ ಆಟ ಆಡ್ತಿದ್ದೆವು ಎಂದು ಹೇಳಿ ಮುಖ ಮುಖ ನೋಡಿಕೊಂಡು ನಕ್ಕೆವು.

ಕಲಾಪಗಳು ಬೇಗ ಮುಗಿದು ಮೊದಲ ಪಂಕ್ತಿಯ ಊಟವೂ ನಡೆದಿತ್ತು. ಹಿರಿಯವರು ಉಳಿದ ಕಲಾಪಗಳ ಕಡೆ ಗಮನ ಕೊಡುತ್ತಿದ್ದಾಗ ನಾವುಗಳು ಅಲ್ಲಿಂದ ಹಿಂತಿರುಗಿದೆವು. ಹಾಗೆಯೇ ಆಲಸ್ಯದಿಂದ ಕುಳಿತಿರುವಾಗ, ನಮ್ಮ ಚಿಕ್ಕಮ್ಮನ ಮಗ ಸೊಸೆ ಅಲ್ಲಿಗೆ ಬಂದರು.

"ನಾವು ಶ್ರವಣ ಬೆಳಗೊಳಕ್ಕೆ ಹೋಗಿ ಬರೋಣ ಎಂದುಕೊಂಡಿದೀವಿ. ನೀವುಗಳು ಯಾರಾದ್ರೂ ಬರ್ತಿರೇನ್ರೇ, ಗೊಮ್ಮಟೇಶ್ವರನ್ನ ನೋಡೋಕೆ, ಅವನು ಹೆಂಡತಿಯ ಕಡೆ ನೋಡುತ್ತಾ ಕೇಳಿದ. ಅವಳು ಸುಮ್ಮನೆ ನಕ್ಕಳು. ಶ್ರವಣ ಬೆಳಗೊಳ ನೋಡಬೇಕಾದ ಸ್ಥಳ. ಆದರೆ ಗೊಮ್ಮಟೇಶ್ವರನ್ನ ನೋಡೋದು ಅಂದ್ರೆ ಸ್ವಲ್ಪ ಮುಜುಗರವೇ. ಆದರೆ, ಇಷ್ಟು ಹತ್ತಿರ ಬಂದಾಗ ಜೊತೆ ಇರುವಾಗ, ಹೋಗಿ ಬರುವುದು ಸಮಂಜಸ ಎಂದುಕೊಂಡು, ಅನುಮಾನಿಸುತ್ತಾ ಒಪ್ಪಿದೆವು.

"ಯಾಕ್ರೇ ಅನುಮಾನಿಸ್ತಾ ಇದೀರಾ? ... ಅಮ್ಮ ಅಪ್ಪ ಏನಂತಾರೋ ಅಂತ ಭಯಾನಾ... ಅಥವಾ ನಿದ್ದೆ ಹೊಡೀಬೇಕೋ? ಗೇಲಿ ಮಾಡಿ ಕೇಳಿದ.

"ಹಾಗೇನಿಲ್ಲ ಸಿನಿಮಾಕ್ಕೆ ಹೋಗ್ಬೇಕು ಅಂತ ಅಂದುಕೊಂಡಿದ್ದೆವು. ಸಿನಿಮಾಕ್ಕೆ ಹೋಗೋದೋ? ನಿಮ್ಮ ಜೊತೆ ಬರೋದೋ ಅಂತ ಯೋಚಿಸ್ತಿದೀವಿ."

ಸಿನಿಮಾ ಎಲ್ಲಾದ್ರೂ ಸಿಗುತ್ತೆ. ನೋಡಬಹುದು. ಶ್ರವಣ ಬೆಳಗೊಳ ಇರೋದು ಇಲ್ಲಿ ಮಾತ್ರ. ಬೆಟ್ಟ ಹತ್ತಿ ಹೋಗೋಕೆ ತುಂಬಾ ಜನ ಇದ್ದರೆ ಚೆನ್ನಾಗಿರುತ್ತದೆ. ಬೇಗ ಹೋಗಿ ಬೇಗ ಬಂದು ಬಿಡೋಣ, ರಾತ್ರಿ ಷೋಗೆ

ಸಿನಿಮಾಕ್ಕೆ ಹೋದ್ರೂ ಆಯ್ತು. ಅಲ್ವೇನ್ರಿ? ಗಿಣಿ ತರಹ [illegible] ಹೆಂಡತಿ ಕೇಳಿದಳು.

"ಹೌದು, ಇವಳು ಹೇಳೋದು ಸರಿ. ಬೇಗ ರೆಡಿಯಾಗಿ. ಕತ್ತಲಾಗೋದ್ರೊಳ್ಗೆ ಬಂದು ಬಿಡೋಣ" ಅವನು [illegible] ನಮ್ಮ ನಮ್ಮ ತಂದೆ ತಾಯಿಯರಿಗೆ ಹೇಳಿ ಪರ್ಮಿಷನ್ ತೆಗೆದುಕೊಂಡು ಅಲ್ಲಿಂದ ಹೊರಟೆವು. ಶ್ರವಣ ಬೆಳಗೊಳಕ್ಕೆ ಬೇಕಾದಷ್ಟು ಬಸ್ಸುಗಳು ಹೋಗಿ ಬರುತ್ತದೆ. ಆದರೆ, ಚಿಕ್ಕ ಚಿಕ್ಕ ಮೂತಿ ಇರುವ ಬಸ್ಸುಗಳು. ಹೊತ್ತಾಗುತ್ತದೆಂದು ಸಿಕ್ಕಿದ ಬಸ್ಸನ್ನೇ ಹತ್ತಿದೆವು. ನಿಂತುಕೊಂಡೇ ಹೋಗ ಬೇಕಾಗಿತ್ತು. ಗೊಮ್ಮಟೇಶ್ವರನ ಒಂದು ವೈಶಿಷ್ಟ್ಯತೆ ಎಂದರೆ, ಶ್ರವಣ ಬೆಳಗೊಳವನ್ನು ಸಮೀಪಿಸುತ್ತಿದ್ದಂತೆಯೇ ದೂರದಿಂದಲೇ ಬೆಟ್ಟದ ಮೇಲ್ಭಾಗದಲ್ಲಿ ಬಾಹು ಬಲಿಯ ಭುಜ, ಭುಜದ ಮೇಲ್ಭಾಗ ಕಂಡು ಬರುತ್ತದೆ. ಅದನ್ನು, ಅಪರೂಪಕ್ಕೆ ನೋಡುವವರು. ಮೊದಲಿನಿಂದಲೇ ಬಸ್ಸಿನಿಂದ ಬಗ್ಗಿ ಬಗ್ಗಿ ನೋಡಲು ಪ್ರಯತ್ನಿಸುತ್ತಿರುತ್ತಾರೆ. ನಾವುಗಳು ನಿಂತಿದ್ದುದರಿಂದ ನಮ್ಮಗಳಿಗೆ ನಿರಾಸೆ ಆಯಿತು.

ಬೆಟ್ಟದ ಬುಡದಲ್ಲೇ ಬಸ್ಸು ನಿಂತಿತು. ಬಸ್ಸಿನಿಂದ ಇಳಿದು ಬೆಟ್ಟವನ್ನು ಹತ್ತಲು ಸಿದ್ಧರಾದೆವು. ಮೆಟ್ಟಿಲನ್ನು ಎಣಿಸುತ್ತಾ ಕತ್ತೆತ್ತಿ ನೋಡುತ್ತಾ ಮಟ್ಟಿಲೇರಿದೆವು. ಬೆಟ್ಟದ ಬುಡದಲ್ಲಿ ಕತ್ತೆತ್ತಿ ನೋಡಿದರೂ ಗೊಮ್ಮಟನ ದರ್ಶನವಾಗುವುದಿಲ್ಲ. ಮಾರ್ಗ ಮಧ್ಯದಲ್ಲಿ ಕೆಲವು ಜೈನ ಮುನಿಗಳು ಪ್ರತ್ಯಕ್ಷರಾದರು. ಅವರಲ್ಲಿ ಒಬ್ಬರೋ ಇಬ್ಬರೋ ದಿಗಂಬರರೂ ಇದ್ದರು. ನೋಡಿದರೂ ನೋಡದವರಂತೆ ಯಾವ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸದೇ ಸಾಗಿದೆವು. ಆದರೆ ನಮ್ಮ ಚಿಕ್ಕಪ್ಪನ ಮಗ ಸೊಸೆ ಕಣ್ಣಿನಲ್ಲೇ ಮಾತಾಡಿಕೊಂಡಿದ್ದನ್ನು ಗಮನಿಸಿದೆವು. ಅವನೊಬ್ಬನೇ ಗಂಡಸು ನಮ್ಮ ಗುಂಪಿನಲ್ಲಿದ್ದುದು. ಅಲ್ಲಿಯವರೆಗೂ ಮಾತಿನ ಮಲ್ಲಿಯರಾಗಿದ್ದ ನಾವುಗಳು ನಂತರ ಮೌನವ್ರತವನ್ನು ಹಿಡಿದೆವು.

ಗೊಮ್ಮಟನ ಬೃಹತ್ ಆಕಾರ, ಒಳಗಿನ ಪ್ರಾಕಾರಕ್ಕೆ ಬರುವವರೆಗೂ

ಕಾಣುವುದೇ ಇಲ್ಲ. ಏದುಸಿರು ಬಿಡುತ್ತಾ, ಒಳಗೆ ಕಾಲಿಡುತ್ತಿದ್ದಂತೆಯೇ, ಆಹಾ... ಆಯಾಸವೆಲ್ಲಾ ಪರಿಹಾರ! ಅದ್ಭುತ!! ಕಣ್ಣುಗಳಿಗೆ ಹಬ್ಬದೂಟ! ಮೈ ಮನಗಳನ್ನು ಮರೆಸುವಂಥ ತನ್ಮಯತೆಯ ಭಾವ ಎಲ್ಲರನ್ನು ಆವರಿಸಿಕೊಂಡಿತ್ತು. ಅದು ಆ ಸ್ಥಳದ ಮಹಿಮೆ ಪಠ್ಯ ಪುಸ್ತಕದಲ್ಲಿ ಓದಿದ್ದ ಭರತ ಬಾಹುಬಲಿಯರ ಕತೆ ನೆನಪಿಗೆ ಬಂದಿತ್ತು. ಎಷ್ಟು ನೋಡಿದರೂ ಮತ್ತೆ ಮತ್ತೆ ನೋಡಬೇಕೆನ್ನಿಸುವ ಭವ್ಯ ಮೂರ್ತಿಯನ್ನು ನೋಡಿ ನೋಡಿ ಕಣ್ಣುಗಳಲ್ಲಿ ಹೃದಯದಲ್ಲಿ ತುಂಬಿಕೊಳ್ಳುವಷ್ಟರಲ್ಲಿ ನಮಗೆ ಅರಿವಿಲ್ಲದಂತೆ ಸಮಯ ಜಾರಿತ್ತು. ಮತ್ತೆ ಎಂದಾದರೂ ಬಂದು ನೋಡುವ ಅವಕಾಶ ಸಿಗುತ್ತದೋ ಇಲ್ಲವೋ ಎಂದುಕೊಂಡು, ತಿರು ತಿರುಗಿ ನೋಡುತ್ತಾ ಆ ಒಳಾಂಗಣವನ್ನು ದಾಟಿ ಹೊರಕ್ಕೆ ಬಂದೆವು.

ಮೆಟ್ಟಿಲುಗಳ ಬಳಿಗೆ ಬಂದಾಗ, ಸೂರ್ಯನಾಗಲೇ ಪಡುವಣ ದಿಕ್ಕಿನಲ್ಲಿ ಬೆಟ್ಟಗಳ ಹಿಂದೆ ಮರೆಯಾಗತೊಡಗಿದ್ದ. ಬೇಗ ಬೆಟ್ಟದ ತಡಿಗೆ ಇಳಿದರೆ, ಬೇಗ ಬಸ್ಸು ಸಿಕ್ಕಿದರೆ, ಆರತಕ್ಷತೆಯ ಹೊತ್ತಿಗೆ ಮದುವೆ ಛತ್ರವನ್ನು ಸೇರ ಬಹುದು ಎಂಬ ತವಕದಲ್ಲಿ ಇಳಿಯತೊಡಗಿದೆವು. ಆ ರಭಸದಲ್ಲಿ ನನ್ನ ಚಿಕ್ಕಮ್ಮನ ಸೊಸೆಯ ಕಾಲು ಮೆಟ್ಟಿಲಿನಿಂದ ಪಕ್ಕದ ಬಂಡೆಯ ಕಡೆಗೆ ತಿರುಗಿತು. ಎಲ್ಲರಿಗಿಂತ ಮೊದಲು ಕೆಳಗೆ ಇಳಿಯುವೆನೆಂಬ ಹುರುಪಿನಲ್ಲಿ ಅವಳು ನುಣುಪಾಗಿದ್ದ ಬಂಡೆಯ ಮೇಲೆ ಕುಳಿತು ಜಾರತೊಡಗಿದಳು. ಸ್ವಲ್ಪ ದೂರ ಸರಿವಳ ನುಣುಪಾಗಿದ್ದ ಬಂಡೆಯ ಮೇಲೆ ಆಯ ತಪ್ಪಿತು. ಹಿಡಿತ ತಪ್ಪಿ, ಅಡ್ಡಾದಿಡ್ಡಿಯಾಗಿ ಉರುಳುತ್ತಾ ಅವಳು ಕೆಳಗಿನ ನೆಲವನ್ನು ಸೇರಿದಳು. ನಾವೆಲ್ಲರೂ, ಅತ್ತಿಗೆ ಬಿದ್ದರು... ಹೋ... ಎಂದು ಕಿರುಚಿದಾಗ, ಮುಂದೆ ಇಳಿದು ಹೋಗುತ್ತಿದ್ದ. ಅವಳ ಪತಿರಾಯ ಕೆಳಗೆ ಬಿದ್ದ ಅವಳ ಕಡೆ ಧಾವಿಸಿ, ಅವಳನ್ನು ಕೋಪದಿಂದ ಬೈದ. "ನಿನ್ನ ತಲೆ ಕೆಟ್ಟಿದೆಯಾ? ನಿನ್ನದೆಂಥಾ ಹುಡಗಾಟ! ನಿನಗೇನು ಅರ್ಜೆಂಟಿತ್ತು?" ಅಂದ.

ಅವಳು ಬಿದ್ದ ಪೆಟ್ಟಿನಿಂದ ಬೈಗುಳದ ಅವಮಾನದಿಂದ ಅಳತೊಡ ಗಿದಳು. ನಾವುಗಳು ವೇಗವಾಗಿ ಇಳಿದು ಬಂದು ಆಕೆಯನ್ನು ಸುತ್ತುವರಿದು

ನಿಂತೆವು. ಬಿದ್ದ ರಭಸಕ್ಕೆ ಅಲ್ಲಲ್ಲಿ ತರಚಿದ ಗಾಯಗಳಾಗಿತ್ತು. ಎಡಗೆನ್ನೆ, ಕಿವಿ ಕೆಂಪಾಗಿತ್ತು. ಕಿವಿಯ ಕಡೆ ಹೋದ ಗಮನ, ಅವಳ ಕಿವಿಯ ಓಲೆ ಮಾಯವಾಗಿರುವುದನ್ನು ಪತ್ತೆ ಹಚ್ಚಿತು.

ಅತ್ತಿಗೆ ವಾಲೆ ಎಲ್ಲೋ ಬಿದ್ದು ಹೋಗಿದೆ. "ಅವಳೊಬ್ಬಳಿಗೆ ಕೇಳುವಂತೆ ಹೇಳಿದೆ. ಅವಳ ಕೈ, ಕಿವಿಯನ್ನು ತಡವಿತು.

"ಈಗೇನ್ಮಾಡೋದು ಎಲ್ಲಿ ಬಿದ್ಹೋಯ್ತೋ?" ಅವಳ ದುಃಖ ಉಮ್ಮಳಿಸಿತ್ತು.

"ನೋಡೋಣ ಇಲ್ಲೇ ಎಲ್ಲಾದ್ರೂ ಬಿದ್ದಿರಬಹುದು ಎನ್ನುತ್ತಾ ಆ ಮಂದ ಬೆಳಕಿನಲ್ಲಿ ಹುಡುಕ ತೊಡಗಿದೆವು. ಉಳಿದವರೂ ನಮ್ಮ ಜೊತೆ ಸೇರಿದರು. ವಿಷಯ ತಿಳಿದ ಅವಳ ಪತಿ ರೋಷದಿಂದ ತನಗೆ ಸಂಬಂಧಿಸಿದುದೇ ಅಲ್ಲವೆನ್ನುತ್ತಾ ಕೈ ಕಟ್ಟಿ ನಿಂತಿದ್ದ.

"ಬಿದ್ದ ಏಟಿಗೆ, ಎಲ್ಲಿಗೆ ಹಾರಿತೋ? ಎಲ್ಲಿ ಅಂತ ಹುಡುಕುವುದು.. ಸಿಗದಿದ್ದರೆ ಏನು ಮಾಡುವುದು? ಎಲ್ಲರ ಮನದಲ್ಲೂ ಭಯ ಶಂಕೆ ಮೂಡಿತ್ತು.

"ಕೇಳ್ದೋರ್ಗೆ ಏನ್ಹೇಳ್ದೋದು? ನಿಮ್ಮ ಅಣ್ಣ ನನ್ನನ್ನು ಸುಮ್ಮನೇ ಬಿಡುವುದಿಲ್ಲ. ನಾನು ಹೊರಡಲೇ ಬಾರದಿತ್ತು." ಅತ್ತಿಗೆ ಅಳುತ್ತಲೇ ನುಡಿದಳು.

"ಬಾರೋ ಅಣ್ಣಯ್ಯ, ನೀನೂ ಹುಡುಕು. ಕತ್ತಲಾಗಿ ಹೋದರೆ ಕಷ್ಟವಾಗುತ್ತದೆ" ನಾನು ಅವನ ಕೈ ಹಿಡಿದು ಎಳೆದೆ.

"ನಾನ್ಯಾಕೆ ಹುಡುಕ್ಲಿ., ಅವರಪ್ಪನ ಹತ್ರ ಬೇರೆ ತೆಗೆಸಿಕೊಳ್ಳಲಿ" ಅವನು ಮೂರ್ಖನಂತೆ ನುಡಿದ.

"ಇದು ನಮ್ಮಪ್ಪ ಕೊಟಿದ್ದಲ್ಲ. ನಿಮ್ಮಮ್ಮ ಕೊಟಿದ್ದು, ಇವತ್ತು ಬೆಳಿಗ್ಗೆ ಹಾಕ್ಕೋ ಅಂತ ಕೊಟ್ಟಿದ್ರು, ತಿರುಪು ಬಿಗಿಯಾಗಿರಲಿಲ್ಲ, ಬಿದ್ಹೋಗಿದೆ." ಅವಳು ಕೆಟ್ಟ ಮುಖ ಮಾಡಿ ನುಡಿದಳು.

ಈಗ ಅವನು ಚುರುಕಾದ. "ಅಮ್ಮ ಕೊಟ್ಟಿದ್ದು, ಅಂತ ಆಗ್ಲೇ ಹೇಳ್ಬಾರ್ದಾಗಿತ್ತಾ! ನಿಂಗೆ ಜವಾಬ್ದಾರಿ ಬೇಡ್ವಾ?" ಅಂತಜ ಬರದಸ್ತಿನಿಂದ ಹೇಳಿ ತಾನೂ ಹುಡುಕಲು ಪ್ರಾರಂಭಿಸಿದ.

"ನಿಮ್ಮಮ್ಮನ ವಾಲೆಗೆ ಮಾತ್ರ ಬೆಲೆ. ನಮ್ಮಪ್ಪ ಕೊಟ್ಟಿದ್ದಕ್ಕೆ ಏನೂ ಬೆಲೆ ಇಲ್ವಾ?" [illegible]ಳೂ ಪ್ರಶ್ನಿಸಿದಳು. ಇಬ್ಬರೂ ಜಗಳ ಆಡುವ ಮೂಡ್‌ನಲ್ಲಿದ್ದರು,

ಬೆರಳುಗಳಿಂದ ಕಡ್ಡಿಗಳಿಂದ ಮಣ್ಣನ್ನು ಕೆದಕಿ ಧೂಳನ್ನೆಬ್ಬಿಸುತ್ತಾ ಎಲ್ಲರೂ ಹುಡುಕುತ್ತಿದ್ದರು. ಕುತೂಹಲದಿಂದ ಕೆಲವರು ನಮ್ಮ ಹುಡುಕಾಟವನ್ನು ನೋಡುತ್ತಾ ನಿಂತರು. ಅವಳು ಉರುಳಲು ಪ್ರಾರಂಭಿಸಿದ ಸ್ಥಳದಿಂದ ಮತ್ತೊಮ್ಮೆ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದ್ದಾಯ್ತು. ನಿಧಾನವಾಗಿ ಕತ್ತಲು ಆವರಿಸುತ್ತಿತ್ತು. ಇನ್ನೆಲ್ಲಿ ಸಿಗುವ ಮಾತು? ಹೋದದ್ದು ಹೋಯ್ತು... ಎಂದು ಕೊಂಡು, ಬೆನ್ನನ್ನು ನೆಟ್ಟಗೆ ಮಾಡಿ ನಿಂತು ಒಬ್ಬರ ಮುಖವನ್ನು ಒಬ್ಬರು ನೋಡಿ ಪೆಚ್ಚು ಮುಖ ಹಾಕಿದೆವು. ಅತ್ತೆಯಿಂದ ಏನೇನು ಬೈಗುಳ ಕೇಳಬೇಕಾಗುತ್ತದೋ ಎಂದು ಹೆದರಿ ಅಳುತ್ತಿದ್ದ ಅತ್ತಿಗೆ, ಬರುತ್ತಿದ್ದ ಕಣ್ಣೀರನ್ನು ಒರೆಸಿಕೊಳ್ಳಲೆಂದು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಸೆರಗನ್ನು ಬಿಚ್ಚಿದಳು. ಏನಾಶ್ಚರ್ಯ! ಹೇಗೋ ಏನೋ ಸೆರಗಿನೊಳಗೆ ಸಿಕ್ಕಿಕೊಂಡಿದ್ದ ವಾಲೆ, ಬಂ[illegible]ಲ್ಲಿಗೆ ತಗುಲಿ ಸಣ್ಣಗೆ ಸದ್ದನ್ನು ಮಾಡಿತ್ತು.

'ಏನ[illegible] ಎಂದು ಹತ್ತಿರ ನಿಂತಿದ್ದವಳು ಬಾಗಿ, ಅದನ್ನು ಕೈಗೆತ್ತಿಕೊಂ[illegible] ಫಳನೆ ಹೊಳೆಯುವ ಪುಷ್ಯರಾಗದ ವಾಲೆ! ಎಲ್ಲರ ದೃಷ್ಟಿ[illegible] ಅವಳಿಗೆ ಸಿಕ್ಕ ವಾಲೆಯ ಮೇಲೆ ಇತ್ತು "ಸಿಕ್ತು" ಒಕ್ಕೊರಲಿನ[illegible]ದೆವು.

ಅಣ್ಣ[illegible]ಲಿಲ್ಲ "ತಮಾಷೆ ಮಾಡ್ಬೇಡಿ" ರೇಗಿದ.

"ಇಲ್ಲಪ್ಪಾ, ತಮಾಷೆ ಅಲ್ಲ. ನಿಜವಾಗಿಯೂ ಸಿಕ್ಕಿದೆ. ಈಗ್ಲಾದ್ರೂ ಅತ್ತಿಗೆಗೆ ಸಾರಿ [illegible]. ಅವರು ಇನ್ನೂ ಅಳ್ತಿದಾರೆ" ಎನ್ನುತ್ತಾ ವಾಲೆಯನ್ನು ತೋರಿಸಿದಳು [illegible] ಚಿಕ್ಕಮ್ಮನ ಮಗಳು.

"ಸಧ್ಯ ಸಿಕ್ತಲ್ಲ. ಇಲ್ದಿದ್ರೆ ಅಮ್ಮಂಗೆ ಏನ್ಹೇಳ್ಬಾಗಿತ್ತು?"

"ನಮ್ಮಪ್ಪನಿಗೆ ಹೇಳಿ, ಬೇರೆ ಹೊಸದನ್ನು ತೆಗಿಸಿಕೊಂಡಿರ್ತಿದ್ದೆ" ಈಗ ಅತ್ತಿಗೆ ಚೇತರಿಸಿಕೊಂಡಿದ್ದಳು.

"ನಂಗೊತ್ತು ನಿನ್ನ ತವರು ಮನೆಯವರು ಶ್ರೀಮಂತರು ಅಂತ. ಕೂತ್ಕೊಂಡು ವಾಲೇನ ಹಾಕ್ಕೋ. ಮತ್ತೆ ಬೀಳಿಸ್ಕೋ ಬೇಡ" ಎನ್ನುತ್ತಾ ಅವಳ ಭುಜದ ಮೇಲೆ ಕೈ ಇಟ್ಟ.

"ಸಾರೀ ರೀ. ಹೀಗಾಗುತ್ತೆ ಅಂತ ನಂಗೆ ಗೊತ್ತಿರ್ಲಿಲ್ಲ. ಕೆಲ ಹುಡುಗ್ರು ಬಂಡೆ ಮೇಲೆ ಜಾರುತಿದ್ರು. ಅದನ್ನು ನೋಡಿ ಆಸೆ ಆಯ್ತು. ಆದರೆ ಹೀಗೆ ಬೀಳ್ತೀನಿ ಅಂತ ನಂಗೆ ಗೊತ್ತಿರ್ಲಿಲ್ಲ.

"ನಂಗೊತ್ತು ನೀನು ಛಾಂಪಿಯನ್ ಅಂತ. ಆದರೆ ನಿನ್ನ ಸೊಂಟ ಈಗ ಸಣ್ಣಗಿಲ್ಲ, ನೀನೀಗ ಭಾರಿ ಹೆಂಗಸು..." ಅಣ್ಣ ಚುಡಾಯಿಸುತ್ತಿದ್ದ.

"ನೋಡ್ರೆ ಹೇಗೆ ರೇಗಿಸ್ತಾರೆ... ಎನ್ನುತ್ತ ಕಿವಿಗೆ ವಾಲೆಯನ್ನು ಧರಿಸಿ, ತಿರುಪನ್ನು ಬಿಗಿಯಾಗಿ ತಿರುಗಿಸಿದಳು. ನಾವುಗಳು ಅವರ ಹುಸಿ ಜಗಳವನ್ನು ನೋಡಿ ಕಿಸಿ ಕಿಸಿ ನಕ್ಕೆವು.

"ಹುಷಾರು...ಇಲ್ಲಿ ನಡೆದದ್ದನ್ನು ಯಾರಿಗೂ ತಿಳಿಸ್ಬೇಡಿ, ನಡೀರಿ ಯಾವ್ದಾದ್ರೂ ಬಸ್ಸು ಸಿಕ್ಕುತ್ತಾಅಂತ ನೋಡೋಣ..."

:ಹೌದಪ್ಪ, ಬೇಗ ಛತ್ರಕ್ಕೆ ಹೋಗೋಣ... ಬಿಸಿ ಬಿಸಿ ಕಾಫೀನ ಕುಡೀಬೇಕು ಅಂತ ಅನ್ನಿಸಿದೆ... ಎಲ್ಲರೂ ಬಸ್‌ಸ್ಟ್ಯಾಂಡ್ ಕಡೆಗೆ ನಡೆದೆವು. ಮೊದಲೇ ತುಂಬಿಕೊಂಡು ನಿಂತಿದ್ದ ಬಸ್ಸಿನೊಳಕ್ಕೆ ನಮ್ಮನ್ನು ನಾವು ತುರುಕಿಕೊಂಡೆವು. ಬಸ್ಸು ನಿಧಾನಕ್ಕೆ ಚಲಿಸಿತು.

ಛತ್ರವನ್ನು ತಲುಪಿದಾಗ, ಆರತಕ್ಷತೆ ಮುಗಿದು ಊಟಕ್ಕೆ ಎಲೆಗಳನ್ನು ಹಾಕುತ್ತಿದ್ದರು. ಸದ್ದು ಗ್ದಲವಿಲ್ಲದೆ ನಾವುಗಳು ಕೈಕಾಲು ತೊಳೆದು ಊಟಕ್ಕೆ ಕುಳಿತೆವು. ಹೊಟ್ಟೆಗೆ ಬಿದ್ದ ಮೇಲೆ. ಸ್ವಲ್ಪ ಚೈತನ್ಯ ಬಂದಂತಾಗಿತ್ತು. ಪಿಸು ಮಾತಿಲ್ಲದೇ, ಕಿಸಿ ಕಿಸಿ ನಗುವಿಲ್ಲದೇ ಊಟ ಮಾಡುತ್ತಿದ್ದುದನ್ನು ನಮ್ಮ

ನಮ್ಮ ಹಿರಿಯರು ಗಮನಿಸಿದರೋ ಇಲ್ಲವೋ ಅವರುಗಳು ಉಡುಗೊರೆ, ಉರುಟಣೆ ಹಾಗೂ ಮುಂದಿನ ಕಾರ್ಯಕ್ರಮಗಳ ಬಗ್ಗೆ ಉತ್ಸುಕರಾಗಿದ್ದರು.

ಚಿಕ್ಕಮ್ಮ ಮಾತ್ರ ತನ್ನ ಸೊಸೆಯನ್ನು ಕೇಳಿದ್ದರು. "ಯಾಕೇ ಹುಶಾರಿಲ್ವೇನೇ? ಮುಖವೆಲ್ಲಾ ರಾಹು ಬಡಿದಂತಾಗಿದೆ. ಬಾ...ನಿಂಗೂ ದೃಷ್ಟಿ ತೆಗಿಸ್ತೀನಿ" ಅವಳು ನಾಚಿದ್ದಳು.

"ಏನೂ ಎಲ್ಲ ಅತ್ತೆ ಬಸ್ನಲ್ಲಿ ನಿಂತುಕೊಂಡು ಬಂದೆವೆಲ್ಲಾ ಎಲ್ರಿಗೂ ಸ್ವಲ್ಪ ಕಾಲು ನೋಯ್ತಿದೆ. ಬೆಟ್ಟ ಬೇರೆ ಹತ್ತಿ ಇಳಿದಿದ್ದು" ಯಾರು ಏನು ಹೇಳಿ ಬಿಡುವರೋ ಎಂಬಂತೆ ಆತುರದಿಂದ ಹೇಳಿದಳು.

"ಸರಿ, ಎಲ್ರೂ ಬೇಗ ಮಲಕ್ಕೊಳ್ಳಿ, ನಮಗೆ ಸ್ವಲ್ಪ ಕೆಲಸವಿದೆ. ಆಕೆ, ನಸುನಗುತ್ತಾ, ತನ್ನ ಸಮ ವಯಸ್ಕರ ಮುಖವನ್ನು ನೋಡುತ್ತಾ ಹೇಳಿದಾಗ, ಆ ಕೆಲಸ ಏನು ಎಂದು, ಮದುವೆಯಾದ ಅವಳಿಗೆ ಅರ್ಥವಾಗಿತ್ತು.

"ಮದುವೆ ಮನೆಗೆ ಬಂದರೂ ಇವರುಗಳ ಕೆಲಸ ತಪ್ಪುಲ್ಲ. ಈ ಗಲಾಟೆಯಲ್ಲಿ ನಿದ್ದೆಯಂತೂ ಬರುಲ್ಲ. ಮಾತಾಡುವ ಹಾಗಿಲ್ಲ. ನಗುವ ಹಾಗಿಲ್ಲ. ಸಿನಿಮಾಕ್ಕೆ ಹೋಗೋಣ ಅತ್ಗೇ... ಅಣ್ಣನ್ನ ಕೇಳಿ. ಹೇಗೂ ಸೆಕೆಂಡ್ ಷೋಗೆ ಇನ್ನೂ ಸಮಯ ಇದೆ" ನಮ್ಮವರಲ್ಲಿ ಒಬ್ಬಳು ಕೇಳಿದಳು.

"ನಾನು ಕೇಳುಲ್ಲಮ್ಮ. ಮತ್ತೆ ಬೈದರೆ? ನೀವೇ ಯಾರಾದ್ರೂ ಕೇಳಿ ಕೈ ತೊಳೆದು ಬಂದ ಅಣ್ಣನನ್ನು ನಮ್ಮ ಪೈಕಿ ಒಬ್ಬಳು ಕೇಳಿದಳು. ಅಷ್ಟರಲ್ಲಿ ಅವನೇ ಹೇಳಿದ.

"ನಾನೇ ಹೇಳೋಣಾಂತಿದ್ದೆ. ಇಲ್ಲಂತೂ ನಿದ್ದೆ ಬರುಲ್ಲ. ಅಲ್ಲಾದರೂ ಬಾಲ್ಕನೀಲಿ ಕೂತು ನಿದ್ದೆ ಮಾಡೋಣ..." ಅವನು ಹೆಂಡತಿಯ ಕಡೆ ನೋಡಿ ಕಣ್ಣು ಹೊಡೆದು ಮತ್ತೆ ನುಡಿದ. ಎಲ್ರೂ ಬೇಗ ಏಳಿ." ಯಾರ್ಗೂ ಹೇಳೋದು ಬೇಡ. ಥಿಯೇಟರ್ ಇಲ್ಲೇ ಸಮೀಪದಲ್ಲಿದೆ." ಎಂದ.

ಸರಿ, ನಮ್ಮ ಗುಂಪು ಥಿಯೇಟರ್ ಕಡೆಗೆ ಹೊರಟಿತು. ಅವನೇ ನಮ್ಮಗಳನ್ನು ಎಣಿಸಿ, ಬಾಲ್ಕನಿಯ ಟಿಕೆಟನ್ನು ಕೊಂಡ. ಮೊದಲ ಷೋ ಮುಗಿದು ಜನರು ಹೊರಕ್ಕೆ ಬರುತ್ತಿದ್ದಂತೆ ನಾವುಗಳು ಒಳಗೆ ಹೋದೆವು.

ಕೆಲವೇ ನಿಮಿಷಗಳಲ್ಲಿ ಸಿನಿಮಾ ಶುರುವಾಗಿತ್ತು. ಯಾವುದೋ ಕನ್ನಡ ಸಿನಿಮಾ, ಹಾಡು ಡ್ಯಾನ್ಸ್ ಆರ್ಭಟವಾಗಿತ್ತು. ಹಾಗೆಯೇ ಸೀಟಿನ ಬೆನ್ನಿಗೆ ಒರಗಿ, ಸಿನಿಮಾದ ಕತೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆವು. ನೃತ್ಯ ಮಾಡುತ್ತಿದ್ದವಳ ಮುಖ ಮಬ್ಬು ಮಬ್ಬಾಗಿ, ಜೈನ ಬಸದಿಗಳಲ್ಲಿದ್ದ ತೀರ್ಥಂಕರರ ಮುಖದಂತೆ ಕಾಣಲಾರಂಭಿಸಿತು. ಕಣ್ಣು ಕಿರಿದು ಮಾಡಿದರೂ ಅಷ್ಟೆ. ಅಗಲ ಮಾಡಿದರೂ ಅಷ್ಟೇ. ಪಾತ್ರಧಾರಿಗಳು ಜಿನ ಮುನಿಗಳಂತೆ ಗೋಚರಿಸಲಾರಂಭಿಸಿದರು. ನಾವೇನು ಕನಸು ಕಾಣು ತ್ತಿದೇವೋ, ಅಥವಾ ಜೈನ ತೀರ್ಥಂಕರರ ಕತೆಯೋ ಎಂಬಂತೆ ಗೊಂದಲ ವನ್ನುಂಟು ಮಾಡಿತ್ತು. ಎಲ್ಲರೂ ಕಣ್ಣು ಮುಚ್ಚಿ, ನಿಧಾನವಾಗಿ ನಿದ್ದೆಯ ಆಳಕ್ಕೆ ಇಳಿದೆವು.

ಇಂಟರ್‌ವೆಲ್‌ನಲ್ಲಿ ಜೋರಾಗಿ ಬೆಲ್ ಆಗಿ, ದೀಪ ಹಚ್ಚಿದಾಗ ಎಲ್ಲರೂ ಎಚ್ಚರಗೊಂಡೆವು. ಹೆಚ್ಚು ಕಡಿಮೆ ಎಲ್ಲರ ಅನುಭವವೂ ಒಂದೇ ರೀತಿಯದ್ದಾಗಿತ್ತು...ಅಣ್ಣ ಆಕಳಿಸಿ, ಮೈಮುರಿದು ಎದ್ದು ನಿಂತ. ನಾನು ಛತ್ರಕ್ಕೆ ಹೋಗ್ತೀನಿ. ಇಲ್ಲಿ ಬರೀ ತಿಗಣೆ ಕಾಟ... ನೀವುಗಳೆಲ್ಲ ನಿಧಾನವಾಗಿ ಪೂರ್ತಿ ಸಿನಿಮಾ ನೋಡ್ಕೊಂಡು ಬನ್ನಿ.." ಎಂದ.

"ಯಾರ್ಗೂ ಸಿನಿಮಾದ ತಲೆ ಬುಡ ಒಂದೂ ಅರ್ಥವಾಗಿಲ್ಲ. ನಾನೂ ಬರ್ತೀನಿ..." ಅವನ ಹೆಂಡತಿಯೂ ಎದ್ದಳು.

"ನಮ್ಮ ಕತೆಯೂ ಅದೇ ಸುಮ್ಮನೆ ದುಡ್ಡು ದಂಡ. ಅದರೆ ನಿದ್ದೆ ಮಾತ್ರ ಚೆನ್ನಾಗಿ ಬಂದಿತ್ತು" ನಮ್ಮವರ ಪೈಕಿ ಒಬ್ಬಳು ನುಡಿದಳು.

"ಉಳಿದ ನಿದ್ದೇನ ಛತ್ರದಲ್ಲೇ ಮಾಡೋಣ. ಹೇಗೂ ಇವತ್ತು ಜಮಖಾನ, ಹಾಲು ಎಲ್ಲಾ ಕ್ಲೀನಾಗಿದೆ ಮತ್ತೊಬ್ಬಳ ನುಡಿ. ಅವಳು ಇವನ ಸೊಂಟವನ್ನು ಚಿವುಟಿ, 'ಶ್' ಎಂದಳು. ಎಲ್ಲರೂ ತಣ್ಣನೆಯ ಗಾಳಿಯಲ್ಲಿ ಕೈ ಕಟ್ಟಿ ಛತ್ರಕ್ಕೆ ಹಿಂತಿರುಗಿದೆವು. ಛತ್ರದ ಬಾಗಿಲು ತೆರೆದೇ ಇತ್ತು. ನಮ್ಮ ನಮ್ಮ ಪಾಡಿಗೆ ನಾವು ದಿಂಬು ಹೊದಿಕೆಗಳನ್ನೆಳೆದುಕೊಂಡು ಮಲಗಿದೆವು. ನಮ್ಮ ಪಾಡು ಬೇರೆಯವರ್‍ಯಾರಿಗೂ ಗೊತ್ತಾಗಲೇ ಇಲ್ಲ.

ಆ ದಿನಗಳಲ್ಲಿ ಜರುಗಿದ ಘಟನೆಗಳು ರೀಲಿನಂತೆ ಕಣ್ಣ ಮುಂದೆ ಹಾಯುತ್ತಿದ್ದಂತೆ ಮತ್ತೊಮ್ಮೆ ನಿದ್ದೆಯ ಜಾಲಕ್ಕೆ ಸಿಕ್ಕಿ ಬಿದ್ದೆವು.

ಗೊಮ್ಮಟೇಶ್ವರ ನಿರಾಭರಣ ಮೂರ್ತಿ. ವೈರಾಗ್ಯದ ಪ್ರತೀಕ. ಆದರೆ ಆ ದಿನ ನಡೆದದ್ದು ಆಭರಣದ ಹುಡುಕಾಟ. ಅದೇನು ಆಸೆಯನ್ನು ಕಡಿಮೆ ಮಾಡೋಕ್ಕೋ ಹೆಚ್ಚು ಮಾಡುಕ್ಕೋ ಗೊತ್ತಾಗಲಿಲ್ಲ.

* * * *

೧೪. ಸಂಗಾತಿ ಗಣಪ

ಅದೊಂದು ದೊಡ್ಡ ಶಹರು. ಅಲ್ಲಿ ಅನೇಕ ಬಡಾವಣೆಗಳು. ಊರು ಬೆಳೆದಂತೆಲ್ಲಾ ಬಡಾವಣೆಗಳು ಹೆಚ್ಚಾಗುವುದು ಸಹಜ. ಜನಸಂಖ್ಯೆ ಹೆಚ್ಚಾದಂತೆ ಮನೆ ಮಠ, ಸ್ಕೂಲು, ಕಾಲೇಜು ಆಸ್ಪತ್ರೆ ಎಲ್ಲವೂ ಬೇಕಾಗುತ್ತದೆ. ಎಲ್ಲಕ್ಕಿಂತ ಮೊದಲು, ಅಲ್ಲಿ ಒಂದು ದೇವಸ್ಥಾನ ಇರಲೇಬೇಕು, ಮೊದಲ ಆದ್ಯತೆ ದೇವರಿಗೆ. ಅದರಲ್ಲೂ ಗಣಪ, ಆಂಜನೇಯ ಊರೊಳಗೆ, ಊರಾಚೆ ಇರಲೇಬೇಕು.

ಹಾಗೆಯೇ ಈ ಬಡಾವಣೆಯಲ್ಲೂ, ಅಲ್ಲಿಯ ಭಕ್ತ ಸಮೂಹ ದವರಿಂದ ಒಂದು ಗಣಪತಿಯ ದೇವಸ್ಥಾನ ನಿರ್ಮಾಣವಾಯಿತು, ಸುಮಾರು ಎರಡು ಎರಡೂವರೆ ಅಡಿಗಳ ಗಣಪತಿಯ ವಿಗ್ರಹ ಮೂರ್ತಿ ಯನ್ನು ಸುಮೂಹೂರ್ತದಲ್ಲಿ ಅದ್ಧೂರಿಯಾಗಿ ಪ್ರತಿಷ್ಠಾಪನೆ ಮಾಡಲಾ ಯಿತು. ಸಮಾರಾಧನೆ, ಉತ್ಸವಗಳು ಸಂಭ್ರಮದಿಂದ ಆಚರಿಸಲ್ಪಟ್ಟವು. ನಲವತ್ತೆಂಟು ಧಿನಗಳ ಮಂಡಲ ಪೂಜೆಯಲ್ಲಿ ಸಹಸ್ರಾರು ಭಕ್ತಾದಿಗಳು ಪಾಲ್ಗೊಂಡರು. ಸೇವಾರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು, ಗಣಪತಿಯ ಅನುಗ್ರಹಕ್ಕೆ ಪಾತ್ರರಾಗಿ ಧನ್ಯರಾದರು. ಮನಸಾರೆ ಕಾಣಿಕೆಗಳನ್ನು ಅರ್ಪಿಸಿದರು, ಹರಕೆಗಳನ್ನು ಹೊತ್ತರು. ಗಣಪತಿ ಯನ್ನು ಸ್ತುತಿಸಿದರು. ಮಹಿಮೆಗಳನ್ನು ಕೊಂಡಾಡಿದರು. ಕೆಲವೇ ದಿನಗಳಲ್ಲಿ ಗಣಪನ ಪ್ರಖ್ಯಾತಿ ಅಕ್ಕ ಪಕ್ಕದ ಬಡಾವಣೆಗಳನ್ನು ತಲುಪಿತು. ಭಕ್ತರ ಸಂಖ್ಯೆ ಹೆಚ್ಚಾಯಿತು. ಸೇವಾ ಕೈಂಕರ್ಯಗಳು ಹೆಚ್ಚಾದವು. ಈ ಗಣಪನ

ಜವಾಬ್ದಾರಿಗಳು ಹೆಚ್ಚಾದವು. ಕಾರ್ಯಕಾರಿ ಸಮಿತಿಯ ಸದಸ್ಯರು ವಾರ್ಷಿಕೋತ್ಸವಗಳು ವಿಜೃಂಭಣೆಯಿಂದ ನಡೆಸಿದರು. ದೇವರ ಜೊತೆ ಜೊತೆಗೆ ಅನೇಕ ಗಣ್ಯರಿಗೆ ಸನ್ಮಾನಗಳನ್ನು ಮಾಡಿದರು. ವರ್ಷದಿಂದ ವರ್ಷಕ್ಕೆ ಸಂಭ್ರಮ ಉತ್ಸಾಹ, ಉತ್ಸವಗಳು ಹೆಚ್ಚಾದವು.

ಹೀಗೆ ಹಲವಾರು ವರ್ಷಗಳು ಗಣಪತಿಯ ಪೂಜೆ ಪುನಸ್ಕಾರಗಳು, ಅವ್ಯಾಹತವಾಗಿ ಜರುಗಿದವು. ವಾರ್ಷಿಕೋತ್ಸವಗಳ ಸಮಯದಲ್ಲಿ ಸ್ಪರ್ಧೆ ಗಳೂ, ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಾಡಾದವು. ಭಕ್ತರು ಮುಕ್ತ ವಾಗಿ ತನುಮನ ಧನಗಳನ್ನು ಅರ್ಪಿಸಿ, ಭಕ್ತಿ ಶ್ರದ್ಧೆ ಉತ್ಸಾಹಗಳಿಂದ ಸಂಭ್ರಮಿಸುತ್ತಿದ್ದರು. ಮಂಗಳಾರತಿ ತೀರ್ಥ ಪ್ರಸಾದಗಳಿಂದ ಭಕ್ತಾಧಿಗಳು ಸಂತುಷ್ಟರಾಗಿದ್ದರು. ಮಹಾಗಣಪತಿ ಸುಪ್ರಸನ್ನನಾಗಿದ್ದ.

ಒಮ್ಮೆ ಬೇರೆ ಪ್ರಾಂತ್ಯದಿಂದ ಭಕ್ತನೊಬ್ಬನು ಅಲಂಕೃತಗೊಂಡಿದ್ದ ಮಹಾಗಣಪತಿಯ ಮೇಲೆ ನೋಟವನ್ನು ಹರಿಸಿದ ಅವನ ಮನದಲ್ಲಿ ಯಾವ ಭಾವ ಮೂಡಿತೋ, ತನಗೆ ಅನ್ನಿಸಿದ್ದ ನ್ನು ಕಾರ್ಯಕಾರಿ ಸಮಿತಿಯ ಅಧ್ಯಕ್ಷರೊಡನೆ ಹೇಳಿದ.

ನೀವು ಪ್ರತಿಷ್ಠಾಪಿಸಿ, ಪೂಜಿಸುತ್ತಿರುವುದು ಎಡಮುರಿ ಗಣಪತಿಯನ್ನು, ಇದರ ಬದಲು ಬಲಮುರಿ ಗಣಪತಿಯನ್ನು ಪೂಜಿಸುವುದು ಬಹಳ ಶ್ರೇಷ್ಟ ಎಂದು ಹೇಳಿದ್ದೇ ತಡ. ಆಡಳಿತಾಧಿಕಾರಿಗಳ ಕಿವಿ, ಚುರುಕಾಯಿತು. ಭಕ್ತರಿಗೆ ಕಾಮನೆಗಳು ಹೆಚ್ಚು, ಹಾಗೆ ಆಸೆಗಳು ಬೇಗ ನೆರವೇರುವುದು. .. ಇದರಿಂದ ನಿಮ್ಮ ದೇವಾಲಯಕ್ಕೆ ಭಕ್ತರ ಸಂಖ್ಯೆ ಹೆಚ್ಚುತ್ತದೆ. ಆದಾಯವೂ ಹೆಚ್ಚುತ್ತದೆ. ಬಲಮುರಿ ಗಣಪತಿಯ ಮಹತ್ವವೇ ಅಂಥದು ಅಂತ ಅವನು ಹೇಳಿದ್ದೇ ತಡ, ಕಾರ್ಯಕಾರಿ ಸಮಿತಿ, ಆ ನಂತರ ತಕ್ಷಣವೇ ಒಂದು ಮೀಟಿಂಗ್ ಮಾಡಿ, ಈ ಅಭಿಪ್ರಾಯವನ್ನು ಎಲ್ಲರ ಮುಂದಿಟ್ಟರು. ಸದಸ್ಯರು ಕೈ ಎತ್ತಿದರು. ಅಲ್ಲಿಗೆ ಗಣಪತಿ ಮೂರ್ತಿಯನ್ನು ಆದಷ್ಟು ಬೇಗ ಬದಲಾಯಿಸುವುದೆಂದು ತೀರ್ಮಾನವಾಯಿತು.

ಅದೇ ಮಹನೀಯರ ನೇತೃತ್ವದಲ್ಲಿ ಬಲಮುರಿ ಗಣಪತಿಯ

ವಿಗ್ರಹವನ್ನು ತರಲಾಯಿತು. ಒಂದು ಶುಭ ಮುಹೂರ್ತದಲ್ಲಿ ಎಡಮುರಿ ಗಣಪತಿಯನ್ನು ಕೆಳಗಿಳಿಸಿ, ದೇವಸ್ಥಾನದ ಪ್ರಾಂಗಣದಲ್ಲಿ ಒಂದು ಕಡೆ ಮಲಗಿಸಿದರು. ಬಲಮುರಿ ಗಣಪತಿಯ ಮೂರ್ತಿಯನ್ನು ವಿಜೃಂಭಣೆ ಯಿಂದ ಪ್ರತಿಷ್ಠಾಪಿಸಿದರು. ವೈಭವಯುತವಾಗಿ ಉತ್ಸವಗಳಾದಿಗಳು ಜರುಗಿದವು. ಅನ್ನ ಸಂತರ್ಪಣೆ ಮಾಡಿದರು. ಪ್ರತಿಷ್ಠಿತರಿಗೆ ಸನ್ಮಾನಗಳನ್ನು ಮಾಡಲಾಯಿತು. ಈ ಸಂಭ್ರಮಗಳ ನಡುವೆ, ಪೀಠದಿಂದ ಕದಲಿಸಿದ ಗಣಪನನ್ನು ಗಮನಿಸುವವರಿಲ್ಲದಂತಾಯಿತು.

ಈ ಗಣಪತಿಗೆ ಖಂಡಿತಾ ಬೇಸರವಾಗಿರಬೇಕು.. ಪೂಜೆ, ನೈವೇದ್ಯ ಮಂಗಳಾರತಿ, ಅಭಿಷೇಕಗಳಿಲ್ಲದೇ ಒಂದು ಕಡೆ ಮಲಗಿರಬೇಕಾದ ಸ್ಥಿತಿ ಒದಗಿತಲ್ಲ. ಈ ಭಕ್ತರಿಗೆ ನಾನು ಬೇಡವಾದನೇ? ನನ್ನ ಜಾಗದಲ್ಲಿ ನೂತನ ಗಣಪತಿಯನ್ನು ಪ್ರತಿಷ್ಠಾಪಿಸಿ, ನನ್ನನ್ನು ಮರೆತೇ ಬಿಟ್ಟರಲ್ಲ. ನಾನೇನು ವೃದ್ಧನೇ? ಅಥವಾ ನಿಶ್ಯಕ್ತನೇ? ಪುರಾತನ ಪ್ರಾಚ್ಯವಸ್ತುಗಳನ್ನಿಡುವ ಸಂಗ್ರಹಾಲಕ್ಕೆ ತಕ್ಕವನಾಗಿಹೆನೆ? ಒಳಗೊಳಗೇ ಗಣಪನಲ್ಲಿ ನಾನಾ ಭಾವನೆಗಳು ಮೂಡಿರಲೇಬೇಕು.

ಮಂಡಲ ಪೂಜೆ ಮಂಗಳಗೊಂಡು, ವಾತಾವರಣದ ಸಂಭ್ರಮ ಸ್ವಲ್ಪ ಮಟ್ಟಿಗೆ ಕಡಿಮೆ ಆದ ಮೇಲೆ ಕನಿಕರ ಮೂಡಿರಬೇಕು. ಅಥವಾ ಕನಸಿನಲ್ಲಿ ಪ್ರತ್ಯಕ್ಷನಾಗಿರಬೇಕು. ಆಗ ಇದುವರೆಗೂ ತಾವು ಪೂಜಿಸುತ್ತಿದ್ದ ಗಣಪನಿಗೆ ಯಾವ ಸ್ಥಾನಮಾನವನ್ನು ನೀಡದೇ ಹೀಗೆ ಮಲಗಿಸಿರುವುದು ಯುಕ್ತವಲ್ಲ ಎಂದೆನಿಸಿ, ಅವರವರಲ್ಲೇ ಮಾತನಾಡಿಕೊಂಡು, ಗಣಪನಿಗೆ ಒಂದು ಸ್ಥಾನವನ್ನು ಹೇಗಾದರೂ ಕಲ್ಪಿಸಬೇಕೆಂದು ಕೊಂಡರು. ಕೆಲವರು, ಹಾಗೆ ನೆಲದ ಮೇಲೆ ಮಲಗಿಸಬಾರದು, ನದಿಯಲ್ಲೋ ಸಮುದ್ರದಲ್ಲೋ ಮುಳುಗಿಸಿ ತಣ್ಣಗಿಡಬೇಕು ಎಂಬ ಅಭಿಪ್ರಾಯವನ್ನು ಹೊರ ಸೂಸಿದರು.

ಎಷ್ಟೋ ವರ್ಷಗಳಿಂದ ನಮ್ಮೊಡನೆ ಇದ್ದ ಗಣಪನನ್ನು ಯಾವುದೋ ನದೀ ತಳದಲ್ಲಿ ಮುಳುಗಿಸುವುದು ಬೇಡ. ಅಯ್ಯೋ ಅಂತ ಅನ್ನಿಸುತ್ತೆ. ಬೇರೆ ಯಾರಿಗಾದರೂ ಕೊಟ್ಟು ಬಿಡೋಣ, ಅವರ ಬಳಿ ಇಟ್ಟುಕೊಂಡು

ಪೂಜಿಸಲಿ" ಈ ಭಕ್ತ ನುಡಿಯನ್ನು ಮಹಿಳಾ ಭಕ್ತರು ಒಪ್ಪಲಿಲ್ಲ.

ಎಷ್ಟು ದೊಡ್ಡ ವಿಗ್ರಹವನ್ನು ಯಾರೂ ಮನೆಯಲ್ಲಿಟ್ಟುಕೊಂಡು ಪೂಜಿಸುವುದಿಲ್ಲ. ಹಾಗೆಲ್ಲಾ ಷೋಕೇಸ್‌ನಲ್ಲಿ ಇಡುವಂತೆಯೇ ಇಲ್ಲ. ಇದು ಸರಿಯಲ್ಲ.

ಹಾಗಾದರೆ ಯಾವುದಾದರೂ ದೇವಾಲಯಕ್ಕೆ ಕೊಟ್ಟು ಬಿಡೋಣ" ಇನ್ನೊಬ್ಬರು ಸಲಹೆಯನ್ನಿತ್ತರು.

ಎಲ್ಲಾ ದೇವಾಲಯಗಳಲ್ಲೂ ಗಣಪತಿಯ ವಿಗ್ರಹ ಇದ್ದೇ ಇರುತ್ತೆ. ಅಲ್ಲದೇ ಈ ಗಣಪನನ್ನು ಕೆಳಗೆ ಇಳಿಸಿರುವ ವಿಷಯ ತಿಳಿದರೆ, ಗಣಪನನ್ನು ಸುಮ್ಮುಸಮ್ನೆ ಯಾಕೆ ಇಟ್ಟುಕೊಳ್ತಾರೆ! ಹೀಗೆ ಯಾರೂ ಗಾಳಿ ಬೆಳಕು ಬೀಳುವಂತೆ ಇಡಲು ಒಪ್ಪುವುದಿಲ್ಲ." ಮತ್ತೊಬ್ಬ ವಿವೇಕಿಯಯ ನುಡಿ.

ಹೌದು, ಹೌದು. ಹೀಗೆ ವಿಘ್ನೇಶನಿಗೆ ಆಪತ್ತು ಬರಬಾರದಾಗಿತ್ತು. ಅಪರಾಧ ನಡೆದು ಹೋಗಿದೆ. ಅದನ್ನು ಸರಿ ಪರಿಸಲೇ ಬೇಕು., ನಾವು ಭಕ್ತಿಯಿಂದ ಪೂಜಿಸಿದ ಗಣಪನಿಗೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಲೇಬೇಕು." ಮಹಿಳಾ ಭಕ್ತರು ಆವೇಶದಿಂದ ನುಡಿದರು. ಅಂತೆಯೇ ಅಲ್ಲಿಯ ಮಹಿಳಾ ಸಂಘದವರು ನಡೆಸುತ್ತಿದ್ದ ಸಂಗೀತ ಶಾಲೆಯಲ್ಲಿ ಈ ವಿಷಯವನ್ನು ಘೋಷಿಸಿ ತಮ್ಮ ನಿರ್ಣಯವನನು ತಿಳಿಸಿ, ಸಹಾಯ ಸಲಹೆಯನ್ನು ಕೇಳಿದರು. ಆ ಸಂಗೀತ ಶಾಲೆಯಲ್ಲಿನನ್ನ ಅಕ್ಕ. ಮಹಿಳೆ ಯರಿಗೆ, ದೇವರ ನಾಮಗಳನ್ನು ಭಜನೆಗಳನ್ನೂ ಕಲಿಸಿಕೊಡುತ್ತಿದ್ದಳು. ಎಲ್ಲರಿಗೂ ಗಣಪನಿಗೆ ಒದಗಿರುವ ಸ್ಥಿತಿಯನ್ನು ಕಂಡು ಬೇಸರವಾಯಿತು. ಆದಷ್ಟು ಬೇಗ, ಗಣಪನಿಗೆ ಒಂದು ವ್ಯವಸ್ಥೆಯನ್ನು ಮಡುವ ಸಂಕಲ್ಪವನ್ನು ತೊಟ್ಟರು.

ಅದೇ ದಿನ ನನ್ನ ಅಕ್ಕ ನನಗೆ ಫೋನು ಮಾಡಿ ಎಲ್ಲವನ್ನೂ ವಿಶದವಾಗಿ ತಿಳಿಸಿದಳು. ನಮ್ಮ ಗಣಪತಿಯನ್ನು ನೋಡಿದರೆ ಅಯ್ಯೋ ಅಂತ ಅನ್ನಿಸುತ್ತದೆ, ಗಣಪನನ್ನು ಒಂದ್ಧು ಸರಿಯಾದ ಸ್ಥಳಕ್ಕೆ ಸೇರಿಸಬೇಕೆಂಬ ಆಸೆ ನಮ್ಮೆಲ್ಲರದು. ಇದಕ್ಕೆ ನಿನ್ನ ಸಲಹೆ ಹಾಗೂ ಸಹಾಯ ಬೇಕು"

ಕೇಳಿದಳು.

"ಯಾವ ತರಹ?" ಈ ಬಗ್ಗೆ ಹೆಚ್ಚು ವಿಷಯ ತಿಳಿಯದು ನನಗೆ.

ನೀವು ಇರುವ ಬಡಾವಣೆಯಲ್ಲಿ ಎಷ್ಟೋ ಹಳೆಯ ದೇವಸ್ಥಾನಗಳಿವೆ. ನಿನಗೆ ಅನೇಕರ ಪರಿಚಯವಿದೆ. ಯಾರಾದರೂ ಅರ್ಚಕರಾಗಲೀ, ಭಕ್ತ ರಾಗಲೀ, ಈ ಗಣಪನನ್ನು ಯಾವುದಾದರೂ ಗುಡಿಗೆ ಸೇರಿಸಿ ಪುಣ್ಯವನ್ನು ಕಟ್ಟಿಕೊಳ್ಳಲಿ, ಇದಕ್ಕಾಗಿ ಅವರು ಯಾವ ಖರ್ಚನ್ನೂ ಮಾಡುವುದು ಬೇಡ. ನಾವೇ ಕಳಿಸಿಕೊಡುತ್ತೇವೆ, ಇಲ್ಲಿ ಗಣಪತಿ ಸುಮ್ಮನೇ ಮಲಗಿರುವ ಬದಲು ಅಲ್ಲಿ ಗುಡಿಯಲ್ಲಿ ಕುಳಿತಿರಲಿ. ನಿಮ್ಮೂರಿಗೆ ಸಮೀಪದಲ್ಲಿ ಅನೇಕ ಹಳ್ಳಿಗಳಿವೆ. ಹಳ್ಳಿಯ ಜನರಿಗೆ ಭಯ ಭಕ್ತಿ ಜಾಸ್ತಿ. ಯಾರಾದರೂ ಖಂಡಿತಾ ಒಪ್ಪಬಹುದು. ವಿಚಾರಿಸ್ತೀಯಾ? ಮತ್ತೆ ಕೇಳಿದಳು. ಅವರಿಗೂ ಒಳ್ಳೆಯ ದಾಗುತ್ತದೆ. ನನಗೂ ಪುಣ್ಯ ಬರುತ್ತದೆ." ಆಸೆ ತೋರಿದಳು.

ನಾನೂ ಒಂದೆರಡು ಬಾರಿ ಈ ಗಣಪನನ್ನು ನೋಡಿದ್ದೆ. ಮೂರ್ತಿ ಚಿಕ್ಕದಲ್ಲ. ಹಾಗೇ ಕೀರ್ತಿಯೂ ದೊಡ್ಡದಾಗಿತ್ತು. ಈಗ ಗಣಪತಿಗೆ ಈ ಸ್ಥಿತಿ! ಆದರೆ ಹೇಗೆಂಥರೆ ಹಾಗೆ ಗಣಪನನ್ನು ಎತ್ತಿ ತಂದಿಟ್ಟುಕೊಳ್ಳಲು ಯಾರೂ ಸುಲಭವಾಗಿ ಒಪ್ಪುವರಲ್ಲ ಎಂದು ತಿಳಿದಿತ್ತು. ಆದರೂ ಗಣಪನಿಗೆ ಒದಗಿರುವ ಅವಸ್ಥೆಯನ್ನು ಕಂಡು ಮನಸ್ಸು ಕಲಕಿತು, ದೇವಸ್ಥಾನವನ್ನು ಕಟ್ಟಿಸಿ, ತಾವೇ ಶ್ರದ್ಧೆಯಿಂದ ಪ್ರತಿಷ್ಠಾಪಿಸಿ, ಭಕ್ತಿಯಿಂದ ಪೂಜಿಸಿದ ಗಣಪನನ್ನು ಏಕಾಏಕೀ ಹೀಗೆ ಕೆಳಗೆ ಇಳಿಸಿ, ಮಲಗಿಸಿ, ನಿಸ್ಸಹಾಯಕ ನನ್ನಾಗಿ ಮಾಡಲು ಇವರುಗಳಿಗೆ ಹೇಗಾದರೂ ಮನಸ್ಸು ಬಂತೋ ಎಂದು ಮನಸ್ಸು ಮಮ್ಮಲ ಮರುಗಿತು. ನನ್ನಿಂದ ಏನಾದರೂ ಆಗುವು ದಾದರೆ ಮಾಡಬೇಕು ಎಂಬ ಆಲೋಚನೆ ಸುಳಿಯಿತು. ನಾನಾ ದಿಕ್ಕುಗಳಲ್ಲಿ ಮನಸ್ಸು ತಿರುಗಾಡಿತು. ಈ ವಿಷಯದಲ್ಲಿ ಯಾರನ್ನ ಕೇಳಬಹುದು, ಯಾರಿಂದ ಅನುಕೂಲವಾಗ ಬಹುದು ಅಂತ ಮತ್ತೆ ಮತ್ತೆ ಯೋಚಿಸಿದಾಗ, ನೆನಪಿಗೆ ಬಂದವಳು ನನ್ನ ಕಸಿನ್.

ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ

ನಂತರ ಈಗ ಸಾಮಾಜಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದಳು. ಒಂದು ಆಶ್ರಮದ ಟ್ರಸ್ಟಿಯಾಗಿದ್ದಳು. ಸಕ್ರಿಯವಾಗಿ, ಆಶ್ರಮದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಳು. ಅಲ್ಲಿ ವೃದ್ಧಾಶ್ರಮವನ್ನು ನಡೆಸುತ್ತಿರುವರೆಂದು ತಿಳಿಸಿದ್ದಳು. ಈ ವಿಷಯ ನೆನಪಿಗೆ ಬಂದದ್ದೇ ತಡ ನನ್ನ ಅಕ್ಕನಿಗೆ ಘೋನು ಮಾಡಿ, ಅವಳ ಘೋನು ನಂಬರನ್ನು ಕೊಟ್ಟು, ಅವಳ ಬಳಿ ಮಾತನಾಡುವಂತೆ ಹೇಳಿದೆ.

ನೀನು ಈಗ್ಲೇ ಅವಳಿಗೆ ಘೋನು ಮಾಡು. ಆಶ್ರಮ ಕೆಲವೇ ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಗಣಪತಿಯನ್ನು ತಮ್ಮ ಆಶ್ರಮದಲ್ಲಿ ಇಟ್ಟುಕೊಳ್ಳಲು ಒಪ್ಪಿದರೂ ಒಪ್ಪಬಹುದು." ಎಂಬ ಸಲಹೆಯನ್ನಿತ್ತೆ.

"ನನ್ನ ಅಕ್ಕನಿಗೆ ಸಂತಸವೂ ಆಯಿತು. ಸಮಾಧಾನವೂ ಆಯಿತು, ನಾನು ಈಗಲೇ ಅವಳ ಹತ್ತಿರ ಮಾತನಾಡ್ತೀನಿ ಎಂದು ಉತ್ಸಾಹದಿಂದ ಹೇಳಿದಳು. ಮತ್ತೆ ಕೆಲವೇ ನಿಮಿಷಗಳ ನಂತರ ನನಗೆ ಘೋನು ಮಾಡಿದಳು.

"ನಿನ್ನನ್ನು ಕೇಳಿದ್ದು ತುಂಬಾ ಒಳ್ಳೇದಾಯ್ತು. ಅವಳು ತಕ್ಷಣವೇ ಒಪ್ಪಿ ಕೊಂಡಳು. ಚಿಟಿಕೆ ಹೊಡೆಯುವಷ್ಟರಲ್ಲಿ ಸಮಸ್ಯೆಗೆ ಪರಿಹಾರ ಸಿಕ್ಕಂತಾಯ್ತು. ಇವತ್ತೇ ಸಾಯಂಕಾಲ, ಆಶ್ರಮಕ್ಕೆ ಗಣಪತಿಯ ವಿಗ್ರಹ ವನ್ನು ಅವರ ವ್ಯಾನಿನಲ್ಲೇ ತೆಗೆದುಕೊಂಡು ಹೋಗ್ತಾರಂತೆ. ಇನ್ನೆಲ್ಲಾ ಜವಾಬ್ದಾರಿ ಅವಳದ್ದು. ಅವಳಿಗೆ, ನಿನಗೆ, ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಲದು" ಮತ್ತೆ ಮತ್ತೆ ಹೇಳಿದಳು.

"ನಿನಗೂ ನಿನ್ನ ಶಿಷ್ಯೆಯರು. ಅಲ್ಲಿಯವರು ಥ್ಯಾಂಕ್ಸ್ ಮ್ಯೇಡಂ ಅಂತ ಹೇಳ್ತಾರಲ್ಲ." ನಾನೂ ನಗೆಯನ್ನು ಸೇರಿಸಿ ಹೇಳಿದೆ.

ನನ್ನ ಮನಸ್ಸಿಗೆ ಒಂದು ರೀತಿಯ ನೆಮ್ಮದಿ ಸಿಕ್ಕಿದೆ. ಅಂತೂ ನಮ್ಮ ಗಣಪನನ್ನು ನೆಲೆಗೆ ಸೇರಿಸಿದ ಪುಣ್ಯ ಎಲ್ಲರಿಗೂ ಸಿಕ್ತಿದೆ. ಅಸಹಾಯಕನಂತೆ ಮಲಗಿದ್ದ ಗಣಪನನ್ನು ನನ್ಕೈಲಿ ನೋಡುಕ್ಕಾಗ್ತಿರಲಿಲ್ಲ." ಎಂದಳು.

"ಗಣಪ ಆರ್ಶರಮವನ್ನು ಅಲ್ಲಿ ಆರಾಮವಾಗಿರ್ತಾನೆ. ನೋಡ್ತಿರು., ನಾನು ಆಶ್ವಾಸನೆಯ ಮಾತನ್ನಾಡಿದೆ.

ಒಂದು ವಾರಗಳ ನಂತರ ನನ್ನ ಅಕ್ಕ ಫೋನು ಮಾಡಿ ಗಣಪನ, ಸಧ್ಯದ ಸ್ಥಿತಿಯನ್ನು ವಿವರಿಸಿದಳು." ನಮ್ಮ ಗಣಪನನ್ನು ಆರ್ಶರಮದಲ್ಲಿ ಅರಳೀ ಮರದ ಕೆಳಗೆ ಪ್ರತಿಷ್ಠಾಪಿಸಿದ್ದಾರೆ. ನಮ್ಮ ವೃಂದದವರನ್ನೆಲ್ಲಾ ಕರೆದಿದ್ದಾರೆ. ಅಲ್ಲಿ ನಮ್ಮ ಭಜನಾ ಕಾರ್ಯಕ್ರಮವಿದೆ. ನಮಗೆಲ್ಲರಿಗೂ ಅಲ್ಲಿಯೇ ಊಟ. ಸಂತಸದಿಂದ ಹೇಳಿಕೊಂಡಳು. ನನಗೂ ಖುಷಿ ಯಾಗಿತ್ತು.

ಅಂತೂ ಗಣಪನಿಗೆ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾಗಿತ್ತು. ವೃದ್ಧಾಶ್ರಮವನ್ನು ಸೇರಿದ ಈ ಗಣಪ ಈಗ ವೃದ್ಧರ ಸಂಗಾತಿ. ಆಶ್ರಮದ ರಕ್ಷಕ. ಪಾಲಕ. ಮನೆ ಮಠವನ್ನು ಬಿಟ್ಟು ಹತ್ತಿರದವರಿಂದ ದೂರವಾಗಿ ದ್ದುಕೊಂಡು ಅನುಭವಿಸುವ ಯಾತನೆಯನ್ನು ಹೇಳಿಕೊಳ್ಳಲು, ಗಣಪ ನಿಗಿಂತ ಬೇರೆ ಸ್ನೇಹಿತ ಬೇಕೆ? ಈ ವ್ಯಥೆಯ ಕತೆ, ಗಣಪತಿಗೆ, ಈ ಗಣಪತಿಗಲ್ಲದೆ ಬೇರೆ ಇನ್ಯಾರಿಗೆ ಅರ್ಥವಾಗುತ್ತದೆ!

ಈಗ ಈ ಗಣಪ ಈಗ ಅಸಾಹಾಯಕನಲ್ಲ. ವೃದ್ಧಾಶ್ರಮದ ಸೆಕ್ಯೂರಿಟಿ ಗಾರ್ಡ್! ಹಗಲೂ ರಾತ್ರಿ ಅವರುಗಳನ್ನು ಕಾಯುವ ಗಾರ್ಡ್! ನಿರಾಶ್ರಿತ ನಾದವನಿಗೆ ಆಶ್ರಯವನ್ನು ನೀಡಿ, ಸ್ಥಾನ ಮಾನವನ್ನು ಕೊಟ್ಟು ಸನ್ಮಾನಿಸು ತ್ತಿರುವ ಇವರುಗಳೇ ನಿಜವಾದ ಭಕ್ತರು, ಅವರನ್ನು ರಕ್ಷಿಸುವ ಜವಾಬ್ದಾರಿ ನನ್ನದು ಎಂದುಕೊಂಡ ಗಣಪ ಹಳೆಯ ವ್ಯಥೆಯನ್ನು ಮರೆಯಲು ಯತ್ನಿಸಿದ.

ಎಡಮುರಿ ಗಣಪನನ್ನು ಕೆಳಗಿಳಿಸಿ, ಬಲಮು[illegible] ಣಪನನ್ನು ಪ್ರತಿಷ್ಠಾಪಿಸಿ ವಿಜಯೋತ್ಸಾಹ ಮಾಡಿದ್ದೇನೋ ಆಯಿತು. ಆದರೆ ಮನ ನೊಂದ ಗಣಪತಿ ದೇವಸ್ಥಾನಕ್ಕೆ ಸಂಬಂಧ ಪಟ್ಟ ಮುಖ್ಯಸ್ಥರ ಬಲ ವನ್ನು ಮುರಿದು ಹಾಕಿದ... ಮುಂದಿನ ಚುನಾವಣೆಯಲ್ಲಿ ಅವರು ಗೆಲ್ಲಲಾಗಿರಲಿಲ್ಲ.

'ಗಣಪತಿ ಬಂದ

ಹೊಟ್ಟೆ ಮೇಲೆ ಗಂಧ

ಕಾಯಿ ಕಡುಬು ತಿಂದ

ಚಿಕ್ಕ ಕೆರೇಲಿ ಬಿದ್ದ

ದೊಡ್ಡ ಕೆರೇಲಿ ಎದ್ದ'

ಎಂದು ಚಿಕ್ಕ ವಯಸ್ಸಿನಲ್ಲಿ ಗಣಪತಿಯ ಹಬ್ಬದ ಸಮಯದಲ್ಲಿ ಹೇಳುತ್ತಿದ್ದ ಪದ್ಯ ನೆನಪಿಗೆ ಬಂದಿತ್ತು.

* * * *

೧೫. ಜೋಗುತಿ

ನಾವು ಆ ಹೊಸ ಮನೆಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು ಬಂದೆವು. ಮನೆಯ ಹಿತ್ತಲಿಗೆ ಬರುತ್ತಿದ್ದಂತೆ ಸಗಣಿ, ಗಂಜಲದ ವಾಸನೆ ಮೂಗಿಗೆ ಬಡಿಯಿತು. ಎತ್ತರದ ಕಾಂಪೌಂಡ್. ಗೋಡೆಯಾಚೆ ಏನೂ ಕಾಣುತ್ತಿರಲಿಲ್ಲವಾದರೂ, ಹಿಂದುಗಡೆಯ ಮನೆಯವರು ಹಸುಗಳನ್ನು ಸಾಕಿದ್ದಾರೆಂದು ತಿಳಿಯಿತು. ತಕ್ಷಣಕ್ಕೆ ಹಾಲು ಬೇಕಾದರೆ ಸಿಗುತ್ತದೆಂದು ಭಾವಿಸಿದೆವು. ಅಲ್ಲದೇ ನನ್ನ ತಂದೆಯ ಮನೆಯಲ್ಲಿ ದನಕರುಗಳು ಇದ್ದು ಅಭ್ಯಾಸವಾಗಿದ್ದುದರಿಂದ ವಾಸನೆಯ ಬಗ್ಗೆ ಏನೂ ಅನ್ನಿಸಲಿಲ್ಲ.

ಸೂರ್ಯೋದಯವಾಗಿ ಎಳೆ ಬಿಸಿಲು ಚುರು ಚುರು ಎನ್ನುತ್ತಿರುವಾಗಲೇ ರಸ್ತೆಯಲ್ಲಿ ಕರುವೊಂದು ಮುದ್ದಾಗಿ ಕೂಗಿತು. 'ಅಂಬಾ' ಎಂಬ ಧ್ವನಿಯನ್ನು ಕೇಳಿ ಯಾವುದೋ ಕರು ಕೂಗುತ್ತಿದೆ ಎಂದುಕೊಂಡು ಬಾಗಿಲನ್ನು ತೆರೆದು ಹೊರಬಂದು ನೋಡಿದರೆ, ಮುದ್ದಾದ ಕರುವೊಂದು ಗೇಟಿನ ಬಳಿ ಚಳಿಯಲ್ಲಿ ಬಿಸಿಲನ್ನು ಕಾಯಿಸುತ್ತಾ ನಿಂತಿದೆ. ಕಂದು ಬಣ್ಣದ ಪುಟ್ಟ ಕರು. ಕುದುರೆಯ ಬಣ್ಣದ ಚರ್ಮ, ಕಷ್ಟ ಪಟ್ಟು ಹುಡುಕಿದರೂ ಎಲ್ಲಿಯೂ ಒಂದು ಕಪ್ಪು ಚುಕ್ಕೆಯಾಗಲೀ, ಬಿಳಿಯ ಚುಕ್ಕೆಯಾಗಲೀ ಇಲ್ಲ. ಕರಿಯ ಬಣ್ಣದ ಕಣ್ಣುಗಳು ಮುಖದ ಅಂದಕ್ಕೆ ದೃಷ್ಟಿ ಬೊಟ್ಟಿನಂತಿದ್ದವು. ಬಾಯಿ ಹಾಗೂ ಬಾಲದ ತುದಿಗೂದಲು ಮಾತ್ರ ಕಪ್ಪಾಗಿದ್ದವು. ಇಂಥಾ ಸುಂದರವಾದ ಕುದುರೆ ಮರಿಯಂತೆ ಅನ್ನಿಸುವ ಕರುವನ್ನು ಈ ಹಿಂದೆ ನೋಡಿರಲಿಲ್ಲ.

ಕೆಲಸದವಳು ಬಂದು ಗೇಟನ್ನು ತೆಗೆಯುತ್ತಿದ್ದಂತೆಯೇ ಅವಳನ್ನು ತಳ್ಳಿಕೊಂಡು ಒಳ ಬಂದ ಕರು ಕುಂಡದಲ್ಲಿ ಬೆಳೆಸಿದ್ದ ನೇರಳೆ ಬಣ್ಣದ ಅಲಂಕಾರಿಕ ಸಸ್ಯದ ಉದ್ದುದ್ದ ಎಲೆಗಳನ್ನು ಕಿತ್ತುಕೊಂಡು 'ಕುರುಂ ಕುರುಂ' ಅಂತ ತಿಂದೇ ಬಿಟ್ಟಿತು... 'ಅರೇ... ಕರು ಗಿಡಾನ ತಿಂತಿದೆ' ಅಂತ ಓಡಿಸಲು ನೋಡಿದರೆ, ಸೀದಾ ಮನೆಯೊಳಕ್ಕೆ ನುಗ್ಗಿತು. ಮೊಸಾಯಿಕ್ ನೆಲದ ಮೇಲೆ ಗೊರಸು ಜಾರುತ್ತಿದ್ದರೂ, ಒಳಗೆಲ್ಲ ಸುತ್ತಾಡಿತು. ಕಷ್ಟಪಟ್ಟು ಹೊರಕ್ಕೆ ಕರೆತಂದು ಬಿಟ್ಟೆವು.

ಅಬ್ಬಾ ಎಂಥಾ ಪ್ರಚಂಡ ಕರು. ಇದನ್ಯಾಕೆ ಮನೆಯವರು ಕಟ್ಟಿ ಹಾಕುವುದಿಲ್ಲವೋ... ಹಿಂದುಗಡೆ ಮನೆಯವರ ಕರುವೇ ಇರಬೇಕು. ಹಾಲು ಕರೆದಾದ ನಂತರ ಬಿಟ್ಟಿರುತ್ತಾರೆ. ಸೀದಾ ಇಲ್ಲಿಗೆ ಬಂದು ಚೇಷ್ಟೆ ಮಾಡುತ್ತಿದೆ ಅಂತ ಅಂದುಕೊಂಡರೂ, ಕರುವಿನ ಮೇಲಿನ ಅಕ್ಕರೆ ಕಡಿಮೆ ಆಗಿರಲಿಲ್ಲ.

ಪ್ರತಿ ನಿತ್ಯವೂ ಬೆಳಗಿನ ಹೊತ್ತು ಹೊರಗೆ ಸುತ್ತಾಡುತ್ತಿತ್ತು. ಆಮೇಲೆ ಮನೆಯವರು ಓಡಿಸಿಕೊಂಡು ಕರೆದೊಯ್ಯುತ್ತಿದ್ದರು. ಆ ಕರುವಿಗೆ ಕೊಟ್ಟಿಗೆಯಲ್ಲಿ ಇರಲಾಗುತ್ತಿರಲಿಲ್ಲ. ಆದಷ್ಟೂ ಹೊರ ಹೊರಗೇ ತಿರುಗಾಡಿ ಕೊಂಡು ಇರುತ್ತಿತ್ತು. ಚಂಗ್ ಚಂಗ್ ಅಂತ ನೆಗೆದು ಬರುವ ಕರು, ನಮ್ಮಲ್ಲಿ ಯಾರನ್ನೇ ಕಂಡರೂ ಓಡಿ ಬರುವಷ್ಟು ಅಭ್ಯಾಸ ಮಾಡಿಕೊಂಡಿತು. ಅದಕ್ಕೆ ತಿನ್ನಲು ಕೊಡಲು ಏನಾದರೊಂದನ್ನು ಸಿದ್ಧವಾಗಿಟ್ಟು ಕೊಂಡಿರು ತ್ತಿದ್ದೆವು. ಒಮ್ಮೆ ಅರ್ಧಗೊನೆ ಬಾಳೆ ಹಣ್ಣನ್ನು ತಿಂದರೆ, ಮತ್ತೊಮ್ಮೆ ಒಂದು ಡಜನ್ ಇಡ್ಲಿಯನ್ನು ತಿಂದಿತ್ತು. ಅಷ್ಟಾದರೂ ಅದಕ್ಕೆ ನೇರಳೆ ಬಣ್ಣದ ಎಲೆಗಳ ಮೇಲಿನ ಮೋಹ ಕಡಿಮೆ ಆಗಿರಲಿಲ್ಲ. ಒಳಗೆ ಬಂತೆಂದರೆ, ಆ ಗಿಡಕ್ಕೆ ಬಾಯಿ ಹಾಕದೇ ಹೋಗುತ್ತಿರಲಿಲ್ಲ. ಹಾಗಾಗಿ ಆ ಗಿಡ ಬೆಳೆಯಲು ಆಗಲೇ ಇಲ್ಲ. ಅಷ್ಟಾದರೂ ನಮಗೆ ಈ 'ಪುಳ್ಳಿ' ಮೇಲೆ ಕೋಪವಿರಲಿಲ್ಲ. 'ಪುಳ್ಳಿ' ಸಾಕಿದವರು ಇಟ್ಟ ಹೆಸರು.

ಒಮ್ಮೆ ಚಲಿಸುತ್ತಿದ್ದ ವಾಹನಕ್ಕೆ ಸಿಕ್ಕಿ ಬೀಳಲಿದ್ದುದನ್ನು ಕಂಡ ನಾವು ಆ ಮನೆಯವರಿಗೆ ತಿಳಿಸಿದೆವು. ಆದರೆ ಅವರು ಆತಂಕವನ್ನು ತೋರಲಿಲ್ಲ.

"ಕುದುರೆ ಹಂಗೆ ನೆಗೆಯುತ್ತೆ. ಏನ್ಮಾಡಾಕ್ಕಾಗುತ್ತೆ! ಕಟ್ಟಿ ಹಾಕಿದರೆ ಅರಚ್ಕೊಳ್ಳತ್ತೆ" ಎಂದಿದ್ದರು. ಕೇಲವ ಒಂದು ತಿಂಗಳ ಕರುವಾಗಿದ್ದ ಅದನ್ನು ಯಾರೋ ಕಿಡ್ನಾಪ್ ಮಾಡಲು ಯತ್ನಿಸಿದ್ದರಂತೆ. ಮುದ್ದಾಗಿದ್ದ ಕರುವನ್ನು ಎತ್ತಿಕೊಂಡು ಆಟೋ ರಿಕ್ಷಾದಲ್ಲಿ ಕೂರಿಸಿಕೊಂಡು ಹೋಗುವಾಗ ಚಲಿಸುತ್ತಿದ್ದ ಆಟೋದಿಂದ ಧುಮುಕಿ ಬಂದಿತಂತೆ. ಅದರ ಸಾಹಸವನ್ನು ಹೇಳಿಕೊಂಡರು.

ಒಮ್ಮೆ ಅವರ ಮನೆಯಲ್ಲಿ ಎಷ್ಟು ದನಗಳಿವೆ ಎಂದು ನೋಡುವ ಕುತೂಹಲದಿಂದ ಕಂಪೌಂಡ್ ಗೋಡೆಯ ಬಳಿ ಒಂದು ಸೈಜ್ ಕಲ್ಲನ್ನಿಟ್ಟು ಅದರ ಮೇಲೆ ಹತ್ತಿ ನಿಂತು ಅತ್ತ ಬಗ್ಗಿ ನೋಡಿದಾಗ, ಸಾಲಾಗಿ ಎಂಟು ಹಸುಗಳನ್ನು, ಮೂರು ಕರುಗಳನ್ನು ಕಟ್ಟಿ ಹಾಕಿದ್ದುದ್ದು ಕಂಡಿತು.

ಅಲ್ಲಿ ಕಡೆಯಲ್ಲಿ ಈ ಪುಳ್ಳಿಯೂ ಇತ್ತು. ಎಲ್ಲಾ ಹಸುಗಳೂ ಒಂದಕ್ಕೊಂಡು ಅಂಟಿಕೊಂಡು ಮಲಗಿದ್ದರೆ, ಈ ಪುಳ್ಳಿ ಅವುಗಳಿಂದ ಅದೆಷ್ಟೋ ದೂರದಲ್ಲಿ ವಿರುದ್ಧ ದಿಕ್ಕಿಗೆ ದೇಹವನ್ನು ಇಟ್ಟುಕೊಂಡು ಮಲಗಿತ್ತು. ನಗುಬಂತು ಎಷ್ಟು ಕೊಬ್ಬು ಇದಕ್ಕೇ! ಅವುಗಳ ಮೈ ತಾಕದಂತೆ, ತಾನೇ ಶ್ರೇಷ್ಠ ಎಂದು ಬೇರೆಯಾಗಿ ಮಲಗಿದೆಯಲ್ಲ. ದನದ ಜಾತಿಗೆ ಯೋಗ್ಯವಾದುದಲ್ಲ. ಎಲ್ಲೋ ಹಿಂದಿನ ಜನ್ಮದಲ್ಲಿ ಮನುಷ್ಯನಾಗಿ ಹುಟ್ಟಿತೋ ಏನೋ ಅಂತ ಅನ್ನಿಸಿತು.

ವಿಶೇಷ ಎಂದರೆ, ಅದರ ಸ್ವಭಾವ ಎಲ್ಲವೂ ವಿಚಿತ್ರ. ಈರುಳ್ಳಿ ಹಾಕಿದ ಪದಾರ್ಥಗಳನ್ನಾಗಲೀ, ಮೂಲಂಗಿಯ ಸೊಪ್ಪನ್ನಾಗಲೀ, ಹೋಳುಗಳನ್ನಾಗಲೀ ತಿನ್ನುತ್ತಿರಲಿಲ್ಲ. ಮೊಸರು ಹಾಕಿದ ತಿಂಡಿಯನ್ನು ಮೂಸಿ ನೋಡಿ ಬಿಟ್ಟು ಬಿಡುತ್ತಿತ್ತು. ಅದಕ್ಯಾಕೆ ಇಂಥಾ ನೇಮದ ಪಥ್ಯವೋ, ದನ ಎಂದರೆ ಎಲ್ಲವನ್ನೂ ತಿನ್ನುವ, ಗೊಬ್ಬರವನ್ನಾಗಿ ಮಾಡುವ ಪ್ರಾಣಿ. ಆದರೆ ಈ ಪುಳ್ಳಿ, ಗಾಢ ಕಾವಿಯ ಚರ್ಮವನ್ನು ಹೊದ್ದು, ಸನ್ಯಾಸಿಯಂತೆ ಪ್ರತ್ಯೇಕ ಅಭ್ಯಾಸಗಳನ್ನಿಟ್ಟುಕೊಂಡಿರುವವಳು, ಆಶ್ಚರ್ಯವಾಗಿತ್ತು.

ಪುಳ್ಳಿ ಎರಡು ವರ್ಷದವಳಾದಾಗ ಪುಟ್ಟ ಕರುವಿನಿಂದ ಕಡಸಾಗಿ ಬೆಳೆದು ಮತ್ತೂ ಆಕರ್ಷಕವಾಗಿದ್ದಳು. ಆದರೆ ಚೆಂಗೂಲಿತನ ಕಡಿಮೆ

ಆಗಿರಲಿಲ್ಲ. ಸಾಯಂಕಾಲ ಆರುಗಂಟೆಯ ವೇಳೆಗೆ, ತನ್ನ ಮನೆಗೆ ಹೋಗುವ ಮೊದಲು ನಮ್ಮ ರಸ್ತೆಯ ತಿರುವಿನಲ್ಲೇ ಅಂಬಾ ಎಂದು ಕೂಗುತ್ತಾ ಓಡಿ ಬರುತ್ತಿದ್ದಳು. ನಿಧಾನವಾಗಿ ನಡೆದುದೇ ಇಲ್ಲ. ತಾನು ಬರುತ್ತಿದ್ದೇನೆಂದು ಅಲ್ಲಿಂದಲೇ ತಿಳಿಸುತ್ತಿದ್ದಳು. ಕೊರಳಿನ ಗಂಟೆಯ ಸದ್ದು ದೂರದಿಂದಲೇ ಕೇಳಿಸುತ್ತಿತ್ತು.

ಕಡಸಾದರೂ ಕರುವಿನ ತರಹ ಕುಣಿಯುತ್ತೆ. ಎರಡು ಕರುಗಳನ್ನು ಹಾಕಿದರೆ, ಕಾಲಿಗೆ ಹಗ್ಗ ಕಟ್ಟಿದಂತಾಗುತ್ತದೆ ಎಂದು ಸಾಕಿದವರು ಹೇಳುತ್ತಿದ್ದರು. ಪಾಪ ಇದೇ ಚಿಕ್ಕದು... ಇದು ಕರು ಹಾಕುವುದೆಂದರೆ... ಗಬ್ಬವಾಗಿ ಕರುವನ್ನು ಹೆತ್ತು ಕರುವಿಗೆ ಹಾಲುಣಿಸಿ, ಇದೆಲ್ಲಾ ಇದರಿಂದ ಸಾಧ್ಯವೇ? ಕೆಚ್ಚಲಿಗೆ ಕೈ ಹಾಕಕೊಡುವಳೇ? ತಮಾಷೆ ಎನಿಸುತ್ತಿತ್ತು.

ಒಂದು ವಾರ ನಾವು ಊರಿನಲ್ಲಿರಲಿಲ್ಲ. ವಾಪಸ್ಸು ಬಂದು ಬೀಗವನ್ನು ತೆಗೆಯುವಾಗ, ಪುಳ್ಳಿಯ ಬುಸ್, ಬುಸ್ ಎನ್ನುವ ನಿಟ್ಟುಸಿರು ಕೇಳಿಸಿತು. ನೋಡಿದರೆ, ನಮ್ಮ ಮನೆಯ ಮುಂಬಾಗಿಲಿಗೆ ಕಾಣುವಂತೆ ಪಕ್ಕದ ಸೈಟ್ ಕಾಂಪೌಂಡ್ ಬಳಿ ನಿಂತಿದೆ. ನಾವು ಹಾಕಿರುವ ಬಾಗಿಲನ್ನು ಯಾವಾಗ ತೆಗೆದೇವೋ ಅಂತ ಕಾಯುತ್ತಾ ನಿಂತಿರುವಂತೆ ಅನ್ನಿಸಿತು.

"ಏನೇ ಪುಳ್ಳಿ... ಇಲ್ಲಿ ಈ ಗಿಡ ಗಂಟಿಗಳ ಮಧ್ಯೆ ಯಾಕೇ ನಿಂತಿದೀಯಾ" ಎನ್ನುತ್ತಾ, ಕೊರಳಿನ ಮೇಲೆ ಕೈಯಾಡಿಸಿದೆ. ದೇಹದ ಮೇಲೆ ಎದ್ದ ಗಂಟು ಕೈಗೆ ತಡೆಯಿತು. ದೇಹದ ಮೇಲೆ ಕಣ್ಣಾಡಿಸಿದೆ. ಬೆನ್ನ ಮೇಲೆ, ಹೊಟ್ಟೆಯ ಮೇಲೆ ಅಲ್ಲಲ್ಲಿ ಸಣ್ಣ ಸಣ್ಣ ಗಂಟುಗಳು ಕಂಡು ಬಂದವು.

ಏನಾಗಿರಬಹುದು! ಈ ಮುಳ್ಳಿನ ಗಿಡಗಳ ಮಧ್ಯೆ ರಭಸವಾಗಿ ತೂರಿಬಂದು ಗಾಯ ಮಾಡಿಕೊಂಡಿರಬಹುದು. ಎಂಥಾ ತುಂಟ ಕರು ಎಂದುಕೊಂಡು, ಮೈಯನ್ನು ತುರಿಸಿದೆ. ಎಷ್ಟೆಂದು ತುರಿಸುವುದು? ದೇಹವೆಲ್ಲಾ ಒರಟಾದ ಗಂಟುಗಳಿಂದ ತುಂಬಿ ಹೋಗಿದೆ.

"ಏನಾಗಿದೆ ಈ ಪುಳ್ಳಿಗೆ? ಮೈಯೆಲ್ಲಾ ಕಜ್ಜಿ ತರಹ ಆಗಿದೆ?" ಸಾಕಿದವನನ್ನು ಕೇಳಿದೆ. ಅದಕ್ಕವನು ಮುಸಿ ಮುಸಿ ನಕ್ಕ. "ಪಶು

ವೈದ್ಯ ಶಾಲೆಗೆ ಕರ್ಕೊಂಡು ಹೋಗ್ಬಾರದಾ? ಫ್ರೀಯಾಗಿ ಔಷಧಿ ಕೊಡ್ತಾರೆ" ಸಲಹೆ ನೀಡಿದೆ. "ಔಷ್ದಿ ಕೊಡ್ಸಿದೀನಿ ಅದ್ಕೆ ಹಿಂಗಾಗದೆ" ಆತನೆಂದ. ಮತ್ತೆ ನಕ್ಕು ಮುಂದುವರೆಸಿದ. "ಈ ಕರು ದೊಡ್ಡದಾಗಿದೆ. ಕಡಸಾಗ್ಯೆತೆ. ಗಬ್ಬ ನಿಲ್ಲೋ ಇಂಜೆಕ್ಷನ್ ಕೊಡ್ಸಿದೀವಿ. ಅದ್ಕೆ ಹಿಂಗಾಗಿದೆ..."

"ಅಂದರೇ... ಈ ಚಿಕ್ಕ ಕರುವಿಗೆ ಕೃತಕ ಗರ್ಭಧಾರಣೆ!" ಸುಮ್ಮನಾದೆ. ಅವರುಗಳು ಎಷ್ಟಾಗಲೀ ಹಾಲು ಮಾರುವವರು. ಅವರಿಗೆ ಅದೇ ಮುಖ್ಯ......ಈ ವಿಷಯದಲ್ಲಿ ನಾವು ಏನು ಸಲಹೆ ನೀಡುವುದು? ಹೆಣ್ಣು ಜನ್ಮಕ್ಕೆ ಹಿಂಸೆ ತಪ್ಪಿದ್ದಲ್ಲ.

"ಆದರೆ ಏನಾಶ್ಚರ್ಯ! ಮತ್ತೆ ಮತ್ತೆ ಕೃತಕ ಗರ್ಭಧಾರಣೆಯ ಇಂಜೆಕ್ಷನ್ ಕೊಡಿಸಿದರೂ, ಪುಳ್ಳಿಗೆ ಗರ್ಭ ನಿಲ್ಲಲಿಲ್ಲ. ವರವೋ ಶಾಪವೋ ಗೊತ್ತಿಲ್ಲ. ಆದರೆ ಪುಳ್ಳಿ ಸೋತು ಹೋಗಿತ್ತು. ಮುಂಚಿನಂತೆ ಇರದೆ ಮಂಕಾಗಿತ್ತು. ಕೆಲವು ತಿಂಗಳು ಕಳೆಯಿತು. ಪುಳ್ಳಿ ಬರಲೇ ಇಲ್ಲ. ವಿಚಾರಿಸಿದಾಗ ಅವನು ಹೇಳಿದ. "ಕಡಸು ಬಂಜೆ ಅಂತ ಅದನ್ನು ಮಾರಿಬಿಟ್ವೆವು. ಕೋಲೇ ಬಸವನ್ನಾಡಿಸುವವರು ಕೊಂಡ್ಕೊಂಡ್ರು" ಎಂದ. ತಲೆ ಸುತ್ತಿ ಬಂದಂತಾಯಿತು. ಇದ್ಯಾವ ನ್ಯಾಯ? ಇವರ ಮನೆಯಲ್ಲಿ ಹುಟ್ಟಿ ಬೆಳೆದ ಕರುವನ್ನು ಗಬ್ಬವಾಗಲಿಲ್ಲ ಅಂತ, ಬೀದಿ ಬಸವಿ ಮಾಡಿಬಿಡುವುದೇ? ಅದೂ ನಾಲ್ಕು ಕಾಸಿಗಾಗಿ... ಅವನ ಮುಖ ನೋಡುವುದೂ ಬೇಡವೆನಿಸಿತ್ತು. ಆದರೆ ಪುಳ್ಳಿಯನ್ನು ಮರೆಯಲು ಸಾಧ್ಯವೇ?

ಎರಡು ತಿಂಗಳು ಕಳೆದಿರಬಹುದು. ಒಂದು ಸಾಯಂಕಾಲ ಅದೇ ಅಂಬಾ ಧ್ವನಿ ಕೇಳಿಸಿತು. ಪುಳ್ಳಿ ವಾಪಸ್ಸು ಬಂದಿದ್ದಳು! ಆದರೆ ಆ ನೈಜ ಸುಂದರತೆ ಇರಲಿಲ್ಲ. ಮೈತುಂಬಾ ಅಲಂಕಾರ. ಪುಟ್ಟ ಪುಟ್ಟ ಕೋಡುಗಳಿಗೆ ಬಣ್ಣದ ಬಟ್ಟೆ ಸುತ್ತಿದ್ದರು. ಕೊರಳ ತುಂಬಾ ನಾನಾ ಬಗೆಯ ಗೆಜ್ಜೆಗಳು. ಬೆನ್ನ ಮೇಲೆ ಕವಡೆಯ ಹಾರಗಳು. ಬಣ್ಣ ಬಣ್ಣದ ಸೀರೆಗಳು. ಮನೆ ಮನೆಯ ಮುಂದೆ ಕಾಸಿಗಾಗಿ ನಿಲ್ಲುವ ಸ್ಥಿತಿ! ಈ ಜೋಗುತಿಗೆ ಎಂಥಾ ಶಿಕ್ಷೆ! ಮನ ಕುಂದಿತು.

* * * *

೧೬. ತಾಯಿ

ಕಾಂಪೌಂಡಿನ ಗೇಟು ಬಡಿದ ಸದ್ದಾಯಿತು. ನಿದ್ದೆಯಲ್ಲಿದ್ದವಳಿಗೆ ಗಡಿಯಾರದ ಕಡೆ ನೋಡಿದೆ. ಮಧ್ಯಾಹ್ನ ಮೂರು ಗಂಟೆಯ ಸಮಯ. ಈ ಬಿಸಿಲು ಹೊತ್ನಲ್ಲಿ ಯಾರಿರಬಹುದು. ಪೋಸ್ಟ್ ಮ್ಯಾನ್ ಬಂದು ಹೋಗಿದ್ದಾನೆ. ಸೇಲ್ಸ್ ಮ್ಯಾನ್ ಯಾರಾದ್ರೂ ಆಗಿದ್ದರೆ ಉತ್ತರಿಸುವುದೇ ಬೇಡ ಎಂದುಕೊಂಡು ಕಿಟಕಿಯ ಬಾಗಿಲನ್ನು ಸ್ವಲ್ಪವೇ ಸರಿಸಿ ನೋಡಿದೆ. ಗೇಟಿನ ಬಳಿ ಯಾರೂ ಇರಲಿಲ್ಲ. ಮತ್ತೆ ಮಂಚದ ಮೇಲೆ ಮಲಗುವ ಸನ್ನಾಹದಲ್ಲಿದ್ದಾಗ, ಗೇಟು ಮತ್ತೆ ಸದ್ದಾಯಿತು. ಕಿಟಕಿಯಿಂದ ಯಾರೂ ಕಾಣಿಸಲಿಲ್ಲವಾದುದರಿಂದ, ಗೇಟಿನ ಸಂದಿಯಿಂದ ನಾಯಿಯೇನಾದರೂ ನುಸುಳಲು ಪ್ರಯತ್ನ ಪಡುತ್ತಿರಬಹುದೆಂದು ಓಡಿಸಬೇಕು ಎಂದುಕೊಂಡು ಸದ್ದಾಗದಂತೆ ಬಾಗಿಲನ್ನು ತೆರೆದು ತಲೆಯನ್ನು ಮಾತ್ರ ಹೊರಕ್ಕೆ ಹಾಕಿದೆ. ಗೇಟಿನಾಚೆ ಗೇಟಿಗೆ ಒರಗಿ, ಒಂದು ಮುದ್ದಾದ ಬಿಳಿಯ ಹಸು ನಿಂತಿತ್ತು. ಹಸು ತನ್ನ ಮೂತಿಯನ್ನು ಗೇಟಿಗೆ ಉಜ್ಜಿ ಗೇಟನ್ನು ಸದ್ದು ಮಾಡುತ್ತಿತ್ತು.

ಶುಭ್ರವಾದ ಬಿಳಿಯ ಹಸು... ಗಿಡ್ಡನೆಯ ದೇಹ... ಮೈಕೈ ತುಂಬಿಕೊಂಡು ಮುದ್ದಾಗಿತ್ತು. ಮುಟ್ಟಿ ಕಣ್ಣಿಗೊತ್ತಿಕೊಳ್ಳುವ ಮನಸ್ಸಾಯಿತು. ಏನಮ್ಮಾ ನಿನ್ನ ಹೆಸರೇನೇ ಬಿಳಗಿ ಎಂದು ಹೇಳುತ್ತಾ ಗೇಟಿನ ಬಳಿಗೆ ಬಂದೆ. ಹಸು ತಿರುಗಿ ನನ್ನನ್ನೇ ನೋಡಿತು. ಸುಂದರವಾದ ಕರಿಯ ಕಣ್ಣುಗಳು. ಪುಟ್ಟ ಪುಟ್ಟ ಕೋಡುಗಳು. ಗಂಧರ್ವ ಲೋಕದಿಂದ ಕಾಮ ಧೇನುವೇ ಇಳಿದು ಬಂದು ನನಗೆ ದರ್ಶನ ನೀಡಿದಂತಷ್ಟು ಸಂತಸ ವಾಗಿತ್ತು. ಬೆನ್ನ ಮೇಲೆ ಕೈಯಾಡಿಸುವ ಆಸೆಯಿಂದ, ಭುಜದ ಮೇಲೆ

ಕೈಯನ್ನಿಟ್ಟು ಸವರಿದೆ. ಹಸು ಸರ್ರನೆ ತಿರುಗಿ, ಸಿರ್ರೆಂದಿತು... ಈ ಹಸುವಿಗೆ ಕೋಪ ಬೇರೆ ಬರುತ್ತೆ ಅಂತಂದುಕೊಂಡು ಮೈ ಮೇಲೆ ಮೃಧುವಾಗಿ ಕೈಯಾಡಿಸಿದರೆ ಕೋಪ ಆರಬಹುದು ಎಂದುಕೊಂಡು ಮತ್ತೆ ಬೆನ್ನ ಮೇಲೆ ಕೈ ಬೆರಳುಗಳನ್ನು ಸೋಕಿದರೆ, ಮತ್ತೆ ಅದೇ ಸಿಟ್ಟನ್ನು ಪ್ರಕಟಿಸಿತು. ಯಾಕೋ ಇದಕ್ಕೆ ಮುದ್ದಿಸಿಕೊಳ್ಳಲು ಇಷ್ಟವಿಲ್ಲ. ಪಾಪ, ತಿನ್ನಲು ಏನಾದರೂ ಕೊಟ್ಟರೆ, ನಮ್ಮ ಮನೇಲಿ ಬಹುದು ಎಂದುಕೊಂಡು, ಕಾಂಪೌಂಡಿನ ಗಿಡಗಳ ನಡುವೆ ಬೆಳೆದು ನಿಂತಿದ್ದ ನಾಲ್ಕಾರು ಗರಿಕೆ ಹುಲ್ಲನ್ನು ತಂದು ಹತ್ತಿರ ಬರುತ್ತಿದ್ದಂತೆ ಹಸು ಬೆದರಿ ಹಿಂದಕ್ಕೆ ಸರಿಯಿತು.

'ತಗೊಳ್ಳೇ ಹಸಿ ಹುಲ್ಲನ್ನು ತಿನ್ನೇ... ನಾನು ಮುಟ್ಟಲ್ಲ... ಬಾ.. ಬಾ...' ಅಂತ ಎಷ್ಟು ಕರೆದರೂ ಬರಲಿಲ್ಲ. ಬಟ್ಟಲು ಕಣ್ಣುಗಳನ್ನು ಬಿಟ್ಟುಕೊಂಡು, ದೂರದಲ್ಲೇ ನಿಂತುಕೊಂಡು ನೋಡುತ್ತಿತ್ತು.

ಹಳ್ಳಿಯಲ್ಲಿ ಬೆಳೆದ ನಾನು, ನಮ್ಮ ಮನೆಯಲ್ಲಿ ಸಾಕಿದ್ದ ಹಸುಗಳನ್ನು ಹತ್ತಿರದಿಂದ ನೋಡಿದ್ದೆ. ಆದರೆ ಈ ಮುದ್ದಾದ ಹಸುವೋ, ಮೈ ಮುಟ್ಟಿದರೆ ಮುನಿಸಿಕೊಳ್ಳುತ್ತೆ. ಹುಲ್ಲನ್ನು ತೋರಿಸಿದರೆ ಹೆದರಿ ಓಡುತ್ತೆ. ವಿಚಿತ್ರ ಎನಿಸಿತು. ಮನೆ ಮುಂದೆ ನಿಂತಿರುವ ಹಸುವಿಗೆ ಏನನ್ನಾದರೂ ಕೊಡಲೇ ಬೇಕೆಂದುಕೊಂಡು, ಮಿಕ್ಕಿದ್ದ ಅನ್ನವನ್ನು ಅದಕ್ಕೆ ಕಾಣುವಂತೆ ಗೇಟಿನ ಬಳಿ ಹಾಕಿದೆ. ತಕ್ಷಣಕ್ಕೆ ಬರಲಿಲ್ಲ. ನಾವು ಅತ್ತ ಮರೆಯಾಗಿ ಹೋದ ಮೇಲೆ ನಿಧಾನವಾಗಿ ಬಂದು ನಿಂತು ಅನ್ನವನ್ನು ತಿಂದು ಹೋಯಿತು.

ಇದಾದ ನಂತರ ಪ್ರತಿನಿತ್ಯ ಈ ಹಸು ನಮ್ಮ ಮನೆಯ ಬಳಿಗೆ ಬರುತ್ತಿತ್ತು. ಆದರೆ ಒಂದು ದಿನವೂ 'ಅಂಬಾ' ಎಂದು ಕೂಗುತ್ತಿರಲಿಲ್ಲ. ಆದರೆ ಗೇಟನ್ನು ಸದ್ದು ಮಾಡುತ್ತಿತ್ತು. ನಮ್ಮವರು ಅದನ್ನು 'ಜುಂಬಿ' ಎಂದು ಕರೆದರು. ಅದೇ ಹೆಸರು ಉಳಿಯಿತು. ಗೇಟು ಸದ್ದಾದ ಕೂಡಲೇ, ಜುಂಬಿ ಬಂದ್ಲು ಅಂತ ಹೇಳುವಷ್ಟು ಆ ಸಮಯಕ್ಕೆ ಕಾಯುವಷ್ಟು ಅಭ್ಯಾಸವಾಗಿ ಹೋಯಿತು. ಬೆನ್ನ ಮೇಲೆ ಕೈಯಾಡಿಸಿ, ಸಿಟ್ಟು ಬರಿಸುವುದು, ಹುಲ್ಲು ಕಡ್ಡಿಯನ್ನು ತೋರಿಸಿ ಹೆದರಿಸುವುದು ನಮಗೆ ಒಂದು ತರಹದ

ಮೋದವನ್ನು ನೀಡುತ್ತಿತ್ತು. ಹಣ್ಣು, ತರಕಾರಿ, ಇಡ್ಲಿ, ಅನ್ನ ಎಲ್ಲವನ್ನೂ ಅದಕ್ಕೆ ಕೊಡುತ್ತಿದ್ದೆವು. ಗಂಟೆಗಟ್ಟಲೆ ನಮ್ಮ ಮನೆಯ ಮುಂದೆ ಮೂಕಾಭಿನಯ ಮಾಡಿ, ಹೊರಟು ಹೋಗುತ್ತಿತ್ತು. ಅದು ಯಾರ ಮನೆಯ ಹಸು, ಎಲ್ಲಿಂದ ಬರುತ್ತದೆ ಎಂದು ನಮಗೆ ತಿಳಿಯಲೇ ಇಲ್ಲ. ಮಂದೆಯಲ್ಲಿ ಇರುತ್ತಿರಲಿಲ್ಲ. ಒಂಟಿಯಾಗಿ ಬಂದು ಹೋಗುತ್ತಿತ್ತು.

ಕೆಲವು ತಿಂಗಳ ನಂತರ ಇದ್ದಕ್ಕಿದ್ದಂತೆ ಬರುವುದನ್ನು ನಿಲ್ಲಿಸಿತು. ನಮಗೆಲ್ಲಾ ಬೇಸರವಾಯಿತು. 'ಎಲ್ಲೋ ಯಜಮಾನ ಮಾರಿಬಿಟ್ಟಿರ ಬಹುದು... ಈಗ ಎಲ್ಲಿದೆಯೋ' ಅಂತಂದುಕೊಂಡು ಸಮಾಧಾನ ಹೇಳಿಕೊಂಡು ಸುಮ್ಮನಾದೆವು...

"ಹತ್ತು ಹದಿನೈದು ದಿನಗಳು ಕಳೆದಿರಬಹುದು. ಮಧ್ಯಾಹ್ನ ನಾಲ್ಕು ಗಂಟೆಯ ಸಮಯದಲ್ಲಿ ಗೇಟಿನ ಚಿಲಕದ ಸದ್ದಾಯಿತು. ಸದ್ದಿನಿಂದಲೇ ಜುಂಬಿ ಬಂದಿರುವಳೆಂದು ತಿಳಿಯಿತು. ಜುಂಬಿ, ಜುಂಬಿ... ಎಂದು ಕೊಂಡು, ಆತುರಾತುರವಾಗಿ ಬಾಗಿಲನ್ನು ತೆರೆದೆವು. ಎಸ್, ಜುಂಬಿ ನಿಂತಿತ್ತು. ಏನೇ ಜುಂಬಿ ಎಲ್ಲಿಗೆ ಹೊರಟು ಹೋಗಿದ್ದೆ... ಎನ್ನುತ್ತಾ ಆತ್ಮೀಯತೆಯಿಂದ ಮಾತನಾಡಿಸಲು ಬಂದೆವು. ಅದರ ಮುಖದಲ್ಲೂ ವಿಶೇಷವಾದ ಕಳೆ! ಆನಂದದ ಹೊಳೆ... ಏನನ್ನೋ ಹೇಳುವಂತೆ ಗಂಟಲಿನಿಂದ ಸದ್ದನ್ನು ಹೊರಡಿಸಿತು. ಕತ್ತನ್ನು ಹಿಂದಕ್ಕೆ ಹೊರಳಿಸಿತು. ನೋಡಿದರೆ ಅದರ ಮರೆಯಲ್ಲಿ ಒಂದು ಪುಟ್ಟ ಕರು! ಜಿಂಕೆಯ ಮರಿಯಂತೆ ಕಂದು ಬಣ್ಣದ ಮುದ್ದಾದ ಕರು! ತಾನು ತಾಯಿಯಾಗಿರುವೆನೆಂಬ ಹಿಗ್ಗು ಜುಂಬಿಯ ಮುಖದಲ್ಲಿ ಕುತೂಹಲದಿಂದ ನೋಡಿದಾಗ, ಅದು ಗಂಡು ಕರುವೆಂದು ಗೊತ್ತಾಯಿತು. ನಮ್ಮವರು ತಕ್ಷಣವೇ... ಏನೇ ಜುಂಬಿ ಸಿದ್ಧನನ್ನು ತೋರಿಸೋಕ್ಕೆ ಕರೆದ್ಕೊಂಡು ಬಂದ್ಯಾ... ಎಂದರು. ಅಲ್ಲಿಗೆ ಆಗಲೇ ಸಿದ್ಧನಿಗೆ ನಾಮಕರಣವಾಯಿತು. ಆ ಪುಟ್ಟ ಕರು ತನ್ಮಯತೆಯಿಂದ ಅಂಚಿನಿಂದ ಬೆಳೆದ ಗರಿಕೆಯ ಹುಲ್ಲನ್ನು ಕುರುಕುರು ಎಂದು ತಿನ್ನುತ್ತಿತ್ತು. ಪರವಾಗಿಲ್ಲ... ಇವಳು ಹುಲ್ಲಿನ ಕಡ್ಡಿಗೆ ಹೆದರಿದರೂ, ಮಗನಿಗೆ ಗರಿಕೆ ಹುಲ್ಲನ್ನು ತಿನ್ನಿಸುವ ಅಭ್ಯಾಸ ಮಾಡಿಸಿದ್ದಾಳೆ ಎಂದುಕೊಂಡೆವು.

ಇಷ್ಟಾದರೂ ಜುಂಬಿ ಗಬ್ಬದ ಹಸು ಎಂದು ನಮಗೆ ಗೊತ್ತಾಗಿರಲೇ ಇಲ್ಲ.

ಆ ಸಮಯದಲ್ಲಿ ಹೋರಿ ಕರುಗಳಿಗೆ, ಹಾಲುಣಿಸಿ ಬೆಳೆಸುವ ಸಂಸ್ಕೃತಿ ಹೋಗುತ್ತಿತ್ತು. ಕೆಲವು ದಿನಗಳಾದ ಮೇಲೆ ಹೋರಿ ಕರುಗಳನ್ನು ಕಟುಕರಿಗೆ ಮಾರಿ ಬಿಡುವರೆಂಬ ವದಂತಿಯೂ ಇತ್ತು. ಇಂಥಾ ಮುದ್ದಾದ ಕರುಗಳನ್ನು ಕಟುಕರಿಗೆ ಮಾರಲು ಮನಸ್ಸಾದರೂ ಹೇಗೆ ಬರುತ್ತದೋ ಎಂದು ವ್ಯಥೆಯಾಗಿತ್ತು. ಅಳು ಬರುವಂತಾಗಿತ್ತು. ತಾಯಿಯ ಹಾಲು ಸಿಗದಿದ್ದರೇನಂತೆ! ಗರಿಕೆ ಹುಲ್ಲನ್ನಾದರೂ ಚೆನ್ನಾಗಿ ತಿಂದು ಬೆಳೆಯಲಿ ಎಂದುಕೊಂಡೆವು. ಈ ಮಹಾತಾಯಿ ಹೆಣ್ಣು ಕರುವನ್ನಾದರೂ ಹಾಕಬಾರದಾಗಿತ್ತೇ... ಮನುಷ್ಯರಲ್ಲಾದರೆ ಹೆಣ್ಣು ಮಗುವನ್ನು ಹೆತ್ತರೆ ಅಸಮಾಧಾನ. ಆದರೆ ದನಗಳನ್ನಿ ಹಾಗಿಲ್ಲ. ಹೆಣ್ಣು ಕರುವಿಗೆ ಮುಂದೆ ಬೆಲೆ ಸಿಗುತ್ತದೆಂಬ ಕಾರಣದಿಂದ ಹಿಗ್ಗು! ಪಾಪ... ಜುಂಬಿಗೆ ಅನ್ಯಾಯವಾಯಿತು ಎಂದೆನಿಸಿತು. ತನ್ನ ಕಂದನನ್ನು ನಮಗೆ ತೋರಿಸಲು ಕರೆತಂದ ಜುಂಬಿಯನ್ನು ಮೆಚ್ಚಿದೆವು. ಅನಂತರ, ಕೆಲವು ದಿನಗಳವರೆಗೆ ಸಾಯಂಕಾಲ ನಾಲ್ಕು ಗಂಟೆಯ ಸುಮಾರಿಗೆ, ಜುಂಬಿ, ಸಿದ್ಧನೊಡನೆ ನಮ್ಮ ಮನೆಯ ಮುಂದೆ ಬಂದು ನಿಂತು ನಮಗೆ ತೋರಿಸಿ ಹೋಗುವುದು ವಾಡಿಕೆಯಾಯಿತು.

ಇದಾದ ನಂತರ, ಇದ್ದಕ್ಕಿದ್ದಂತೆ ಒಂದು ದಿನ ಜುಂಬಿ ಬರಲೇ ಇಲ್ಲ. ಯಾಕೆ ಎಂದು ತಿಳಿಯಲೇ ಇಲ್ಲ. ಹಾಲು ಕೊಡುವ ಹಸುವನ್ನು

ಸಾಕಿದವನು ಮಾರಿರಬಹುದೆಂದು ಭಾವಿಸಿದೆವು.

ಆ ದಿನ ರಾತ್ರಿ ಸುಮಾರು ಎಂಟು ಗಂಟೆಯ ಸಮಯ. ಹುಣ್ಣಿಮೆ ಚಂದ್ರಮನ ಬೆಳಕು ಹರಡಿತ್ತು. ನಮ್ಮ ಮನೆಯ ಪಕ್ಕದ ರಸ್ತೆಯ ಆ ಬದಿಗೆ ಒಂದು ಆಟದ ಮೈದಾನವಿತ್ತು. ಅದರ ಹಿಂದಕ್ಕೆ ಒಂದು ಲೈಬ್ರರಿ ಇತ್ತು. ಲೈಬ್ರರಿ ಮುಚ್ಚಿತ್ತು. ಆದರೆ ಬೆಳದಿಂಗಳಲ್ಲಿ ಎಲ್ಲವೂ ಸ್ವಚ್ಛವಾಗಿ ಕಾಣುತ್ತಿತ್ತು. ಜನರ ಗದ್ದಲವಿಲ್ಲದೆ ನಿಶ್ಶಬ್ದತೆಯಿಂದ ಇದ್ದ ವಾತಾವರಣದಲ್ಲಿ ಹಸು ಕೂಗುವ ದನಿ ಒಣದು ಕೇಳಿಸಿತು. ಮತ್ತೆ ಮತ್ತೆ ಅಂಬಾ ಎನ್ನುತ್ತಿತ್ತು.

"ಪಾಪ... ಯಾವುದೋ ಹಸು, ದಾರಿ ತಪ್ಪಿಸಿಕೊಂಡಿದೆ ಅಂತ

ಕಾಣುತ್ತೆ, ಅರಚಿ ಕೇಳ್ತಿದೆ ಎಂದುಕೊಂಡೆವು. ಲೈಬ್ರರಿಯ ಪಕ್ಕದ ಗೋಡೆಯ ಬದಿಯಿಂದ ಒಂದು ಬಿಳಿಯ ಗಿಡ್ಡ ಹಸು, ಅರಚುತ್ತಾ ಬಂತು. ಲೈಬ್ರರಿಯ ಸುತ್ತ ಮುತ್ತ, ಆಟದ ಮೈದಾನದೊಳಗೆ ಅಡ್ಡಾಡುತ್ತಾ ನೋವಿನ

ಧ್ವನಿಯಲ್ಲಿ ಅಂಬಾ ಅಂಬಾ ಎಂದು ಕೂಗುತ್ತಲೇ ಇತ್ತು... "ಜುಂಬಿ ಅಂಬಾ ಅಂತಿದೆ... ಅಂಬಾ ಅಂತ ಕೂಗ್ತಿದೆ... " ಎಂದು ಆಶ್ಚರ್ಯದಿಂದ ಹರ್ಷದಿಂದ ನಾನು ನಮ್ಮವರಿಗೆ ಹೇಳಿದೆ. ಆದರೆ ಅದರೊಂದಿಗೆ ಸಿದ್ಧ ಇರಲಿಲ್ಲ.

"ಅರೇ... ಹೌದು ಜುಂಬೀನೇ, ಎಲ್ಲೋ ಸಿದ್ಧನನ್ನು ಹುಡುಕುತ್ತಿರಬೇಕು... ಹುಲ್ಲು ತಿಂತಾ ತಿಂತಾ ತಪ್ಪಿಸ್ಕೊಂಡಿದಾನೆ" ಅಂತಂದರು.

ಆದರೆ ನನ್ನ ಒಳ ಮನಸ್ಸು ಅದಲ್ಲ ಎಂದು ಹೇಳಿತು. ಸಿದ್ಧ ಹೋರಿ ಕರು. ಯಾವುದೋ ಕಟುಕನ ಮನೆಯನ್ನು ಸೇರಿರಬೇಕು ಅಂತೆನಿಸಿ ವ್ಯಥೆಯಾಯಿತು. ತಾಯಿಯ ಈ ರೋಧನ ಕಟುಕನ ಕಿವಿಗೆ ಬಿದ್ದು, ಸಿದ್ಧನನ್ನು ಕಳಿಸಿದರೆ... ಎಷ್ಟೋ ಚೆನ್ನ ಎಂದು ಮನಸ್ಸು ಲೆಕ್ಕ ಹಾಕಿತು. ಆದರೆ... ಇದು ಸಾಧ್ಯನಾ?

ಜುಂಬಿ ಕೂಗುತ್ತಲೇ ಇತ್ತು. ಹತ್ತು ಹನ್ನೊಂದು ಗಂಟೆಯಾದರೂ ಸಿದ್ಧನನ್ನು ಅರಸುತ್ತಲೇ ಇತ್ತು. ಸುಸ್ತಾಗಿ, ಲೈಬ್ರರಿಯ ಮುಂದೆ ಮಲಗಿತು. ಆ ಬೆಳದಿಂಗಳ ರಾತ್ರಿ ಜುಂಬಿಯ ಪಾಲಿಗೆ ಕಳೆದಿಂಗಳ ರಾತ್ರಿಯಾಗಿತ್ತು!

* * * *

೧೭. ದೆವ್ವದ ಮನೆ

೧

ಶ್ರೀಹರಿ, ವಾಸುಕಿ ಇಬ್ಬರೂ ಒಂದೇ ತರಗತಿಯಲ್ಲಿ ಓದುತ್ತಿದ್ದರು. ಅವರುಗಳ ಮನೆಯೂ ಒಂದೇ ವಠಾರದಲ್ಲಿದ್ದಿತು. ಶ್ರೀಹರಿ, ವಾಸುಕಿಯ ದೊಡ್ಡಮ್ಮನ ಮಗ. ಇಬ್ಬರೂ ಅನ್ಯೋನ್ಯ ಸ್ನೇಹಿತರು. ಎಲ್ಲ ಕಡೆಗೂ ಒಟ್ಟೊಟ್ಟಿಗೇ ತಿರುಗಾಡುತ್ತಿದ್ದರು. ಸ್ಕೂಲಿಗೆ ಕೈ ಕೈ ಹಿಡಿದು ಹೋಗಿ ಬರುತ್ತಿದ್ದರು. ಕ್ರಿಕೆಟ್ ಆಡಲು ಮೈದಾನಕ್ಕೆ ಪ್ರತಿದಿನವೂ ಹೋಗುತ್ತಿದ್ದರು. ದಿನವೂ ಒಂದೇ ರಸ್ತೆ. ಈಗಿನಂತೆ, ಬಸ್ಸು, ಕಾರುಗಳ ತಿರುಗಾಟ ಹೆಚ್ಚು ಇರಲಿಲ್ಲ. ಅಲ್ಲದೇ ಹೆಚ್ಚು ಹೆಚ್ಚು ಮನೆಗಳಿರಲಿಲ್ಲ. ಅದು ಕೆಳ ಮಧ್ಯಮ ವರ್ಗದವರೇ ಹೆಚ್ಚು ವಾಸಿಸುತ್ತಿದ್ದ ಬಡಾವಣೆ. ಓದುವುದನ್ನು ಬಿಟ್ಟರೆ ಬೇರೆ ಕೆಲಸವಿರಲಿಲ್ಲ. ಆಡುವುದನ್ನು ಬಿಟ್ಟರೆ ಬೇರೆ ಮನರಂಜನೆ ಇರಲಿಲ್ಲ.

ಪರೀಕ್ಷೆ ಮುಗಿದು ರಜ ಬಂದಿತ್ತು. ಆಟದ ಸಮಯ ಹೆಚ್ಚಾಗಿತ್ತು. ಆ ದಿನ ಯಾವುದೋ ಎರಡು ಟೀಂಗಳ ನಡುವೆ ಪಂದ್ಯ ನಡೆಯುತ್ತಿತ್ತು. ನೋಡುತ್ತಾ ಕುಳಿತಿದ್ದವರಿಗೆ ಸಮಯ ಹೋದುದೇ ಗೊತ್ತಾಗಲಿಲ್ಲ. ಪಂದ್ಯ ಮುಗಿದು ಅವರವರ ಮನೆಯ ಕಡೆಗೆ ಎಲ್ಲರೂ ಹೊರಟಿದ್ದರು. ಇವರಿಬ್ಬರೂ, ದಿನವೂ ಓಡಾಡುವ ರಸ್ತೆಯನ್ನು ಬಿಟ್ಟು ಬೇರೆ ಮಾರ್ಗವಾಗಿ ಮನೆಯ ದಾರಿಯನ್ನು ಹಿಡಿದರು. ಕತ್ತಲಾಗುತ್ತಿತ್ತು. ಸ್ವಲ್ಪ ದೂರ ನಡೆದ ಮೇಲೆ, ತಾವಿಬ್ಬರೂ ದಾರಿ ತಪ್ಪಿರುವ ಅರಿವಾಗಿತ್ತು. ಇಬ್ಬರೂ ಅತ್ತಿತ್ತ ನೋಡುತ್ತಾ ನಡೆಯುತ್ತಿರುವಾಗ, ಒಂದು ಮನೆಯ ಮುಂದೆ ಏನೋ ಸಮಾರಂಭ ನಡೆಯುತ್ತಿರುವುದನ್ನು ಕಂಡರು. ಮನೆಯ ಮುಂದೆ

ದೀಪಾಲಂಕಾರವಿತ್ತು. ಬ್ಯಾಂಡ್‌ಸೆಟ್‌ನವರು ಯಾವುದೋ ಹಳೆಯ ಸಿನಿಮಾ ಹಾಡೊಂದನ್ನು ನುಡಿಸುತ್ತಿದ್ದರು. ಕುತೂಹಲದಿಂದ ಇಬ್ಬರೂ ಅಲ್ಲಿಯೇ ನಿಂತರು. ಒಳಗೆ ಜನರು ಓಡಾಡುವ ಸಂಭ್ರಮ, ಗದ್ದಲವನ್ನು ಕಂಡು ನಿಧಾನವಾಗಿ ಅತ್ತ ನಡೆದರು. ಬ್ಯಾಂಡಿನವರು ನುಡಿಸುತ್ತಲೇ ಇದ್ದರು.

ಒಳಗಿನಿಂದ ಯಾರೋ ಬಂದವರು, ಇಬ್ಬರನ್ನೂ ಕೈ ಹಿಡಿದು ಒಳಗೆ ಕರೆದೊಯ್ದರು. ಒಳಗೆ ಒಬ್ಬ ಹುಡುಗ, ತನ್ನ ಮುಂದೆ ಇದ್ದ ಕೇಕ್‌ನ್ನು ಕತ್ತರಿಸಲು ಸಿದ್ಧನಾಗಿ ನಿಂತಿದ್ದ. ಹತ್ತಿಸಿದ ಮೋಂಬತ್ತಿಗಳು ಉರಿಯುತ್ತಿದ್ದವು. ಬೆಲೂನುಗಳು ತಲೆಯ ಮೇಲೆ ತೂಗಾಡುತ್ತಿದ್ದವು. ಆ ಹುಡುಗ ಇವರಿಬ್ಬರನ್ನು ಕಂಡು ಮುಗುಳ್ನಕ್ಕು, ಮೊಂಬತ್ತಿಗಳನ್ನು ಗಾಳಿ ಊದಿ ಆರಿಸಿ, ಕೇಕ್ ಮೇಲೆ, ಚಾಕುವನ್ನು ಆಡಿಸಿ ಕತ್ತರಿಸಿದ. ನಿಂತಿದ್ದವರೆಲ್ಲಾ ಚಪ್ಪಾಳೆ ತಟ್ಟಿ, 'ಹ್ಯಾಪಿ ಬರ್ತ್‌ಡೇ' ಎಂದು ರಾಗವಾಗಿ ಹಾಡಿ ಶುಭವನ್ನು ಹಾರೈಸಿದರು. ಎಲ್ಲರ ಕೈಗೂ ಒಂದೊಂದು ಚೂರು ಕೇಕು ಬಂದಿತು. ಇಬ್ಬರೂ ತಿಂದರು. ಕೇಕು ಬಹಳ ರುಚಿಯಾಗಿದೆ ಯೆಂದೆನಿಸಿತು. ಬ್ಯಾಂಡಿನ ಸದ್ದು ನಿಂತಿತು. ಎಲ್ಲರೂ ಅವರವರ ಸಂಭ್ರಮ ದಲ್ಲಿ ಇರುವಾಗ, ಇವರಿಬ್ಬರೂ, ಕೇಕು ತಿಂದ ಕೈ ಬೆರಳುಗಳನ್ನು ನೆಕ್ಕುತ್ತಾ ಹೊರಬಂದರು. ಬ್ಯಾಂಡಿನವರು ಹೊರಟು ಹೋಗಿದ್ದರು. ರಸ್ತೆಗೆ ಇಳಿದು ಹಿಂತಿರುಗಿ ನೋಡಿದರು. ಹೃದಯ ಸ್ಥಂಭನವಾದಂತಾಗಿತ್ತು. ಅಲ್ಲಿ ಯಾವ ದೀಪಾಲಂಕಾರವೂ ಇರಲಿಲ್ಲ. ಜನರ ಗೌಜು ಗದ್ದಲವೂ ಇರಲಿಲ್ಲ. ಇಬ್ಬರೂ ಸತ್ತೆವೋ ಕೆಟ್ಟೆವೋ ಎಂಬಂತೆ ನಾಗಾಲೋಟದಿಂದ ವಿರುದ್ಧ ದಿಕ್ಕಿನಲ್ಲಿ ಓಡಿ, ಓಡಿ ಕಡೆಗೆ ದಿನ ನಿತ್ಯ ಓಡಾಡುವ ರಸ್ತೆಯನ್ನು ತಲುಪಿದರು. ಅಲ್ಲಿಂದ ವೇಗವಾಗಿ ನಡೆದು ಬಂದು ಮನೆಯನ್ನು ಸೇರಿದರು. ಏದುಸಿರು ಬಿಡುತ್ತಾ ಮನೆಯನ್ನು ತಲುಪಿದ್ದಂತೇ, ಹಿರಿಯರ ವಿಚಾರಣೆ ಪ್ರಾರಂಭವಾಗಿತ್ತು. ಇಷ್ಟೊತ್ತೂ ಅಲೆಯುಕ್ಕೆ ಎಲ್ಲಿ ಹೋಗಿದ್ರಿ? ನಿಮಗೇನು ಹೇಳೋರು ಕೇಳೋರು ಯಾರು ಇಲ್ವಾ ಅಂತ ತರಾಟೆಗೆ ತೆಗೆದುಕೊಂಡಿದ್ರು, ಉಸಿರಾಟದ ಗತಿಯ ತೀವ್ರತೆ ಕಡಿಮೆ ಆದ ಮೇಲೆ, ತಾವು ಕಂಡ

ದೃಶ್ಯವನ್ನು ವರ್ಣಿಸಿದರು. ಯಾರೂ ಅವರಿಬ್ಬರ ಮಾತನ್ನು ನಂಬಲಿಲ್ಲ. ಈಗಲೂ ಕೇಕು ತಿಂದ ವಾಸನೆ, ನಮ್ಮ ಕೈ ಬಾಯಿಯಲ್ಲಿದೆ, ಬೇಕಾದ್ರೆ ನೀವೇ ನೋಡಿ... ಎಂದರು. ಹೌದು. ಕೇಕಿನ ಸುವಾಸನೆಯೇನೋ ಇದೆ. ಆದರೆ ಇವರಿಬ್ಬರೂ ನಿಜವನ್ನು ಹೆಳುತ್ತಿದ್ದಾರೆ ಅಂತ ಏನು ಗ್ಯಾರಂಟಿ! ಚಾಕ್ಲೇಟನ್ನು ತಿಂದು ಸುಳ್ಳು ಹೆಳುತ್ತಿರಬಹುದು ಅಂತಂದುಕೊಂಡು ಚೆನ್ನಾಗಿ ದಬಾಯಿಸಿದರು.

ಆ ರಾತ್ರಿ ಇಬ್ಬರಿಗೂ ಮೈಮೇಲೆ ಜ್ಞಾನವಿಲ್ಲದಷ್ಟೇ ಜ್ವರ ಬಂದಿತ್ತು. ಹೆದರಿಕೆಯಿಂದ ನಡಗುತ್ತಾ ಬಡಬಡಿಸಿದರು. ಏನೋ ಕೆಟ್ಟದ್ದನ್ನು ಕಂಡಿದಾರೆ... ಅಲ್ಲಿಗೇ ಕರೆದ್ದುಕೊಂಡು ಹೋಗಿ, ಈ ಭಯವನ್ನು ಹೋಗಿಸಬೇಕು ಅಂತ ಮಾತನಾಡಿಕೊಂಡರು.

ಮಾರನೇ ದಿನ ಬೆಳಿಗ್ಗೆ ಅವರು ಹೇಳಿದ ಸ್ಥಳಕ್ಕೆ ಹೋಗಿ, ಆ ಮನೆ ಯಾವುದು ಅಂತ ಹುಡುಕಿದರು. ಅಲ್ಲಿ ಅಂತಹ ಯಾವ ಮನೆಯೂ ಕಾಣಲಿಲ್ಲ. ಅಲ್ಲೊಂದು ಇಲ್ಲೊಂದು ಅರ್ಧ ಕಟ್ಟೆ ನಿಲ್ಲಿಸಿದ್ದ, ಪಾಳು ಬಿದ್ದ ಮನೆಗಳಿದ್ದವು. ಅಲ್ಲೊಂದು ಸುಣ್ಣ ಬಣ್ಣ ಕಾಣದ ಒಂದು ಬಂಗಲೆಯೂ ಇತ್ತು. ಸುತ್ತ ಮುತ್ತ ಅಂಗಡಿ ಮುಂಗಟ್ಟುಗಳಿರಲಿಲ್ಲ. ಜನರು ವಾಸ ಮಾಡುತ್ತಿರುವಂತೆಯೂ ಅನ್ನಿಸಲಿಲ್ಲ. ಸ್ವಲ್ಪ ದೂರ ನಡೆದ ಮೇಲೆ, ರಸ್ತೆಯ ತಿರುವಿನಲ್ಲಿ ಒಂದು ಪೆಟ್ಟಿಗೆ ಅಂಗಡಿ ಇತ್ತು. ಅಲ್ಲಿ ವಿಚಾರಿಸಲೆಂದು ಬಂದರು. ಅಂಗಡಿಯವನಿಗೆ ಮೊದಲಿಗೆ ಅರ್ಥ ವಾಗಲಿಲ್ಲ. ನಂತರ ಇವರನ್ನೇ ವಿಚಿತ್ರವಾಗಿ ನೋಡಿ, ಪಿಸುದನಿಯಲ್ಲಿ ಹೇಳಿದ.

ಆ ಕಡೆ ಯಾಕೆ ಹೋಗಿದ್ರಿ ಸ್ವಾಮೀ... ಅದು ನಿಮ್ಮಂಥೋರು ಹೋಗೋ ಜಾಗ ಅಲ್ಲ... ಅವನು ಹೆದರಿಸುವವನಂತೆ ಹೇಳಿದ.

"ಯಾಕಪ್ಪಾ... ಅಂಥದ್ದೇನು?... ಪುಂಡರು, ಪೋಕರಿ ಓಡಾಡುವ ಜಾಗವಾ?"

"ಅಲ್ಲ ಸ್ವಾಮೀ... ದೆವ್ವ ಭೂತ ಓಡಾಡ್ತಾವೆ ಅಂತ ಹೇಳ್ತಾರೆ. ಅದ್ರಲ್ಲೂ ಕತ್ತಲೆ ಹೊತ್ನಾಗೆ, ಯಾರೂ ಅತ್ತ ಕತ್ತನ್ನೂ ಕೂಡಾ

ಹೊರಳಿಸುಲ್ಲ".

"ದೆವ್ವ ಭೂತ ನಮ್ಮಂಥೋರಿಗೆ ಏನು ಮಾಡುಲ್ಲ. ಬ್ರಹ್ಮಗಂಟು ಇದೆ. ಗಾಯಿತ್ರಿ ಮಂತ್ರಕ್ಕೆ ಹೆದರಿ ಓಡುತ್ತೆ".

"ಇರಬಹುದು ಸ್ವಾಮಿ. ಅದೆಲ್ಲಾ ನಮ್ಗೇನು ಗೊತ್ತು. ಅಲ್ಲಿ ಜನರೂ ಓಡಾಡೊಲ್ಲ. ನಾವುಗಳೂ ಹೋಗಲ್ಲ. ನಂಗೆ ತಿಳಿದಿದ್ದನ್ನು ಹೇಳ್ದೆ." ಅವನು ತನ್ನ ವ್ಯಾಪಾರದ ಕಡೆ ಗಮನವನ್ನು ಕೊಟ್ಟ. ಇವರುಗಳು ಇತ್ತ ಹಿಂತಿರುಗಿದರು.

ಸಾಕಷ್ಟು ದೆವ್ವ ಭೂತಗಳ ಕತೆಯನ್ನು ಇವರುಗಳೂ ಕೇಳಿದ್ದರು. ಭಯವಿರಲಿಲ್ಲ. ಆದರೆ ನಂಬಿಕೆ ಅಲ್ಪ ಸ್ವಲ್ಪ ಇತ್ತು.... ಮಕ್ಕಳಿಗೆ ಜ್ವರ ಬಿಟ್ಟಿದ್ದರೆ, ಆ ಜಾಗಕ್ಕೆ ಕರೆದುಕೊಂಡು ಹೋಗಿ, ಭಯವನ್ನು ಹೋಗಲಾಡಿಸಬೇಕೆಂದು ಮಾತನಾಡಿಕೊಂಡರು.

ಅದರಂತೆ ಎರಡು ದಿನಗಳ ನಂತರ ಮಕ್ಕಳಿಬ್ಬರನ್ನು ಕರೆದುಕೊಂಡು ಅತ್ತ ಬಂದರು. ಸಾಯಂಕಾಲ ನಸುಗತ್ತಲು ಆವರಿಸುತ್ತಿತ್ತು. ಹುಡುಗರಿಬ್ಬರೂ ತಾವು ಆ ದಿನ ಈ ಕಡೆಗೆ ಬಂದಂತೆ ನೆನಪಾಗಲಿಲ್ಲ. ಆದರೂ ಸ್ವಲ್ಪ ಮಟ್ಟಿಗೆ ಭಯ ಆಗಿತ್ತು. ಎಲ್ಲರೂ ಆ ಮನೆಯ ಕಡೆಗೆ ಬಂದರು... ಅತ್ತಿತ್ತ ನೋಡಿ ಒಳಕ್ಕೆ ಅಡಿ ಇಟ್ಟರು. ಮನೆಯೊಳಗೆ ಜೇಡರ ಬಲೆಗಳು ಹೆಣೆದಿದ್ದವು. ಕಸಕಡ್ಡಿಗಳು ಬಿದ್ದಿದ್ದವು. ಯಾವಾಗಲೋ ಯಾರೋ ಸೇದಿ ಬಿಸಾಡಿದ ಬೀಡಿ ತುಂಡುಗಳಿದ್ದವು.

"ಇಲ್ಲಿಗ್ಯಾಗೆ ಕರೆದುಕೊಂಡು ಬಂದ್ರಿ?" ಹೆದರುತ್ತಾ ಕೇಳಿದರು.

"ನಾಲ್ಕು ದಿನಗಳ ಕೆಳಗೆ ನೀವಿಬ್ರೂ ಇದೇ ಮನೆಗೆ ತಾನೇ ಬಂದದ್ದು. ಕತ್ತಲೆ ಹೊತ್ನಲ್ಲಿ ಈ ಮನೆ ಇದಕ್ಕಿಂತ ಕೆಟ್ಟಗೆ ಕಾಣುತ್ತೆ..." ಬೆಳಕಿನ ಹೊತ್ನಲ್ಲಿ ನಿಜ ಏನೂಂತ ತೋರಿಸೋಕೆ ಕರೆದುಕೊಂಡು ಬಂದೆವು.

"ಆದರೆ ನಾವು ನೋಡಿದ್ದು ನಿಜ ಅಲ್ಲ. ಭ್ರಮೆ ಅಂತೀರಾ? ಹಾಗಾದ್ರೆ ನಮಗೆ ಕೇಕನ್ನು ಕೊಟ್ಟವರ್ಯಾರು?"

"ಪಾರ್ಟಿ, ಕೇಕು ಯಾವುದೂ ಇಲ್ಲ ಅಂತ ಈಗ ಗೊತ್ತಾಯ್ತಲ್ಲ. ಧೈರ್ಯ ಇಲ್ಲದೇ ಇರೋರು ಇಂಥ ನಿರ್ಜನ ಸ್ಥಳಗಳಲ್ಲಿ ಕತ್ತಲೆ ಹೊತ್ನಲ್ಲಿ

ಓಡಾಡಬಾರದು. ಇಲ್ಲಿ ದೆವ್ವಗಳು ಓಡಾಡುತ್ವೆ ಅಂತ ಜನರು ಹೇಳ್ತಾರೆ...

"ಅಂದರೆ ನಾವು ನೋಡಿದ್ದು ದೆವ್ವಗಳ ಪಾರ್ಟಿನಾ?"

"ಇರಬಹುದು. ಇಲ್ಲದೇನೂ ಇರಬಹುದು. ದೆವ್ವಗಳನ್ನು ಎಲ್ಲರೂ ನಂಬುವುದಿಲ್ಲ. ಇದನ್ನು ಭ್ರಮೆ ಅಂತಾರೆ. ನಂಬುವವರು ದೆವ್ವಗಳಿಗೆ ಹೆದರ್ತಾರೆ. ಅವುಗಳಿಂದ ದೂರವೇ ಇರ್ತಾರೇ. ದೆವ್ವಗಳು ಯಾರಿಗೂ ಸುಮ್ಮ ಸುಮ್ಮನೆ ಕೆಡುಕನ್ನುಂಟುಮಾಡುವುದಿಲ್ಲ. ನಿಮ್ಮಿಬ್ಬರಿಗೂ ಏನೂ ಕೆಡುಕಾಗಿಲ್ಲ. ಆದರೆ ಇದನ್ನು ಮತ್ತೆ ಮತ್ತೆ ಪರೀಕ್ಷೆ ಮಾಡಲು ಇತ್ತ ಭರಬೇಡಿ. ನೇರವಾದ ರಸ್ತೆಯಲ್ಲಿ ಓಡಾಡಿ. ಸಂಶೋಧನೆ ಮಾಡುಕೆ ಹೋಗ್ಬೇಡಿ."

"ಇದನ್ನು ನಮಗ್ಯಾಕೆ ಹೇಳ್ತಿದೀರಿ?"

"ನಿಮ್ಮ ಭಯವನ್ನು ಹೋಗಲಾಡಿಸಲು ಇತ್ತ ಕರೆದುಕೊಂಡು ಬಂದೆವು. ಭಯವೊಂದಿಲ್ಲದಿದ್ದರೆ ಯಾವ ದೆವ್ವ ಭೂತವೂ ನಿಮ್ಮನ್ನು ಏನು ಮಾಡುಲ್ಲ. ಆದರೆ ಹಾಗಂತ, ದೆವ್ವಗಳನ್ನು ಪರೀಕ್ಷಿಸಲು ಹೋಗ್ಬೇಡಿ. ಅವುಗಳ ಪಾಡಿಗೆ ಅವುಗಳನ್ನು ಬಿಟ್ಟುಬಿಡಿ." ಎಲ್ಲರೂ ಆ ಮನೆಯಿಂದ ಹೊರಕ್ಕೆ ಬಂದು, ರಸ್ತೆಗೆ ಇಳಿದರು. ಹುಡುಗರಿಬ್ಬರೂ ಹಿರಿಯರಿಗೆ ತಿಳಿಯದಂತೆ, ಹಿಂತಿರುಗಿ ಬಂಗಲೆಯ ಕಡೆ ತಿರುಗಿ ನೋಡಿದರು. ಮನೆಯೊಳಗಿನಿಂದ ದಿವ್ಯವಾದ ಬೆಳಕು ಹರಿದಿತ್ತು. ಆ ಬೆಳಕಿನಲ್ಲಿ ಹೊಳೆಯುವ ದೇಹದ ಹುಡುಗನೊಬ್ಬ ಇವರಿಬ್ಬರ ಕಡೆ ನೋಡಿ, ಕೈ ಯಾಡಿಸಿದಂತೆ ಅನ್ನಿಸಿತು. ಇವರಿಬ್ಬರೂ ಕೈ ಎತ್ತಿ ಆಡಿಸಿದರು. ಹಿರಿಯುರಿಬ್ಬರೂ ಮುಂದೆ ಮುಂದೆ ನಡೆದಿದ್ದರು... ನೋಡ ನೋಡುತ್ತಿದ್ದಂತೆ. ಆ ಹುಡುಗ ಮಾಯವಾಗಿದ್ದ, ಬೆಳಕೂ ಮಾಯವಾಗಿತ್ತು. ಈಗ ಇವರಿಬ್ಬರಿಗೆ ಯಾವ ಭಯವೂ ಆಗಲಿಲ್ಲ. ತಾವಿಬ್ಬರೂ ಹಿಂದಿನ ಜನ್ಮದ ಯಾರೋ ಒಬ್ಬ ಶ್ರೀಮಂತ ಸ್ನೇಹಿತನನ್ನು ಕಂಡೆವೆಂದು ಅನ್ನಿಸಿತ್ತು. ಆದರೆ ಈ ಮಾತನ್ನು ತಮ್ಮಲ್ಲಿಯೇ ಅಡಗಿಸಿಟ್ಟುಕೊಂಡರು. ಕೈ ಕೈ ಹಿಡಿದು, ಹಿರಿಯರನ್ನು ಹಿಂಬಾಲಿಸಿದರು.

ಆನಂತರ ಹಿರಿಯರಿಗೆ ತಿಳಿಯದಂತೆ, ಯಾವಾಗಲಾದರೊಮ್ಮೆ

ಈ ಮನೆಯ ಬಳಿಗೆ ಬರುತ್ತಿದ್ದರು. ಪ್ರಕಾಶಮಾನವಾದ ಬೆಳಕಿನ ಮಧ್ಯೆ ಕೈಯಾಡಿಸುವ ಹುಡುಗನಿಗೆ ಪ್ರತಿಯಾಗಿ ಕೈಯಾಡಿಸಿ, ಅಲ್ಲಿಂದ ಹೋಗುತ್ತಿದ್ದರು.

ಕೆಲವು ವರ್ಷಗಳು ಕಳೆದವು. ಇಬ್ಬರೂ ಓದಲು ಬೇರೆ ಬೇರೆ ಊರಿಗೆ ಹೊರಟು ಹೋಗಿದ್ದರು. ಬಿಡುವಾಗಿದ್ದಾಗ ಬಂದರೂ, ಆ ಬಂಗಲೆಯ ಬಳಿಗೆ ಹೋಗಲಾಗಿರಲಿಲ್ಲ. ಆ ಬಡಾವಣೆ ಸಾಕಷ್ಟು ಬೆಳೆದಿತ್ತು. ಹೊಸ ಹೊಸ ಮನೆಗಳು ಬಂದಿದ್ದವು. ವಠಾರವನ್ನು ಬಿಟ್ಟರು ಬೇರೆ ಮನೆಗಳಲ್ಲಿ ವಾಸ ಮಾಡುತ್ತಿದ್ದರು. ಒಮ್ಮೆ ಇಬ್ಬರೂ, ಮಾತನಾಡಿಕೊಂಡು, ಆ ಬಂಗಲೆಯನ್ನು ಹುಡುಕುತ್ತಾ ಅತ್ತ ಹೋದರು. ಅಷ್ಟು ಹುಡುಕಿದರೂ, ಆ ಮನೆ ಯಾವುದೆಂದು ಗೊತ್ತಾಗಲಿಲ್ಲ. ಆ ಜಾಗದಲ್ಲಿ ಎರಡು ಮೂರು ಹೊಸಮನೆಗಳು ಬಂದಿದ್ದವು. ಗುರುತು ಸಿಗುವಂತೆ ಯಾವ ಸಾಕ್ಷಿಯೂ ಇರಲಿಲ್ಲ. ನಿರಾಶರಾಗಿ ಹಿಂತಿರುಗಿದರು. ಆ ನಂತರ ಮತ್ತೆ ಅತ್ತ ಹೋಗಲೇ ಇಲ್ಲ. ಆದರೆ ನಡೆದುದನ್ನು ಮರೆಯುವಂತೆಯೂ ಇರಲಿಲ್ಲ... ಅದು ಭ್ರಮೆಯಂತೂ ಅಲ್ಲ; ಕನಸೂ ಅಲ್ಲ.

(ಈ ವಿಷಯವನ್ನು ನಮ್ಮವರು ಹೇಳಿದಾಗ, ನಾನು ಕಟ್ಟುಕತೆಯೆಂದು ಅಲ್ಲಗಳೆದಿದ್ದೆ. ದೆವ್ವ ಭೂತವನ್ನು ನಂಬುತ್ತಿದ್ದ ನಮ್ಮವರ ಸೋದರಮಾವ ಈ ಪ್ರಸಂಗವನ್ನು ಹೇಳಿದ್ದರಂತೆ. ಯಾಕೆಂದರೆ, ಆ ಹುಡುಗರ ಪೈಕಿ ಒಬ್ಬರು ಶ್ರೀಹರಿ. ಶ್ರೀಹರಿ ಮಾವ ಹೇಳಿದ್ದು ಸುಳ್ಳಲ್ಲ. ಇದು ನಿಜವಾಗಿಯೂ ನಡೆದದ್ದೇ ಎಂದು ವಾದಿಸುತ್ತಾರೆ. ಅಲ್ಲ ಎಂದು ನಾನು ವಾದಿಸುತ್ತಲೆ ಇರುತ್ತೇನೆ).

***

೧೮. "ಉಡುಗೊರೆಯ ಬುಡಲ್ಲಿ..."

ನನ್ನ ಅಕ್ಕನ ಸ್ನೇಹಿತೆ, ಶಕುಂತಲ. ಅವಳಿಗೆ ಇಬ್ಬರು ತಂಗಿಯರು. ತಂಗಿಯರಿಬ್ಬರಲ್ಲೂ ಹೆಚ್ಚು ವಯಸ್ಸಿನ ಅಂತರವಿರಲಿಲ್ಲ. ಇಬ್ಬರೂ ಒಂದೇ ತರಗತಿಯಲ್ಲಿ ಓದುತ್ತಿದ್ದರು. ಮದುವೆ ವಯಸ್ಸಿಗೆ ಬಂದಾಗ ಇಬ್ಬರಿಗೂ ಒಟ್ಟಿಗೆ ಮದುವೆ ಮಾಡಬೇಕೆಂದು ಗಂಡುಗಳನ್ನು ನೋಡುತ್ತಿದ್ದರಂತೆ. ಶಕುಂತಲ ಮದುವೆಯಾಗಿ, ಬೇರೆ ಊರಿನಲ್ಲಿದ್ದಳು.

ಮೊದಲು ಚಿಕ್ಕ ತಂಗಿಗೆ ಮದುವೆ ಗೊತ್ತಾಯಿತು. ದೊಡ್ಡವಳಿಗೆ ಗೊತ್ತಾಗಿರಲಿಲ್ಲ. ಆದರೆ ಈ ವಿಷಯ ಶಕುಂತಲನಿಗೆ ಗೊತ್ತಿರಲಿಲ್ಲ. ಮದುವೆಗೆ ಕೆಲವು ದಿನಗಳಿವೆ ಎನ್ನುವಾಗ ಮಕ್ಕಳೊಡನೆ ಬಂದಿದ್ದಳು. ಇಬ್ಬರೂ ಒಟ್ಟೊಟ್ಟಿಗೆ ಬೆಳೆದರು, ಓದಿದರು, ಮದುವೇನೂ ಒಟ್ಟಿಗೇನೇ ಆಗುತ್ತೆ ಅಂತ ಅಂದ್ಕೊಂಡಿದ್ದೆ ಅಂದಳಂತೆ.

ಇಬ್ರಿಗೂ ಒಟ್ಟಿಗೇನೇ ಮಾಡ್ಬೇಕು ಅಂತ ಅಂದ್ಕೊಂಡಿದ್ದೆವು. ಬಂದ ಗಂಡುಗಳೆಲ್ಲ ಇವಳನ್ನೆ ಒಪ್ಪುಕೊಳ್ಳುತ್ತಿದ್ದರು. ಅಲ್ಲದೇ ಅವಳಿಗೆ ಇನ್ನೂ ಆರು ತಿಂಗಳ ನಂತರವೇ ಗುರು ಬಲ ಬರೋದು. ಇವಳ ಗಂಡನ ಮನೆಯವರು ಬಹಳ ಆತುರದಲ್ಲಿದ್ದಾರೆ. ಹಾಗಾಗಿ ಒಪ್ಕೋ ಬೇಕಾಯ್ತು. ಇಲ್ದಿದ್ರೆ ಇಬ್ರಿಗೂ ಆರು ತಿಂಗಳ ನಂತರವೇ ಮಾಡಬಹುದಾಗಿತ್ತು. ನಮಗೂ ಖರ್ಚು ಕಡಿಮೆ ಆಗ್ತಿತ್ತು. ಅವಳ ತಾಯಿ ಅಂದಿದ್ದರಂತೆ.

ಶಕುಂತಲನ ಗಂಡ, ಅವಳ ಸೋದರತ್ತೆಯ ಮಗನೇ. ಒಳ್ಳೆಯ ಕೆಲಸದಲ್ಲಿದ್ದು, ಸಂಪಾದನೆಯೂ ಚೆನ್ನಾಗಿದ್ದಿತು. ಹಾಗಾಗಿ ಇವಳಿಗೆ ತಂದೆ ತಾಯಿಗೆ ಸಹಾಯ ಮಾಡುವ ಆಸೆ ಇದ್ದರೂ, ಗಂಡನನ್ನು

ಕೇಳಲು ಇಷ್ಟಪಡಲಿಲ್ಲ. ಅವನಿಗೆ ಇಷ್ಟವಾಗುವುದಿಲ್ಲವೆನ್ನುವುದು ಅವಳಿಗೆ ತಿಳಿದಿತ್ತು. ಆದರೂ, ಗಂಡ, ಇಬ್ಬರೂ ತಂಗಿಯರಿಗೂ ರೇಶ್ಮೆ ಸೀರೆಗಳನ್ನು ಉಡುಗೊರೆಯಾಗಿ ಕೊಡಬೇಕೆಂದು ಖರೀದಿಸಿದಾಗ, ಇವಳು ಸುಮ್ಮನಿದ್ದಳು. ಎರಡೂ ಬನಾರಸ್ ಸೀರೆಗಳನ್ನು ತಂಗಿಯರ ಮುಂದೆ ಇಟ್ಟಳು. ನಿಮ್ಮಿಬ್ಬರಿಗೆ ಅಂತ ನಿಮ್ಮ ಭಾವ ತಗೊಂಡಿರೋದು. ನಿಮಗೆ ಯಾವುದು ಇಷ್ಟವೋ ಅದನ್ನು ಇಟ್ಕೊಳ್ಳಿ ಅಂತ ಕೊಟ್ಟಳು.

"ಇವಳಿಗೇನೋ ಸರಿ. ನನಗೆ ಮದುವೆ ಗೊತ್ತಾಗಿಲ್ವಲ್ಲ ನಂಗೇನೂ ಬೇಡ" ಎಂದಿದ್ದಳು ದೊಡ್ಡ ತಂಗಿ. ಅವಳಿಗೆ ಸ್ವಲ್ಪ ಮನಸ್ಸು ಕುಗ್ಗಿತ್ತು.

"ಪರ್ವಾಗಿಲ್ಲ —— ಯಾವಾಗ ಕೊಟ್ಟರೆ ಏನು? ನಿನ್ನ ಭಾವನಿಗೆ ನಿನ್ನನ್ನ ಕಂಡರೆ ಇಷ್ಟ. ನಿನ್ನ ಮದುವೆಗೆ ಅಂತ ಅವರೇ ಆರಿಸಿರುವ ಸೀರೆ ಇದು". ಅಕ್ಕ ಬಲವಂತ ಮಾಡಿದ ಮೇಲೆ, ಇಬ್ಬರೂ ಒಂದೊಂದು ಸೀರೆಯನ್ನು ತೆಗೆದಿಟ್ಟುಕೊಂಡರು. ಶಕುಂತಲನ ಗಮನ ಅವಳ ತಂಗಿಯ ಕಿರಿಯ ಕಡೆಗೆ ಹೋಯಿತು. ಅದೇ ಹಳೇ ಓಲೆಗಳು. ಇಪ್ಪತ್ತು ವರ್ಷಗಳ ಕೆಳಗೆ ತಾಯಿ, ತಾನು ಕೂಡಿಟ್ಟ ಹಣದಲ್ಲಿ ತೆಗೆಸಿಕೊಟ್ಟಿದ್ದು.

"ಮದುವೆಗೆ ಅಂತ ಒಡವೆ ಏನಾದ್ರೂ ಮಾಡ್ಸಿದಾರಾ ಅಪ್ಪ?" ಕೇಳಿದ್ದಳು.

"ಇಲ್ಲ. ಈ ಓಲೇನೇ ಚೆನ್ನಾಗಿದೆ. ಒಂದೆಳೆ ಸರ ಇದೆ. ಇನ್ನೇನೂ ಒಡವೆ ಬೇಡ ಅಂತ ಅಪ್ಪನಿಗೆ ಅಮ್ಮ ಹೇಳಿದ್ಲು. ನಾನೂ ಕೇಳಲಿಲ್ಲ".

ಈ ಸಮಯದಲ್ಲಿ ವಾಲೆಗಳಾದ್ರೂ ಚೆನ್ನಾಗಿರ್ಬೇಕು. ಪಾಲಿಷ್ ಕೂಡಾ ಮಾಡಿಸಿಲ್ಲ. ನನ್ನ ಹತ್ರ ಐದಾರು ಜೊತೆ ಓಲೆಗಳಿವೆ. ಹೀಗೆ ಅಂತ ಗೊತ್ತಿದ್ದಿದ್ರೆ ತರಬಹುದಾಗಿತ್ತು. ಹೋಗಲಿ. ನಿಂಗೆ ಹೊಸಾ ವಾಲೆ ಹಾಕ್ಕೋಬೇಕು ಅಂತ ಆಸೆ ಆಗುತ್ತಾ!"

"ಆಸೆ ಏನೋ ಆಗುತ್ತೆ. ಆದರೆ ಅಪ್ಪನ್ನ ಹೇಗೆ ಕೇಳೋದು?

"ಅಪ್ಪನ್ನೇನೂ ಕೇಳೋದು ಬೇಡ. ನನ್ಹತ್ರ ಸ್ವಲ್ಪ ದುಡ್ಡಿದೆ ನಾಳೇನೇ ಹೋಗಿ ರೆಡಿ ಮೇಡ್ ವಾಲೆಗಳನ್ನು ತಂದು ಬಿಡೋಣ. ಯಾರಿಗೂ ಹೇಳೋದು ಬೇಡ". ದೊಡ್ಡ ತಂಗಿ ಮುಖ ಸಪ್ಪಗೆ ಮಾಡಿದಳು.

ಮಾರನೇ ದಿನ ಅಕ್ಕ ತಂಗಿಯರಿಬ್ಬರೇ, ಚಿನ್ನ ಬೆಳ್ಳಿಯ ಅಂಗಡಿಗೆ ಹೋಗಿ ಒಂದು ಜೊತೆ ಮುತ್ತಿನ ಓಲೆಯನ್ನು ಖರೀದಿಸಿ ತಂದರು.

ಮದುವೆಯ ದಿನ, ಮದುಮಗಳು ಹೊಸ ಓಲೆಯನ್ನು ಧರಿಸಿದಾಗಲೇ ಎಲ್ಲರಿಗೂ ಗೊತ್ತಾದದ್ದು. ಆದರೆ ಶಕುಂತಲ ಗಂಡನಿಂದ ಈ ವಿಷಯ ವನ್ನು ಮುಚ್ಚಿಟ್ಟಳು. ಮದುವೆಯ ಹಿಂದಿನ ದಿನ ಗಂಡ ಬಂದಿದ್ದ. ಮದುವೆ ನೆರವೇರಿತು. ಎಲ್ಲರೂ ಮುತ್ತಿನ ಓಲೆಯನ್ನು ಹೊಗಳುವವರೇ. ಹಾಗೇ ಬನಾರಸ್ ಸೀರೆಗಲು ಕೂಡಾ ಎಲ್ಲರ ಮೆಚ್ಚುಗೆಯನ್ನು ಗಳಿಸಿತ್ತು. ಒಂದೆರಡು ದಿನಗಳ ನಂತರ ಶಕುಂತಲ ಗಂಡ ಮಕ್ಕಳೊಡನೆ ತನ್ನ ಊರಿಗೆ ವಾಪಸ್ಸು ಹೊರಟು ಹೋಗಿದ್ದಳು.

ಎಂಟು ತಿಂಗಳ ನಂತರ ದೊಡ್ಡ ತಂಗಿಯ ಮದುವೆಯೂ ಗೊತ್ತಾಗಿದ್ದಿತು. ಹುಡುಗ ಕಲ್ಕತ್ತಾದಲ್ಲಿ ಕೆಲಸದಲ್ಲಿದ್ದವನು. ಈ ಬಾರಿ ಮದುವೆಗೆ ಎರಡು ದಿನಗಳಿವೆ ಎನ್ನುವಾಗ ಶಕುಂತಲ; ಅವಳ ಗಂಡ ಮಕ್ಕಳು ಒಟ್ಟಾಗಿಯೇ ಬಂದರು. ಅವನು ತನ್ನ ಮೆಚ್ಚಿನ ನಾದಿನಿಗೆಂದು ತಂದಿದ್ದ ಫುಲ್‌ವಾಯಿಲ್ ಸೀರೆಯನ್ನು, ಕಿವಿಗೆ ಹಾಕಿಕೊಳ್ಳುವ ಚಿನ್ನದ ರಿಂಗ್‌ಗಳನ್ನು ತೋರಿಸಿದ.

"ಕಲ್ಕತ್ತಾದಂಥ ದೊಡ್ಡ ಊರಿನಲ್ಲಿ, ಹೆಂಗಸರು ಫ್ಯಾಷನ್ ಮಾಡ್ತಾರೆ, ನಿನಗೆ ಈ ರಿಂಗು ಚೆನ್ನಾಗಿ ಒಪ್ಪುತ್ತೆ..." ಎಂದಿದ್ದ ಶಕುಂತಲ ಮಾತಾಡಿ ರಲಿಲ್ಲ.

ಮದುವೆಯ ದಿನ, ಧಾರೆ ಸಮಯದಲ್ಲಿ ಈ ರಿಂಗುಗಳನ್ನು ಹಾಕಿ ಕೊಳ್ಳೋಕೆ ಆಗುಲ್ಲ. ನನ್ನ ಈ ಹವಳದ ಓಲೆಗಳನ್ನು ಹಾಕ್ಕೋ... ನನ್ನ ಹತ್ತಿರ ವಜ್ರದ ಓಲೆಗಳಿವೆ ಎಂದು ಹೇಳಿ, ತಾನು ಹಾಕಿಕೊಂಡಿದ್ದ ಹವಳದ ಓಲೆಗಳನ್ನು ತೆಗೆದು, ತೊಳೆದು ಒರೆಸಿ, ತಂಗಿಗೆ ಕೊಟ್ಟಿದ್ದಳು.

ಉಡುಗೊರೆಯನ್ನು ಕೊಡುವ ಸಮಯದಲ್ಲಿ ಎಲ್ಲರಿಗೂ ಗೊತ್ತಾಗು ವಂತೆ, ಹಳದಿ ಒಡಲಿನ, ಕೆಂಪು ಬಣ್ಣದ ಅಂಚು ಸೆರಗಿನ ಫುಲ್‌ವಾಯಿಲ್ ಸೀರೆಯನ್ನು ರಿಂಗುಗಳನ್ನಿಟ್ಟಿದ್ದ ಒಡವೆಯ ಡಬ್ಬಿಯನ್ನು ತಂಗಿಗೆ ಓದಿಸಿದಳು. ಎಲ್ಲರೂ ಶಕುಂತಲಳನ್ನು ಅವಳ ಗಂಡನನ್ನು ಹೊಗಳಿದ್ದೇ ಹೊಗಳಿದ್ದು.

•

ಮದುವೆಯ ಮಾರನೆ ದಿನವೇ ಮದುಮಗಳು ಗಂಡನ ಮನೆಗೆ ಹೊರಟು ಬಿಟ್ಟಳು. ಇಪ್ಪತ್ತು ದಿನಗಳ ರಜದ ನಂತರ ಕಲ್ಕತ್ತಾಕ್ಕೆ ಹೋಗುವುದಕ್ಕೆ ರೈಲಿನಲ್ಲಿ ರಿಸರ್ವ್ ಮಾಡಿಸಲಾಗಿತ್ತು. ಹಾಗಾಗಿ, ತವರಿಗೆ ಮತ್ತೊಮ್ಮೆ, ಹೊರಡುವ ಮೊದಲು ಬರುವ ವಿಚಾರವಿದ್ದುದರಿಂದ ಅವಳು ತನಗೆ ಬಂದ ಉಡುಗೊರೆಗಳನ್ನು ಇಲ್ಲೇ ಬಿಟ್ಟು ಹೋಗಿದ್ದಳು. ಹೊಸ ಸಂಸಾರಕ್ಕೆ ಏನೇನು ತಗೊಂಡು ಹೋಗಬೇಕು ಎಂತೆಂಥ ಉಡುಗೊರೆ ಉಪಯೋಗಕ್ಕೆ ಬರುತ್ತದೆಯೋ ಎನ್ನುವ ಕುತೂಹಲದಿಂದ, ಊರಿಗೆ ಬಂದವಳು, ಗಂಡ ಎರಡು ದಿನಗಳ ನಂತರ ವಾಪಸ್ಸು ಹೋದಮೇಲೆ, ತೆಗೆದು ನೋಡಿದಳು.

ಅವಳಿಗೆ ಸ್ವಲ್ಪ ನಿರಾಸೆಯೇ ಕಾದಿತು. ಉಡುಗೊರೆಯ ವಸ್ತುಗಳು ಹೇಳಿಕೊಳ್ಳುವಷ್ಟೇನೂ ಇರಲಿಲ್ಲ. ಸ್ವಲ್ಪ ಮಟ್ಟಿಗೆ ಇದ್ದ ಕ್ಯಾಷ್‌ನ್ನು ಒಂದು ಕವರಿನೊಳಗೆ ಇಟ್ಟಿದ್ದರು. ಎಣಿಸಿದಳು ಒಂದು ಸಣ್ಣ ಕುಕ್ಕರ್‌ನ್ನು ಕೊಂಡುಕೊಳ್ಳಲು ಸಾಕಾಗಿತ್ತು.

ಆ ಉಡುಗೊರೆಗಳ ನಡುವೆ, ಅಕ್ಕಭಾವ ಕೊಟ್ಟ, ಸೀರೆಯಾಗಲೀ, ರಿಂಗುಗಳಾಗಲೀ ಇಲ್ಲದಿರುವುದು ಅವಳ ಗಮನಕ್ಕೆ ಬಂದಿತು. ಮತ್ತೊಮ್ಮೆ ಅವುಗಳು ಇಲ್ಲ ಎನ್ನುವುದನ್ನು ಖಚಿತ ಪಡಿಸಿಕೊಳ್ಳುವಾಗ, ತಾನು ಬಿಚ್ಚಿಟ್ಟ ಹಳೆಯ ಚಿನ್ನದ ಓಲೆಗಳು ಸಹ ಇಲ್ಲದಿರುವುದು ಗಮನಕ್ಕೆ ಬಂದಿತು. ಕೋಪ, ನಿರಾಸೆ, ಅಳು ಎಲ್ಲವೂ ಒಟ್ಟಿಗೇ ನುಗ್ಗಿತು. ಓಲೆಗಳು ಹಳೆಯದಾದರೇನು? ಸುಮಾರು ಹದಿನೈದು ವರ್ಷಗಳಿಂದ ತಾನು ಧರಿಸಿದ್ದು. ಅದು ತನ್ನದು. ಅಮ್ಮ ತೆಗೆದಿಟ್ಟಿದ್ದರೆ ಕೂಡಲೇ ಬೇಕು ಎಂದು ಕೊಂಡು ಅವಳ ತಾಯಿಯನ್ನು ಆ ಬಗ್ಗೆ ಕೇಳಿದಳು. ಅವಳ ತಾಯಿಗೆ ಆ ಬಗ್ಗೆ ಏನೂ ತಿಳಿಯದು.

"ಈ ವರೆಗೆ, ನಿಂಗೆ ಏನು ಬಂದಿದೆ, ಎಷ್ಟು ಬಂದಿದೆ, ಯಾರ್‍ಯಾರು ಏನೇನು ಕೊಟ್ಟಿದಾರೆ ಅಂತ ನೋಡಲು ನನಗೆ ಬಿಡುವೇ ಇಲ್ಲ. ನನಗೇನು ಬಂದಿದೆ ಅಂತಲೇ ನಂಗೊತ್ತಿಲ್ಲ. ಎಲ್ಲವನ್ನೂ ಶಕುಂತಲನೇ ತೆಗೆದಿಟ್ಟಿದ್ದು. ಒಂದು ವಾರದ ಕೆಳಗೆ ಊರಿಗೆ ಹೋದಳು..."

"ಹಾಗಾದರೆ ಇದು ಶಕುಂತಲನದೇ ಕೆಲಸ... ಎಲ್ಲಿಟ್ಟಳೋ... ಅಂತ ಅಂದುಕೊಂಡು ಹುಡುಕಬೇಕಾದ ಸ್ಥಳಗಳನ್ನೆಲ್ಲಾ ಶೋಧಿಸಿದ್ದಾಯಿತು. ಅಕ್ಕನನ್ನು ನೋಡಲೆಂದು ಬಂದಿದ್ದ ತಂಗಿಯನ್ನು ಆ ಬಗ್ಗೆ ಕೇಳಿದ್ದಾಯಿತು.

"ನಿಂಗೇನಾದ್ರೂ ಗೊತ್ತಾ?... ಅಕ್ಕ ಕೊಟ್ಟ ಸೀರೆ, ರಿಂಗು ಒಂದೂ ಕಾಣ್ತಿಲ್ಲ. ಅಮ್ಮನ್ನ ಕೇಳಿದ್ರೆ ಗೊತ್ತಿಲ್ಲ ಅಂತಾಳೆ. ಇಷ್ಟಲ್ಲದೇ, ನನ್ನ ಹಳೇ ಓಲೆ ಸಹ ಕಾಣ್ತಿಲ್ಲ".

"ನಾನು ಮಾರನೇ ದಿನವೇ ಊರಿಗೆ ವಾಪಸ್ಸು ಹೊರಟು ಹೋದೆ. ನಿಂಗೆ ಉಡುಗೊರೆಯಲ್ಲಿ ಏನೇನು ಸಿಕ್ಕಿದೆ ಅಂತ ನಂಗೂ ಗೊತ್ತಿಲ್ಲ. ಯಾರ್‍ಯಾರು ಏನೇನು ಕೊಟ್ಟಿದಾರೆ!" ಅವಳು ಕುತೂಹಲವನ್ನು ತೋರಿದಳು.

"ನಂಗೊತ್ತಿಲ್ಲ. ಒಂದರಲ್ಲೂ ಹೆಸರಿಲ್ಲ... ಒಂದಿಷ್ಟೋ ಕ್ಯಾಷ್ ಇದೆ. ಎಲ್ಲವನ್ನೂ ಒಟ್ಟಿಗೆ ಸೇರಿಸಿ ಇಟ್ಟಿದಾರೆ... ಅದೂ ತುಂಬಾ ಏನಿಲ್ಲ". ಅವಳು ಮತ್ತೆ ಎಲ್ಲವನ್ನು ತೆಗೆದು ನೋಡಿದ್ದಳು.

"ಅಕ್ಕ ನಿಂಗೆ ಕೊಟ್ಟ ಸೀರೆ ತುಂಬಾ ಚೆನ್ನಾಗಿತ್ತು. ಅವಳೇ ಒಂದು ದಿನ ಆಸೆಯಿಂದ ಉಟ್ಟಿದ್ದಳು. ಸೆರಗು ಅಂಚು, ಬಣ್ಣ ತುಂಬಾ ಚೆನ್ನಾಗಿದೆ. ತುಂಬಾ ನೆರಿಗೆ ಬರುತ್ತೆ."

"ಏನು ನನ್ನ ಸೀರೇನ ಅವಳು ಉಟ್ಕೊಂಡಿದ್ಲಾ! ನಂಗೆ ಕೊಟ್ಬಿಟ್ಟು ಅವಳ್ಯಾಕೆ ಉಟ್ಕೋ ಬೇಕಾಗಿತ್ತು! ನಾನು ಅದಕ್ಕೆ ಒಪ್ಪುವ ರವಿಕೆ ಇಲ್ಲ ಅಂತ ಇಲ್ಲೇ ಬಿಟ್ಟು ಹೋದೆ..."

"ಹೌದು ಅವಳು ಹಾಗೆ ಮಾಡಬಾರದಾಗಿತ್ತು".

"ಹಾಗಾದ್ರೆ, ಅವಳು ಸೀರೇನ ತಾನೇ ತೆಗೆದುಕೊಂಡು ಹೋಗಿರ ಬಹುದಲ್ವಾ?"

"ಹಾಗ್ಯಾಕೆ ಮಾಡ್ತಾಳೆ? ಭಾವ ಸುಮ್ಮನಿರ್ತಾರಾ?"

"ಭಾವನಿಗೆ ಏನು ಸುಳ್ಳು ಹೇಳ್ತಾಳೋ? ಅವರಿಗೆ ತಿಳಿಯದ ಹಾಗೆ ನಿನಗೆ ಮುತ್ತಿನ ಓಲೆಗಳನ್ನು ಕೊಡಿಸಿಲ್ವಾ?..." ಅವಳು ಧರಿಸಿದ್ದ ವಾಲೆಗಳ ಕಡೆ ಗಮನ ಹರಿದಿತ್ತು.

"ನಿಂಗೂ ಹವಳದ ಓಲೆಗಳನ್ನು ಕೊಟ್ಟಿದ್ದಾಳಲ್ಲ... ಅದೇ.... ಒಂದು ಹವಳ ಒಂದು ಮುತ್ತು ಬಿದ್ದೇ ಹೋಗಿದೆ..." ಅವಳು ಅಕ್ಕ ಧರಿಸಿದ್ದ ವಾಲೆಗಳ ಕಡೆ ಗಮನ ಹರಿದಿತ್ತು.

"ಹೌದು, ನಂಗೂ ಗೊತ್ತು. ಹಳೇ ವಾಲೆ, ಇನ್ನೇನಾಗುತ್ತೆ!... ಅಕ್ಕಸಾಲಿಗನ ಬಳಿಗೆ ಹೋಗಿ, ಹಾಕಿಸ್ಕೋ ಬೇಕು. ಆ ಕೆಲಸವೂ ಬಾಕಿ ಇದೆ... ಇದನ್ನು ಕೊಡುವ ಬದಲು, ಕೊಡದೇ ಇದ್ದಿದ್ದರೆ ಚೆನ್ನಾಗಿತ್ತು. ಆ ಹಳೆಯ ಓಲೆಗಳೇ ಇದಕ್ಕಿಂತ ಚೆನ್ನಾಗಿತ್ತು... ಆ ಓಲೆಗಳನ್ನು ಎಲ್ಲಿ ಇಟ್ಟು ಹೋದ್ಲೋ... ಅಥವಾ ಅದನ್ನು ತಗೊಂಡೇ ಹೋದ್ಲೋ?" ನನ್ನ ಅನುಮಾನವನ್ನು ವ್ಯಕ್ತ ಪಡಿಸಿದೆ.

"ಇರಬಹುದು ಅಂತ ನಂಗೆ ಈಗ ಅನ್ನಿಸ್ತಿದೆ. ತನ್ನ ವಜ್ರದ ಓಲೆಗಳನ್ನು ಬಿಚ್ಚಿಟ್ಟು ಈ ಓಲೆಗಳನ್ನು ಹಾಕಿಕೊಂಡಿದ್ದಳು... ಅವಳು ಊರಿಗೆ ವಾಪಸ್ಸು ಹೋಗುವಾಗ ನಾನು ಇಲ್ಲಿ ಇರಲಿಲ್ಲ. ನನಗೆ ಏನೂ ಗೊತ್ತಿಲ್ಲ".

"ಒಟ್ನಲ್ಲಿ ನಂಗೆ ಮೋಸ ಮಾಡಿ ಬಿಟ್ಟಳು. ಎಲ್ಲರೆದುರಿಗೆ ಉಡುಗೊರೆ ಯನ್ನು ಕೊಟ್ಟ ನಾಟಕವಾಡಿ, ಎಲ್ಲವನ್ನೂ ಮತ್ತೆ ತಗೊಂಡು ಹೋಗಿದಾಳೆ, ನೋಡು ಎಂಥಾ ಘಾಟಿ?"

"ಹಾಗ್ಯಾಕೆ ಮಾಡ್ತಾಳೆ? ಏನೋ ಅವಸರದಲ್ಲಿ ಹಾಗಾಗಿರಬಹುದು. ಕೇಳಿದ್ರಾಯ್ತು".

"ಯಾವಾಗ ಕೇಳೋದು! ನಾನು ಈಗ ಕಲ್ಕತ್ತಾಕ್ಕೆ ಹೋದರೆ, ವಾಪಸ್ಸು ಬರೋದು ಯಾವಾಗ್ಲೋ... ಅಲ್ಲೀವರೆಗೂ, ಈ ಮಾತ್ತು ಬಿದ್ದು ಹೋದ ಹಳೇ ವಾಲೇನ ಹಾಕ್ಕೊಂಡಿರ್ಬೇಕಾ? ನನಗೆ ಇದು ಬೇಡವೇ ಬೇಡ... ನನ್ನ ವಾಲೆಗಳನ್ನ ನನಗೆ ವಾಪಸ್ಸು ಕೊಟ್ಟು ಬಿಡಲಿ. ಈಗಲೇ ಅವಳಿಗೆ ಒಂದು ಕಾಗದವನ್ನು ಬರೀತೀನಿ. ನಿನ್ನ ಮದುವೇಲಿ, ನನಗೆ ಬನಾರಸ್ ಸೀರೇನ ಕೊಟ್ಟಿದ್ದಲ್ಲ... ಅದಕ್ಕೆ ಎಲ್ಲವನ್ನು ವಾಪಸ್ಸು ತಗೊಂಡು ಹೋಗಿದಾಳೆ... ನನ್ನ ಗಂಡನ ಮನೆಯವರಿಗೆ ತಿಳಿದರೆ ಏನಂದ್ಕೊಳ್ತಾರೆ?"

"ಹೇಗೂ ದೂರದ ಊರಿಗೆ ಹೋಗ್ತಿದೀಯಲ್ಲ ಯಾರ್ಗೂ ಏನೂ ಗೊತ್ತಾಗಲ್ಲ. ನೀನಾಗಿಯೇ ಹೇಳಲೇ ಬೇಡ. ಸುಮ್ಮನಿದ್ದು ಬಿಡು".

"ನಿನ್ನ ಅಕ್ಕ ಬಹಳ ದೊಡ್ಡ ಮನುಷ್ಯೆ ಅಂತ ಎಲ್ಲರೂ ಹೊಗಳುತಿದ್ರು, ನೋಡಿದ್ಯಾ ಎಂಥಾ ಸಣ್ಣ ಬುದ್ಧಿ ಎನ್ನುತ್ತಾ, ಒಂದು ಇನ್‌ಲ್ಯಾಂಡ್ ಲೆಟರ್‌ನ್ನು ತೆಗೆದಿಟ್ಟುಕೊಂಡು ಕಾಗದವನ್ನು ಬರೆಯ ತೊಡಗಿದಳು. ನಾನು ಊರಿಗೆ ಹೊರಡುವ ಮೊದಲು, ಅವಳು ನನಗೆ ತಲುಪಿಸಿದರೆ ಸಾಕು. ಇಲ್ಲದಿದ್ದರೆ, ಅದು ನನಗೆ ಮತ್ತೆ ಸಿಗುವುದೇ ಇಲ್ಲ". ಎಂದು ಕೊಂಡು ಬರೆದ ಕಾಗದವನ್ನು ಅಂಟಿಸಿ, ಪೋಸ್ಟ್ ಮಾಡಲು ತೆಗೆದಿಟ್ಟಳು. ತಾಯಿಗೆ, ಇಬ್ಬರೂ ಈ ವಿಷಯವನ್ನು ತಿಳಿಸಲಿಲ್ಲ.

"ನನಗಂತೂ ಸದಾ ಅಡಿಗೆ ಮನೆಯ ಕೆಲಸ ತಪ್ಪಿದ್ದಲ್ಲ. ಮದುವೆಗೆ ಯಾರು ಯಾರು ಬಂದ್ರು, ಏನು ಕೊಟ್ಟರು? ಒಂದೂ ಗೊತ್ತಾಗ್ಲೇ ಇಲ್ಲ", ತಾಯಿ ಆಕ್ಷೇಪಿಸಿದಳು.

"ನಂಗೂ ಗೊತ್ತಿಲ್ಲ. ಈಗ ಇವಳು ಹೇಳ್ತಿದಾಳೆ, ಅಕ್ಕ ಭಾವ ಕೊಟ್ಟ ಉಡುಗೊರೆಗಳು ಈ ಪೆಟ್ಟಿಗೆಯಲ್ಲಿ ಇಲ್ಲವಂತೆ... ಅವಳೇ ತಗೊಂಡು ಹೋಗಿರಬಹುದು ಎಂಬ ಅನುಮಾನ ಇವಳಿಗೆ."

"ಇದ್ದರೂ ಇರಬಹುದು. ನೀವು ಹೆಣ್ಣು ಮಕ್ಕಳು, ನಮ್ಮ ಹಿಂದೆ ನಮಗೆ ತಿಳಿಯದಂತೆ ಏನೇನು ಮಾಡ್ತೀರೋ, ಏನೇನು ಆಡ್ತೀರೋ"... ತಾಯಿ ಇವರುಗಳನ್ನೇ ಆಕ್ಷೇಪಿಸಿ ಎದ್ದು ಹೋಗಿದ್ದಳು.

"ಅಮ್ಮನಿಂದ ನಮಗೆ ಇದಿಷ್ಟೇ. ಸದ್ಯ ನಮ್ಮಗಳ ಮದುವೆ ಆದರೆ ಸಾಕು ಅಂತ ಕಾಯ್ತಿದ್ಲು... ಇನ್ನು ನಮಗೆ ಅವಳ ಚಿಂತೆ ಇಲ್ಲ". ಅಕ್ಕ ತಂಗಿಯರು ಮಾತನಾಡಿಕೊಂಡು ನಕ್ಕಿದ್ದರು.

ಒಂದು ವಾರ ತವರು ಮನೆಯಲ್ಲಿದ್ದು ವಾಪಸ್ಸು ಹೊರಟಳು. ಅಕ್ಕನಿಂದ ಕಾಗದ ಬಂದಿರಲಿಲ್ಲ. ಮತ್ತೆ ಬರೆಯುವ ಮನಸ್ಸಾಗಲಿಲ್ಲ. ತನಗೆ ಬೇಕಾಗುವ ಉಪಕರಣಗಳನ್ನು ವಸ್ತುಗಳನ್ನೂ ಕೊಂಡು ಪೆಟ್ಟಿಗೆಗಳಿಗೆ ತುಂಬಿ ತಾಯಿಯಿಂದ ಉಡಿ ತುಂಬಿಸಿಕೊಂಡು, ಮತ್ತೊಮ್ಮೆ ತವರು ಮನೆಯಿಂದ ಹೊರಟಳು. ಕಣ್ಣುಗಳು ತುಂಬಿ ಬಂದಿದ್ದವು. ಅದರಲ್ಲಿ ನಾನಾ ಭಾವನೆಗಳು ಅಡಗಿದ್ದವು.

ಅತ್ತೆಯ ಮನೆಯವರು, ಪೆಟ್ಟಿಗೆಗಳನ್ನು ತೆಗೆಸಿ, ಏನಿದೆ ಅಂತ

ನೋಡುವ ಉತ್ಸಾಹವನ್ನು ತೋರಲಿಲ್ಲ. ಇವಳೂ ತೆಗೆದು ತೋರಿಸಲಿಲ್ಲ. ಕಲ್ಕತ್ತಾಕ್ಕೆ ಹೊರಡುವ ಮೊದಲು, ಅಕ್ಕ ಭಾವ ಬರಬಹುದೇನೋ ಎಂದು ಕಾದಳು. ಆದರೆ ಯಾರೂ ಬಂದಿರಲಿಲ್ಲ.

ಹೊರಡುವ ಸಮಯ ಬಂದೇ ಬಿಟ್ಟಿತ್ತು. ಮದ್ರಾಸ್‌ಗೆ ಹೋಗಿ ಅಲ್ಲಿಂದ, ಕಲ್ಕತ್ತಾಕ್ಕೆ ಹೋಗುವ ರೈಲನ್ನು ಹತ್ತ ಬೇಕಾಗಿತ್ತು. ರೈಲ್ವೇ ಸ್ಟೇಷನ್‌ಗೆ ಬಂದು, ಬೋಗಿಯನ್ನು ಹುಡುಕಿ ಹತ್ತಿ ಕುಳಿತಿದ್ದುದೂ ಆಗಿತ್ತು. ರೈಲು ಹೊರಟೇ ಬಿಟ್ಟಿತು. ಜೊತೆಯಲ್ಲಿ ಬೀಳ್ಕೊಡಲು ಬಂದಿದ್ದ ಭಾವ, ವಾರಗಿತ್ತಿ ಕೈಯಾಡಿಸಿದ್ದರು. ರೈಲು ತನ್ನ ವೇಗವನ್ನು ಹೆಚ್ಚಿಸಿಕೊಂಡಿತು. ಕಡೇ ಗಳಿಗೆಯವರೆಗೂ ಅಕ್ಕ ಭಾವನ ನಿರೀಕ್ಷೆಯಲ್ಲಿದ್ದವಳಿಗೆ ನಿರಾಸೆ ಯಾಗಿತ್ತು.

ಕೆಲವು ಘಂಟೆಗಳ ನಂತರ ರೈಲು ಮದ್ರಾಸನ್ನು ತಲುಪಿತು. ಕೂಲಿ ಯವರು ಓಡೋಡಿ ಬಂದರು. ರೈಲಿನಿಂದ ಇಳಿದು ಅತ್ತಿತ್ತ ನೋಡುವಾಗ ಕಂಡಿದ್ದು ಅಕ್ಕ ಭಾವ ಹಾಗೂ ಅವರ ಮಕ್ಕಳು. ಅಲ್ಲಿ ಅವರನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ಕಕ್ಕಾಬಿಕ್ಕಿಯಾಗಿದ್ದಳು. ಅಷ್ಟರಲ್ಲಿ ಅವರುಗಳು ಇವರನ್ನು ಸಮೀಪಿಸಿದ್ದರು". ಇನ್ನೆರಡು ದಿನಗಳಿಗೆ, ಆಫೀಸಿನ ಕೆಲಸದ ಮೇಲೆ ಇಲ್ಲಿಗೆ ಬರುವುದಿತ್ತು. ಹೇಗೂ, ನೀವುಗಳು ಹೊರಡುವ ದಿನ, ರೈಲು ಗೊತ್ತಿದ್ದುದರಿಂದ ಇಲ್ಲೇ ಭೇಟಿಯಾಗೋಣ ಅಂತ ಬಂದೆವು. ಕ್ಲೋಕ್ ರೂಂನಲ್ಲಿ ಲಗೇಜನ್ನು ಇಟ್ಟು, ನಾವುಗಳು ಇಳಿದುಕೊಂಡಿರುವ ಹೋಟೆಲ್ಲಿಗೆ ಹೋಗಿ ಅಲ್ಲಿ ಮಾತನಾಡೋಣ. ಕಲ್ಕತ್ತಾಕ್ಕೆ ಹೋಗುವ ರೈಲಿಗೆ ಇನ್ನು ಸಮಯ ಇದೆ..." ಎಂದು ಹೇಳಿ ಇಬ್ಬರನ್ನೂ ಹೊರಡಿಸಿದರು. ಹೋಟೆಲಿನಲ್ಲೇ ಊಟ ಮಾಡಿ, ರೂಮಿಗೆ ಹೋಗಿ ಮಾತನಾಡುತ್ತಾ ಕುಳಿತರು.

ಗಂಡಸರಿಬ್ಬರೂ ಉದ್ಯೋಗ, ರಾಜಕೀಯ ಅದೂ ಇದು ಚರ್ಚಿಸುತ್ತಿರುವಾಗ, ಅಕ್ಕ ತಂಗಿಯರಿಬ್ಬರೂ ಬಾಲ್ಕನಿಗೆ ಬಂದರು. ಅಕ್ಕ, ಮೆಲ್ಲನೆ, ತನ್ನ ಕೈಯಲ್ಲಿ ಮುದುರಿಟ್ಟುಕೊಂಡಿದ್ದ ಕಾಗದದ ಪೊಟ್ಟಣವನ್ನು ತಂಗಿಯ ಕೈಗಿತ್ತಳು. ಏನೆಂದು ಬಿಡಿಸಿ ನೋಡಿದಾಗ ಅದರಲ್ಲಿ ಇವಳ

ಹಳೆಯ ಓಲೆಗಳಿದ್ದವು. ಸಮಿಶ್ರ ಭಾವನೆಗಳು, ಧುಮ್ಮಿಕಿದರೂ, ತೋರಗೊಡದೆ, ಅಲ್ಲಿಯೇ ತನ್ನ ಕಿವಿಯಲ್ಲಿದ್ದ ಹವಳದ ಓಲೆಗಳನ್ನು ಕಳಚಿ ಅದೇ ಕಾಗದದೊಳಗೆ ಇಟ್ಟು ಮಡಿಸಿ ಅಕ್ಕನ ಕೈಗೆ ಕೊಟ್ಟು, ತನ್ನ ಹಳೆಯ ಓಲೆಗಳನ್ನು ಧರಿಸಿದಳು. ಇಬ್ಬರ ನಡುವೆಯೂ ಯಾವ ಮಾತೂ ಇರಲಿಲ್ಲ. ಇಲ್ಲಿಂಗ ಬೇಗ ಹೋದರೆ ಸಾಕು ಎನಿಸಿತ್ತು. ಅವಳು ಕೊಟ್ಟಿದ್ದ ಸೀರೆಯ ಬಗ್ಗೆ ಪ್ರಶ್ನಿಸುವಂತೆಯೇ ಇರಲಿಲ್ಲ. ಏಕೆಂದರೆ ಅಕ್ಕ ಅದೇ ಸೀರೆಯನ್ನು ಉಟ್ಟಿದ್ದಳು. ಎಷ್ಟು ಬಾರಿ ಉಟ್ಟಿದ್ದಳೋ, ಎಷ್ಟು ಬಾರಿ ಒಗೆದಿದ್ದಳೋ, ಸೀರೆ ಹೊಸತನವನ್ನು ಕಳೆದುಕೊಂಡಿತ್ತು. ಮಾಸಲು ಬಣ್ಣಕ್ಕೆ ತಿರುಗಿತ್ತು. ರಿಂಗುಗಳನ್ನು ಮಗಳ ಕಿವಿಗೆ ಹಾಕಿದ್ದಳು. ಇಷ್ಟೇ ಇವಳ ಉದಾರತೆ ಅಂತ ಅಂದುಕೊಂಡಾಗ, ಅವಳ ಎದುರಿಗೆ ನಿಲ್ಲುವುದು ಕಷ್ಟವಾಗಿತ್ತು. ಉದ್ದೇಶ ಮುಗಿದ್ದಿತ್ತು. ಬಾಲ್ಕನಿಯಿಂದ ಒಳಕ್ಕೆ ಬಂದಳು. ಭಾವ ರೂಮಿಗೆ ಕಾಫಿಯನ್ನು ತರಿಸಿದ್ದರು. ಕಾಫಿಯನ್ನು ಕುಡಿದು, ಅಲ್ಲಿಂದ ಹೊರಟರು.

ಟ್ಯಾಕ್ಸಿಯಲ್ಲಿ ಕುಳಿತು ಇತ್ತ ತಿರುಗಿದಾಗ, ಅಕ್ಕ ಎತ್ತಲೋ ನೋಡು ತ್ತಿದ್ದಳು. ಅವಳ ಕಡೆ ಕೈಯಾಡಿಸುವ ಮನಸ್ಸಾಗಲಿಲ್ಲ. ಟ್ಯಾಕ್ಸಿ ಚಲಿಸಿತ್ತು. ಮನಸ್ಸು ಅಲ್ಲೋಲ ಕಲ್ಲೋಲದ ಕೊಳವಾಗಿತ್ತು. ತನ್ನ ಓಲೆಗಳನ್ನು ವಾಪಸ್ಸು ಪಡೆಯಲು, ಇಷ್ಟೇ ಶ್ರಮ ಪಡಬೇಕಾಯಿತಲ್ಲ ಅಂತೆನಿಸಿತು. ಅಕ್ಕ ತನ್ನ ಹಳೆಯ ಹವಳದ ಓಲೆಗಳನ್ನು ಕೊಡುವ ನಾಟಕದ ಅಗತ್ಯವಿರಲಿಲ್ಲ. ಸಧ್ಯ, ಅವಳ ವಾಲೆಗಳನ್ನು ಅವಳಿಗೆ ಕೊಟ್ಟು ತನ್ನ ವಾಲೆಗಳನ್ನು ಹಿಂದಕ್ಕೆ ಪಡೆದ ಸಮಾಧಾನ ಮನದಲ್ಲಿತ್ತು. ಕಲ್ಕತ್ತಾಕ್ಕೆ ಹೋಗುವ ರೈಲನ್ನು ಹತ್ತುವ ವೇಳೆಗೆ, ಮನಸ್ಸು ತಹ ಬಂದಿಗೆ ಬಂದಿತು.

***

೧೯. ಬೆಕ್ಕೋ? ಹುಲಿಯೋ?

ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ, ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವು. ಮನೆಯ ಮಾಲೀಕರು, ಔಟ್‌ಹೌಸ್‌ನಲ್ಲಿದ್ದರು. ಮುಂದೆ, ಮೇಲೆ ಕೆಳಗೆ ಎರಡು ಮನೆಗಳನ್ನು ಕಟ್ಟಿಸಿ, ಬಾಡಿಗೆಗೆ ಕೊಟ್ಟಿದ್ದರು. ನಾವು ಮೇಲಿನ ಮನೆಯಲ್ಲಿದ್ದೆವು. ಮನೆಯಲ್ಲಿ ನಾವು ಮೂರೇ ಜನ. ನಾನು ಮತ್ತು ಇಬ್ಬರು ಮಕ್ಕಳು ಇವರು ಪೂನಾದಲ್ಲಿದ್ದರು. ಆಗಾಗ ಬಂದು ಹೋಗುತ್ತಿದ್ದರು.

ಮನೆಯ ಮಾಲೀಕ ಬಹಳ ಸಾಧು ಮನುಷ್ಯ ನಿಗರ್ವಿ. ಆತನ ಪತ್ನಿಗೆ ಸ್ವಲ್ಪ ಗರ್ವ. ತಾನು ಮಾಲೀಕಳು. ಇವರು ಎಷ್ಟಾಗಲೀ ಬಾಡಿಗೆಗೆ ಇರುವವರು ಎಂಬ ಧೋರಣೆ. ಮಾತಿನಲ್ಲಿ ವ್ಯಕ್ತ ಪಡಿಸುತ್ತಿದ್ದಳು. ಆತ, ನೀವು ನನ್ನ ಅಕ್ಕ ಇದ್ದ ಹಾಗೆ. ನಿಮ್ಮನ್ನು ನೋಡಿದರೆ, ನನ್ನ ಅಕ್ಕನ ನೆನಪಾಗುತ್ತದೆ ಎನ್ನುತ್ತಿದ್ದರು.

ಅದನ್ನೆ ಆಕೆ, ನಿಮ್ಮನ್ನು ನೋಡಿದರೆ, ಅವರ ಅಕ್ಕನ ನೆನಪಾಗುತ್ತಂತೆ. ಅದಕ್ಕೇ ನಿಮಗೆ ಕಡಿಮೆ ಬಾಡಿಗೆಗೆ ಕೊಟ್ಟಿದಾರೆ. ಇಲ್ಲದಿದ್ದರೆ ಈ ಏರಿಯಾ ದಲ್ಲಿ ಇಷ್ಟು ಕಡಿಮೆ ಬಾಡಿಗೆಗೆ ಇಂಥಾ ಮನೆ ಎಲ್ಲಿ ಸಿಗುತ್ತಿತ್ತು ಎಂದು ಆಗಾಗ್ಗೆ ಹೇಳುತ್ತಿದ್ದಳು. ಮನೆಯೇನೋ ಚೆನ್ನಾಗಿತ್ತು. ಹೊಸ ಮನೆ. ಎರಡು ರೂಮಿನ ಮನೆ. ಗಾಳಿ ಬೆಳಕು ಚೆನ್ನಾಗಿತ್ತು. ಬಾಲ್ಕನಿ ಇತ್ತು, ಅಲ್ಲಿಂದ ಕೆಳಗೆ ನೊಡಿದರೆ, ಮಾಲೀಕರ ಮನೆಯ ಮುಂಭಾಗ ಕಾಣುತ್ತಿತ್ತು. ಅಲ್ಲಿ ಯಾವಾಗಲೂ ಒಂದು ವೇಸ್ಪ ಸ್ಕೂಟರ್ ನಿಂತಿರುತ್ತಿತ್ತು. ಅದು ಮನೆ ಮಾಲೀಕನ ಗಾಡಿ.

ಗಂಡ ಹೆಂಡತಿಯರಲ್ಲಿ ಆಗಾಗ್ಗೆ ಮಾತಿನ ಚಕಮಕಿ ನಡೆಯುತಿತ್ತು. ಇಬ್ಬರೂ ಸಮಾನಾಗಿ ಕಿರುಚಾಡುತ್ತಿದ್ದರು. ಆರ್ಭಟಗಳ ನಡುವೆ ಆತ, ಕೋಪಗೊಂಡು ದಢಾರನೆ ಬಾಗಿಲನ್ನು ತೆರೆದು, ಡುರ್ ಎಂದೂ ಸ್ಕೂಟರನ್ನು ಸ್ಟಾರ್ಟ್ ಮಾಡಿ, ಎಲ್ಲಿಗೋ ಹೊರಟು ಹೋಗುತ್ತಿದ್ದರು. ಎಷ್ಟೋ ಹೊತ್ತಾದ ಮೇಲೆ ಮನೆಗೆ ವಾಪಸ್ಸು ಬರುತ್ತಿದ್ದರು. ಹಾಗಾಗಿ, ಸ್ಕೂಟರ್ರನ್ನೂ ಒಳಗೆ ಇಡುತ್ತಲೇ ಇರಲಿಲ್ಲ. ರಾತ್ರಿಯ ಹೊತ್ತಿನಲ್ಲಿ ಕೂಡಾ ಹೊರಗೇ ಇರುತ್ತಿತ್ತು.

ಅವರಿಗೆ ಇಬ್ಬರು ಮಕ್ಕಳು, ಒಬ್ಬಳು ಮಗಳು, ಒಬ್ಬ ಮಗ. ಇಬ್ಬರೂ ತಂದೆ ತಾಯಿಗೆ ಹೆದರುತ್ತಿರಲಿಲ್ಲ. ಯಾವಾಗಲೂ ಸ್ನೇಹಿತರೊಂದಿಗೆ ಮುಂಬಾಗಿಲಿನಲ್ಲಿ ನಿಂತಿರುತ್ತಿದ್ದ ಸ್ಕೂಟರ್ ಬಳಿ ನಿಂತೋ, ಮೇಲೆ ಕೂತೋ, ಹರಟೆ, ನಗು ಮಾತುಕತೆ, ಅಟ್ಟಿಸಿಕೊಂಡು ಓಡುವ ಆಟ ಇತ್ಯಾದಿ ನಡೆಸುತ್ತಿದ್ದರು. ಇದು ಸರ್ವೇ ಸಾಮಾನ್ಯವಾದ ದೃಶ್ಯವಾಗಿದ್ದಿತು.

ಆತ ಖುಷಿಯಿಂದ ಇರುವಾಗ, ಮಕ್ಕಳ ಹರಟೆಯಲ್ಲಿ ತಾವೂ ಪಾಲ್ಗೊಂಡು ಮಕ್ಕಳನ್ನು ನಗಿಸುತ್ತಿದ್ದರು. ಸ್ವಂತ ಮಕ್ಕಳಿರಲಿ, ಅವರುಗಳ ಸ್ನೇಹಿತರು ಕೂಡಾ ಆತನಿಗೆ ಹೆದರುತ್ತಿರಲಿಲ್ಲ.

ಒಮ್ಮೆ ಹೀಗೇ ಗಲಾಟೆ ನಡೆಯುತ್ತಿದ್ದಾಗ, ನಾನು ಬಾಲ್ಕನಿಯಲ್ಲಿ ನಿಂತು ಕೆಳಗೆ ನೋಡುತ್ತಿದ್ದೆ. ನಾನು ನಿಂತಿದ್ದುದು ಕೆಳಗಿನವರಿಗೆ ಕಾಣಿಸು ತ್ತಿರಲಿಲ್ಲ. ಒಳಗೆ ಗಂಡ ಹೆಂಡತಿಯರ ನಡುವೆ ವಾದ ವಿವಾದ ಪ್ರಾರಂಭ ವಾಗಿತ್ತು. ಹೊರಗೆ ಮಗ ತನ್ನ ಸ್ನೇಹಿತರೊಂದಿಗೆ ಸ್ಕೂಟರಿನ ಮೇಲೆ ಕುಳಿತುಕೊಂಡು, ಅತ್ತಿತ್ತ ತಿರುಗಿಸುತ್ತಿದ್ದ. ಸಿಟ್ಟಿನಿಂದ ದಢಾರ್ ಎಂದು ಬಾಗಿಲನ್ನು ತೆಗೆದು ಆತ ಹೊರಕ್ಕೆ ಬಂದರೂ, ಯಾರು ಆತನಿಗೆ ಜಾಗವನ್ನು ಬಿಟ್ಟು ಕೊಡಲಿಲ್ಲ. ಎಷ್ಟೇ ಕೋಪ ಇದ್ದರೂ, ಆ ಮಕ್ಕಳ ಮೇಲೆ ರೇಗುವುದು ಆತನಿಗೆ ಆಗಲಿಲ್ಲವೇನೋ.... "ಎಲ್ಲಾ ಇಳೀರಿ... ಇಳೀರಿ... ಸ್ಕೂಟರ್ರು ಹಾಳಾಗಿ ಹೋಗುತ್ತೆ..." ಆತ ಹೇಳಿದರೂ ಆ ಹುಡುಗರು ಕೇಳಿಸದವರಂತೆ ತಮ್ಮ ತಮ್ಮ ಚೇಷ್ಟೆಯಲ್ಲಿ ತೊಡಗಿದ್ದರು.

"ನಾನು ಹುಲಿ.... ಹುಲಿ... ಮಿಯಾಂ ಅಂತ ಕಿರುಚಿ ಕಚ್ಚಿ ಬಿಡ್ತೀನಿ"

ಆತ ಹಲ್ಲುಗಳನ್ನು ತೋರಿ ಕೈಗಳನ್ನು ಬೆಕ್ಕಿನ ಪಂಜದಂತೆ ಆ ಹುಡುಗರ ಕಡೆ ತೋರಿದರೂ, ಅವರುಗಳು ಹೆದರಿರಲಿಲ್ಲ. ಆತನ ಮಾತು ನನಗೆ ಕೇಳಿಸಿತ್ತು... ಸ್ವಲ್ಪವೇ ಬಾಗಿ ನೋಡಿದೆ. ನಾನು ಹುಲಿ... ಮಿಯಾಂ ಮಿಯಾಂ... ಅಂತ ಮಕ್ಕಳನ್ನು ಹೆದರಿಸಲು ನೋಡಿದರೂ, ಹುಡುಗರು ನಗುತ್ತಾ ಅಂಕಲ್... ಅಂಕಲ್ ಎಂದಿದ್ದರು. ಆತ ಅವರುಗಳನ್ನು ಅಲ್ಲಿಯೇ ಬಿಟ್ಟು ಬಿರ ಬಿರನೆ ನಡೆದು ರಸ್ತೆಗೆ ಇಳಿದಿದ್ದರು.

ನಾನು ಹುಲಿ... ಅಂತ ಘರ್ಜಿಸಿ, ಮೈ ಮೇಲೆ ಎಗರಿ ಬಿಡ್ತೀನಿ ಅಂತ ಹೆದರಿಸಿದ್ದರೆ, ಹೆದರ್ತಿದ್ರೇನೋ... ನಾನು ಬೆಕ್ಕು, ಮಿಯಾಂ ಮಿಯಾಂ ಎಂದು ಪರಚಿ ಬಿಡ್ತೀನಿ ಅಂತ ಹೆದರಿಸಿದ್ದರೆ, ಹೆದರುತ್ತಿದ್ದರೇನೋ... ಹುಲಿ ಮಿಯಾಂ ಅಂತ ಅನ್ನಲ್ಲ ಅಂತ, ಧೈರ್ಯವಾಗಿ ಹಾಗೇ ಕುಳಿತಲ್ಲೇ ಕುಳಿತು ಗಲಭೆಯನ್ನು ಮುಂದುವರೆಸಿದ್ದರು. ನನಗೆ ಆತನ ಬಗ್ಗೆ ಅಯ್ಯೋ ಅಂತೆನಿಸಿತ್ತು. ಹೆಂಡತಿಯ ಮೇಲಿನ ಸಿಟ್ಟನ್ನು ಹೊರಗೆಡವಲಾಗದೇ, ಮಕ್ಕಳನ್ನು ಹೆದಿಸಲಾಗದೇ ಏನೋ ಮಾತನಾಡಿ ಅಲ್ಲಿಂದ ಹೊರಟು ಹೋಗಿದ್ದರು.

ನನ್ನ ಗಂಡ ಊರಿಗೆ ಬಂದಾಗ, ಈ ವಿಷಯವನ್ನು ತಮಾಷೆಯ ವಿಷಯ ಎಂಬಂತೆ ಹೇಳಿದ್ದೆ. ಸ್ಕೂಟರ್ ಬಳಿ ಆತನನ್ನು ಕಂಡಾಗಲೆಲ್ಲಾ ಈ ವಿಷಯ ನೆನಪಿಗೆ ಬರುತ್ತಿತ್ತು. ಆ ಮನೆಯಲಿ ಸರಿಯಾಗಿ ಐದು ವರ್ಷಗಳು ಬಾಡಿಗೆಗೆ ಇದ್ದೆವು. ಆಕೆ ಜಂಭದಿಂದ ಹೇಳಿ ಕೊಳ್ಳುತ್ತಿದ್ದಳು, "ನಮ್ಮಂಥ ಓನರ್ ನಿಮಗೆ ಎಲ್ಲಿಯೂ ಸಿಗಲ್ಲ" ಅಂತ. ನಾವು ಆ ಮನೆಯನ್ನು ಬಿಟ್ಟಾಗ, ಆಕೆಯೇ ಬಿಡಬೇಡಿ ಎಂದು ಕೇಳಿಕೊಂಡಿದ್ದಳು.

"ನಮ್ಮಂಥ ಬಾಡಿಗೆಯವರೂ ನಿಮಗೆ ಸಿಗಲ್ಲ... ಅದಕ್ಕೆ ನಿಮಗೆ ನಮ್ಮನ್ನು ಬಿಡಲು ಇಷ್ಟವಿಲ್ಲ. ಅಲ್ವಾ?" ನಾನೂ ಕೇಳಿದ್ದೆ.

ನೀವು ಬಂದು ಇರತೊಡಗಿದ ಮೇಲೆ, ನಮ್ಮವರು ತುಂಬಾ ಬದಲಾಗಿದಾರೆ. ಮೊದಲಿನ ಕೋಪ ಸಿಟ್ಟು ಎಲ್ಲಾ ಕಡಿಮೆ ಆಗಿದೆ. ನಿಮ್ಮ ಬಗ್ಗೆ ಅವರಿಗೆ ತುಂಬಾ ಗೌರವ. ನೀವು ಬಿಟ್ಟು ಬಿಡ್ತಿದೀರಿ ಅಂತ ತಿಳಿದಾಗ್ನಿಂದ, ಬೇಜಾರು ಮಾಡ್ಕೊಂಡು ಬಿಟ್ಟಿದಾರೆ" ಎಂದಳು.

ಆದರೆ, ನಾವು ಆ ಮನೆಯನ್ನು ಬಿಡಲೇ ಬೇಕಾಗಿತ್ತು. ಆ ನಂತರ ನಾವು ಮತ್ತೆ ಎಂದೂ ಭೇಟಿಯಾಗಲಿಲ್ಲ. ಯಾಕೆಂದರೆ ಬೇರೆ ಊರಿಗೆ ಹೊರಟು ಹೋಗಿದ್ದೆವು. ಆದರೂ ಆ ಮನೆಯಲ್ಲಿದ್ದ ಐದು ವರ್ಷಗಳನ್ನು ಎಂದಿಗೂ ಮರೆಯುವಂತಿಲ್ಲ. ಹಾಗೇ ಆ ಹುಲಿ, "ಮಿಯಾಂ" ಅಂದಿದ್ದ ದಿನವನ್ನಂತೂ ಮರೆಯುವಂತೇ ಇಲ್ಲ.

***

೨೦. ನಿಜವಾದ ಪರೀಕ್ಷೆ

ಸಕ್ಕರೆ ಕಂಪೆನಿಯ ಕ್ವಾರ್ಟ್ರಸ್‌ಗೆ ಬಂದ ಹೊಸದು. ಆಗ ನಾವಿಬ್ಬರೂ ಅಕ್ಕ ತಂಗಿಯರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ್ದೆವು. ಅಲ್ಲಿಂದ ಸ್ಕೂಲಿಗೆ ಹೋಗಿ ಬರಲು ಬಸ್ಸಿನ ಸೌಕರ್ಯವಿರಲಿಲ್ಲ. ಭದ್ರಾವತಿಯಿಂದ ಅಥವಾ ಆ ಕಡೆಯಿಂದ ಬರುವ ಬಸ್ಸುಗಳನ್ನು ಮಲವಗೊಪ್ಪದ ಬಳಿ ನಿಲ್ಲಿಸಿ, ಜನರನ್ನು ಮತ್ತೂ ತುಂಬಿಸಿಕೊಂಡು ಹಾಗೇ ಹೊರಟು ಹೋಗುತ್ತಿದ್ದರು. ಬಸ್ಸುಗಳು ಹೆಚ್ಚಿಗೆ ಇರುತ್ತಿರಲಿಲ್ಲ. ಇದ್ದ ಕೆಲವು ಬಸ್ಸುಗಳು ಸದಾ ತುಂಬಿ ತುಳುಕಿರುತ್ತಿದ್ದವು. ಭದ್ರಾತಿಯಿಂದ ಬರುತ್ತಿದ್ದ ಸಿ.ಕೆ.ಎಮ್. ಎಸ್., ಎಚ್.ಪಿ.ಸಿ. ಗಳಲ್ಲಿ ನಿಂತುಕೊಂಡು ಹೋಗಬೇಕಾಗಿದ್ದಿತು.

ಆಗ, ಕಂಪೆನಿಯ ಕ್ವಾರ್ಟ್ರಸ್‌ಗಳಲ್ಲಿ ವಾಸವಾಗಿದ್ದವರಿಗೆ ಯಾವ ವಾಹನಗಳ ಸೌಕರ್ಯವನ್ನು ಒದಗಿಸಿರಲಿಲ್ಲ. ಒಂದೋ, ಎರಡೋ ಜೀಪುಗಳಿದ್ದವು. ಅವುಗಳನ್ನು ಕಂಪೆನಿಯ ಕೆಲಸಕ್ಕೆ ಮಾತ್ರ ಉಪಯೋಗಿಸುತ್ತಿದ್ದರು.

ನಾವುಗಳು ಅರ್ಧ ಹಾದಿ ನಡೆದು, ಬಿ.ಎಚ್. ರಸ್ತೆಯಲ್ಲಿ ಬರುವ ಎಲ್ಲಾ ಬಸ್ಸುಗಳಿಗೂ ಕೈ ಮಾಡಿ, ನಿಲ್ಲಿಸಿದರೆ ಹತ್ತಿಕೊಂಡು ಹೋಗುತ್ತಿದ್ದೆವು. ವಾಪಸ್ಸು ಬರುವಾಗಲೂ ಅಷ್ಟೇ. ನಾವು ಇಳಿಯ ಬೇಕಾದ ಸ್ಥಳದಲ್ಲಿ ಬಸ್ಸನ್ನು ನಿಲ್ಲಿಸುತ್ತಿರಲಿಲ್ಲ. ಕಂಡಕ್ಟರನಿಗೆ ಹೇಳಿ, ಅವನು ಶೀಟಿಯನ್ನು ಊದಿ ಬಸ್ಸನ್ನು ನಿಲ್ಲಿಸುವಷ್ಟರಲ್ಲಿ ಎಷ್ಟೋ ದೂರ ಮುಂದೆ ಹೋಗಿರುತ್ತಿತ್ತು. ಹೆಚ್ಚು ಕಡಿಮೆ ದಿನಾ ಇದೇ ಪರಿಸ್ಥಿತಿ.

ನಾವು ಕ್ವಾರ್ಟ್ರಸ್‌ನಲ್ಲಿ ಇರತೊಡಗಿದ ಸಮಯದಲ್ಲಿ ಪರೀಕ್ಷೆಗೆ

ಓದಿಕೊಳ್ಳಲು ರಜ ನೀಡಿದ್ದರಿಂದ, ಹೆಚ್ಚು ಸಮಯಕ್ಕೆ ಸರಿಯಾಗಿ ಹೋಗಿ ಬರುವ ಸಮಸ್ಯೆ ಇಲ್ಲದುದರಿಂದ, ಹೇಗೋ ನಡೆಯುತ್ತಿತ್ತು.

ಪರೀಕ್ಷೆ ಪ್ರಾರಂಭವಾಗಿತ್ತು. ಆ ದಿನ ಮೊದಲನೇ ದಿನ. ಕನ್ನಡದ ಪ್ರಶ್ನೆ ಪತ್ರಿಕೆ. ಸ್ವಲ್ಪ ಮುಂಚಿತವಾಗಿ ಹೋಗಿ, ಪ್ರವೇಶ ಪತ್ರವನ್ನು ತೆಗೆದು ಕೊಳ್ಳುವುದೆಂದು ಕೊಂಡಿದ್ದೆವು. ಹಾಗಾಗಿ, ಒಂದು ಗಂಟೆ ಮುಂಚಿತ ವಾಗಿಯೇ ಮನೆಯಿಂದ ಹೊರಟೆವು. ಬಸ್‌ಸ್ಟಾಪ್‌ಗೆ ಬಂದು ನಿಂತರೆ, ಬಸ್ಸಿಗಾಗಿ ಕಾಯುತ್ತಾ ಕೆಲವರು ನಿಂತಿದ್ದವರನ್ನು ಕೇಳಿ, ಇದುವರೆಗೂ ಎಷ್ಟು ಹೊತ್ತಾದರೂ ಯಾವ ಬಸ್ಸು ಬಂದಿಲ್ಲವೆಂದು ತಿಳಿಯಿತು. ನಡೆದು ಹೋಗಲು ಸಾಕಷ್ಟು ದೂರ ಇದ್ದಿತು. ಅಲ್ಲದೇ ಸಮಯ ಸಾಕಷ್ಟು ಇಲ್ಲ ಎನ್ನುವುದು ನಿಮಿಷ ನಿಮಿಷಕ್ಕೂ ಅನುಭವ ವಾಗುತ್ತಿತ್ತು. ಆಗ ನಮ್ಮ ಬಳಿ ರಿಸ್ಟ್ ವಾಚ್ ಇರಲಿಲ್ಲ. ಆಟೋ ರಿಕ್ಷಾಗಳು ಇರಲಿಲ್ಲ. ಒಟ್ಟಿನಲ್ಲಿ ಅಸಹಾಯಕರಂತೆ ನಿಂತಿದ್ದೆವು. ಸಮಯ ಸರಿದು ಹೋಗುತ್ತಿತ್ತು. ಪರೀಕ್ಷೆಯ ಗಂಟೆ ಹೊಡೆಯಲು ಕೇವಲ ಕಾಲುಗಂಟೆ ಉಳಿದಿತ್ತು. ನಾವಿಬ್ಬರೂ ಇನ್ನು ಬಸ್‌ಸ್ಟಾಪ್‌ನಲ್ಲೇ ಇದ್ದೆವು.

ಆ ಸಮಯಕ್ಕೆ ಕಂಪೆನಿಯ ಕಾಂಪೌಂಡ್ ಒಳಗಿನಿಂದ ಒಂದು ಜೀಪು ಬಂದಿತು. ಆ ಜೀಪಿನ ಡ್ರೈವರ್ರು ನಮ್ಮ ತಂದೆಗೆ ಬೇಕಾದವನೇ, ಹಾಗೆಯೇ ಜೀಪಿನಲ್ಲಿ ಕುಳಿತಿದ್ದ ಫಾರಂ ಮ್ಯಾನೇಜರ್ ಕೂಡಾ, ಅಲ್ಲಿಯೇ ಕ್ವಾಟ್ರ್ರಸ್‌ನಲ್ಲಿ ವಾಸವಾಗಿದ್ದವರೇ. ಆದರೂ ಆ ಜೀಪು ನಿಲ್ಲಲಿಲ್ಲ. ನಾವು ಕೈ ಮಾಡಿ ನಿಲ್ಲಿಸಲು ಪ್ರಯತ್ನಿಸಲೂ ಇಲ್ಲ. ಏಕೆಂದರೆ ಅದು ನಮ್ಮ ತಂದೆಯವರ ಸಿದ್ಧಾಂತಕ್ಕೆ ವಿರೋಧವಾದ ವಿಷಯ. ಕಂಪೆನಿಯ ಜೀಪು ಗಳನ್ನು ಸ್ವಂತ ಬಳಕೆಗಾಗಿ ಬಳಸಿಕೊಳ್ಳುವಂತಿಲ್ಲ. ಕಂಪೆನಿಯ ಕೆಲಸಗಳಿಗೆ ಮಾತ್ರ ಮೀಸಲಾದದ್ದು ಎಂದು ತಿಳಿದಿತ್ತು. ಜೀಪು ನಮ್ಮ ಮುಂದೆಯೇ ಸರಿದು ಹೋಯಿತು. ಆಸೆಯ ಕಣ್ಣುಗಳಿಂದ ಅತ್ತ ನೋಡಿದ್ದೆವು. ನಿಲ್ಲಿಸಿ ನಮ್ಮನ್ನು ಕೂರಿಸಿಕೊಂಡು ಹೋಗಿದ್ದರೇ...? ನಿರಾಶೆಯಿಂದ, ಮತ್ತೆ ಬಸ್ಸಿನ ಹಾದಿಯನ್ನು ಎದುರು ನೋಡಿದೆವು.

ಸುಮಾರು ಕಣ್ಮರೆಯಾಗುವಷ್ಟು ದೂರ ಮುಂದೆ ಹೋಗಿದ್ದ ಜೀಪು

ಮತ್ತೆ ಹಿಂದಕ್ಕೆ ತಿರುಗಿ ಬಂದಿತ್ತು. ನಿಂತಿದ್ದ ನಮ್ಮ ಬಳಿಗೆ ಬಂದು ನಿಂತಿತ್ತು. ಡ್ರೈವರು ನಮ್ಮಿಬ್ಬರಿಗೂ 'ಹತ್ತಿ' ಎನ್ನುವಂತೆ ಸಂಜ್ಞೆ ಮಾಡಿದ. ಫಾರಂ ಮ್ಯಾನೇಜರ್ ನಮ್ಮ ಕಡೆ ನೋಡಿದರು. "ಇವತ್ತು ಪರೀಕ್ಷೆ ಶುರುವಾಗಿದೆ ಅಲ್ವಾ? ಇನ್ನೂ ನೀವಿಬ್ರೂ ಇಲ್ಲೇ ನಿಂತಿದೀರಿ. ಹೊತ್ತಾಗ್ಲಿಲ್ವಾ?" ಅಂತ ಕೇಳಿದರು.

"ಹೌದು, ಯಾವ ಬಸ್ಸು ಬಂದೇ ಇಲ್ಲ. ಬಸ್ಸಿಗಾಗಿ ಕಾಯ್ತಿದೇವಿ" ಇಬ್ಬರೂ ಒಟ್ಟಿಗೇ ಹೇಳಿದೆವು. ಅಳು ಬರುವಂತಾಗಿತ್ತು.

"ಹೊತ್ತಾಗಿದೆ. ಹತ್ತಿ" ಅವರು ದರ್ಪದಿಂದ ಹೇಳಿದಾಗ, ಹೆದರುತ್ತಾ ಜೀಪನ್ನೇರಿದೆವು. ವೇಗವಾಗಿ ಓಡಿದ ಜೀಪು ನಮ್ಮ ಸ್ಕೂಲಿನ ಬಳಿ ನಿಂತಿತು. ನಾವಿಬ್ಬರೂ ಇಳಿದು, ನಮ್ಮ ಸ್ಕೂಲಿನ ಚೀಲಗಳನ್ನು ಹಿಡಿದು ಓಡಿದೆವು. ಸ್ಕೂಲಿನ ಗಂಟೆ ಹೊಡೆದು ಹತ್ತು ನಿಮಿಷವಾಗಿತ್ತು. ಬೆವರುತ್ತಾ, ಹೆದರುತ್ತಾ, ಪ್ರವೇಶ ಪತ್ರಗಳನ್ನು ತೆಗೆದುಕೊಳ್ಳಲು ಆಫೀಸು ರೂಮಿಗೆ ಬಂದೆವು. ವಿತರಣೆ ಮಾಡುತ್ತಿದ್ದವರು ನಮ್ಮನ್ನು ಕೆಕ್ಕರುಗಣ್ಣುಗಳಿಂದ ನೋಡಿದರು.

"ಪರೀಕ್ಷೆ ಶುರುವಾಗಿದೆ. ಬೆಲ್ ಆಗಿ ಹತ್ತು ನಿಮಿಷ ಆಗಿದೆ. ಈಗ ಬರ್ತಿದೀರಲ್ಲ, ಜವಾಬ್ದಾರಿ ಬೇಡ್ವಾ?" ಬೈದರು.

"ಬಸ್ ಸಿಗಲಿಲ್ಲ. ಸಾರ್". ಅಳುತ್ತಾ ಹೇಳಿದೆವು.

"ಸರಿ, ಸರಿ ಈಗಾಗ್ಲೆ ಹೊತ್ತಾಗಿದೆ. ಬೇಗ ಹೋಗಿ, ಎಂದು ಹೇಳಿ ನಮ್ಮ ನಮ್ಮ ಪ್ರವೇಶ ಪತ್ರಗಳನ್ನು ನೀಡಿದರು. ಯಾವ ರೂಮಿಗೆ ಹೋಗಬೇಕೆಂದು ಅಲ್ಲಿ ಅಂಟಿಸಿದ್ದ, ನೋಟಿಸ್ ಬೋರ್ಡ್‌ನಲ್ಲಿ ನೋಡಿಕೊಂಡೆವು. ಇಬ್ಬರ ರಿಜಿಸ್ಟ್ರೇಷನ್, ಒಂದೇ ರೂಮಿನಲ್ಲಿತ್ತು. ಇಬ್ಬರೂ ಬೇಗ ಬೇಗ ಧಾವಿಸಿದೆವು. ಬಾಗಿಲ ಬಳಿ ನಿಂತು, "ನಾವು ಒಳಗೆ ಬರಬಹುದಾ ಟೀಚರ್" ಎಂದು ಒಳಗಿದ್ದ ಟೀಚರನ್ನು ಕೇಳಿದೆವು. ಅವರು ನಮ್ಮಿಬ್ಬರನ್ನೇ ವಿಚಿತ್ರವಾಗಿ ದಿಟ್ಟಿಸಿ ನೋಡಿದರು. ಆ ರೂಮಿನಲ್ಲಿದ್ದ ವಿದ್ಯಾರ್ಥಿನಿಯರ ದೃಷ್ಟಿ ನಮ್ಮತ್ತ ತಿರುಗಿತ್ತು.

ನಾವಿಬ್ಬರೂ ಅವಳಿ ಸೋದರಿಯರೆಂದು, ಸ್ಕೂಲಿನ ಎಲ್ಲರಿಗೂ

ಗೊತ್ತಿತ್ತು. ಎಲ್ಲರೂ ನಮ್ಮನ್ನು 'ದೇವಿ ಸಿಸ್ಟರ್ಸ್' ಎಂದು ಕರೆಯುತ್ತಿದ್ದರು. ಎಲ್ಲರೂ ಪಿಸಿ ಪಿಸಿ ಮಾತಾಡಿಕೊಂಡು, ವಿಚಿತ್ರವಾಗಿ ನಕ್ಕು ತಮ್ಮ ತಮ್ಮ ಉತ್ತರಗಳ ಕಡೆ ಗಮನ ಕೊಟ್ಟರು.

"ಒಳಗೆ ಬನ್ನಿ" ಎಂದು ಹೇಳಿದ ಟೀಚರ್, ತೀಕ್ಷ್ಣವಾಗಿ ನಮ್ಮನ್ನು ನೋಡಿ, ಪ್ರವೇಶ ಪತ್ರವನ್ನು ಪರೀಕ್ಷಿಸಿ, ನಮಗೆ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟು ನಮ್ಮ ನಮ್ಮ ಸ್ಥಳಗಳಿಗೆ ಹೋಗುವಂತೆ ಹೇಳಿದರು, ಗೊಂದಲ, ಗೋಜಲ, ಕಸಿವಿನ, ಮುಜುಗರಗಳಿಂದ ತಬ್ಬಿಬ್ಬಾಗುವಂತಾಗಿತ್ತು.

ಪ್ರಶ್ನೆಗಳು ಸುಲಭವಾಗಿಯೇ ಇದ್ದವು. ಬೇಗ ಬೇಗ ಉತ್ತರಗಳನ್ನು ಬರೆಯಲು ಪ್ರಾರಂಭಿಸಿದೆವು. ಅಷ್ಟರಲ್ಲಿ ಅರ್ಧಗಂಟೆಯ ಬೆಲ್ ಹೊಡೆದಿತ್ತು. ಬರೆವಣಿಗೆಯ ವೇಗವನ್ನು ಹೆಚ್ಚಿಸಿದೆವು. ಕಡೆಯ ಬೆಲ್‌ವರೆಗೂ ಉತ್ತರವನ್ನು ಬರೆದರೂ ಸಮಾಧಾನವಾಗಿರಲಿಲ್ಲ.

"ತಡವಾಗಿ ಬರೋದು, ಕಡೇ ಬೆಲ್ ಹೊಡೆಯೋವರೆಗೂ ಬರೆಯೋದು. ಬೇಗ ಬೇಗ ಮುಗಿಸಿ, ದಾರ ಕಟ್ಟಿ ಸಾಕು... ಸಾಕು... ದೇವಿ ಸಿಸ್ಟರ್ಸ್ ನಿಮಗೇ ಹೇಳ್ತಾ ಇರೋದು" ಟೀಚರ್ ಜೋರು ಮಾಡಿದರು. ಎಲ್ಲರೂ ಹೊರಟು ಹೋಗಿದ್ದರು. ತರಗತಿಯಲ್ಲಿ ಉಳಿದಿದ್ದವರು ನಾವಿಬ್ಬರೇ. ನಮಗೆ ಉತ್ತರಗಳು ಗೊತ್ತಿದ್ದುದರಿಂದ, ಯಾವ ಪ್ರಶ್ನೆಯನ್ನು ಬಿಡುವಂತಿರಲಿಲ್ಲ. ಮತ್ತೊಮ್ಮೆ ಎಲ್ಲವೂ ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸುವಷ್ಟರಲ್ಲಿ ಅವರು ಉತ್ತರ ಪತ್ರಿಕೆಗಳನ್ನು ಕಿತ್ತುಕೊಂಡಿದ್ದರು.

"ಯಾಕೆ ಲೇಟು? ಮೊದಲ ದಿನವೇ ಹೀಗಾದ್ರೆ.. ಏನು ಹುಡ್ಗೀರೋ ಜವಾಬ್ದಾರೀನೇ ಇಲ್ಲ" ಮತ್ತೊಮ್ಮೆ ಟೀಕಿಸಿದರು.

"ಬಸ್ಸು ಸಿಗ್ಲೇ ಇಲ್ಲ ಟೀಚರ್..."

"ಬಸ್ಸು ಸಿಗ್ಲಿಲ್ಲ ಅಂತಂದ್ರೆ, ಪರೀಕ್ಷೇನ ಕಳ್ಕೊಳ್ತೀರಾ? ಇನ್ನು ಹತ್ತು ನಿಮಿಷ ತಡವಾಗಿದ್ದಿದ್ರೆ, ನಿಮ್ಮಿಬ್ಬರನ್ನೂ ಒಳಕ್ಕೆ ಸೇರಿಸ್ತಿರ್ಲಿಲ್ಲ. ವರ್ಷವೆಲ್ಲಾ ಕಷ್ಟಪಟ್ಟಿದ್ದೂ, ಎಲ್ಲಾ ಹಾಳು ಮಾಡಿಕೊಳ್ತಿದ್ರಿ..." ನಮ್ಮಿಬ್ಬರಿಗೂ ಅಳು ಬಂದಿತು.

"ಸರಿ.. ಸರಿ... ಹೋಗಿ, ಅಳ್ತಾ ನಿಂತ್ಕೋಬೇಡಿ" ನಮ್ಮನ್ನು ಆಚೆಗೆ

ಕಳಿಸಿ ಬಾಗಿಲನ್ನು ಹಾಕಿಕೊಂಡರು.

ಮನೆಗೆ ಬಂದು ಊಟ ಮಾಡಲು ಸಮಯವಿರಲೇ ಇಲ್ಲ. ಬೇಗ ಹೊರಟಿದ್ದುದರಿಂದ ತಿಂಡಿಯನ್ನು ತಂದಿರಲಿಲ್ಲ. ಹತ್ತಿರದಲ್ಲೇ ನಮ್ಮ ಚಿಕ್ಕಪ್ಪನ ಮನೆ ಇದ್ದರೂ ಆಗಾಗ ಹೋಗುತ್ತಿರಲಿಲ್ಲ. ಹತ್ತಿರ ಬೇಕರಿಯಲ್ಲಿ ಎರಡು ಬನ್‌ಗಳನ್ನು ಕೊಂಡು ತಿಂದು, ಮಧ್ಯಾಹ್ನದ ಎರಡನೇ ಪ್ರಶ್ನೆ ಪತ್ರಿಕೆಗೆ ತಯಾರಿ ನಡೆಸಿದೆವು

ಮನೆಗೆ ವಾಪಸ್ಸು ಬಂದಾಗ, ಬಳಲಿ ಹೋಗಿದ್ದೆವು. ಜೊತೆಗೆ ಅರೆ ಸಮಾಧಾನ. ಸಧ್ಯ, ಪರೀಕ್ಷೆಗೆ ಸಮಯಕ್ಕೆ ಸರಿಯಾಗಿ ಹೋಗಿ ಬರೆಯುವಂತಾಯಿತಲ್ಲ ಅಂತ. ಆದರೆ...? ಒಂದು ವೇಳೆ ನಾವು ಸಮಯಕ್ಕೆ ಮುಂಚೆ ಹೋಗಲೇ ಆಗದಿದ್ದಿದ್ದರೇ... ಪರಿಣಾಮ? ಫಲಿತಾಂಶ? ಕನ್ನಡದಲ್ಲಿ ನಾಪಾಸು. ಇದಕ್ಕಿಂತ ಬೇರೆ ಅವಮಾನ, ಆಘಾತ ಬೇಕೆ?... ದೇವರಂತೆ ಒದಗಿ ಬಂದು ಸಹಾಯ ಮಾಡಿದ ಫಾರ್ಂ ಮ್ಯಾನೇಜರ್‌ಗೆ ಎಷ್ಟು ಕೃತಜ್ಞತೆಯನ್ನು ಹೇಳಿದರೂ ಸಾಲದು. ಇಲ್ಲದಿದ್ದರೆ, ಏನಾಗುತ್ತಿತ್ತು ಎಂದು ಊಹಿಸಿಕೊಳ್ಳುವುದೂ ಅಸಾಧ್ಯ... ನಮಗೆ ಕನ್ನಡ ಕಬ್ಬಿಣದ ಕಡಲೆ ಆಗಿರಲಿಲ್ಲ... ತಯಾರಿ ನಡೆಸದಿದ್ದರೂ, ಪಾಸಾಗುವಷ್ಟು ಅಂಶಗಳು ಬಂದೇ ಬರುತ್ತಿದ್ದವು. ಆದರೆ ಪರೀಕ್ಷೆಗೇ ಹೋಗದಿದ್ದರೇ?... ಅಬ್ಬಾ ಆ ದಿನ ನೆನಪಿಗೆ ಬಂದರೆ... ದೇವರಿದ್ದಾನೆ, ನಮ್ಮ ಸಹಾಯಕ್ಕೆ ಒದಗುವವರೂ ಇದ್ದಾರೆ ಎನ್ನುವ ವಿಶ್ವಾಸ ಮೂಡುತ್ತದೆ.

ಆನಂತರ, ಎರಡು ಗಂಟೆಗೆ ಮೊದಲೇ ಬಸ್‌ಸ್ಟಾಪ್‌ಗೆ ಬಂದು ನಿಂತು ಕಾಯುತ್ತಿದ್ದೆವು. ಪ್ರತಿ ದಿನವೂ, ಯಾವುದಾದರೂ ಜೀಪು ನಮಗಾಗಿ ಬರುತ್ತದೆ ಎಂದಾಗಲೀ, ಬರಲಿ ಎಂದಾಗಲೀ, ಅಪೇಕ್ಷೆ ಪಡುವಂತಿರಲಿಲ್ಲ. ಕಷ್ಟದಿಂದಲೇ ಉಳಿದ ಪರೀಕ್ಷೆಗಳಿಗೆ ಸಮಯಕ್ಕೆ ಸರಿಯಾಗಿ ಹಾಜರಾದೆವು.

ಕಡೆಯ ದಿನ 'ಹಿಂದಿ' ಭಾಷೆಯ ಪರೀಕ್ಷೆ ಇತ್ತು. ಅದು ಕಂಪಲ್ಸರಿ ಹಿಂದಿ, ಕೇವಲ ಗರಿಷ್ಠ ಐವತ್ತು ಅಂಕಗಳಿಗೆ ಮಾತ್ರ. ಆ ದಿನ ಹೋಳಿ ಹಬ್ಬ ಇದ್ದಿತು. ಹೋಳಿ ಹಬ್ಬದ ಸಮಯದಲ್ಲಿ ಬೇಕಿರಲಿ, ಬೇಡವಾಗಿರಲಿ,

ರಂಗಿನಾಟ ಆಡುವ ಪುಂಡರು ಓಡಾಡುತ್ತಲೇ ಇರುತ್ತಾರೆ. ಆ ಭಯ ಇದ್ದೇ ಇದ್ದಿತು. ಬಸ್‌ಸ್ಟಾಪ್‌ನಲ್ಲಿ ಕಾಯುತ್ತಾ ನಿಂತಿದ್ದೆವು. ನಮ್ಮ ಮುಂದೆ ಒಂದು ಕರಿಯ ಬಣ್ಣದ ಗಾಡಿ ಬಂದು ನಿಂತಿತು. ಅದರಿಂದ ಒಬ್ಬ ಪೋಲಿಸ್ ಇಳಿದು ನಮ್ಮಿಬ್ಬರಿಗೂ ಗಾಡಿಯನ್ನು ಹತ್ತುವಂತೆ ಹೇಳಿದ. ಪೋಲಿಸರೆಂದರೇ ಭಯ. ಅಂಥಾದ್ದರಲ್ಲಿ ಗಾಡಿಯನ್ನು ಹತ್ತಿ ಎಂದರೆ... ಅದೂ ಹುಡುಗಿಯರನ್ನು? ಅನುಮಾನಿಸುತ್ತಾ ನಿಂತು ಬಿಟ್ಟೆವು.

"ಏನು ಅನುಮಾನ ಪಡ್ತಿದೀರಾ? ಪರೀಕ್ಷೆಗೆ ಹೋಗ್ಬೇಕೋ ಇಲ್ವೋ... ರಸ್ತೇಲಿ, ಹೋಳಿ ಹಬ್ಬದ ಗಲಾಟೆ ಶುರುವಾಗುವ ಮೊದಲು, ಸ್ಕೂಲಿಗೆ ವಿದ್ಯಾರ್ಥಿಗಳನ್ನು ಬಿಟ್ಟು ಬರಬೇಕು ಅಂತ ನಾವುಗಳು ಹೊರಟಿದೀವಿ. ಹತ್ತಿ ಹತ್ತಿ... ಅವಸರಿಸಿದರು. ನಾವಿಬ್ಬರೂ ಕೈ ಕೈ ಹಿಡಿದು ಹತ್ತಿ ಕುಳಿತೆವು. ಹುಡುಗಿಯರು ನಮ್ಮಿಬ್ಬರ ಹೊರತು ಬೇರೆ ಹುಡುಗಿಯರಿರಲಿಲ್ಲ. ಕೆಲವು ಹುಡುಗರು, ನಾಲ್ಕು ಜನ ಪೋಲಿಸರು... ಯಾರಾದರೂ ಪರಿಚಯದವರು ನಮ್ಮನ್ನು ಕಂಡರೆ, ಪೋಲಿಸರು ಹಿಡಿದುಕೊಂಡು ಹೋಗುತ್ತಿದ್ದಾರೆ ಅಂತ ಊರೆಲ್ಲಾ ಗುಲ್ಲು ಎದ್ದರೆ...? ಎಂಬ ಭಯವೂ ಆವರಿಸಿತು. 'ಪೋಲಿಸರು ಕರೆದುಕೊಂಡು ಹೋಗದೇ, ಬೇರೆ ರಸ್ತೆಯ ಕಡೆ ಎಲ್ಲಾದರೂ ಗಾಡಿಯನ್ನು ಓಡಿಸಿದರೆ, ಇಬ್ಬರೂ, ಆ ಕರಿಯ ಜೀಪಿನಿಂದ ಧುಮುಕಿ ಬಿಡಬೇಕೆಂದು, ಗುಟ್ಟಾಗಿ ಮಾತನಾಡಿಕೊಂಡೆವು. ಆದರೆ ಹಾಗೇನೂ ಆಗಲಿಲ್ಲ. ಆ ಟ್ರ್ಯಾಕ್ಸ್ ಸ್ಕೂಲಿನ ಬಳಿ ನಿಂತಿತು. ನಾವಿಬ್ಬರೂ ಇಳಿದು ಸ್ಕೂಲಿನ ಕಡೆಗೆ ನಡೆದೆವು. ಆ ಗಾಡಿ ನಿಂತಿದೆಯೋ ಇಲ್ಲವೋ ತಿರುಗಿ ನೋಡುವ ಧೈರ್ಯವೂ ಇರಲಿಲ್ಲ.

ಪರೀಕ್ಷೆಯ ಅವಧಿ ಕಡಿಮೆ ಇತ್ತು. ಉತ್ತರಗಳನ್ನು ಬರೆದು ಮುಗಿಸಿ, ಹೊರಗೆ ಬಂದಾಗ, ನಮ್ಮನ್ನು ಕರೆದೊಯ್ಯಲು ನಮ್ಮ ತಂದೆ ಬಂದಿದ್ದರು. ಅಂದರೆ... ರಸ್ತೆ ರಸ್ತೆಗಳಲ್ಲಿ ಏನೋ ಗಲಾಟೆ ಪ್ರಾರಂಭವಾಗಿರಲೇ ಬೇಕು. ನಮ್ಮ ತಂದೆ ಸೈಕಲ್ ಮೇಲೆ ಬಂದಿದ್ದರು. ಅಲ್ಲಿಂದ ನಾವುಗಳು ನಮ್ಮ ಚಿಕ್ಕಪ್ಪನ ಮನೆಗೆ ಬಂದೆವು. ನಮ್ಮ ತಂದೆ, ಗೋಪಿ ಹೋಟೆಲ್ಲಿನಿಂದ ಕಟ್ಟಿಸಿಕೊಂಡು ತಂದಿದ್ದ ತಿಂಡಿಯ ಪೊಟ್ಟಣಗಳನ್ನು ಅವರ ಮಕ್ಕಳಿಗೆ ಕೊಟ್ಟರು. ಅವರ ಮಗಳೂ ಒಬ್ಬಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ

ಕಟ್ಟಿದ್ದಳು. ಅವಳೂ ವಾಪಸ್ಸು ಬಂದಿದ್ದಳು. ಆದರೆ ಪರೀಕ್ಷೆ ಹೇಗೆ ನಡೆಯಿತೆಂಬ ಮಾತಿನ ವಿನಿಮಯ ನಡೆಯಲಿಲ್ಲ.

ನಾವುಗಳು ಚಿಕ್ಕಮ್ಮನ ಕೈಯ ಅಡಿಗೆಯ ಊಟವನ್ನು ಮುಗಿಸಿ ಕೊಂಡು ಅಲ್ಲಿಂದ ಹೊರಟೆವು. ನಮ್ಮ ತಂದೆ ಒಂದು ಜಟಕಾಗಾಡಿಯನ್ನು ಬಾಡಿಗೆಗೆ ಗೊತ್ತು ಮಾಡಿದರು. ಬಾಡಿಗೆ ಕೇವಲ ಹನ್ನೆರಡಾಣೆ! ನಾವಿಬ್ಬರೂ ಗಾಡಿಯನ್ನೇರಿದೆವು. ಗಾಡಿ ಹೊರಟಿತು. ನಮ್ಮ ತಂದೆ ಅದರ ಹಿಂದೆ ಸೈಕಲ್ ತುಳಿಯುತ್ತಾ ಬಂದರು. ಅವರು ನಮ್ಮಗಳಿಗಾಗಿಯೂ ಕೊಂಡಿದ್ದ ಹೋಟೆಲ್ ತಿಂಡಿಗಳ ಚೀಲ ಸೈಕಲಿಗೆ ತಗುಲಿ ಹಾಕಿತ್ತು.

ಹೀಗಿತ್ತು ನಮ್ಮ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಅನುಭವ. ಎರಡು ತಿಂಗಳೊಳಗೆ ಫಲಿತಾಂಶ ಪ್ರಕಟವಾಗಿತ್ತು. ಕನ್ನಡದಲ್ಲಿ ಇಬ್ಬರಿಗೂ ನೂರಕ್ಕೆ ಎಪ್ಪತ್ತೈದು ಅಂಕಗಳು ದೊರೆತಿದ್ದವು. ಹಿಂದಿಯಲ್ಲಿ, ಐವತ್ತಕ್ಕೆ ನಲವತ್ತೆಂಟು ಅಂಕಗಳು ದೊರೆತಿದ್ದವು. ನಮ್ಮ ಸ್ವಂತ ತಯಾರಿಯ ಜೊತೆಗೆ, ಅದೃಷ್ಟವೂ ಜೊತೆಗಿದ್ದುದರಿಂದ, ಫೇಲಾಗುವುದನ್ನು ತಪ್ಪಿಸಿಕೊಂಡಿದ್ದೆವು, ಇಲ್ಲದಿದ್ದರೆ...' ಮರಳಿ ಯತ್ನವ ಮಾಡು...' ಎಂದು ನಮ್ಮ ಚಿಕ್ಕಪ್ಪ ಹೇಳುತ್ತಿದ್ದಂತೆ, ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿತ್ತು... ಅದು ತಪ್ಪಿತ್ತು.

***

೨೧. "ಕಾಕಂಬಿ ಕರು"

ನಾವುಗಳು ಸಕ್ಕರೆ ಕಂಪೆನಿಯ ಕ್ವಾರ್ಟ್ರ್ಸ್‌ನಲ್ಲಿ ಬಂದು ಇರತೊಡಗಿದ ಮೇಲೆ ಕೆಲವೇ ತಿಂಗಳುಗಳೊಳಗೆ, ಹಳ್ಳಿಯಲ್ಲಿದ್ದ ಒಂದು ಹಸು ನಮ್ಮ ಮನೆಗೆ ಬಂದು ಸೇರಿತು. ಒಂಭತ್ತು ಮೈಲಿಗಳಷ್ಟು ದೂರದಿಂದ ನಡೆದು ಕೊಂಡು ಬಂದಿದ್ದ ಗಬ್ಬದ ಹಸು, ಆ ರಾತ್ರಿಯೇ ಒಂದು ಕರುವಿಗೆ ಜನ್ಮ ವಿತ್ತು, ಅಲ್ಲಿಯೇ ಉಳಿದುಕೊಳ್ಳುವಂತೆ ಆಗಿತ್ತು. ಆ ನಂತರ ಹಸು, ಊರಿಗೆಲ್ಲಾ ಒಬ್ಬಳೇ ಪದ್ಮಾವತಿ ಎಂಬಂತೆ, ಗೋಪೂಜೆ ಮಾಡುವವರಿ ಗೆಲ್ಲಾ ಪೂಜ್ಯ ಗೋಮಾತೆಯಾಗಿತ್ತು. ಹಬ್ಬ ಹರಿದಿನಗಳಲ್ಲಿ ಅಭಿಷೇಕಕ್ಕೆ ಹಸುವಿನ ಹಾಲು, ಶುಚಿಗೆ ಗೋಮೂತ್ರ ಕೂಡಾ, ಕೆಲವರಿಗೆ ಬೇಕಾಗುತ್ತಿತ್ತು. ಹಾಗೆ ಕಾಲನಿಯಲ್ಲೇ ಹೆಸರುಗಳಿಸಿದ ರಾಧೆಯು ತನ್ನ ಸಾಮ್ರಾಜ್ಯದಲ್ಲಿ ಕರುಗಳಿಗೆ ಜನ್ಮವಿತ್ತಳು.

ಫ್ಯಾಕ್ಟರಿಯ ಸುತ್ತ ಮುತ್ತ ಕಬ್ಬಿನ ಗದ್ದೆಗಳಿದ್ದವು. ಅಲ್ಲಿಗೇ ಈ ಹಸು, ತನ್ನ ಕರುಗಳೊಂದಿಗೆ ಮೇಯಲು ಕದ್ದು ಹೋಗುತ್ತಿತ್ತು. ಕೆಲಸದ ಆಳುಗಳು ಹೊಡೆದುಕೊಂಡು ಬಂದು ನಮ್ಮ ಮನೆಯ ಬಳಿ ಬಿಟ್ಟು ಹೋಗುತ್ತಿದ್ದರು. ಕಬ್ಬಿನ ಗದ್ದೆಗೆ ಧಾಳಿ ಮಾಡದಿರಲೆಂದು ಕಟ್ಟಿ ಹಾಕಿದರೆ, ಒಮ್ಮೊಮ್ಮೆ ಕಿತ್ತುಕೊಂಡು ಹೋಗುತ್ತಿತ್ತು. ಪ್ರತಿ ದಿನವೂ, ಸರಿಯಾದ ಒಂದು ಜಾಗವನ್ನು ನೋಡಿ ಕಟ್ಟಿ ಹಾಕಬೇಕಾಗುತ್ತಿತ್ತು.

ಕಬ್ಬಿನ ಗದ್ದೆಯ ಏರಿಯ ಮೇಲೆ ಒಂದು ಕಡೆಗೆ ರೈಲ್ವೇ ಹಳಿಗಳು ಹಾದು ಹೋಗುತ್ತಿದ್ದವು. ಆ ಹಳಿ, ಕಂಪೆನಿಯ ಒಳಗಿನಿಂದ, ಇಸ್ಲಾಂಪುರ ದವರೆಗೆ ಇತ್ತು. ಕಾರ್ಖಾನೆಯಲ್ಲಿ ಸಕ್ಕರೆ ಉತ್ಪನ್ನವಾಗುತ್ತಿದ್ದ ಸಮಯದಲ್ಲಿ

ಬೆಗಾಸ್, (ಕಬ್ಬಿನ ರಸವನ್ನು ಹಿಂಡಿದ ನಂತರ ಉಳಿಯುತ್ತಿದ್ದ ಕಬ್ಬಿನ ಸಿಪ್ಪೆಯ ಪಿಂಡಿಗಳು) ಹಾಗೂ ಮೊಲಾಸಸ್‌ನ್ನು ವ್ಯಾಗನ್‌ಗಳಲ್ಲಿ ತುಂಬಿಸಿ ಬೇರೆ ಕಡೆಗೆ ಕಳಿಸುತ್ತಿದ್ದರು. ಮೊಲಾಸಸ್‌ನ್ನು ಡಿಸ್ಟಲ್ರೀಗಳಿಗೆ ಕಳಿಸುತ್ತಿದ್ದರು.

ಹಳಿಗಳ ಇನ್ನೊಂದು ಬದಿಯಲ್ಲಿದ್ದ ಮೊಲಾಸಸ್ ಟ್ಯಾಂಕ್ ಭರ್ತಿ ತುಂಬಿರುತ್ತಿತ್ತು. ಆದರೆ, ಆಳದಲ್ಲಿದ್ದುದರಿಂದ ನಮಗೆ ಕಾಣುತ್ತಿರಲಿಲ್ಲ. ಆದರೆ ಬಿಸಿಲಿನಲ್ಲಿ ಕಾದ ಮೊಲಾಸಸ್‌ನ ವಾಸನೆ ಇತ್ತ ಕಡೆ ಹರಿದು ಬರುತ್ತಿತ್ತು.

ಅದ್ಯಾವಾಗ, ನಮ್ಮ ಮನೆಯ ಹಸು, ಆ ಮೊಲಾಸಸ್‌ನ ರುಚಿಯನ್ನು ಕಂಡುಕೊಂಡಿತ್ತೋ, ಆಗ ಈಗ ಹಳಿಗಳ ಅತ್ತ ಇಳಿದು ಹೋಗಿ, ಅತ್ತ ಇತ್ತ ಬಿದ್ದಿದ್ದ ಮೊಲಾಸಸ್‌ನ್ನು ನೆಕ್ಕಿ, ಮೈ ಬಾಯನ್ನೆಲ್ಲಾ ಅಂಟು ಮಾಡಿ ಕೊಂಡು ಮನೆಗೆ ಬರುತ್ತಿತ್ತು. ತನ್ನ ಈ ಅಭ್ಯಾಸವನ್ನು ತನ್ನ ಕರುಗಳಿಗೂ ಅಂಟಿಸಿತ್ತು. ಹಾಗೊಮ್ಮೆ ಹಸು ಕರುಗಳು, ಮೊಲಾಸಸ್ ಟ್ಯಾಂಕ್ ಬಳಿಗೆ ಹೋಗಿ, ಕಾಕಂಬಿಯನ್ನು ನೆಕ್ಕುತ್ತಾ ನೆಕ್ಕುತ್ತಾ, ಕಾಕಂಬಿಯ ಕೊಳದೊಳಕ್ಕೆ ಒಂದು ಕರು ಬಿದ್ದು ಬಿಟ್ಟಿದೆ. ಅಂಟು ಅಂಟಾಗಿದ್ದ ಗಟ್ಟಿ ಪಾಯಸದಂತೆ ಇದ್ದ ಕಾಕಂಬಿಯ ದ್ರವದೊಳಗೆ ಕರು ಮುಳುಗುತ್ತಿ ರುವುದನ್ನು ಕಂಡ ಕೆಲವು ಆಳುಗಳು ತಕ್ಷಣವೇ ಕರುವನ್ನು ಪ್ರಯಾಸ ದಿಂದ ಮೇಲಕ್ಕೆ ಎಳೆದು ತಂದು ಇತ್ತ ಕಡೆ ಬಿಟ್ಟಿದ್ದಾರೆ. ಅಲ್ಲಿದ್ದ ಉಳಿದ ದನಕರುಗಳನ್ನು ಓಡಿಸುವ ಪ್ರಯತ್ನ ಮಾಡಿದ್ದಾರೆ.

ಸಾಯಂಕಾಲ ಕತ್ತಲಾಗುವ ಸಮಯಕ್ಕೆ ಈ ತಾಯಿ ತನ್ನ ಕರುವಿನೊಂದಿಗೆ ಬಂದಿತು. ಸಮೀಪ ಬರುತ್ತಿದ್ದಂತೇ ಕಾಕಂಬಿಯ ವಾಸನೆಯೋ ವಾಸನೆ, ಕರುವಿನ ಮೈಯೆಲ್ಲಾ ಅಂಟುಮಯ. ಚರ್ಮವೆಲ್ಲಾ ಮೆತ್ತಿಕೊಂಡ ಕಾಕಂಬಿಯ ದ್ರವದಿಂದ ವಿಚಿತ್ರವಾಗಿ ಕಾಣುತ್ತಿದೆ. ತಾಯಿ ಹಸು ಆಗಾಗ್ಗೆ ಕರುವಿನ ಮೈಯನ್ನು ನೆಕ್ಕಿ ನೆಕ್ಕಿ ಶುಚಿ ಗೊಳಿಸುತ್ತಿದೆ. ಆಮೇಲೆ ಹಸುವಿಗೆ ಕರುವಿಗೆ ಸ್ನಾನ ಮಾಡಿಸಿ ಮೈಯಿಗೆ ಅಂಟಿದ್ದ ಅಂಟನ್ನೆಲ್ಲಾ ತೊಳೆದದ್ದಾಯಿತು. ಇಲ್ಲದಿದ್ದರೆ ಕೊಟ್ಟಿಗೆಗೆ ಹೋಗುವುದೇ ಕಷ್ಟವಾಗಿರುತ್ತಿತ್ತು.

ಸ್ವಲ್ಪ ಹೊತ್ತಿನಲ್ಲೇ ಆ ಕರು ಹಾಗೂ, ಹಸು ನಿದ್ದೆಯ ಮಂಪರಿಗೆ ಇಳಿದು ಬಿಟ್ಟವು. ಹುಲ್ಲು ತಿನ್ನಲಿಲ್ಲ, ನೀರು ಕುಡಿಯಲಿಲ್ಲ. ನಿದ್ದೆ ನಿದ್ದೆ... ಜ್ಞಾನವಿಲ್ಲದಂತೆ ಅಡ್ಡಾದಿಡ್ಡಿಯಾಗಿ ಮಲಗಿ ನಿದ್ದೆ ಮಾಡಿದ್ದೇ ಮಾಡಿದ್ದು. ನನಗೆ ಗಾಬರಿ, ಮೊಲಾಸಸ್ ತಿಂದದ್ದು ಜಾಸ್ತಿಯಾಗಿದೆ. ಏನಾದ್ರೂ ಹೆಚ್ಚು ಕಡಿಮೆ ಆದರೆ? ಎಚ್ಚರವೇ ಆಗದಿದ್ದರೇ... ಮನಸ್ಸು ಆತಂಕದಿಂದ ಹೊಯ್ದಾಡಿತ್ತು. ಇವರಿಗೆ ಹೇಳಿದೆ.

"ಹಾಗೇನೂ ಆಗುಲ್ಲ, ಮೊಲಾಸಸ್‌ನಲ್ಲಿ ಆಲ್ಕೋಹಾಲ್ ಅಂಶ ಹೆಚ್ಚಾಗಿರುತ್ತೆ. ಹಸುವಿಗೆ ಏನೂ ಆಗುಲ್ಲ, ಆದರೆ ಕರು ಚಿಕ್ಕದು... ಒಂದಿಷ್ಟು ಮಜ್ಜಿಗೆ ಕುಡಿಸೋಣ, ಗೊಟ್ಟ ತಗೊಂಡ್ಬಾ..." ಎಂದರು.

ಆ ನಂತರ ಕಡೆದ ಮಜ್ಜಿಗೆಯನ್ನು ನಾಲ್ಕೈದು ಬಾರಿ ಹಸುವಿಗೆ ಹಾಗೂ ಕರುವಿಗೆ ಗೊಟ್ಟದಲ್ಲಿ ಕುಡಿಸಿದ್ದಾಯಿತು. ಬೆಳಗಿನ ಹೊತ್ತಿಗೆ ಹಸು ಹಾಗೂ ಕರು ನಿದ್ದೆಯ ಮಂಪರಿನಿಂದ ನಿಧಾನವಾಗಿ ಆಚೆಗೆ ಬಂದವು. ಕೆಂಪು ಬಣ್ಣದ ಕರು ಅಪಾಯದಿಂದ ಪಾರಾಗಿತ್ತು.

"ಸಧ್ಯ ಗೋಹತ್ಯಾ ದೋಷ ತಪ್ಪಿತು. ಒಂದೆರಡು ದಿನ ಇವುಗಳನ್ನು ಕೊಟ್ಟಿಗೆಯಲ್ಲೇ ಕಟ್ಟಿ ಹಾಕಿ ಹುಲ್ಲು ಹಾಕೋಣ. ದನಕರುಗಳು ಅತ್ತ ಹೋಗದಂತೆ ತಡೆಯಲು ಬೇಲಿ ಹಾಕಿಸುವಂತೆ ಹೇಳಬೇಕು" ಎಂದರು. ಅದರಂತೆ ಕೆಲವೇ ದಿನಗಳಲ್ಲಿ ಮೊಲಾಸಸ್ ಟ್ಯಾಂಕ್ ಸುತ್ತಾ ಬೇಲಿಯ ಬಂದೋಬಸ್ತ್ ಆಯಿತು. ಅಲ್ಲಿದ್ದ ಆಳುಗಳು ಬಂದು ಹೇಳಿದರಂತೆ.

"ಒಳ್ಳೇ ಕೆಲಸ ಮಾಡಿಸಿದ್ರಿ ಸ್ವಾಮಿ... ಅವತ್ತು, ಈ ಟ್ಯಾಂಕ್‌ನೊಳಕ್ಕೆ ಬಿದ್ದ ಕರು ಬದುಕಿದ್ದೇ ಹೆಚ್ಚು... ಮಗುಚಿಕೊಂಡು ಬಿದ್ದ ಕರು, ಕತ್ತಿನ ತನಕ ಈ ಕಾಕಂಬಿಯೊಳಗೆ ಮುಳುಗಿ ಹೋಗಿತ್ತು, ಕತ್ತು ಹಿಡಿದು ಎಳೆದು ಆಚೆಗೆ ಹಾಕಿದೆವು. "ಕಾಕಂಬಿ ಕೊಳದೊಳಗೆ ಮಿಂದು ಬಂದಿದೆ". ನಮ್ಮ ಕೈ ಕಾಲು ಬಟ್ಟೆ ಎಲ್ಲಾ ಅಂಟೋ... ಅಂಟು... ಆ ದಿನದ ಘಟನೆಯನ್ನು ನೆನೆಸಿಕೊಂಡು ನಕ್ಕಿದ್ದರಂತೆ.

ವಾಸನೆಯ ಜಾಡನ್ನು ಹಿಡಿದು, ಹಸು ಕರುಗಳು ರೈಲ್ವೇ ಹಳಿಯನ್ನು ದಾಟಿ ಅತ್ತ ಹೋದರೂ, ಟ್ಯಾಂಕ್ ಬಳಿಗೆ ಹೋಗಲಾಗಿರಲಿಲ್ಲ....

ಕಾಕಂಬಿಯ ರುಚಿಯ ಆಸೆ, ಮತ್ತೆ ಮತ್ತೆ ಅತ್ತ ಸುಳಿಯುವಂತೆ ಮಾಡಿತ್ತು... ಮಧ್ಯಪಾನದ ಚಟದವರು ಸಾರಾಯಿಯ ಅಂಗಡಿಯ ಬಳಿ ಸುಳಿದಾಡುವಂತೆ....

***

೨೨. "ಎಚ್ಚರಿಕೆ ಇಲ್ಲದಿದ್ದರೆ..."

ನನ್ನ ಮೈದುನನ ಎರಡನೇ ಮಗನ ಮದುವೆ ಗೊತ್ತಾಗಿತ್ತು. ಮದುವೆ ಬೆಂಗಳೂರಿನಲ್ಲಿ. ತಮ್ಮನ ಮನೆಯ ಸಮಾರಂಭಕ್ಕೆ ನಮ್ಮವರು ಹೊರಡುವ ತಯಾರಿ ನಡೆಸಿದ್ದರು. ಅವರದ್ದೇನು? ಎರಡು ಷರ್ಟು, ಎರಡು ಪಂಚೆ, ಒಂದು ಟವೆಲ್ಲು, ಒಂದು ಶಲ್ಯ ಇಷ್ಟಿದ್ದರೆ ಸಾಕು. ಬೇಕಾದಷ್ಟು. ಆದರೆ ನನಗೆ ಹಾಗಲ್ಲ, ಕಡೇ ಪಕ್ಷ ಎರಡು ಒಳ್ಳೆಯ ರೇಷ್ಮೆ ಸೀರೆ, ಅದಕ್ಕೆ ತಕ್ಕನಾದ ರವಿಕೆ, ಒಂದೆರಡು ಸಾಧಾರಣವಾದ ಸೀರೆ, ಒಂದು ಐದಾರು ಸೀರೆ ರವಿಕೆಗಳಾದರೂ ಬೇಕು. ಸೋಪು, ಕನ್ನಡಿ ಬಾಚಣಿಗೆ ಎಲ್ಲವನ್ನೂ ಇಟ್ಟುಕೊಳ್ಳಬೇಕು. ಏನಿದೆಯೋ, ಏನಿಲ್ಲವೋ, ಎಲ್ಲವನ್ನು ನಾನೇ ನೋಡಿ ಕೊಳ್ಳಬೇಕು. ಎಲ್ಲಾ ಸರಿ, ಆದರೆ ಸೀರೆಗಳು!

ಹೆಣ್ಣು ಮಕ್ಕಳ ಮದುವೆ ಸಮಯದಲ್ಲಿ ಉಡುಗೊರೆಯಾಗಿ ಬಂದು ಸೀರೆಗಳೇನೋ ಇವೆ. ಆದರೆ ಉಟ್ಟೂ ಉಟ್ಟು ಹಳೆಯದಾಗಿದೆ. ಅಲ್ಲದೇ ಭಾರಿ ಸೀರೆಗಳೇನಲ್ಲ. ಸಾಧಾರಣವಾದ ಸೀರೆಗಳು. ಇದೇ ಸಮಯ ಇವರಿಗೆ ಹೇಳಿ ಒಂದು ಭಾರಿ ರೇಷ್ಮೆ ಸೀರೆಯನ್ನಾದರೂ ತೆಗೆಸಿಕೊಳ್ಳಬೇಕು.. ಕೊಡಿಸ್ತಾರೋ ಇಲ್ಲವೋ...? ಊಟದ ಸಮಯದಲ್ಲಿ ಗಂಡನ ಮುಂದೆ ಈ ಪ್ರಸ್ತಾಪವನ್ನಿಟ್ಟೆ... ನಾನು ಅಂದುಕೊಂಡಂತೆಯೇ ನನ್ನ ಗಂಡನ ಮಾತು ಹೊರಟಿತ್ತು.

"ಈಗ ನಿಂಗ್ಯಾಕೇ ಹೊಸ ಸೀರೆ? ಅಲ್ಲಿ ನಿನ್ನನ್ನ, ನಿನ್ನ ಸೀರೇನ ಯಾರು ನೋಡ್ತಾರೆ? ಬೀರುವಿನಲ್ಲಿ ಮಡಿಸಿಟ್ಟಿರೋ ಸೀರೆಗಳನ್ನ ಹೊರಕ್ಕೆ ತೆಗಿ. ಗಾಳಿ ಬೆಳಕು ಬೀಳಲಿ. ಅದರಲ್ಲೇ ಯಾವುದಾದ್ರೂ, ಒಂದು

ಹೊಸ ಸೀರೆ ಇದ್ದರೆ, ಅದನ್ನೇ ನಿನ್ನ ತಂಗೀಗೆ ಉಡುಗೊರೆಯಾಗಿ ಕೊಟ್ಟು ಬಿಡೋಣ... ಏನಂತೀಯಾ?"

"ಸದಾ... ದುಡ್ಡನ್ನ ಉಳಿಸೋ ಮಾತನ್ನೇ ಆಡ್ತೀರಿ... ನನ್ನ ಹತ್ತಿರ ನಿಮ್ಮ ನಾದಿನಿಗೆ ಕೊಡುವಂಥ ಸೀರೆ ಯಾವುದೂ ಇಲ್ಲ. ಅವಳಿಗೇನು ಕಡಿಮೆ! ಸಂಪಾದಿಸುವ ಗಂಡು ಮಕ್ಕಳಿದ್ದಾರೆ. ಭಾರಿ ಭಾರಿ ಸೀರೇನೇ ತಂದಿರ್ತಾರೆ. ನಾವು ಕೊಡುವ ಸಾಧಾರಣವಾದ ಸೀರೇನ ಅವಳೆಲ್ಲಿ ಉಟ್ಕೊಳ್ತಾಳೆ?"

"ಸರಿ ಬಿಡಪ್ಪಾ... ನಿನಗೆ ನನ್ನನ್ನ ಅನ್ನೋದು ಅಂದ್ರೆ ಎರಡೆರಡು ಬಾಯಿ"

"ಹಾಗಾದ್ರೆ, ದುಡ್ಡಿದ್ರೆ, ನಂಗೊಂದು, ಅವಳಿಗೊಂದು ಭಾರಿ ಸೀರೇನೇ ತಗೊಂಡ್ಬನ್ನಿ" ಎಂದು ಹೇಳಿದೆ. ಇವರು ಅಲ್ಲಿಂದ ಎದ್ದು ಹೋಗಿದ್ದರು. ನಮ್ಮ ಮನೆಯ ಯಾವುದೇ ಮದುವೆ ಮುಂಜಿಗಳಲ್ಲಿ ನಾನು ಸೀರೆಯನ್ನು ತೆಗೆದುಕೊಂಡಿರಲಿಲ್ಲ. ಅದೇ ಹಣ ಇದ್ದರೆ ಬೇರೆ ಯಾವುದಾದರೂ ಖರ್ಚಿಗೆ ಆಗುತ್ತೆ ಎಂದುಕೊಂಡು, ನನಗೆ ಕೊಡಿಸಿ ಎಂದಾಗಲೀ, ಕೊಡಿಸಲಿಲ್ಲ ಎಂದಾಗಲೀ ಎಂದೂ ಆಡಿರಲಿಲ್ಲ. ಇವರಿಗೆ ಅದೇನು ಅನ್ನಿಸಿತೋ ಖಂಡೇರಾಯನ ಅಂಗಡಿಗೆ ಹೋಗಿ ಸಾಲಕ್ಕೆ ಬರೆಸಿ, ಎರಡು ಸೀರೆಗಳನ್ನು ಎರಡು ರವಿಕೆ ಖಣಗಳನ್ನು ತಂದೇ ಬಿಟ್ಟರು. ನಾನು ತೆಗೆದು ನೋಡುವ ಉತ್ಸಾಹವನ್ನು ತೋರಲಿಲ್ಲ. ಅವರೇ ಸೀರೆಗಳನ್ನು ತೆಗೆದು ಇಟ್ಟರು. ಎರಡೂ, ಒಂದೇ ಬಣ್ಣದ ಏಳುಗಜದ ಸ್ಪನ್ ಸಿಲ್ಕ್ ಸೀರೆಗಳು. ನನಗೆ ಆ ಬಣ್ಣ ಇಷ್ಟವಾಗಲಿಲ್ಲ. ಯಾವ ಆಯ್ಕೆಯೂ ಇರಲಿಲ್ಲ. ನನ್ನ ವಾರಗಿತ್ತಿ ಬೆಳ್ಳಗಿದ್ದಳು. ಅವಳಿಗೆ ಯಾವ ಬಣ್ಣವಾದರೂ ಒಪ್ಪುತ್ತಿತ್ತು. ನನ್ನ ಅಸಹನೆ ಕಟ್ಟೆ ಒಡೆದಿತ್ತು.

"ನನ್ನನ್ನು ಒಂದ್ಮಾತು ಕೇಳಿದ್ರೆ, ಎಂಥಾ ಬಣ್ಣದ್ದು ಬೇಕು ಅಂತ ಹೇಳ್ತಿರ್ತಿದ್ದೆ. ಅವನು ಕೊಟ್ಟಿದ್ದನ್ನು ಕಣ್ಮುಚಿಕೊಂಡು ತಂದಿದೀರಿ. ನಿಮ್ಮ ನಾದಿನಿ ಬೆಳ್ಳಗಿದಾಳೆ. ಅವಳಿಗೆ ಈ ಬಣ್ಣ ಒಪ್ಪುತ್ತೆ..."

"ಸರಿ ಬಿಡಪ್ಪಾ, ಏನ್ಮಾಡಿದ್ರೂ ತಪ್ಪೇ... ಏನಾದ್ರೂ ಮಾಡ್ಕೋ....

ವಾಪಸ್ಸು ಕೊಟ್ಟು, ಬೇರೆ ತಗೊಂಡ್ಬನ್ನಿ ಅಂತ ಮಾತ್ರ ಹೇಳ್ಬೇಡ" ಇವರು ಸಿಟ್ಟಿನಿಂದ ಕೂಗಾಡಿದಾಗ ಸುಮ್ಮನಾಗಿದ್ದೆ. ಮದುಮಗನ ತಾಯಿಗೆ, ಭಾವ ಪ್ರೀತಿಯಿಂದ ತಂದಿರುವ ಸೀರೆ... ಅವಳು ಉಟ್ಕೋತಾಳೋ ಬಿಡ್ತಾಳೋ... ಕೊಡುವ ಕೆಲಸ ನನ್ನದು ಎಂದುಕೊಂಡು ಸುಮ್ಮನಾದೆ.

ನನ್ನಲ್ಲಿದ್ದ ಸೀರೆಗಳನ್ನೇ ಇಸ್ತ್ರೀ ಮಾಡಿ, ಅದಕ್ಕೆ ಒಪ್ಪುವಂಥ ರವಿಕೆಗಳನ್ನು ನೋಡಿ ಮಡಿಸಿಟ್ಟುಕೊಂಡೆ. ಇವರ ಷರ್ಟು, ಪಂಚೆಗಳಿಗೂ ಇಸ್ತ್ರಿ ಮಾಡಿದ್ದಾಗಿತ್ತು. ಎಲ್ಲೋ ಇಟ್ಟಿದ್ದ ಸೂಟ್‌ಕೇಸ್‌ನ್ನು ತೆಗೆದು, ಧೂಳನ್ನು ಒರೆಸಿ, ಬೇಕಾದ, ಬಟ್ಟೆ, ಸೋಪು, ಟವೆಲ್ಲು ಇತ್ಯಾದಿಗಳನ್ನು ಇಟ್ಟಿದ್ದಾಗಿತ್ತು.

ಮಳೆಗಾಲದ ಅಬ್ಬರ ಕಡಿಮೆ ಆಗಿದ್ದರೂ, ಆಗೊಮ್ಮೆ ಈಗೊಮ್ಮೆ ಸ್ವಲ್ಪ ಸ್ವಲ್ಪ ಮಳೆ ಬಂದು ನೆಲ ಆರಿರಲಿಲ್ಲ. ಸ್ವಲ್ಪ ಹವಾಮಾನ ಕೂಡಾ ತಂಪಾಗಿತ್ತು. ಇಲ್ಲೇ ಸ್ವಲ್ಪ ಛಳಿ ಇದ್ದರೆ, ಬೆಂಗಳೂರ್‍ನಲ್ಲಿ ಖಂಡಿತಾ ಚಳಿ ಇರುತ್ತೆ ಅಂತ ಅಂದ್ಕೊಂಡು ಹೊಸದಾಗಿದ್ದ ಶಾಲುಗಳನ್ನು ಹೊದೆಯಲೆಂದು ತೆಗೆದಿಟ್ಟುಕೊಂಡಾಗಿತ್ತು.

ಈಗ ಮನೆಯಲ್ಲಿ ಇದ್ದುದು ನಾವಿಬ್ಬರೇ, ಹೆಣ್ಣು ಮಕ್ಕಳು ಅವರವರ ಮನೆಯಲ್ಲಿದ್ದರು. ಗಂಡು ಮಕ್ಕಳಿಬ್ಬರೂ ಬೇರೆ ಊರಿನಲ್ಲಿದ್ದುಕೊಂಡು ಓದುತ್ತಿದ್ದರು. ಮನೆಯನ್ನ ದನಕರುಗಳನ್ನು ನೋಡಿಕೊಳ್ಳಲು, ಒಬ್ಬ ಹುಡುಗನಿಗೆ ಹೇಳಿದ್ದರು. ಒಟ್ಟಿನಲ್ಲಿ ಮದುವೆಗೆ ಹೊರಡಲು ಸಿದ್ಧರಾಗಿದ್ದೆವು.

ನನ್ನ ಮೈದುನ ಇದ್ದುದೂ ಶಿವಮೊಗ್ಗಾದಲ್ಲೇ. ಅವರ ಮನೆಯವರು ಏಳೆಂಟು ಮಂದಿ, ಅವರ ಪರಿಚಯದ ಕೆಲವರು, ನಾವಿಬ್ಬರೂ, ಎಲ್ಲಾ ಸೇರಿ, ದಿಬ್ಬಣದವರು ಕೇವಲ ಹದಿನೈದು ಇಪ್ಪತ್ತು ಮಂದಿ ಮಾತ್ರ, ಗಂಡಿನವರಿಗಾಗಿ ಪ್ರತ್ಯೇಕವಾದ ಬಸ್ಸನ್ನೇನೂ ಗೊತ್ತು ಮಾಡಿರಲಿಲ್ಲ. ಬೆಂಗಳೂರಿಗೆ ಹೋಗುವ ಬಸ್ಸಿನಲ್ಲೇ ಇಪ್ಪತ್ತು ಸೀಟುಗಳನ್ನು ಕಾದಿರಿಸಿದ್ದರು.

ಅವರುಗಳು ರಾಹುಕಾಲಕ್ಕೆ ಮೊದಲೇ ಹೊರಡುತ್ತಿರುವುದಾಗಿ ತಿಳಿಸಿದ್ದರು. ದೊಡ್ಡ ಬಸ್‌ಸ್ಟ್ಯಾಂಡ್‌ನಲ್ಲಿ ಅವರುಗಳು ಹತ್ತುವವರಿದ್ದರು. ನಮ್ಮಿಬ್ಬರನ್ನು, ನಮ್ಮ ಮನೆಯ ಹತ್ತಿರದ ಬಸ್‌ಸ್ಟಾಪ್‌ನಲ್ಲಿ ಕಾಯುವಂತೆ

ತಿಳಿಸಿದ್ದರು. ನಮ್ಮವರಿಗೆ ಯಾವಾಗಲೂ ಅವಸರ. ಅವರುಗಳೇ ಮನೆಯಿಂದ ಹೊರಟಿದ್ದರೋ ಇಲ್ಲವೋ, ನನ್ನನ್ನು ಹೊರಡಿಸಿ, ಮುಂಬಾಗಿಲಿಗೆ ಬೀಗ ಹಾಕಿ ಸೂಟ್‌ಕೇಸನ್ನು ಹಿಡಿದು ಹೊರಟೇ ಬಿಟ್ಟರು.

ರಸ್ತೆಯಲ್ಲಿ ಕಾದೂ ಕಾದೂ ಸಾಕಾಗಿತ್ತು. ಯಾವ ಕೆಂಪು ಬಣ್ಣದ ಬಸ್ಸು ಬಂದರೂ, ಇವರು ಕೈ ಮಾಡುತ್ತಿದ್ದರು. ಬಸ್ಸು ನಿಲ್ಲದೇ ಮುಂದೆ ಹೊರಟು ಹೋಗುತ್ತಿತ್ತು. "ಅವರು ನಮ್ಮನ್ನು ಬಿಟ್ಟು ಹೋಗಲ್ಲ. ನೀವು ಹೇಳಿದೀರಲ್ಲ, ಸುಮ್ನೆ ನಿಂತ್ಕೋ ಬಾರ್ದಾ?" ನಾನು ರೇಗಿದ್ದೆ.

"ನಿಂಗೆ ಗೊತ್ತಾಗಲ್ಲ ಸುಮ್ನಿರು. ನಾವು ಇಲ್ಲಿ ನಿಂತಿದೀವಿ ಅವರಿಗೆ ಗೊತ್ತಾಗೋದು ಬೇಡ್ವಾ? ನೋಡು... ಯಾವುದೋ ಬಸ್ಸು ಬರ್ತಿದೆ" ಅಂತ ರಸ್ತೆಯ ಬದಿಗೆ ಬಂದು ನಿಂತು, ಬಸ್ಸಿಗೆ ಕೈ ತೋರಿದರು. ಬಸ್ಸು ನಿಂತಿತು... ಬಸ್ಸಿನಲ್ಲೋ ತುಂಬಿ ತುಳುಕುವಷ್ಟು ಜನ. ನಮ್ಮ ಕಡೆಯವರು ಕಾಣಲಿಲ್ಲ. ಅಷ್ಟರಲ್ಲಿ ಕಿಟಕಿಯಿಂದ ತಲೆ ಹಾಕಿ, ಮದುಮಗನ ತಮ್ಮ ಕರೆದಿದ್ದ..." ದೊಡ್ಡಪ್ಪಾ... ದೊಡ್ಡಪ್ಪಾ...."

ಅಷ್ಟರಲ್ಲಿ ಕಂಡಕ್ಟರ್ ಇಳಿದು, ಸೂಟ್‌ಕೇಸನ್ನು ಕ್ಲೀನರ್ ಕೈಯಲ್ಲಿ ಮೇಲೆ ಇಡಲು ಹೇಳಿದ. ನಾನು ಬೇಡ ಬೇಡ ಅಂತ ಹೇಳಿಯೇ ಹೇಳಿದೆ. "ಸೂಟ್‌ಕೇಸ್‌ನ ಟಾಪ್‌ಮೇಲೆ ಹಾಕೋದು ಬೇಡ. ಹಾಗಾಗಿ ಹೋಗುತ್ತೆ... ಮಳೆ ಬೇರೆ ಬರ್ತಿದೆ. ಇಲ್ಲೇ ಕೆಳಗೆ ನಮ್ಮ ಹತ್ತಿರ ಇಟ್ಕೊಳ್ಳೋಣ ಅಂತ.

ಯಾರೂ ನನ್ನ ಮಾತಿಗೆ ಕಿವಿ ಗೊಡಲಿಲ್ಲ. ಸೂಟ್‌ಕೇಸ್ ಟಾಪ್‌ನ್ನು ಸೇರಿತು. ನಾವಿಬ್ಬರೂ, ಕಷ್ಟಪಟ್ಟು ಬಸ್ಸನ್ನು ಹತ್ತಿದೆವು. ಯಾರೋ ನಮ್ಮೊಬ್ಬರಿಗಾಗಿ ಜಾಗವನ್ನು ಮಾಡಿಕೊಟ್ಟರು. ಕುಳಿತುಕೊಳ್ಳುವ ಮೊದಲೇ ಬಸ್ಸು ಹೊರಟಿತ್ತು. ನಮ್ಮ ಕಡೆಯವರು ಯಾರ್‍ಯಾರು ಎಲ್ಲಿದಾರೋ ತಿಳಿಯುವಂತೆ ಇರಲಿಲ್ಲ. ಅವರುಗಳೆಲ್ಲಾ ಇಟ್ಟ ಕಡೆಯೇ ನಮ್ಮ ಸೂಟ್‌ಕೇಸನ್ನು ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು ಅಂತ ಅನ್ನಿಸುತ್ತಲೇ ಇತ್ತು.

ಬಸ್ಸಿಗೆ ಈ ಮೊದಲೇ ಟಿಕೆಟ್ಟು ಮಾಡಿಸಿದ್ದರೂ, ಇಷ್ಟು ಜನ ಯಾಕೆ ಅಂತ ತಿಳಿಯಲಿಲ್ಲ. ಆಗ ಯಾರೋ ಹೇಳಿದರು... ಇದು ಗೋಕರ್ಣ

ದಿಂದ ಬೆಂಗಳೂರಿಗೆ ಹೋಗುತ್ತಿರುವ ಬಸ್ಸು.... ಇದೇ ಬಸ್ಸಿಗೆ ಸೀಟನ್ನು ಮಾಡಿಸಿರೋದು ಅಂತ... ಗೋಕರ್ಣದಿಂದ ಬಂದವರು ಕೆಲವರು ಶಿವಮೊಗ್ಗಾದಲ್ಲಿ ಇಳಿದಿದ್ದರು. ನನಗೆ ಸೂಟ್‌ಕೇಸಿನ ಚಿಂತೆ ಇದ್ದೇ ಇತ್ತು. ಬಸ್ಸು ಕೆಲವು ನಿಲ್ದಾಣದಲ್ಲಿ ನಿಂತಾಗಲೂ, ಯಾರು ಇಳಿಸಿಕೊಂಡು ಬಿಡುವರೋ ಎಂಬ ಆತಂಕ ಕಾಡುತ್ತಲೇ ಇತ್ತು. ನನಗೆ ಏನೂ ಕಾಣು ವಂತಿರಲಿಲ್ಲ. ನಮ್ಮವರಿಗೆ ಪಿಸುದನಿಯಲ್ಲಿ ಹೇಳುವಂತಿರಲಿಲ್ಲ. ಕಣ್ಣು ಸನ್ನೆ ಅಂಥ ಸೂಕ್ಷ್ಮ ಇವರಿಗೆ ತಿಳಿಯುತ್ತಲೇ ಇರಲಿಲ್ಲ. ಅಷ್ಟಾದರೂ, ಬಸ್ಸು ಅರಸೀಕೆರೆಯಲ್ಲಿ ನಿಂತಾಗ ಮದುಮಗನ ಸ್ನೇಹಿತನಿಗೆ, ಸ್ವಲ್ಪ ನೋಡಿಕೊಳ್ಳುವಂತೆ ಹೇಳಿದೆ. ನನ್ನ ಮೈದುನ ಕುಳಿತಲ್ಲಿಂದಲೇ ಹೇಳಿದ.

"ಏನೂ ಯೋಚ್ನೆ ಮಾಡ್ಬೇಡಿ ಅತ್ತಿಗೆಮ್ಮ... ನಮ್ಮದೂ ಕೆಲವು ಲಗೇಜ್ ಅಲ್ಲಿದೆ ಹಾಗೆಲ್ಲಾ ಯಾರೂ ಇಳಿಸೋಲ್ಲ. ಇವರುಗಳು ನೋಡ್ಕೊಳ್ತಾರೆ" ಅವನ ಮಾತು ಸಮಾಧಾನಕರವಾಗಿಲ್ಲದಿದ್ದರೂ ಸುಮ್ಮನಾದೆ.

"ಸುಮ್ನೆ ಕೂತ್ಕೋತೀಯ... ಒಳ್ಳೆ ತೊಣಚಿ ಹೊಕ್ಕೋಳ ಹಾಗೆ ಆಡ್ತಿದೀಯಲ್ಲ. ನಿನ್ನ ಸೂಟ್‌ಕೇಸನ್ನು ಯಾರೂ ಇಳಿಸ್ಕೊಂಡು ಹೋಗಲ್ಲ" ಇವರು ನನ್ನ ಮೇಲೆ ರೇಗಿದರು.

ಬೆಂಗಳೂರು ತಲಪುವವರೆಗೂ ನಾನು ಸಿಟ್ಟಿನಿಂದ ಮಾತನಾಡದೇ ಸುಮ್ಮನಾಗಿದ್ದೆ. ಮೊದಲಿಗೆ ಬಸ್ಸು ಮಲ್ಲೇಶ್ವರದಲ್ಲಿ ನಿಂತಿತು. ಒಂದಿಬ್ಬರು ಇಳಿದರು. ಅಲ್ಲಿ ಸಣ್ಣಗೆ ಮಳೆ ಸುರಿಯುತ್ತಿತ್ತು. ಒಳಗೆ ನೀರು ಸಿಡಿಯ ದಿರಲೆಂದು, ಕಿಟಕಿಗಳಿಗೆಲ್ಲಾ ಟಾರ್ಪಾಲಿನ್ ಹಾಕಿ ಮುಚ್ಚಿ ಬಿಟ್ಟಿದ್ದರು. ಹೊರಗೆ ಏನು ನಡೆಯುತ್ತಿದೆ ಎಂದು ಕಾಣುವಂತಿಲ್ಲ. ಒಳಗಿನವರು ಏನು ಕೇಳುತ್ತಿದ್ದಾರೆಂದು ಹೊರಗಿನವರಿಗೆ ಕಾಣುವಂತಿರಲಿಲ್ಲ. ಬಸ್ಸು ಮುಂದಕ್ಕೆ ಚಲಿಸಿತು. ನನ್ನ ಆತಂಕವೂ ಹೆಚ್ಚಾಗಿತ್ತು.

ಬೆಂಗಳೂರಿನ ಬಸ್‌ನಿಲ್ದಾಣದಲ್ಲಿ ಬಸ್ಸು ನಿಂತಾಗ ಎಲ್ಲರೂ ಇಳಿದೆವು. ಟಾಪ್ ಮೇಲೆ ಹತ್ತಿದ ಕ್ಲೀನರ್ ಒಂದೊಂದೇ ಲಗೇಜನ್ನು ಇಳಿಸುತ್ತಿದ್ದ. ಎಲ್ಲರೂ ಅವರವರ ಲಗೇಜನ್ನು ತೆಗೆದು ಜೋಪಾನವಾಗಿಟ್ಟುಕೊಂಡು

ಕ್ಲೀನರ್ ಕೈ ಕೊಡವುತ್ತಾ ಕೆಳಗಿಳಿದ. ನನ್ನ ಎದೆ ಢವಗುಟ್ಟಿತು. ನಾನು ಅಂದುಕೊಂಡಂತೆಯೇ ಆಗಿತ್ತು. ನಮ್ಮ ಸೂಟ್‌ಕೇಸನ್ನು ಯಾರೋ ಇಳಿಸಿಕೊಂಡು ತೆಗೆದುಕೊಂಡು ಹೋಗಿದ್ದರು.

ಬೀಗರನ್ನು ಕರೆದೊಯ್ಯಲು ಹೆಣ್ಣಿನ ಕಡೆಯವರು ಟ್ಯಾಕ್ಸಿಯನ್ನು ಗೊತ್ತು ಮಾಡಿದ್ದರು. ಕೂಲಿಯವರು ಲಗೇಜನ್ನು ಎತ್ತಿಕೊಳ್ಳುತ್ತಿರುವಾಗ, ನಾನು ಇವರ ಮೊಣಕೈ ತಿವಿದು, "ನಮ್ಮ ಸೂಟ್‌ಕೇಸ್ ಕಾಣ್ತಾ ಇಲ್ಲ, ಸ್ವಲ್ಪ ವಿಚಾರಿಸ್ತೀರಾ?" ಕೇಳಿದೆ.

"ಇಲ್ಲೇ ಈ ಲಗೇಜಗಳೊಂದಿಗೆ ಇರುತ್ತೆ. ಯಾಕೆ ಅವಾಂತರ ಪಡ್ತೀಯ?"

"ಇಲ್ಲ, ನಾನು ನೋಡ್ತಾನೇ ಇದ್ದೆ. ನಮ್ಮ ಸೂಟ್‌ಕೇಸ್‌ನ್ನು ಇಳಿಸಲೇ ಇಲ್ಲ. ಸ್ವಲ್ಪ ಕಂಡಕ್ಟರ್‌ನ ಕೇಳ್ತೀರಾ!" ಮತ್ತೆ ಹೇಳಿದೆ. ಲಗೇಜುಗಳನ್ನು ಸರಿಸಿ ನೋಡಿ, ನಮ್ಮ ಸೂಟ್‌ಕೇಸ್ ಕಾಣಿಸುತ್ತಿಲ್ಲ ಅಂತ ಅನ್ನಿಸಿದರೂ ನಂಬಲಿಲ್ಲ.

"ನೋಡೋಣ ತಡಿ, ಟ್ಯಾಕ್ಸಿಯೊಳಗೆ ಇಟ್ಟಿರಬಹುದು..." ಎಂದು ಗೊತ್ತು ಮಾಡಿದ್ದ ಟ್ಯಾಕ್ಸಿಯ ಕಡೆಗೆ ನಡೆದರು. ನಾವು ಬಂದಿದ್ದ ಬಸ್ಸು ಡಿಪೋಗೆ ಹೊರಟು ಹೋಗಿತ್ತು. ನಾನು, ನಮ್ಮವರು, ಯಾವುದೋ ಒಂದು ಟ್ಯಾಕ್ಸಿಯನ್ನೇರಿದೆವು. ಸೂಟ್‌ಕೇಸ್ ಕಳೆದು ಹೋಗಿದೆಯೆಂದು ನನ್ನ ಮನಸ್ಸು ಕೆಟ್ಟು ಹೋಗಿತ್ತು.

ಗಂಡಿನವರಿಗಾಗಿ ತೆರವು ಮಾಡಿದ ಬಿಡದಿ ಮನೆಯಲ್ಲಿ ಎಲ್ಲರೂ ಸುಧಾರಿಸಿಕೊಳ್ಳುತ್ತಿರುವಾಗ, ನಾನು ಎಲ್ಲಾ ಲಗೇಜುಗಳನ್ನು ಸರಿಸಿ ಸರಿಸಿ ನೋಡಿದೆ. ಕೆಲವರು ತಮ್ಮ ತಮ್ಮ ಸೂಟ್‌ಕೇಸುಗಳನ್ನು ಎತ್ತಿಕೊಂಡು, ಮುಖ ತೊಳೆದು, ಬಟ್ಟೆ ಬದಲಾಯಿಸುವ ಉತ್ಸಾಹದಲ್ಲಿದ್ದರು.

"ವಲ್ಲೀ ಟವೆಲ್ಲು ಸೋಪು ಕೊಡ್ತೀಯ! ಕೈ ಕಾಲು ತೊಳ್ಕೊಂಡು ಬರ್ತೀನಿ." ನಮ್ಮವರು ಕೇಳಿದಾಗ, ನನ್ನ ಮೈ ನಖ ಶಿಖಾಂತ ಉರಿಯಿತು.

"ಸೂಟ್‌ಕೇಸ್ ಕಾಣ್ತಾ ಇಲ್ಲ, ಅಷ್ಟೊತ್ತಿಂದ ಹೇಳ್ತಾನೇ ಇದೀನಿ. ಎಲ್ಲಿಂದ ತಕ್ಕೊಡ್ಲಿ? ಸೋಪಂತೆ, ಟವೆಲ್ಲಂತೆ" ನಾನೂ ರೇಗಿದೆ.

"ದೊಡ್ಡಮ್ಮ ದೊಡ್ಡಪ್ಪನ ಮೇಲೆ ಯಾಕೆ ರೇಗ್ತೀರಿ? ಇಲ್ಲೇ ಇದೆ ನಿಮ್ಮ ಸೂಟ್‌ಕೇಸು..." ಮೈದುನನ ಮಗ ಮುಗುಳ್ನಗುತ್ತಾ ಮೂಲೆಯಲ್ಲಿ ಅನಾಥನಾಗಿ ಬಿದ್ದಿದ್ದ ಸೂಟ್‌ಕೇಸ್ ಕಡೆ ಕೈ ಮಾಡಿದ. ನಾನು ಓರೆಗಣ್ಣಿನಿಂದ ಅತ್ತ ನೋಡಿದೆ. ಆ ಸೂಟ್‌ಕೇಸ್ ಎಷ್ಟೋ ಹೊತ್ತಿಂದ ಅಲ್ಲೇ ಬಿದ್ದಿತ್ತು.

"ಇದು ನಮ್ಮದಲ್ಲ" ಗಂಭಿರವಾಗಿ ಹೇಳಿದೆ.

"ನಿಮ್ಮದೇ ದೊಡ್ಡಮ್ಮ, ಎಲ್ಲರೂ ಅವರವರ ಲಗೇಜನ್ನು ತೆಗೆದ್ಕೊಂಡು ಹೋಗಿದಾರೆ. ಉಳಿದಿರೋದು ಇದೊಂದೇ. ಇದು ನಿಮ್ಮದೇ ಇರ್ಬೇಕು" ಜಾಣನಂತೆ ನುಡಿದ. ಅಷ್ಟರಲ್ಲಿ ಅವನ ತಾಯಿ ಅಲ್ಲಿಗೆ ಬಂದಳು.

"ಇನ್ನು ಇಲ್ಲೇ ಇದೀರಾ ಅತ್ತಿಗೆಮ್ಮ. ಬೀಗರ ಮನೆಯವರು ಆಗಲೇ ಬಂದು ತಿಂಡಿ ಕಾಫಿಗೆ ಕರೆದು ಹೋದ್ರು. ಬೇಗ ಬೇಗ ಮುಖ ತೊಳೆದು ಬೇರೆ ಸೀರೆ ಉಟ್ಕೊಂಡು ಬನ್ನಿ, ಭಾವ, ನೀವು ಯಾಕೆ ಹೀಗೆ ನಿಂತಿದೀರಾ!"

"ನಮ್ಮ ಸೂಟ್‌ಕೇಸ್ ಕಳೆದು ಹೋಗಿದೆ ಅಂತ ನಿಮ್ಮ ನಾದಿನಿಗೆ ಹೇಳಿ".

"ಆ ಸೂಟ್‌ಕೇಸ್ ನಿಮ್ಮದೇ ಇರ್ಬೇಕು ಅತ್ತಿಗೆಮ್ಮ..." ಇತ್ಲಾಗೆ ಎಳೆದು ಕೊಂಡು, "ಬೀಗದ ಕೈ ಇದೆ ತಾನೆ?"

ನಾನು ಸೂಟ್‌ಕೇಸನ್ನು ಕೆಕ್ಕರಿಸಿ ನೋಡಿದೆ. ಅದಕ್ಕೆ ಚಿಲುಕವೇ ಇರಲಿಲ್ಲ. ಬೀಗ ಹಾಕುವ ಮಾತೆಲ್ಲಿ? ಸ್ವಲ್ಪ ಮುರಿದು ಹೋಗಿದ್ದ ಸೂಟ್‌ಕೇಸ್‌ನಿಂದ, ವಸ್ತುಗಳು ಆಚೆ ಬೀಳದಿರಲೆಂದು ಮೇಲೆ, ಗೋಣಿಚೀಲವನ್ನು ಕಟ್ಟುವ ದಾರದಿಂದ ಕಟ್ಟ ಲಾಗಿತ್ತು. ವಾರಗಿತ್ತಿ ತನ್ನನ್ನು ಹೀಯಾಳಿಸುತ್ತಿರುವಳೆಂದೆನಿಸಿತ್ತು. ನಾನೇ ಬಾಗಿ ಆ ಸೂಟ್‌ಕೇಸನ್ನು ಇತ್ತ ಎಳೆದು, ಮೇಲೆ ಕಟ್ಟಿದ್ದ ಹುರಿಯ ಗಂಟುಗಳನ್ನು ಬಿಚ್ಚಿದೆ. ಸೂಟ್‌ಕೇಸಿನ ಬಾಯಿ ತಾನಾಗಿಯೇ ತೆರೆದು ಕೊಂಡಿತು. ಮೇಲಿನ ಬಾಗಿಲು ಮುರಿದು ಹೋಗಿತ್ತು. ಮೇಲಕ್ಕೆ ಎತ್ತಿದೆ. ಒಳಗಿದ್ದ ವಸ್ತುಗಳನ್ನು ನೋಡಿ ನನ್ನ ಉಸಿರು ನಿಂತಂತಾಗಿತ್ತು. ಒಂದೆರಡು ಹಳೆಯ ಮಡಿ ಸೀರೆಗಳು, ಸ್ನಾನ ಮಾಡಲು

ಉಪಯೋಗಿಸುವ ಒಂದೆರಡು ಚೊಂಬುಗಳು, ಸೋಪು, ಹಲ್ಲು ಪುಡಿ, ಟವೆಲ್ಲು, ವಿಭೂತಿಯ ಡಬ್ಬಿ, ಬಾಚಣಿಗೆ ಪೆಟ್ಟಿಗೆ...

ಮೈದುನನ ಮಗ ನಕ್ಕಂತೆ ಅನ್ನಿಸಿ ಅವನ ಕಡೆ ತಿರುಗಿ ಸಿಟ್ಟಿನಿಂದ ನೋಡಿದೆ. ಕಪಾಳಕ್ಕೆ ಬಾರಿಸಬೇಕೆನ್ನಿಸಿತ್ತು. ನನ್ನ ಹಿಂದೆ ಬಂದು ನಿಂತ, ನನ್ನವರ ಕಡೆ ನೋಡಿ, ಸೂಟ್‌ಕೇಸ್ ಕಡೆ ಕೈ ಮಾಡಿದೆ. "ನಾನು ಸಾವಿರ ಸಲ ಬಡ್ಕೊಂಡೆ... ಟಾಪ್ ಮೇಲೆ ಹಾಕಿಸ್ಬೇಡಿ ಅಂತ. ಯಾರೋ ಸೂಟ್‌ಕೇಸನ್ನು ಅದಲು ಬದಲು ಮಾಡಿದಾರೆ. ನಮ್ಮ ಒಳ್ಳೆಯ ಬಟ್ಟೆಗಳೆಲ್ಲ ಅದರಲ್ಲಿದ್ದವು. ಈಗ ನಾನೇನು ಉಟ್ಕೊಳ್ಳಲಿ! ನಾನು ಮದುವೆಗೆ ಬರಲೇ ಬಾರ್‍ದಾಗಿತ್ತು."

"ಸ್ವಲ್ಪ ಸುಮ್ನಿರು. ಒದರೋದನ್ನ ನಿಲ್ಲಿಸು. ಏನಾಗಿದೆ ಅಂತ ನೋಡೋಣ. ಇದರಲ್ಲಿ ಅವರ ವಿಳಾರ ಇರಬಹುದು. ಯಾರು ಅಂತ ಗೊತ್ತಾಗುತ್ತೆ. ಅವರನ್ನು ಹೋಗಿ ಕೇಳೋಣ. ಬೇಕೂಂತ ಯಾರು ಮಾಡಿರಲ್ಲ. ಅವರೂ ಹುಡುಕ್ತಿರಬಹುದು."

"ಇದರಲ್ಲಿ ಏನಿದೆ ಅಂತ ಹುಡುಕ್ತಾರೆ! ಯಾರೋ ತೀರ್ಥಯಾತ್ರೆಗೆ ಹೋಗಿ ಬಂದೋರ ಸೂಟ್‌ಕೇಸ್ ಇದು. ಗೋಕರ್ಣಕ್ಕೆ ಯಾರದ್ದೋ ತಿಥಿ ಮಾಡಿಸೋಕ್ಕೆ ಹೋಗಿರ್ತಾರೆ... ನೋಡಿದ್ರೆ ಗೊತ್ತಾಗಲ್ವಾ?"

"ಸ್ವಲ್ಪ ಮೆತ್ತಗೆ ಮಾತಾಡು ಮಾರಾಯ್ತಿ. ಎಲ್ರೂ ಬಂದು ಏನಾಯ್ತು ಅಂತ ಕೇಳ್ತಾರೆ".

"ಬರ್ಲಿ ಬಿಡಿ, ಎಲ್ರಿಗೂ ಗೊತ್ತಾಗ್ಲಿ, ನಿಮ್ಮ ತಮ್ಮ ನನಗೆ ಬುದ್ಧಿ ಹೇಳ್ದ. ಒಟ್ನಲ್ಲಿ ನನ್ನ ಗ್ರಹಚಾರ ಚೆನ್ನಾಗಿಲ್ಲ. ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರೆನ್ನುವಂತೆ, ಇಲ್ಲೂ ನನ್ನ ಕರ್ಮ ಬಿಡಲಿಲ್ಲ. ಮೊದಲು ಪೋಲಿಸ್ ಕಂಪ್ಲೆಂಟ್ ಕೊಡಿ..."

"ನಾನು ಈಗ್ಲೇ ಬಸ್‌ಸ್ಟ್ಯಾಂಡ್‌ಗೆ ಹೋಗಿ ವಿಚಾರಿಸ್ತೀನಿ... ಅವರೂ ಬಂದು ಕೇಳಿದ್ರೆ ಯಾರು ಅಂತ ತಕ್ಷಣವೇ ಗೊತ್ತಾಗುತ್ತೆ".

"ಅವರ್‍ಯಾಕೆ ಬರ್ತಾರೆ ಈ ಹಳೇ ವಸ್ತುಗಳನ್ನು ವಾಪಸ್ಸು ತಗೊಂಡು ಹೋಗೋಕೆ"

"ಹಾಗೆಲ್ಲಾ ಮಾತಾಡ್ಬೇಡ. ಎಲ್ಲರೂ ಕೆಟ್ಟವರಾಗಿರಲ್ಲ. ಅಲ್ಲದೇ ತೀರ್ಥ ಯಾತ್ರೆಗೆ ಹೋಗಿ ಬಂದವರು ಬೇರೆಯವರಿಗೆ ಅನ್ಯಾಯ ಮಾಡಲ್ಲ. ನೋಡ್ತಿರು ನಮ್ಮ ಸೂಟ್‌ಕೇಸ್ ನಮಗೆ ವಾಪಸ್ಸು ಸಿಕ್ಕೇ ಸಿಗುತ್ತೆ..."

ಈ ಚರ್ಚೆ ನಡೆಯುತ್ತಿರುವಾಗ, ಎಲ್ಲರಿಗೂ, ಸೂಟ್‌ಕೇಸ್ ಅದಲು ಬದಲಾಗಿರುವ ವಿಷಯ ಎಲ್ಲರಿಗೂ ತಿಳಿಯಿತು. ಒಬ್ಬೊಬ್ಬರು ಒಂದೊಂದು ತರಹ ಮಾತನಾಡುವವರೇ... ಮೈದುನ ಬಂದ. ಆದದ್ದಾಗಿ ಹೋಯ್ತು ಅತ್ತಿಗೆಮ್ಮ. ನಮ್ಮ ಎಚ್ಚರಿಕೇಲಿ ನಾವು ಎಚ್ಚರವಾಗಿರ್ಬೇಕಾಗಿತ್ತು. ಅತ್ತಿಗೆಮ್ಮಂಗೆ ನಿನ್ನದೇ ಸೀರೆ, ರವಿಕೆ ಕೊಡು. ಏಳಿ ಅತ್ತಿಗೆಮ್ಮ, ಮೊದಲು ಕಾಫಿ ತಿಂಡಿ ತಗೊಳ್ಳಿ..." ಎನ್ನುತ್ತಾ ನಮ್ಮಿಬ್ಬರಿಗೂ ಅಲ್ಲಿಯೇ ಕಾಫಿ ತಿಂಡಿಯನ್ನು ತರಿಸಿಕೊಟ್ಟ.

ತಿಂಡಿ ತಿಂದ ನಮ್ಮವರು, ಬಸ್‌ಸ್ಟ್ಯಾಂಡ್‌ಗೆ ಹೊರಟರು. ನಾನು ನನ್ನ ವಾರಗಿತ್ತಿ ಕೊಟ್ಟ, ಅವಳ ಸೀರೆ, ರವಿಕೆಯನ್ನು ತೊಟ್ಟು ಅಲ್ಲಿಯೇ ಉಳಿದೆ. ನನಗೆ ಸಮಾರಂಭ, ಸಂಭ್ರಮ ಯಾವುದೂ ಬೇಕಿರಲಿಲ್ಲ. ಅಸಹಾಯಕತೆಯಿಂದ ಮನಸ್ಸು ಕುಗ್ಗಿತ್ತು.

ವರಪೂಜೆಯ ಕಲಾಪ ಜರುಗಿತ್ತು. ನಾನು ಹೊರಗೆ ಹೋಗದೆ ಒಳಗೇ ಉಳಿದೆ. ಇವರು ಎಲ್ಲೋ ತಿರುಗಾಡಿಕೊಂಡಿದ್ದರು. ಮದುವೆಗೆ ಬಂದ ಉದ್ದೇಶವೇ ತಪ್ಪಿ ಹೋಗಿತ್ತು. ಊಟದ ಹೊತ್ತಿಗೆ ನಮ್ಮವರು ವಾಪಸ್ಸಾಗಿದ್ದರು. ನಮ್ಮಿಬ್ಬರ ಹೊರತು ಬೇರೆಯಾರಿಗೂ ನಮ್ಮ ಸೂಟ್‌ಕೇಸ್ ನೆನಪಿನಲ್ಲಿರಲಿಲ್ಲ.

"ಬಸ್ಸು ಯಾವುದೆಂದು ಪತ್ತೆ ಹಚ್ಚಿ, ಅಲ್ಲಿಯ ಆಫೀಸಿನಲ್ಲಿ ಕಂಪ್ಲೆಂಟ್ ಕೊಟ್ಟು, ಹೇಳಿ ಬಂದಿದೀನಿ... ಮತ್ತೆ ನಾಳೆ ಬೆಳಿಗ್ಗೆ ಹೋಗಿ ನೋಡ್ತೀನಿ". ಇವರು ಹೇಳಿದಾಗ ನಾನು ಮೌನವನ್ನ ವಹಿಸಿದೆ. ಕಳೆದು ಹೋದ ಸೂಟ್‌ಕೇಸ್ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ ಅಂತ ನನಗೆ ತಿಳಿದಿತ್ತು.

ಮಾರನೇ ಬೆಳಿಗ್ಗೆ ಇವರು, ತಮ್ಮ ಕೊಟ್ಟ ಒಗೆದ ಬಟ್ಟೆಗಳನ್ನು ಬಿಟ್ಟು ತಿಂಡಿ ತಿಂದು ಮತ್ತೆ ಬಸ್‌ಸ್ಟ್ಯಾಂಡ್‌ಗೆ ಹೊರಟು ಹೋಗಿದ್ದರು. ನಾನು ಯಾರದ್ದೋ ಸೀರೆ, ಯಾರದ್ದೋ ರವಿಕೆಯನ್ನು ತೊಟ್ಟು,

ಯಾರದ್ದೋ ಕನ್ನಡಿ ಬಾಚಣಿಗೆಯನ್ನು ಉಪಯೋಗಿಸಿ ಅಲಂಕರಿಸಿ ಕೊಂಡು ಹಿಂದೆ ಹಿಂದೆಯೇ ಸರಿದು, ಬೇಗ ಈ ಕಲಾಪಗಳು ಮುಗಿದು ಊರಿಗೆ ವಾಪಸ್ಸು ಹೋಗುವ ಸಮಯ ಯಾವಾಗ ಬಂದೀತೋ ಎಂದು ಕಾಯುತ್ತಿದ್ದೆ. ಮದುವೆಗೆ ಬಂದ ನಮ್ಮ ಕಡೆಯ ನೆಂಟರಿಗೆಲ್ಲ ಸೂಟ್‌ಕೇಸ್ ಕಳೆದು ಹೋದ ವಿಷಯ ತಿಳಿಯಿತು. ಎಲ್ಲರೂ ಅನುಕಂಪದಿಂದ ಮಾತನಾಡುವವರೇ... ಭೂಮಿ ಬಿರಿದು ನಿಂತಲ್ಲಿಯೇ ನನ್ನನ್ನು ಎಳೆದು ಕೊಳ್ಳಬಾರದೇ ಎಂದು ಬಯಸುವಂತಾಗಿತ್ತು. ನನ್ನ ಸ್ಥಿತಿ ಯಾವ ಸಂಭ್ರಮ ದಲ್ಲೂ ಪಾಲುಗೊಳ್ಳಲು ಆಗಲೇ ಇಲ್ಲ.

ಮದುವೆ ಕಲಾಪಗಳೆಲ್ಲ ಮುಗಿದಿದ್ದವು. ಎರಡನೇ ಪಂಕ್ತಿಯ ಊಟದ ಹೊತ್ತಿಗೆ ನಮ್ಮವರು ವಾಪಸ್ಸಾಗಿದ್ದರು. ಬಳಲಿದ್ದ ಅವರ ಮುಖವನ್ನು ಕಂಡೇ ಉತ್ತರ ಏನೆಂದು ತಿಳಿದಿತ್ತು. ಎಲ್ಲರೆದುರಿಗೆ ಕೇಳಲು ಇಷ್ಟವಾಗಲಿಲ್ಲ. ಬರಿ ಗೈಯಲ್ಲಿ ಬಂದಿದ್ದರು.

"ಸೂಟ್‌ಕೇಸ್ ಸಿಕ್ತಾ ಭಾವ?" ನನ್ನ ವಾರಗಿತ್ತಿಯ ತಂಗಿ ಬಂದು ಕೇಳಿದಳು.

"ಇಲ್ಲಮ್ಮ ಕಳೆದು ಹೋದದ್ದು ಅಷ್ಟು ಸುಲಭವಾಗಿ ಹೇಗೆ ಸಿಗುತ್ತೆ? ಕಂಪ್ಲೆಂಟ್ ಕೊಟ್ಟು ಬಂದಿದೀನಿ. ಇದುವರೆಗೂ, ತಮ್ಮ ಸೂಟ್‌ಕೇಸ್ ಅದಲು ಬದಲಾಗಿದೆ ಅಂತ ಯಾರೂ ಬಂದು ಕೇಳಿಲ್ಲವಂತೆ".

ಅಲ್ಲೇ ನಿಂತಿದ್ದ ಯುವತಿ ಒಬ್ಬಳು ಹತ್ತಿರ ಬಂದಳು. ಬಹುಶಃ ಅವಳು ಹೆಣ್ಣಿನ ಕಡೆಯವಳಿರಬೇಕು. ಅವಳಿಗೂ ಸೂಟ್‌ಕೇಸ್‌ನ ವಿಷಯ ತಿಳಿದಿರಬಹುದು. ನಾನು ಅವಳ ಕಡೆಗೆ ತಿರುಗಲಿಲ್ಲ. "ಇವರೂ ಶಿವಮೊಗ್ಗದ ಬಸ್ಸಿನಲ್ಲಿ ಬಂದ್ರಾ? ನಮ್ಮ ಓನರ್ ಮನೆಗೆ ಒಬ್ಬರು ನೆಂಟರು ಬಂದಿದ್ರು, ಅವರ ಸೂಟ್‌ಕೇಸ್‌ನ್ನು ಯಾರೋ ಕದ್ದು ಬಿಟ್ಟಿದಾರೆ ಅಂತ ಮಾತಾಡಿಕೊಳ್ತಿದ್ರು... ಸೂಟ್‌ಕೇಸ್‌ಗೆ ಬೀಗ ಹಾಕಿ ಬಿಟ್ಟಿರೋದ್ರಿಂದ, ಅದರೊಳಗೆ ಏನಿದೆ ಅಂತ ತೆಗೆದು ಕೂಡಾ ನೋಡಲಿಲ್ಲವಂತೆ. ಇವತ್ತು ಅವರ ಊರಿಗೆ ವಾಪಸ್ಸು ಹೊರಟು ಹೋದ್ರು..." ನಾನು ಮೆಲ್ಲಗೆ ಅತ್ತ ತಿರುಗಿದೆ.

"ಅವರು ಯಾವ ಊರಿನವರು?... ಅವರು ಯಾರು ಅಂತ ಅಡ್ರೆಸ್ ಏನಾದ್ರೂ ಗೊತ್ತೇನಮ್ಮ ನಿಂಗೆ?"

"ಇಲ್ಲಾರೀ... ಬೇಕಾದ್ರೆ ಕೇಳಿ ಹೇಳ್ತೀನಿ... ಸಾಯಂಕಾಲ ಮತ್ತೆ ಆರತಕ್ಷತೆಗೆ ಬರ್ತೀವಿ" ಆಗ ಹೇಳ್ತೀವಿ. ಅಷ್ಟರವರೆಗೂ ತಡೆದುಕೊಂಡಿರುವ ಸಹನೆ ನನಗಿರಲಿಲ್ಲ. ನಾನು ನನ್ನವರನ್ನು ಹುಡುಕಿಕೊಂಡು ಹೊರಟೆ. ಇವರು ಊಟಕ್ಕೆ ಕುಳಿತಿದ್ದರು. ಅವರು ಊಟ ಮುಗಿಸುವುದನ್ನೇ ಕಾಯುತ್ತಿದ್ದ ನಾನು, ಅವರೊಡನೆ ಹೇಳಿದೆ. ಇವರು ಕೆಟ್ಟದಾಗಿ ನಕ್ಕರು. 'ಸೊಂಟದ ಮೇಲೆ ಹೊಡೆದ್ರೆ, ದವಡೆ ಹಲ್ಲು ಉದುರ್ತು ಅನ್ನೋ ತರಹ ಇದೆ ನಿನ್ಮಾತು. ಅವರ್‍ಯಾರೋ... ನಾನು ಬಸ್‌ಸ್ಟ್ಯಾಂಡ್‌ನಲ್ಲಿ ಕಂಪ್ಲೆಂಟ್ ಕೊಟ್ಟಿದೀನಲ್ಲ..."

"ನಾನು ಹಾಗೆಲ್ಲಾ ಯಾರ್‍ಯಾರ ಮನೆಗೋ ಹೋಗಲ್ಲ. ಅವರೇ ನಂದ್ಕೊಳ್ತಾರೆ!"

"ಹಾಗಾದ್ರೆ ನಾನೇ ಹೋಗಿ ನೋಡ್ತೀನಿ."

"ಸರಿ, ನಿಂದೇ ನಿಂಗೆ... ಆ ಹುಡ್ಗೀ ಹತ್ರ ಅಡ್ರೆಸ್ ಇಸ್ಕೋ ನಾನೇ ಹೋಗ್ತೀನಿ" ಎನ್ನುತ್ತಾ ಕೈ ಒರೆಸಿಕೊಂಡು, ವಿಳ್ಳೆದೆಲೆ, ಅಡಿಕೆಯನ್ನು ಹಾಕಿಕೊಂಡು ಮತ್ತೆ ಹೊರಡಲು ಸಿದ್ಧರಾದರು. ನಾನು ಆ ಹುಡುಗಿಯನ್ನು ಹುಡುಕಿಕೊಂಡು ಹೊರಟೆ. ಅವಳು ಊಟಕ್ಕೆ ಕುಳಿತ್ತಿದ್ದಳು. ಅವಳನ್ನು ಸಮೀಪದ, ಅಡ್ರೆಸ್‌ನ ಕೇಳಿದೆ.

"ಊಟ ಆದ್ಮೇಲೆ ನಾನು ಮನೆಗೆ ಹೋಗ್ತೀನಿ. ನನ್ನ ಜೊತೆಗೆ ಮಾವನೂ ಬರಲಿ" ಎಂದಳು. ಈಗ ಅವಳ ಊಟ ಮುಗಿಯುವುದನ್ನೇ ಕಾಯುತ್ತಾ ನಿಂತೆ. ಛತ್ರದ ಬಾಗಿಲಿನಲ್ಲಿ ಸಿಕ್ಕ ಆಟೋರಿಕ್ಷಾ ಹಿಡಿದು ಅವರುಗಳು ಅತ್ತ ಹೊರಟ ಮೇಲೆ, ನಾನು ಒಳಗೆ ಬಂದದ್ದು.

"ಅತ್ತಿಗೆಮ್ಮ ನೀವಿನ್ನು ಊಟ ಮಾಡಿಲ್ವಂತೆ. ಹೊಟ್ಟೆ ಹಸಿದ್ಕೊಂಡಿದ್ರೆ ಸೂಟ್‌ಕೇಸ್ ಸಿಕ್ಕಿ ಬಿಡುತ್ತಾ! ಅಣ್ಣ ಎಲ್ಲಿ?... ಹುಡುಗಿಯನ್ನು ಒಪ್ಪಿಸಿ ಕೊಡುವ ಸಮಯ ಆಗಿದೆ. ಎಲ್ರನ್ನು ಬೀಗರು ಬರುವಂತೆ ಹೇಳಿ ಕಳಿಸಿದಾರೆ" ಮೈದುನನೆಂದ

"ಸೂಟ್‌ಕೇಸ್ ಸಿಗೋವರ್‍ಗೂ ಸಮಾಧಾನ ಎಲ್ಲಿ! ಅವರು ಈಗ್ತಾನೇ

ಹೊರಗೆಲ್ಲೋ ಹೋದ್ರು".

"ಅಂತೂ ಮದುವೆ ಮನೇಲಿ ಒಂದು ಗಳಿಗೆ ನೆಮ್ಮದಿಯಿಂದ ಕೂರಕ್ಕೆ ಅವನನ್ನು ಬಿಡಲಿಲ್ಲ ನೀವು. ಅಲೀತಾನೆ ಇದಾನಂತೆ".

"ಮತ್ತೇನ್ಮಾಡ್ತಾರೆ? ಕಳೆದಿರೋದು ನಮ್ಮ ಸೂಟ್‌ಕೇಸ್... ಬೇರೆ ಯಾರು ಹುಡುಕಿ ಕೊಡ್ತಾರೆ?"

"ನನಗೆ ಬಿಡುವಿದ್ದಿದ್ರೆ ನಾನೇ ಓಡಾಡ್ತಿದ್ದೆ... ನಾನು ಇಲ್ಲಿ ಇಲ್ಲದೇ ಇದ್ರೆ ಹೇಗೆ ನಡೆಯುತ್ತೆ ನೀವೇ ಹೇಳಿ..."

"ಅದು ನಿಜ... ನಾನು ನಿನ್ನನ್ನ ಆಕ್ಷೇಪಿಸಲಿಲ್ಲ. ನಮ್ಮ ಗ್ರಹಚಾರಕ್ಕೆ ನೀನೇನು ಮಾಡ್ತೀಯ! ಹೋಗು ಕೆಲಸ ನೋಡು ಹೋಗು..." ಅವನನ್ನು ಅತ್ತ ಕಳಿಸಿ, ನಾನು ಊಟದ ಮನೆಗೆ ಬಂದು ಊಟದ ಶಾಸ್ತ್ರವನ್ನು ಮುಗಿಸಿ, ಎಲೆ ಅಡಿಕೆ ಹಾಕಿಕೊಂಡು ಇವರ ದಾರಿಯನ್ನೇ ಕಾಯುತ್ತಾ ಕುಳಿತೆ.

"ದೊಡ್ಡಮ್ಮ ಬನ್ನಿ. ಅಮ್ಮ ಕರೀತಿದಾಳೆ... ಅತ್ತಿಗೇನ ಮನೆ ತುಂಬಿಸಿ ಕೊಳ್ಳೋ ಶಾಸ್ತ್ರ ನಡೀತಿದೆ. ಆರತಿ ಎತ್ತಬೇಕಂತೆ. ಹಾಡು ಹೇಳಬೇಕಂತೆ" ಮೈದುನನ ಮಗಳು ಬಂದು ಬಲವಂತವಾಗಿ ಕರೆದೊಯ್ದಳು. ಯಾಂತ್ರಿಕ ವಾಗಿ ಹಾಡನ್ನು ಹೇಳಿಕೊಂಡು ಆರತಿ ಎತ್ತಿದೆ. ಆರತಿಯ ತಟ್ಟೆಗೆ ಹಾಕಿದ್ದ ಕಾಸನ್ನು ಎಣಿಸಿ, ಅರ್ಧದಷ್ಟನ್ನು ನನ್ನ ಕೈಗಿತ್ತರು. ಎಷ್ಟಿದೆ ಅಂತ ನೋಡುವ ಕುತೂಹಲ ಕೂಡಾ ನನಗಿರಲಿಲ್ಲ, ಸೆರಗಿನ ತುದಿಯಲ್ಲಿಟ್ಟು ಗಂಟು ಹಾಕಿದೆ. ಮನೆ ತುಂಬಿಸಿಕೊಡುವ ಹಾಡನ್ನು ಹೇಳಿ... ಯಾರೋ ಒತ್ತಾಯಿಸಿದರು.

"ಪಾಪ, ಅತ್ತಿಗೆಮ್ಮನಿಗೆ ಬಹಳ ಬೇಜಾರಾಗಿದೆ. ಅವರ ಸೂಟ್‌ಕೇಸ್ ಕಳೆದು ಹೋಗಿದೆಯಲ್ಲ. ಅವರ ಸೀರೆ ಬಟ್ಟೆ ಎಲ್ಲಾ ಅದರಲ್ಲೇ ಇತ್ತಂತೆ" ವಾರಗಿತ್ತಿ ಎಂದಳು.

"ಸಧ್ಯ ಒಡವೆ ಏನನ್ನೂ ಇಟ್ಟಿರಲಿಲ್ಲ ತಾನೇ?... ಈಗಂತೂ ಚಿನ್ನದ ಬೆಲೆ ಆಪಾಟಿ ಆಗಿದೆ..." ನಾನು ಉತ್ತರಿಸುವ ಗೋಜಿಗೆ ಹೋಗಲಿಲ್ಲ.

"ದೊಡ್ಡಪ್ಪ ಬಂದ್ರು... ನಿಮ್ಮನ್ನು ಕರೀತಿದಾರೆ..." ಮೈದುನನ ಮಗ ಬಂದು ಹೇಳಿದ. ನಾನು ಸರಕ್ಕನೇ ಎದ್ದು ಬಂದು, ಅವರ ಕೈಗಳನ್ನೇ

ನೋಡಿದೆ. ಅವರ ಕೈಯಲ್ಲಿ ಸೂಟ್‌ಕೇಸ್ ಇರಲಿಲ್ಲ ಏನು ಎಂಬಂತೆ, ಕೈಯಲ್ಲೇ ಪ್ರಶ್ನಿಸಿದೆ...

ಈ ಸೂಟ್‌ಕೇಸ್ ಅವರದ್ದೇ. ಅವರು ಗೋಕರ್ಣಕ್ಕೆ ಹೋಗಿದ್ದರಂತೆ. ಶಿವಮೊಗ್ಗಾದ ಮುಖಾಂತರ ವಾಪಸ್ಸು ಇದೇ ಬಸ್ನಲ್ಲಿ ಬಂದಿದಾರೆ...

"ಅದ್ಸರಿ ನಮ್ಮ ಸೂಟ್‌ಕೇಸ್ ಎಲ್ಲಿ? ಕೊಡ್ಲಿಲ್ವಾ?..."

"ಅವರು ಬೆಳಿಗ್ಗೆ ವಾಪಸ್ಸು ಊರಿಗೆ ಹೊರಟು ಹೋದ್ರಂತೆ. ತಮ್ಮ ಜತೇನೇ ತಗೊಂಡು ಹೋದ್ರಂತೆ. ಅಡ್ರೆಸ್ ಕೊಟ್ಟಿದಾರೆ. ನಾನೀಗ್ಲೇ ಹೊರಡ್ತೀನಿ. ನಿನ್ಹತ್ರ ದುಡ್ಡಿದ್ರೆ ಕೊಡು ಟಿಕೆಟ್ಟಿಗೆ ಎಷ್ಟಾಗುತ್ತೋ...?"

"ಇಲ್ಲೇ ಬಿಟ್ಟು ಹೋಗಿದ್ದಿದ್ರೆ ಅವರ ಗಂಟೇನು ಹೋಗ್ತಿತ್ತು? ಈ ಸೂಟ್‌ಕೇಸ್ನಲ್ಲಿ ಇರೋದು ಅಷ್ಟರಲ್ಲೇ ಇದೆ. ಯಾವೂರಂತೆ? ಎಷ್ಟು ದೂರ...!"

"ಕದ್ರಿ ಅಂತ... ಆಂಧ್ರಪ್ರದೇಶದಲ್ಲಿದೆ... ಅಲ್ಲಿಂದ ಬಂದಿದಾರೆ. ಅವರಿಗೂ ಜವಾಬ್ದಾರಿ ಇರಲ್ವಾ?... ಮದುವೆ ಮನೆಗೆ ಬಂದವರ ಸೂಟ್‌ಕೇಸೇ ಇರ್ಬೇಕು... ಕ್ಲೀನರ್ ಇಳಿಸಿ, ಬಸ್ಸು ಅತ್ತ ಹೋದ್ಮೇಲೆ ಗೊತ್ತಾಯ್ತು. ಯಾವೂರಿನವರು? ಯಾವ ಛತ್ರ ಅಂತ ಒಂದೂ ಗೊತ್ತಿರ್ಲಿಲ್ಲ. ಏನ್ಮಾಡೋದು ಅಂತ ತಿಳಿದೇ ನಮ್ಮ ಜತೇಲೇ ತಗೊಂಡು ಬಂದೆವು. ಪೇಪರ್ನಲ್ಲಿ ಪ್ರಕಟಣೆ ಹಾಕ್ಸಿ ಅಂತ ಇವರಿಗೆ ಹೇಳಿದ್ರಂತೆ. ಅಷ್ಟರಲ್ಲೇ ಪತ್ತೆಯಾಯ್ತು ನೋಡು."

"ಎಂಥಾ ಜನ? ನಮಗೆ ತೊಂದ್ರೆ ಆಗುತ್ತೆ ಅಂತಲಾದ್ರೂ ತಿಳೀ ಬೇಡ್ವಾ ಅವರಿಗೆ?"

"ತಿಳಿದ್ರೆ ತಾನೇ ಏನ್ಮಾಡ್ತಾರೆ?... ಯಾರ ಕೈಯಲ್ಲೋ ಕೊಟ್ಟು, ಎಲ್ಲೋ ಬಿಟ್ಟು ಹೋಗುವಂತ ಜನ ಅಲ್ಲ ಅವರು. ಅಲ್ಲದೇ ಅವರ ಸೂಟ್‌ಕೇಸ್ ನಮ್ಮ ಹತ್ತಿರ ಇದೆಯಲ್ಲ. ಅದೂ ಅವರಿಗೆ ತಲುಪಬೇಕಲ್ಲ."

"ಏನಿದೆ ಅದರಲ್ಲಿ? ಎರಡು ಹಿತ್ತಾಳೆ ಚೊಂಬುಗಳು. ಇದನ್ನು ನೀವಾಗಿಯೇ ಕೊಡುಕ್ಕೆ ಹೋಗ್ಬೇಕು. ಖರ್ಚೂ ನಮ್ಮದು, ಶ್ರಮವೂ ನಮ್ಮದು... ಜೊತೆಗೆ ಈ ನಗೆ ಪಾಟಲು..."

"ಸರಿ, ಮಾತಾಡ್ತಾನೆ ನಿಂತ್ಕೋಬೇಡ. ದುಡ್ಡು ಕೊಡು". ನಾನು ಕೈ ಚೀಲದಲ್ಲಿ ಜೋಡಿಸಿಟ್ಟುಕೊಂಡಿದ್ದ ಗರಿ ಗರಿಯಾದ ಕೆಲವು ನೋಟು ಗಳನ್ನು ಎಣಿಸಿಕೊಟ್ಟೆ.

"ಈ ಸಮಯದಲ್ಲೂ ಚೌಕಾಸಿ ಮಾಡ್ಬೇಡ. ಎಷ್ಟಿದೆಯೋ ಅಷ್ಟನ್ನು ಕೊಡು. ನೀನು ಇವರುಗಳ ಜೊತೆ ಊರಿಗೆ ವಾಪಸ್ಸು ಹೋಗು. ನಾನು ಅಲ್ಲಿಂದ ಸೀದಾ ಹಾಗೇ ಬರ್ತೀನಿ" ಎಂದು ಹೇಳಿ, ನನ್ನ ಕೈಯಿಂದ ನೋಟುಗಳನ್ನು ಕಸಿದುಕೊಂಡು, ತಮ್ಮ ಷರಟಿನ ಜೇಬಿನೊಳಕ್ಕೆ ಇಳಿ ಬಿಟ್ಟರು.

"ಇಷ್ಟೇ ದುಡ್ಡು ಇರೋದು. ಜೋಪಾನ ನೋಡ್ಕೊಂಡು ಖರ್ಚು ಮಾಡಿ" ಮರೆಯದೇ ಹೇಳಿದೆ.

"ನಂಗೆಲ್ಲಾ ಗೊತ್ತು, ನೀನು ತೆಪ್ಪಗಿರು" ಎಂದು ನನ್ನನ್ನೇ ದಬಾಯಿಸಿ ತಮ್ಮನನ್ನು ಹುಡುಕಿಕೊಂಡು ಹೊರಟರು. ಕೆಲವೇ ನಿಮಿಷಗಳಲ್ಲಿ ಆ ಹಳೆಯ ಸೂಟ್‌ಕೇಸ್‌ನ್ನು ಹಿಡಿದು, ಒಂದು ಆಟೋ ಹತ್ತಿ ಬಸ್ ನಿಲ್ದಾಣದ ಕಡೆಗೆ ಹೊರಟರು.

ಮಾರನೇ ದಿನ, ನಾನು ದಿಬ್ಬಣದವರೊಂದಿಗೆ ಊರಿಗೆ ವಾಪಸ್ಸು ಬಂದೆ. ಮನೆಯ ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆದು, ಒಳ ಬಂದು, ಹಾಗೇ ಸುಮ್ಮನೆ ಕುಳಿತೆ– ಸೂಟ್‌ಕೇಸ್ ಸಿಕ್ಕುತ್ತೋ ಇಲ್ಲವೋ... ಪರಿಚಯವಿಲ್ಲದ ಊರಿನಲ್ಲಿ ಇವರು ಎಲ್ಲಿ ತಿರುಗಾಡುತ್ತಿದಾರೋ... ಯಾವಾಗ ವಾಪಸ್ಸು ಬರುತ್ತಾರೋ... ಅದೇ ಚಿಂತೆ...

ಮತ್ತೊಂದು ರಾತ್ರಿ ಅದೇ ಚಿಂತೆಯಲ್ಲಿ ಕಳೆಯಿತು. ಎಂದೂ ಒಬ್ಬಳೇ ಇದ್ದವಳಲ್ಲ. ಬೆಳಗಾಗುವುದನ್ನೇ ಎದುರು ನೋಡುತ್ತಾ ಮಲಗಿದ್ದೆ. ಇನ್ನು ಸ್ವಲ್ಪ ಕತ್ತಲು ಕತ್ತಲಾಗಿರುವಾಗಲೇ ಕಾಲಿಂಗ್ ಬೆಲ್ ಸದ್ದು ಮಾಡಿತು. ಅನುಮಾನಿಸುತ್ತಾ ಬಾಗಿಲು ತೆರೆದೆ. ಎದುರಿಗೆ ಇವರು ನಿಂತಿದ್ದರು. ಕೈಯಲ್ಲಿ ನಮ್ಮ ಸೂಟ್‌ಕೇಸ್! ಗೆಲುವು ಸಾಧಿಸಿದವರಂತೆ, ಒಳಗೆ ಬಂದರು, " ತಗೋ ನಿನ್ನ ಸೂಟ್‌ಕೇಸ್... ಎಲ್ಲಾ ಸರಿಯಾಗಿದೆಯಾ ನೋಡ್ಕೋ... ಹಾಗೇ ಇದು ಕದ್ರಿ ನರಸಿಂಹ ಸ್ವಾಮಿ ದೇವಸ್ಥಾನದ ಪ್ರಸಾದ..." ಎನ್ನುತ್ತ

ತಮ್ಮ ಕೈ ಚೀಲವನ್ನು ನನ್ನ ಕೈಗಿತ್ತರು. ನನಗೆ ಸಂತಸದಿಂದ ಮಾತುಗಳೇ ಹೊರಡದಾಗಿತ್ತು.

ಮುಖ ತೊಳೆದು ಬಂದು, ಇಬ್ಬರಿಗೂ ಕಾಫಿ ಬೆರೆಸಿದೆ. ಬಿಸಿ ಬಿಸಿ ಕಾಫಿ ಕುಡಿದ ನಂತರ, ಇವರು ತಮ್ಮ ಯಾತ್ರೆಯ ವರ್ಣನೆ ಮಾಡಿದರು. "ಎಂಥಾ ಒಳ್ಳೆ ಜನ ಅಂತೀಯ ನನ್ನನ್ನು ತುಂಬಾ ಆದರದಿಂದ ಮಾತನಾಡಿಸಿ ಉಪಚರಿಸಿದರು. ಅವರ ಮನೆ ಹುಡುಕೋದು ಸ್ವಲ್ಪ ಕಷ್ಟವೇ ಆಯ್ತು. ಹತ್ತಿರದಲ್ಲೇ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನ ಇತ್ತು. ಸ್ನಾನ ಮಾಡಿಕೊಂಡು ಹೋಗಿ, ದೇವರ ದರ್ಶನ ಮಾಡಿದೆ. ನನಗೋಸ್ಕರ ಸಿಹಿ ಅಡಿಗೆ ಮಾಡಿದ್ದರು. ನಮ್ಮಿಂದ ತಪ್ಪಾಯಿತು ಅಂತ ಕ್ಷಮೆ ಕೇಳಿದ್ರು."

"ಯಾಕೆ ಹೀಗ್ಮಾಡಿದ್ರಿ ಅಂತ ನೀವು ಕೇಳ್ಬೇಕಾಗಿತ್ತು".

"ಅವರಿಗೆ ಬೇರೆ ಯಾರ ಮೇಲೂ ನಂಬಿಕೆ ಇರಲಿಲ್ಲ ಅಂತ ಕಾಣುತ್ತೆ. ಸೂಟ್‌ಕೇಸ್‌ನಲ್ಲಿ ಬೆಲೆ ಬಾಳುವ ಬಟ್ಟೆಗಳಿರಬಹುದು ಅಂತ ಅಂದುಕೊಂಡು ತಮ್ಮ ಜೊತೆಯಲ್ಲೇ ತೆಗೆದುಕೊಂಡು ಹೋಗಿದಾರೆ. ನಮ್ಮ ವಸ್ತು ನಮಗೆ ಸಿಕ್ತಲ್ಲ. ಇನ್ನು ನಿನ್ನ ಆಕ್ಷೇಪಣೆ ಏನು!"

"ವಸ್ತು ಏನೋ ಸಿಕ್ತು. ಆದರೆ ಎಂಥಾ ಹೀನಾಯ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಯ್ತು? ಯಾರ್ಗೂ ಇಲ್ಲದ್ದು ನಮಗೆ ಹೀಗೇ ಆಗ್ಬೇಕಾ?..."

"ಏನ್ಮಾಡ್ತೀಯ ಕರ್ಮ ಕರ್ಮ... ಅನುಭವಿಸೇ ತೀರ್ಬೇಕು..."

"ನೀವು ಸ್ವಲ್ಪ ಎಚ್ಚರಿಕೆಯಿಂದ ಇದ್ದಿದ್ರೆ ಹೀಗಾಗ್ತಿರ್ಲಿಲ್ಲ. ಗಿಣಿಗೆ ಹೇಳಿದ ಹಾಗೆ ಹೇಳಿದ್ದೆ, ಸೂಟ್‌ಕೇಸ್‌ನ ಟಾಪ್ ಮೇಲೆ ಹಾಕ್ಬೇಡಿ ಅಂತ, ನನ್ನ ಮಾತನ್ನು ಯಾರು ಕೇಳ್ಲಿಲ್ಲ".

"ನಂಗೇನ್ಗೊತ್ತಿತ್ತೆ ಹೀಗಾಗುತ್ತೆ ಅಂತ..." ಕೀರಲು ದನಿಯಲ್ಲಿ ಹೇಳಿದರು.

"ಒಟ್ನಲ್ಲಿ ನಗೆಪಾಟಲಿಗೆ ಈಡಾದವಳು ನಾನು. ಭಾರಿ ಸೀರೆಗಳಂತೂ ಇರ್ಲಿಲ್ಲ. ಇದ್ದ ಸೀರೇನ ಉಟ್ಕೊಳ್ಳೋ ಭಾಗ್ಯ ಇರ್ಲಿಲ್ಲ. ನಿಮ್ಮ ನಾದಿನಿ ಕೊಟ್ಟ ಯಾವುದೋ ಸೀರೆ, ಅಳ್ಳಕವಾದ ಯಾವುದೋ ರವಿಕೆ... ಗತಿ

ಇಲ್ಲದೋಳ ಥರ ಎಲ್ಲೋ ನಿಂತ್ಕೊಂಡು, ಎಲ್ಲೋ ಕೂತ್ಕೊಂಡು ಕಳೆದದ್ದಾಯ್ತು. ಇದಕ್ಕಿಂತ ಹೀನ ಸ್ಥಿತಿ ಬೇಕಾ?...

"ಆದದ್ದಾಯ್ತು. ಇನ್ನು ಅದನ್ನೇ ಹಾಡ್ತಾ ಕೂತ್ಕೋಬೇಡ. ಸೂಟ್‌ಕೇಸ್‌ನ ಬೀಗ ತೆಗಿ. ನಿನ್ನ ತಂಗಿಗೆ ಅಂತ ತಂದಿರೋ ಸೀರೇನ, ಜೊತೆಗೆ ಪಂಚೆಯನ್ನು ಇಬ್ಬರಿಗೂ ಕೊಟ್ಟು ಬರೋಣ".

"ನಾನು ಬರಲ್ಲ, ನೀವು ಬೇಕಾದ್ರೆ ಹೋಗ್ಬನ್ನಿ".

"ಸರಿ. ನಿನ್ನ ಹಣೇ ಬರಹ. ಹಾಗೇ ದೇವರ ಪ್ರಸಾದವನ್ನು ಸ್ವಲ್ಪ ತೆಗೆದುಕೊಡು, ಅದನ್ನು ಕೊಡ್ತೀನಿ" ಎನ್ನುತ್ತ ಸ್ನಾನ ಮಾಡಲೆಂದು ಎದ್ದರು. ನಾನು ಬೀಗ ತೆಗೆದೆ. ಎಲ್ಲವೂ ಹೇಗೆ ಇಟ್ಟಿತ್ತೋ ಹಾಗೆಯೇ ಇದ್ದಿತು. ಆದರೂ ಮನಸ್ಸು ಕುಗ್ಗಿದ್ದು, ಹಿಗ್ಗಲಿಲ್ಲ ಯಾಕೆ ಹೀಗಾಯ್ತು ಎನ್ನುವುದು ಅರ್ಥಕ್ಕೆ ಸಿಗಲಿಲ್ಲ.

***

೨೩. ಗಣಪತಿ ಪ್ರರಿಪತ

ಗಣಪತಿಯನ್ನು, ಗಣೇಶ ಚತುರ್ಥಿಯಂದು, ಮಂಟಪವನ್ನು ಕಟ್ಟಿ ಅದರಲ್ಲಿ ಕೂರಿಸಿ, ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪನ, ಷೋಡಶೋಪಚಾರ ಗಳಿಂದ ಪೂಜಿಸಿ, ಅವರವರ ಅನುಕೂಲಕ್ಕೆ ತಕ್ಕಂತೆ, ಒಂದು ದಿನ, ಮೂರು ದಿನ, ಐದು ದಿನ ಹೀಗೆ ಮನೆಯಲ್ಲಿಟ್ಟುಕೊಂಡು ಎರಡೂ ಹೊತ್ತು ಪೂಜೆ, ನೈವೇದ್ಯ ಮಂಗಳಾರತಿಯನ್ನು ಅನುಸರಿಸುವುದು ಅವರವರ ಪದ್ಧತಿ.

ವರಸಿದ್ಧಿ ವಿನಾಯಕನ ವ್ರತ ಎಂದರೆ, ಪೂಜೆಯನ್ನು ಮಾಡಿಸಲು ಬಲ್ಲವರು, ಕರೆದವರ ಮನೆಗೆ ಹೋಗಿ ಪೂಜೆ ಮಾಡಿಸುವುದು ನಿಯಮ ವಿದ್ದ ಕಾಲ. ಈಗ, ಪುಸ್ತಕವನ್ನೋ, ಕ್ಯಾಸೆಟ್ಟನ್ನೋ ಇಟ್ಟುಕೊಂಡು, ಪೂಜೆ ಯನ್ನು ಮಾಡುವ ಪದ್ಧತಿ ಜಾರಿಗೆ ಬಂದಿದೆ. ಹಿಂದೆ ಹಾಗಿರಲಿಲ್ಲ. ಎಷ್ಟು ಹೊತ್ತಾದರೂ ಸರಿ, ಶಾಸ್ತ್ರಿಗಳು ಮನೆಗೆ ಬಂದು ವ್ರತವನ್ನು ಮಾಡಿಸುವವರೆಗೂ ಮನೆಮಂದಿಯೆಲ್ಲಾ ಸಹನೆಯಿಂದ ಕಾಯುತ್ತಿದ್ದರು.

ಅಂಥ ಒಂದು ಸಂದರ್ಭದಲ್ಲಿ, ಒಬ್ಬರ ಮನೆಗೆ ಒಬ್ಬರು ಶಾಸ್ತ್ರಿಗಳು ಬರಬೇಕಾಗಿತ್ತು. ಪೂಜೆಗಾಗಿ ಎಲ್ಲವೂ ಸಿದ್ಧವಾಗಿತ್ತು. ಎಷ್ಟು ಹೊತ್ತಾದರೂ, ಶಾಸ್ತ್ರಿಗಳು ಬರದೇ ಇದ್ದಾಗ, ಅವರ ಮನೆಯ ಹುಡುಗನೊಬ್ಬ ಸೈಕಲನ್ನೇರಿ ಅವರ ಮನೆಯ ಕಡೆಗೆ ನಡೆದ. ಮೊಬೈಲ್ ಫೋನಾಗಲೀ, ಮೋಟಾರ್ ಬೈಕ್ ಆಗಲಿ, ಇರದಿದ್ದ ಕಾಲವದು. ಈಗಿನಂತೆ, ಕಾರು ಇದ್ದಿದ್ದರೆ, ಕಾರಿನಲ್ಲಿ ಕರೆದುಕೊಂಡು ಬಂದು, ಕಾರಿನಲ್ಲೇ ವಾಪಸ್ಸು ಬಿಟ್ಟು ಬರಬಹುದಾಗಿತ್ತು.

ಈ ಹುಡುಗ ಸೈಕಲ್ಲಿನಿಂದ ಇಳಿದು, ಮನೆಯೊಳಗೆ ಬಂದ. ಶಾಸ್ತ್ರಿಗಳು ಮನೆಯಲ್ಲಿರಲಿಲ್ಲ. ಎಲ್ಲಿಗೋ ಹೋಗಿದ್ದವರು ಇನ್ನು ಹಿಂತಿರುಗಿರಲಿಲ್ಲ. ಅವರ ಪತ್ನಿ ಅಲ್ಲಿಯೇ ಕುಳಿತಿದ್ದ ಮತ್ತೊಬ್ಬ ಹುಡುಗನನ್ನು ಈ ಹುಡುಗನ ಜತೆಯಲ್ಲಿ ಕಳಿಸಿಕೊಡಲು ಅನುವಾದರು. "ಇವನೂ ನಮ್ಮವನೇ, ಉಪನಯನ ಆಗಿದೆ. ಪೂಜಾ ವಿಧಾನ, ಮಂತ್ರ ಎಲ್ಲಾ ಗೊತ್ತು. ಚೆನ್ನಾಗಿ ಪೂಜೆ ಮಾಡಿಸುತ್ತಾನೆ. ಇವರು ಯಾವಾಗ ಬರ್ತಾರೋ ಎಷ್ಟು ಹೊತ್ತಾಗುತ್ತೊ... ಸುಮ್ಮನೆ ಯಾಕೆ ಕಾಯಬೇಕು. ಇವನನ್ನು ಕರೆದುಕೊಂಡು ಹೋಗು" ಎಂದು ಹೇಳಿ, ಆ ಹುಡುಗನೊಡನೆ ಮಾತನಾಡಿ, ಇವನೊಡನೆ ಕಳಿಸಿಕೊಟ್ಟರು. ಈ ಹುಡುಗ, ತನಗಿಂತ ಚಿಕ್ಕವನಾಗಿದ್ದ ಹುಡುಗನನ್ನು ಸೈಕಲ್ಲಿನ ಕ್ಯಾರಿಯರ್ ಮೇಲೆ ಕೂರಿಸಿಕೊಂಡು ಮನೆಗೆ ಕರೆತಂದ.

ಶಾಸ್ತ್ರಿಗಳನ್ನು ನಿರೀಕ್ಷಿಸಿದ್ದ ಮನೆಯವರು, ಈ ಬಾಲಕನನ್ನು ಕಂಡು, ಹುಬ್ಬೇರಿಸಿದರು. ಅವರ ಮನೆಯ ಹುಡುಗ, ವಿಷಯವನ್ನು ತಿಳಿಸಿದ. ಸ್ವಲ್ಪ ಮಟ್ಟಿಗೆ ಎಲ್ಲರ, ಉತ್ಸಹ ಕಡಿಮೆ ಆಗಿತ್ತು. ಘಟಾನುಘಟಿ ಶಾಸ್ತ್ರಿಗಳೇ ಮಂತ್ರವನ್ನು ಹೇಳುವಾಗ ಒಮ್ಮೊಮ್ಮೆ ತಡವರಿಸುತ್ತಾರೆ. ಅಂಥಾದ್ದರಲ್ಲಿ ಈ ಬಾಲಕನಿಗೆ ಪೂಜೆ ಮಾಡಿಸುವ ಅನುಭವ ಇದೆಯೋ ಇಲ್ಲವೋ ಎಂಬ ಅನುಮಾನವನ್ನು ವ್ಯಕ್ತಪಡಿಸಿದರು.

ಹುಡುಗ ಬಂದುದಾಗಿದೆ. ಶಾಸ್ತ್ರಿಗಳ ಪತ್ನಿಗೆ ಅಷ್ಟೂ ಜವಾಬ್ದಾರಿ ಇರಲ್ಲವೆ? ಹಾಗೆಲ್ಲಾ ಯಾರ್ಯಾರನ್ನೋ ಕಳಿಸಿ ಬಿಡ್ತಾರಾ ಎಂದು ತಮಗೆ ತಾವೇ ಹೇಳಿಕೊಂಡು, ಪೂಜೆಗೆ ಗಂಡಸರು ಕುಳಿತರು. ಕೈ ಕಾಲು ತೊಳೆದು ಬಂದು, ಆಚಮನವನ್ನು ಮಾಡಿ, ಕೃಷ್ಣಾಜಿನರ ಮೇಲೆ ಕುಳಿತ ಆ ಹುಡುಗ, ಘಂಟಾನಾದದೊಂದಿಗೆ, ಮಂತ್ರವನ್ನು ಹೆಳುತ್ತಾ ಪೂಜೆಯನ್ನು ಪ್ರಾರಂಭಿಸಿದ. ಪೂಜೆ ಮಾಡುತ್ತಿದ್ದವರು, ಈ ಹುಡುಗನಿಗಿಂತ ದೊಡ್ಡವ ರಾದುದರಿಂದ, ಈ ಹುಡುಗನ ಬಗ್ಗೆ ಹಗುರವಾದ ಭಾವನೆ. ಮಧ್ಯೆ ಮಧ್ಯೆ ಹುಡುಗನನ್ನು ಚುಡಾಯಿಸುತ್ತಾ, ಹಾಸ್ಯವಾಗಿ ಮಾತನಾಡುತ್ತಾ ಪೂಜೆ ಮಾಡುತ್ತಿದ್ದರು.

ಈ ಹುಡುಗನಿಗೆ ಅವಮಾನವಾದಂತಾಗಿತ್ತು. ಮುಖ ಕೆಂಪಾಗಿತ್ತು.

ಆದರೂ, ಮಂತ್ರದಲ್ಲಾಗಲೀ, ವಿಧಾನದಲ್ಲಾಗಲೀ ಯಾವ ಲೋಪವನ್ನು ಮಾಡದೇ ಷೋಡಶೋಪಚಾರದ ಪೂಜೆಯನ್ನು ಸವಿಸ್ತಾರವಾಗಿ ಮಾಡಿಸಿ, ಮಂಗಳಾರತಿಯನ್ನು ಮಾಡಿಸಿ, ಪೂರ್ಣಗೊಳಿಸಿದ.

ಪೂಜೆ ಮಾಡಿಸಿದ ಹುಡುಗನಿಗೆ, ದಕ್ಷಿಣೆಯನ್ನು ಕೊಟ್ಟು, "ಶಾಸ್ತ್ರಿಗಳೇ ಸಾಯಂಕಾಲಕ್ಕೆ ಬರಲಿ, ಸಾಯಂಕಾಲ ವಿಸರ್ಜನೆಯನ್ನು ಮಾಡ್ಬೇಕು. ಪ್ರತಿ ವರ್ಷವೂ ಅವರೇ ಬಂದು ಪೂಜೆಯನ್ನು ಮಾಡಿಸುತ್ತಿದ್ದರು..." ಎಂದು ಆ ಹುಡುಗನಿಗೆ ಹೇಳಿದರು. ಆ ಹುಡುಗ ಮೌನವಾಗಿ ಅಲ್ಲಿಂದ ಹೊರಟು ಹೋಗಿದ್ದ. ಆ ನಂತರ ಮನೆಯವರೆಲ್ಲಾ ತಲಾತಟ್ಟಿ ಆ ಹುಡುಗನನ್ನು ಕುರಿತು ಹಾಸ್ಯವಾಗಿ ಆಡಿಕೊಂಡಿದ್ದೇ ಆಡಿದ್ದು.

ಹಿರಿಯವರು ಮಕ್ಕಳ ಮೇಲೆ ರೇಗಿದ್ದರು. ಹುಡುಗ ಚಿಕ್ಕವನಾದ ರೇನಂತೆ. ಎಲ್ಲಾ ಕಲಿತಿದ್ದಾನೆ. ಹಾಗೆಲ್ಲಾ ಆಡ್ಕೋಬಾರದು. ನಿಮ್ಮ ನಡೆ ವಳಿಕೆಯಿಂದ ಆ ಹುಡುಗನಿಗೆ ಕೋಪ ಬಂದಿರಬೇಕು. ಅವನ ಮುಖ ಎಷ್ಟು ಕೆಂಪಾಗಿತ್ತು. ಮಾತನಾಡದೇ ಮೌನವಾಗಿ ಹಾಗೇ ಹೊರಟು ಬಿಟ್ಟು, ಸೈಕಲ್ ಮೇಲಾದರೂ ಬಿಟ್ಟು ಬರಬೇಕಾಗಿತ್ತು".

"ಬಿಡಿ ಅಪ್ಪಾ... ಚಿಕ್ಕ ಹುಡುಗ, ನಡದೇ ಹೋಗ್ತಾನೆ. ಶಾಸ್ತ್ರಿಗಳೇ ಅಷ್ಟು ದೂರ ನಡೆಯುತ್ತಾರಂತೆ".

"ಆ ಹುಡುಗಂಗೆ ಇಲ್ಲೇ ಊಟ ಮಾಡ್ಕೊಂಡು ಹೋಗು ಅಂತ ಹೇಳ್ಬೇಕಾಗಿತ್ತು" ತಾಯಿ ಎಂದಳು.

"ಆ ಹುಡುಗ ಎದ್ದು ಹೋದ್ರೆ ಸಾಕು ಅಂತ ಚಡಪಡಿಸುತ್ತಿದ್ದ. ಊಟಕ್ಕೆ ಕೂತ್ಕೋ ಅಂದಿದ್ರೆ, ಓಡಿ ಹೋಗಿರೋನು".

"ಪಾಪ, ಹೊಸಬ. ನಮ್ಮ ಪರಿಚಯ ಅವನಿಗಿಲ್ಲ. ಸಂಕೋಚ ಅವನಿಗೆ" ಹೀಗೇ ಮಾತನಾಡಿಕೊಂಡು, ಹಬ್ಬದ ಊಟದ ಕಡೆಗೆ ಗಮನಕೊಟ್ಟರು.

ಸಾಯಂಕಾಲವಾಯಿತು. ಮತ್ತೆ ದೇವರ ಮುಂದೆ, ಒರೆಸಿ, ಬೇರೆ ರಂಗೋಲಿಯನ್ನಿಟ್ಟು ರಾತ್ರಿಯ ಪೂಜೆಗೆ ಅಣಿಗೊಳಿಸಿದರು. ನೈವೇದ್ಯದ ಘಂ ಎನ್ನುವ ವಾಸನೆ ಮನೆಯಲ್ಲಿ ಹರಡಿತ್ತು. ಎಷ್ಟು ಹೊತ್ತಾದರೂ

ಶಾಸ್ತ್ರಿಗಳು ಬಾರದಿದ್ದಾಗ ಮತ್ತೆ ಆತಂಕ ಶುರುವಾಗಿತ್ತು.

ಎಲ್ಲೋ ಹೋಗಿರುವ ಶಾಸ್ತ್ರಿಗಳು ಮತ್ತೆ ವಾಪಸ್ಸು ಬಂದಿದಾರೋ ಇಲ್ಲವ್ರೋ ಹೋಗೋ, ವಿಚಾರಿಸ್ಕೊಂಡು, ಹಾಗೇ ಅವರನ್ನು ಕರೆದುಕೊಂಡು ಬಾ..." ಮತ್ತೆ ಮನೆಯ ಹುಡುಗನನ್ನು ಕಳಿಸಿದರು. ಅವನು ಗೊಣಗುತ್ತ ಸೈಕಲ್ಲನ್ನೇರಿದ. ಕೆಲವೇ ನಿಮಿಷಗಳಲ್ಲಿ ವಾಪಸ್ಸಾಗಿದ್ದ. ಅವನೊಡನೆ ಶಾಸ್ತ್ರಿಗಳು ಇರಲಿಲ್ಲ ಮಂಕಾಗಿದ್ದ.

"ಶಾಸ್ತ್ರಿಗಳು ಯಾವುದೋ ಊರಿಗೆ ಹೋಗಿದಾರಂತೆ. ಯಾವಾಗ ಬರ್ತಾರೋ ಗೊತ್ತಿಲ್ಲ ಅಂತಾದ್ರು".

"ಆ ಹುಡುಗ ಇದ್ದಿದ್ರೆ ಅವನನ್ನಾದ್ರೂ ಕರ್ಕೊಂಡು ಬರ್ಬೇಕಾಗಿತ್ತು".

"ಆ ಹುಡುಗನೂ ಇರ್ಲಿಲ್ಲ. ಇಲ್ಲಿಂದ ಹೋದವನೇ, ತನ್ನ ಮನೆಗೆ ಹೊರಟು ಹೋದ್ನಂತೆ ಅವನು ಶಾಸ್ತ್ರಿಗಳ ಹತ್ತಿರ ಮಂತ್ರಗಳನ್ನು ಕಲಿಯಕ್ಕೆ ಬರುವ ಹುಡುಗನಂತೆ".

"ಅವನ ಮನೆ ಎಲ್ಲಿದೆ ಅಂತ ಕೇಳ್ಬೇಕಾಗಿತ್ತು. ಈಗ ಪೂಜೆ ಮಾಡಿಸೋರ್‍ಯಾರು! ಹೋಗು, ಈಗ್ಲೆ ಹೋಗಿ, ವಿಳಾಸ ತಿಳ್ಕೊಂಡು ಆ ಹುಡುಗನನ್ನೇ ಕರ್ಕೊಂಡು ಬಾ..."

"ಸರಿ ಮತ್ತೆ ಹೋಗ್ಬೇಕಾ? ಎನ್ನುತ್ತಾ ಅವನು ಸೈಕಲ್ಲನ್ನೇರಿದ. ಅವನು ಶಾಸ್ತ್ರಿಗಳ ಮನೆಗೆ ಹೋದಾಗ, ಅವರ ಪತ್ನಿಯೂ ಮನೆಯಲ್ಲಿರಲಿಲ್ಲ. ಯಾರ ಮನೆಗೋ ಅರಿಶಿನ ಕುಂಕುಮಕ್ಕೆಂದು ಹೊರಟು ಹೋಗಿದ್ದರು. ಮೆನಯಲ್ಲಿದ್ದ ಮಕ್ಕಳಿಗೆ ಆ ಹುಡುಗನ ಮನೆ, ವಿಳಾಸ ಒಂದೂ ಗೊತ್ತಿರಲಿಲ್ಲ. ಅವರ ಮನೆಯ ಮಂಟಪದಲ್ಲಿ ಪೂಜಿಸಲ್ಪಟ್ಟು ಕುಳಿತಿದ್ದ ಗಣಪತಿಗೆ ವಂದಿಸಿ, ಪ್ರಸಾದವನ್ನು ತೆಗೆದುಕೊಂಡು ಈ ಹುಡುಗ ಹಿಂತಿರುಗಿದ.

"ಅದಕ್ಕೇ ಹೇಳೋದು ಅಲ್ಪ ಸ್ವಲ್ಪ ಮಂತ್ರ ತಂತ್ರ ಗೊತ್ತಿರ್ಬೇಕು ಅಂತ. ಈಗ ಇದಕ್ಕಾಗಿ ಯಾರನ್ನೂ ಕರೆಯೋದು? ಪಕ್ಕದ ಮನೆಯಿಂದ, ವ್ರತರತ್ನ ಮಾಲಾ ಪುಸ್ತಕವನ್ನು ಇಸ್ಕೊಂಡು ಬರ್ತೀನಿ. ಹೇಗೂ ಅರಿಶಿನ ಕುಂಕುಮಕ್ಕೆ ಹೋಗ್ಬೇಕು. ಮಂತ್ರವನ್ನು ಓದಿಕೊಂಡು ಈಗಿನ ಪೂಜೆ

ಯನ್ನು ಮಡಿಯುಟ್ಟು ನೀನೇ ಮಾಡಿ... ನಾಳೆ ಶಾಸ್ತ್ರಿಗಳು ಬರಬಹುದು. ಅವರನ್ನೇ ನಾಳೆ ಕರೆಸಿ ವಿಸರ್ಜನೆ ಮಾಡಿಸೋಣ". ತಾಯಿ ಹಾಗೆಂದು ಹೇಳಿ, ಪಕ್ಕದ ಮನೆಗೆ ನಡೆದಳು. ಸವಲ್ಪ ಹೊತ್ತಿನಲ್ಲೇ ಹಿಂತಿರುಗಿದಳು. ಕೈಯಲ್ಲಿ ಪ್ರಸಾದದ ದೊನೆ ಇತ್ತು. ಆದರೆ ವ್ರತರತ್ನ ಮಾಲಾ ಪುಸ್ತಕವಿರಲಿಲ್ಲ.

"ವ್ರತದ ಕತೆಯನ್ನು, ಹಾಗೂ ಶಮಂತಕ ಮಣಿಯ ಕತೆಯನ್ನು ಓದಿದ ನಂತರ ಕಳಿಸಿ ಕೊಡ್ತಾರಂತೆ" ಎಲ್ಲರೂ ಪುಸ್ತಕಕ್ಕಾಗಿ ಕಾಯುತ್ತ ಕುಳಿತರು. ಶಾಸ್ತ್ರಿಗಳು ಬಂದಿದ್ದರೆ ಅವರೆ ಶಮಂತೋಪಖ್ಯಾನವನ್ನು ಓದಿರುತ್ತಿದ್ದರು ಎನ್ನುವುದು ನೆನಪಿಗೆ ಬಂತು.

"ಹೊರಗೆ ಯಾರೂ ಹೋಗೋದೇ ಬೇಡ. ಹೋದರೆ ತಾನೇ ಚೌತಿ ಚಂದ್ರನ ದರ್ಶನ ವಾಗೋದು?... ನೀನು ನೋಡ್ಲಿಲ್ಲ ತಾನೆ?" ಹೆಂಡತಿಯನ್ನು ಕೇಳಿದರು. ಎಷ್ಟೋ ಹೊತ್ತಿನ ನಂತರ, ಪಕ್ಕದ ಮನೆಯ ಹುಡುಗ ವ್ರತರತ್ನ ಮಾಲಾವನ್ನು ತಂದುಕೊಟ್ಟ.

"ಕೆಲಸ ಆದ ತಕ್ಷಣ ಕೊಡ್ಬೇಕಂತೆ. ಬೆಳಿಗ್ಗೆ ಬೇಗ ಪೂಜೆ ಮಾಡ್ಬೇಕಂತೆ". ಆ ಹುಡುಗ ಎಚ್ಚರಿಸಿದ. ಪುಸ್ತಕದ ಪುಟಗಳನ್ನು ಸರಿಸಿ, ಅಧ್ಯಾಯವನ್ನು ಹುಡುಕಿ, ಓದಿಕೊಂಡು, ಆ ಹೊತ್ತಿನ ಪೂಜೆಯನ್ನು ಮಾಡಿದ್ದಾಗಿತ್ತು. ಗಣಪತಿಯನ್ನು ನೋಡಲು ಬಂದವರಿಗೆ ಪ್ರಸಾದವನ್ನು ಕೊಟ್ಟಿದ್ದಾಗಿತ್ತು. ಈಚೀಚೆಗೆ ಶಾಸ್ತ್ರಿಗಳಿಗೆ ಬಿಡುವೇ ಕಡಿಮೆ. ಅವರನ್ನು ಕಾಯುವ ಬದಲು ಹೀಗೆ ಪುಸ್ತಕವನ್ನಿಟ್ಟುಕೊಂಡು ಓದಿಕೊಂಡು ಪೂಜೆ ಮಾಡುವುದೇ ಸುಲಭ ಅಂತನ್ನಿಸುತ್ತೆ. ಬಂದಿದ್ದವರ ಪೈಕಿ ಒಬ್ಬಾಕೆ ಹೇಳಿದ್ದಳು.

ಏನೋ ನಮ್ಮ ಮಾವನವರ ಕಾಲದಿಂದ ಇದೇ ಪದ್ಧತಿ. ಈ ವರ್ಷವೇ ಹೀಗಾದದ್ದು. ಶಾಸ್ತ್ರಿಗಳು ಏನೋ ಕಾರಣದಿಂದ ಬೇರೆ ಊರಿಗೆ ಹೋಗಿದಾರಂತೆ. ನಾಳೆ ಅವರೇ ಬಂದು ವಿಸರ್ಜನೆ ಮಾಡಿಸುತ್ತಾರೆ. ಅವರ ಭಾಗದ ದಕ್ಷಿಣೆ, ವಾಯಿನ ದಾನ ಎಲ್ಲಾ ಭಾಗದ್ದು ಅವರಿಗೇ ಸೇರಬೇಕು" ಆಕೆ ನುಡಿದಿದ್ದರು.

ಪೂಜೆ ನೆರವೇರಿದ್ದರೂ, ಸಾಂಗವಾಗಿ ನೆರವೇರಲಿಲ್ಲವೆಂಬ ಶಂಕೆ. ಹಿರಿಯವರ ಮನಸ್ಸಿನಲ್ಲಿ ಉಳಿದಿತ್ತು. ಊಟ ಮಡಿ, ಮಲಗಿದವರಿಗೆ ನಿದ್ದೆ ಬರಲು ನಿಧಾನವಾಗಿತ್ತು. ಒಂದು ಹೊತ್ತಿನಲ್ಲಿ, ಯಾರೋ ದೊಡ್ಡ ದೊಡ್ಡ ಹೆಜ್ಜೆಗಳನ್ನಿಟ್ಟುಕೊಂಡು ಓಡಾಡುವ ಸದ್ದು, ಡಬ್ಬಗಳು ಉರುಳಿದ ಸದ್ದು... ಎಚ್ಚರಗೊಳ್ಳುವಂತೆ ಮಾಡಿತು.

ಇವತ್ತೂ ಈ ಇಲಿಗಳ ಕಾಟ ತಪ್ಪಲಿಲ್ಲ. ಗಣಪತಿಯ ಜತೆಗೆ, ಅವುಗಳಿಗೂ ಪೂಜೆ, ನೈವೇದ್ಯ ಎಲ್ಲವೂ ಸಿಕ್ಕಿದೆ. ದೇವರ ಮುಂದೆ ಇಟ್ಟ ಹಣ್ಣು ಹಂಪಲುಗಳೆಲ್ಲ ಹಾಗೇ ಇಟ್ಟು ಬಿಟ್ಟಿದ್ದೆ ಎನ್ನುತ್ತಾ ಎದ್ದು ಬಂದು ನೋಡಿದಳು. ತಟ್ಟೆಯ ಹಣ್ಣುಗಳೆಲ್ಲಾ ಮಾಯ. ಎಷ್ಟೋ ಇಲಿಗಳು ಸೇರಿಕೊಂಡಿವೆಯೋ ಎಲ್ಲವನ್ನೂ ಮುಗಿಸಿ ಬಿಟ್ಟಿವೆ ಎನ್ನುಕೊಳ್ಳು ವಷ್ಟರಲ್ಲಿ ಅಡಿಗೆ ಮನೆಯ ಕಡೆಯಿಂದ ಯಾರೋ ನಡೆದು ಬರುವ ಸದ್ದು ಕೇಳಿಸಿತ್ತು. ಇವತ್ತೇ ಕಳ್ಳರೂ ನುಗ್ಗಬೇಕೇ... ಬೆಳ್ಳಿಯ ಸಾಮಾನುಗಳೆಲ್ಲಾ ಹಾಗೇ ಹಾಗೇ ಬಿದ್ದಿವೆ... ಗಂಡ ಮಕ್ಕಳನ್ನೂ ಎಬ್ಬಿಸಬೇಕು ಎಂದುಕೊಂಡು ತಿರುಗಿದಳು. ಏನಾಶ್ಚರ್ಯ! ಎದುರಿಗೆ ಒಬ್ಬ ಬಾಲಕ ಗುಂಡು ಗುಂಡಾದ ದೇಹ, ಮುದ್ದು ಮುಖ... ಆ ಹುಡುಗನ ಕೈಯಲ್ಲಿ, ಕರಿಗಡುಬು, ಚಕ್ಕುಲಿ, ಪಂಚಕಜ್ಜಾಯಗಳನ್ನಿಟ್ಟಿದ್ದ ಡಬ್ಬಿಗಳು... ಈ ಹುಡುಗ ಯಾರು? ಇಷ್ಟು ಹೊತ್ನಲ್ಲಿ ಇಲ್ಲಿಗೇಕೆ ಬಂದಿದಾನೆ!... ಗಂಡನನ್ನು ಮಕ್ಕಳನ್ನು ಕೂಗಲು ಬಾಯಿ ತೆರೆದಳು. ಆದರೆ ದನಿಯೇ ಹೊರಡಲಿಲ್ಲ. ಆ ಹುಡುಗ ಅಲ್ಲಿಯೇ ಇದ್ದ ಮಣೆಯ ಮೇಲೆ ಕುಳಿತು, ತನಗೆ ಬೇಕಾದಷ್ಟು ತಿಂಡಿಗಳನ್ನು ತಿಂದು, ಬೆಳ್ಳಿಯ ಚೊಂಬಿನಲ್ಲಿದ್ದ ನೀರನ್ನೂ ಕುಡಿದು, ನೋಡು ನೋಡು ತ್ತಿದ್ದಂತೆಯೇ ಮಾಯವಾಗಿದ್ದ. ಇವಳು ಬಿಟ್ಟ ಕಣ್ಣು, ಬಿಟ್ಟ ಬಾಯಿ ಗಳೊಂದಿಗೆ ಹಾಗೇ ನಿಂತಿದ್ದಳು. ಹೊರಗೆ ಹೋದ ಹೆಂಡತಿ ಎಷ್ಟು ಹೊತತಾದರೂ ಒಳಗೆ ಬಾರದಿದ್ದಾಗ ಆತನೂ ಎದ್ದು ಬಂದಿದ್ದರು.

ದಿಗ್ಭ್ರಮೆಗೊಂಡವಳಂತೆ, ಚಲಿಸದೇ ನಿಂತಿದ್ದ ಹೆಂಡತಿಯ ಮೈಮುಟ್ಟಿ ಎಚ್ಚರಿಸಿದರು "ಹೀಗ್ಯಾಕೆ ನಿಂತಿದೀಯ? ಇಲಿಗಳು ಚೆನ್ನಾಗಿಯೇ ಹೆದರಿಸಿರ ಬೇಕು. ಅವುಗಳ ಹುರಿಪತಕ್ಕೆ ಕೊನೆ ಕಾಣಿಸ್ಲೇ ಬೇಕು. ಗಣಪತಿಯ

ವಿಸರ್ಜನೆ ಆದ್ಮೇಲೆ, ಇಲಿಯ ಬೋನು ತಂದು ಹಿಡಿದೂ ಹಿಡಿದೂ ಓಡಿಸ್ತೀನಿ..."

"ಇಲಿಗಳ ಜತೆಗೆ, ಗಣಪತಿಯೂ ಹುರಿಪತ ಮಾಡಿದಾನೆ. ಚಕ್ಕುಲಿ, ಕಡುಬು, ಎಲ್ಲವನ್ನೂ ತಿಂದಿದ್ದನು ನಾನು ಕಣ್ಣಾರೆ ಕಂಡೆ" ನಿದ್ದೆಯ ಮಂಪರಿನಲ್ಲಿ ಹೇಳುವಂತೆ ಹೇಳಿದಳು.

"ಆಂ.. ಏನಂದೆ?... ಗಣಪತಿ?... ಗಣಪತಿಗೆ ನೈವೇದ್ಯ ಮಾಡಿದ್ದೆವು ಅಲ್ವಾ

"ಬೆಳಿಗ್ಗೆ ನೈವೇದ್ಯ ಮಾಡಿದ್ವೆಲ್ಲಾ ಹಾಗೇ ತಟ್ಟೆಯಲ್ಲಿತ್ತು. ಅದನ್ನೆಲ್ಲಾ ಡಬ್ಬಿಗಳಲ್ಲಿ ಹಾಕಿ ಇಟ್ಟಿದ್ದೆ... ಈಗ, ಗಣಪತಿ ಅದನ್ನೆಲ್ಲಾ ತಿಂದದ್ದು ನಾನು ಕಣ್ಣಾರೆ ನೋಡಿದೆ".

"ನಿನಗೆ, ನಿದ್ದೆ. ನಿಂತ್ಕೊಂಡೇ ಕನಸು ಕಾಣ್ತಿದೀಯ. ಗಣಪತಿ ಅಲ್ಲಿ ಮಂಟಪದಲ್ಲಿ ಕೂತಿದಾನೆ. ಓಡಾಡುವ ಇಲಿಗಳೇ ಗಣಪತಿ ತರಹ ಕಂಡಿರಬಹುದು. ಬಾ, ಮಲಕ್ಕೋ ಎಲ್ಲಾ ಸರಿ ಹೋಗುತ್ತೆ".

"ಇಲ್ರೀ, ಗಣಪತೀನೇ, ಗುಂಡ ಗುಂಡಗೆ ಚೆನ್ನಾಗಿತ್ತು ಹುಡುಗ..."

"ಸೊಂಡಿಲನ್ನೂ ಕಂಡ್ಯಾ? ನಿನಗೆಲ್ಲೋ ಭ್ರಮೆ. ಬೆಳಿಗ್ಗೆ ಪೂಜೆ ಮಾಡಿಸುಕ್ಕೆ ಒಬ್ಬ ಹುಡುಗ ಬಂದಿದ್ದ ಅಲ್ವಾ! ಅವನನ್ನು ಊಟಕ್ಕೆ ಎಬ್ಬಿಸಲಿಲ್ಲ ಅಂತ ನಿನ್ನ ಮನಸ್ಸನ್ನು ಕೊರಿತಿತ್ತು. ಆ ಹುಡುಗನೇ ಕರಿ ಗಡುಬು ಚಕ್ಕುಲಿಯನ್ನು ತಿಂದಿರಬಹುದು ನಿನ್ನ ಕನಸ್ನಲ್ಲಿ. ಬಾ... ಮಲಕ್ಕೋ ಬಾ. ಮಕ್ಕಳು ಎದ್ದರೆ ತಮಾಷೆ ಮಾಡ್ತಾರೆ". ಆತ ಬಲವಂತವಾಗಿ ಹೆಂಡತಿಯನ್ನು ಮಲಗಿಸಲು ಕರೆದೊಯ್ದರು.

ಮಲಗಿದವಳ ಮನಸ್ಸು ತಾನು ಕಂಡದ್ದನ್ನೇ ಮೆಲಕು ಹಾಕುತ್ತಿತ್ತು. ಅದು ಕನಸಲ್ಲ ಎಂದೇ ಅನ್ನಿಸುತ್ತಿತ್ತು. ಗಣಪತಿಯನ್ನು ತಾನು ಆ ಬಾಲಕನ ರೂಪದಲ್ಲಿ ಕಂಡಿದೀನಿ. ಏನೇ ಆಗಲಿ, ನಾಳೆ ಗಣಪತಿಯ ವಿಸರ್ಜನೆ ಯನ್ನು ಮಾಡಲೇ ಬೇಕು. ನಮ್ಮಿಂದ ಏನೋ ಅಪರಾಧವಾಗಿದೆ. ಇಲ್ಲ ದಿದ್ದರೆ ಗಣಪತಿ ಎದ್ದು ಓಡಾಡೋದು ಅಂದ್ರೆ ಏನು? ನಿದ್ದೆ ಬಾರದೇ ಹೊರಳಾಡುತ್ತಿದ್ದವಳು ಗಂಡನ ಕಡೆ ತಿರುಗಿದಳು.

"ನಾಳೆ ನೀವೇ ಒಂದು ಗಳಿಗೆ ಶಾಸ್ತ್ರಿಗಳ ಮನೆಗೆ ಹೋಗಿ ಬನ್ನಿ. ಶಾಸ್ತ್ರಿಗಳು ಬಂದು ಗಣಪತಿಯ ವಿಸರ್ಜನೆಯನ್ನು ಸರಿಯಾಗಿ ಮಾಡಿಸಲಿ ಹಾಗೇ ಆ ಹುಡುಗ ಎಲ್ಲೇ ಇದ್ದರೂ ಅವನನ್ನು ಕರೆದುಕೊಂಡು ಬರುವಂತೆ ಹೇಳಿ. ಆ ಹುಡುಗ ಬೇಜಾರು ಮಾಡ್ಕೊಂಡು ಹೋಗಿದಾನೆ. ಅದಕ್ಕೇ ಈ ಗಣಪತಿ ಪುರಿಪತ ಮಾಡಿದಾನೆ.

"ಸರಿ ಈಗ ಮಲಕ್ಕೋ ಬೆಳಿಗ್ಗೆ ನೋಡೋಣ" ಇಬ್ಬರೂ ನಿದ್ರಿಸಿದರು.

"ಮಾರನೇ ಬೆಳಿಗ್ಗೆ, ಆತನೇ ಶಾಸ್ತ್ರಿಗಳ ಮನೆಗೆ ಹೋಗಿದ್ದರು. ಶಾಸ್ತ್ರಿಗಳು ಈತನ ಮಾತನ್ನು ಕೇಳಿ ನಕ್ಕರು. ನಾನು ಒಂದು ದಿನ ಊರಿನಲ್ಲಿ ಇಲ್ಲದುದಕ್ಕೆ ಇಷ್ಟು ಪರದಾಟವಾಗಿದೆ. ಆ ಹುಡುಗ ತಿಳುವಳಿಕಸ್ಥ. ಆದರೆ ಭಾಳ ಸಂಕೋಚದ ಸ್ವಭಾವದವನು. ಬಹಳ ನಿಷ್ಠೆಯಿಂದ ಪೂಜೆ ಮಾಡಿಸಿರುತ್ತಾನೆ. ಹುಡುಗು ಬುದ್ಧಿ, ಎಳಕು... ಮನಗೆ ಬಂದವನು, ಇವಳ ಹತ್ತಿರುವೂ ಮಾತಾಡದೇ, ಇಲ್ಲಿಯೂ ಊಟ ಮಾಡದೇ ತನ್ನ ಮನೆಗೆ ಹೊರಟು ಹೋದನಂತೆ. ನಾನು ಇದ್ದಿದ್ದರೆ, ಎಳೆದುಕೊಂಡು ಬರುತ್ತಿದ್ದೆ. ನಾನು ಅನಿವಾರ್ಯವಾಗಿ ಊರಿಗೆ ಹೋಗಲೇ ಬೇಕಾಗಿತ್ತು. ನಾನು ಆ ಹುಡುಗನನ್ನು ಕಳಿಸುತ್ತೇನೆ. ನೀವು ನಿಶ್ಚಿಂತೆಯಾಗಿರಿ. ಅವನೇ ಪ್ರಾಣಪ್ರತಿಷ್ಠೆ ಮಾಡಿ ಪೂಜೆ ಮಾಡಿಸಿದ್ದಾನೆ. ಅವನೇ ವಿಸರ್ಜನೆ ಯನ್ನು ಮಾಡಿಸಲಿ..."

"ನೀವು ಬಂದು ದಕ್ಷಿಣೆ, ವಾಯಿನ ದಾನವನ್ನು ತೆಗೆದುಕೊಂಡು ಹೋಗ್ಲೇಬೇಕು".

"ಅದೆಲ್ಲಾ ಆ ಹುಡುಗನಿಗೇ ಸೇರಬೇಕು... ಅವನಿಗೆ ಕೊಡಿ" ಎಂದರು. ಈತ ಕೈ ಮುಗಿದು ಅಲ್ಲಿಂದ ಹೊರಬಿದ್ದರು.

ಸ್ನಾನ ಮಾಡಿ, ವಿಭೂತಿ ಹಚ್ಚಿ, ಮಡಿ ಬಟ್ಟೆಯನ್ನುಟ್ಟು ಆತ ಸಿದ್ಧರಾಗಿದ್ದರು. ಶಾಸ್ತ್ರಿಗಳು ಆ ಹುಡುಗನ ಕೈ ಹಿಡಿದು ಕರೆತರುತ್ತಿದ್ದುದನ್ನು ದೂರದಿಂದಲೇ ಕಂಡರು. 'ಶಾಸ್ತ್ರಿಗಳು ಬಂದರು' ಎಂದು ಒಳಗಿನವರಿಗೆ ಹೇಳಿ, ಒಳಬಾಗಿಲಿನಿಂದ ಹೊರಬಂದು ನಿಂತರು. ಆ ಹುಡುಗ ಕತ್ತು ಬಾಗಿಸಿದ್ದ. ಶಾಸ್ತ್ರಿಗಳು ಏನನ್ನೂ ಕೇಳಬೇಡಿ ಎನ್ನುವಂತೆ ಸಂಜ್ಞೆ

ಮಾಡಿದರು.

ಶಾಸ್ತ್ರಿಗಳ ನೇತೃತ್ವದಲ್ಲಿ ಆ ಹುಡುಗ ಪಾಂಗಿತವಾಗಿ ಪೂಜೆಯನ್ನು ಮಾಡಿಸಿದ. ಶಾಸ್ತ್ರಿಗಳು ಮಧ್ಯೆ ಮಧ್ಯೆ ಶಾಭಾಸ್ ಎಂದು ಹೇಳಿ ಮುಗುಳ್ನಗುತ್ತಿದ್ದರು. ಗಣಪತಿಯ ಮೂರ್ತಿ ಸೊಂಡಿಲ ಅಡಿಯಲ್ಲಿ ನಕ್ಕಂತೆ ಅನ್ನಿಸಿತು.

ಪೂಜಾ ದಕ್ಷಿಣೆಯನ್ನು ವಾಯಿನದಾನವನ್ನು ಆ ಹುಡುಗನಿಗೇ ಕೊಡಿಸಿದರು. ಇವನು ಪ್ರಚಂಡ. ನನ್ನ ಪಟ್ಟ ಶಿಷ್ಯ. ನೆನ್ನೆ ಇವನಿಗೆ ಏನೋ ಅಸಮಾಧಾನವಾಗಿದೆ. ಇವತ್ತು ಎಲ್ಲಾ ಸರಿ ಹೋಗಿದೆ ಎನ್ನುತ್ತ ಆ ಹುಡುಗನ ಬೆನ್ನು ತಟ್ಟಿದರು. ನಂತರ ಆ ಹುಡುಗ ಮಂತ್ರೋಕ್ತವಾಗಿ ಗಣಪತಿಯ ವಿಸರ್ಜನೆಯನ್ನು ಮಾಡಿಸಿದ. ಮನೆಯವರ್‍ಯಾರು ಮಾತನ್ನಾಡಿರಲಿಲ್ಲ.

ಮನೆಯಾಕೆ ಪ್ರತ್ಯೇಕವಾಗಿ, ನೈವೇದ್ಯಕ್ಕೆ ಮಾಡಿದ್ದ ತಿಂಡಿಗಳನ್ನು ಹುಡುಗನಿಗೂ, ಶಾಸ್ತ್ರಿಗಳಿಗೂ ಕೊಟ್ಟಳು. ಆ ಹುಡುಗನ ಕಾಲಿಗೂ ನಮಸ್ಕರಿಸಿದಳು. ಆ ಹುಡುಗ ಸಂಕೋಚಗೊಂಡರೂ, ಆಶೀರ್ವಾದಗಳನ್ನು ಮಾಡಿದ.

ಹಿಂದಿನ ರಾತ್ರಿ ತಾನು ಕಂಡ ಚಮತ್ಕಾರವನ್ನು ಶಾಸ್ತ್ರಿಗಳಿಗೆ ಹೇಳಬೇಕೆಂದುಕೊಂಡರೂ ಹಿಂಜರಿದಳು. ದೇವರ ಮುಂದೆ ಇದ್ದ ತಟ್ಟೆಯ ಹಣ್ಣುಗಳು ಖಾಲಿಯಾಗಿದ್ದವು. ಡಬ್ಬಿಯಲ್ಲಿದ್ದ ಕರಿಗಡುಬು, ಪಂಚಕಜ್ಜಾಯ, ಚಕ್ಕುಲಿ ಮಾಯವಾಗಿದ್ದವು. ಹೇಳಿದರೆ ಇವರುಗಳು ಯಾರೂ ನಂಬುವುದಿಲ್ಲ. ತಾನು ಕಂಡದ್ದು ನಿಜ. ಆದರೆ ಅದನ್ನು ಇವರುಗಳು ಅಪಹಾಸ್ಯ ಮಾಡಬಾರದು ಎಂದುಕೊಂಡು ಸುಮ್ಮನಾದಳು. ಮತ್ತೆ ಮತ್ತೆ ಆ ಹುಡುಗನ ಕಡೆ ನೋಡಿದಳು. ಈ ಹುಡುಗನೇ ಗಣಪತಿಯ ರೂಪದಲ್ಲಿ ಬಂದಿರಬಹುದೇ, ಅಥವಾ ಗಣಪತಿಯೇ ಈ ಹುಡುಗನ ರೂಪದಲ್ಲಿ ಬಂದಿರಬಹುದೇ, ಅವಳ ಜಿಜ್ಞಾಸೆ ಮುಂದುವರೆದಿತ್ತು.

"ಬರೋದೇ ತಾಯಿ, ಈ ವರ್ಷ ನಾನು ಪೂಜೆಯನ್ನು ಮಾಡಿಸದೇ ಇದ್ದರೆ ಏನಾಯ್ತು? ನನ್ನ ಈ ಶಿಷ್ಯ ನನಗಿಂತ ಚೆನ್ನಾಗಿ ಮಾಡಿಸಿರುತ್ತಾನೆ. ಆ ನಂಬಿಕೆ ನನ್ನಗಿದೆ. ಆದರೆ ಒಂದೇ ಒಂದು... ಇವನಿಗೆ ಸ್ವಲ್ಪ

ಮುಂಗೋಪ. ಯಾರಾದರೂ ಗೇಲಿ ಮಾಡಿದರೆ..., ಇವನಿಗೆ ಅದು ಆಗದು... ಮನೆಯವರೆಲ್ಲಾ ಮುಖ ಮುಖ ನೋಡಿಕೊಂಡರು. ಆ ಹುಡುಗನ ದೃಷ್ಟಿ, ಈ ಮನೆಯ ಹುಡುಗನ ಮೇಲಿತ್ತು. ಸೈಕಲ್ಲಿನ ಮೇಲೆ ಕೂರಿಸಿಕೊಂಡು ಬರುವಾಗ, ಏನೋ ಆಡಿರಬಹುದು ಅಂತ ಅಂದು ಕೊಂಡಳು ಆಕೆ. ಆ ಹುಡುಗ ಮಾತನ್ನಾಡಿರಲಿಲ್ಲ. ಮೌನವಾಗಿಯೇ ಶಾಸ್ತ್ರಿಗಳ ಜತೆಯಲ್ಲಿ ಹೊರಟುಹೋಗಿದ್ದ.

"ನೀನು ಆ ಹುಡುಗನಿಗೆ ಗೇಲಿ ಮಾಡಿದ್ಯಾ?" ಆಕೆ ದಬಾಯಿಸಿದಳು.

"ಇಲ್ಲಮ್ಮ... ಆದರೆ ಗೊಣಗಿದ್ದು ನಿಜ... ಏನಾಯ್ತು ಅದರಿಂದ?...

"ಆ ಹುಡುಗನ ಜ್ಞಾನಕ್ಕೆ ಬೆಲೆ ಕೊಡ್ಬೇಕು, ವಯಸ್ಸಿಗಲ್ಲ... ಆ ಹುಡುಗ ಮುನಿಸಿಕೊಂಡು ಹೋಗಿ, ವಿಸರ್ಜನೆಗೂ ಸಿಗಲಿಲ್ಲ. ನೆನ್ನೆ ರಾತ್ರಿ ಈ ಗಣಪತಿ ಕುಣಿದದ್ದೇ ಕುಣಿದದ್ದು... ಏನು ಹುರಿಪತ ಮಾಡ್ದೆ ಗೊತ್ತಾ?"

"ಏನಮ್ಮಾ ಹಾಗಂದ್ರೆ?... ಕೆರೇಲಿ ಬಿಡುವಾಗ, ಮೆರವಣಿಗೆಯಲ್ಲಿ ನಾವುಗಳು ಕುಣಿದ್ಕೊಂಡು ಹೋಗ್ತೀವಿ. ಗಣಪತಿಯೇ ಎದ್ದು ಬಂದು ಕುಣಿದದ್ದನ್ನು ನಾನೆಲ್ಲೂ ಕಂಡಿಲ್ಲ.

"ನಾನು ಕಂಡೆ... ನೆನ್ನೆ ರಾತ್ರಿ ನಾನು ಕಂಡೆ".

"ಕನಸ್ನಲ್ಲಿ... ಭಾರಿ ಮಜವಾದ ಕನಸೇ ಬಿದ್ದಿರ್ಬೇಕು ನಿಂಗೆ..."

"ಅದು ಕನಸಲ್ಲ" ಎಂದು ಹೇಳಿ ಹೊರಟವಳನ್ನೂ ಆತ ತಡೆದರು. ನಿನಗಾದ ಅನುಭವ ಯಾರಿಗೂ ಅರ್ಥವಾಗುಲ್ಲ. ಗೇಲಿ ಮಾಡ್ತಾರೆ ಸುಮ್ಮನಿರು" ಎಂದರು. ಆಕೆ ಮಂಟಪದೊಳಗೆ ಕುಳಿತಿದ್ದ ಗಣಪತಿಗೆ ಕೈ ಮುಗಿದು, ಮುಂದಿನ ವರ್ಷವೂ ಈ ಹುಡುಗನೇ ನಮ್ಮ ಮನೆಯ ಪೂಜೆಗೆ ಬರಲಿ, ಕೈಲಾದಷ್ಟು ನೈವೇದ್ಯವನ್ನು ಮಾಡಿ ಕೊಡ್ತೀನಿ". ಎಂದಳು. ಹಾಗಾದ್ರೆ ಹೊಸಾ ಸೈಕಲೆ ಮೇಲೆ ಆ ಹುಡುಗನನ್ನ ಕರೆತರಬೇಕು. ಇದರ ಕ್ಯಾರಿಯರ್ ಸರಿಯಿಲ್ಲ" ಎಂದು ಹೇಳಿದರು.

***

೨೪. ಪರದಾಟ

ನಾವುಗಳು ಆ ಊರಿಗೆ ಬಂದ ಹೊಸದು. ನಾವುಗಳು ವಾಸವಾಗಿದ್ದ ಬಾಡಿಗೆ ಮನೆಯೂ ಹೊಸದೇ. ಮನೆ ದೊಡ್ಡದಾಗಿತ್ತು. ಆದರೆ ಅಕ್ಕ ಪಕ್ಕ ಹೆಚ್ಚು ಮನೆಗಳಿರಲಿಲ್ಲ. ಖಾಲಿ ಖಾಲಿ ಇದ್ದು ಹುಲ್ಲು, ಶತ್ತೆ ಧಾರಾಳವಾಗಿ ಬೆಳೆದುಕೊಂಡಿದ್ದವು. ಇಲಿಗಳು ಎಲ್ಲಿ ಅಂದರೆ ಅಲ್ಲಿ ಹಾಯಾಗಿ ತಿರುಗಾಡಿಕೊಂಡಿದ್ದವು. ಅದು ಹೇಗೋ ಏನೋ ತೆರೆದಿದ್ದ ಕಿಟಕಿಯ ಮೂಲಕ ಒಂದು ಇಲಿ ಮನೆಯೊಳಗೆ ಬಂದು ಸೇರಿಕೊಂಡಿತ್ತು. ಹಿಡಿಯಲೂ ಇಲಿ ಬೋನು ಇರಲಿಲ್ಲ. ಸಮಯ ಕಾದು, ನಮ್ಮವರು, ಮಂಚ ಕೆಳಗೆ ಸೇರಿಕೊಂಡಿದ್ದ ಇಲಿಯನ್ನು ಅಟ್ಟಾಡಿಸಿ ಹೊಡೆದು ಸಾಯಿಸಿದರು. ಆಗ ರಾತ್ರಿ ಹತ್ತು ಗಂಟೆಯಾಗಿತ್ತು.

ಇಲಿ ಸಾಕಷ್ಟು ದೊಡ್ಡದೇ. ಇಲಿ, ರೂಮಿನಲ್ಲೆಲ್ಲಾ ಓಡಾಡಿ ಧೂಳು ಎದ್ದಿದ್ದರಿಂದಲೋ, ಅಥವಾ, ಇಲಿಯ ರೋಮದ ಪ್ರಭಾವದಿಂದಲೋ ನನ್ನ ಮಗಳಿಗೆ ಉಸಿರಾಟದ ತೊಂದರೆ ಶುರುವಾಯಿತು. ಅಲರ್ಜಿಯ ಕಾರಣದಿಂದ ಉಬ್ಬಸ ಶುರುವಾಗಿತ್ತು. ಬೆಳಗಿನ ಝಾವದ ಹೊತ್ತಿಗೆ ಅದು ಹೆಚ್ಚಾಗಿತ್ತು. ಆ ಕಷ್ಟದಲ್ಲೂ ಅವಳು, ಸಂಕಷ್ಟಹರ ಚತುರ್ಥಿಯ ದಿನ, ಗಣಪತಿಯ ವಾಹನ ಇಲಿಯನ್ನು ಕೊಂದಿರುವುದರಿಂದ ನನಗೆ ಹೀಗಾಯ್ತು ಎಂದು ಅಳುತ್ತಾ ಹೇಳಿದಳು.

ಅವಳಿಗೆ ದೇವರ ಮೇಲೆ ನಂಬಿಕೆ, ಹಾಗೇ ಪ್ರಾಣಿ ಪಕ್ಷಿಗಳ ಮೇಲೆ ಸ್ವಲ್ಪ ದಯೆ ಹೆಚ್ಚೇ ಎಂದು ಹೇಳಬೇಕು. ಹೊರಕ್ಕೆ ಓಡಿಸಬೇಕಾಗಿತ್ತು. ಕೊಲ್ಲೋದು ಯಾಕೆ ಕೊಲ್ಲ ಬೇಕಾಗಿತ್ತು? ಎಂದು ಆರ್ಭಟಿಸಿದಳು.

ಬಿಸಿ ನೀರನ್ನು ಕಾಯಿಸಿ, ಕುಡಿಯಲು ಕೊಟ್ಟಾಯಿತು. ಬೆನ್ನಿಗೆ ವಿಕ್ಸ್ ಹಚ್ಚಿದ್ದಾಯಿತು. ಆದರೂ ಅವಳಿಗೆ ತೊಂದರೆ ಕಡಿಮೆ ಆಗಿರಲಿಲ್ಲ. ಬೆಳಗಿನ ಹತ್ತು ಗಂಟೆ ಆಗುವುದನ್ನೇ ಕಾದಿದ್ದು, ಡಾಕ್ಟರ ಬಳಿಗೆ ಕರೆದುಕೊಂಡು ಹೋಗಲು, ಅವಳನ್ನು ಸಿದ್ಧಗೊಳಿಸಿ, ನಾನೂ ಸಿದ್ಧಳಾದೆ.

ಮೊದಲಿಗೆ ಡಾಕ್ಟರ ಕ್ಲಿನಿಕ್‌ಗಳು ಸಹ ಎಲ್ಲಿದೆ ಅಂತ ಸರಿಯಾಗಿ ಗೊತ್ತಿರಲಿಲ್ಲ. ಅಂಗಡಿ ಸಾಲಿನ ಬಳಿ ಯಾರಾದರೂ ಡಾಕ್ಟರುಗಳು ಇದ್ದೇ ಇರುತ್ತಾರೆಂಬ ಧೈರ್ಯದಿಂದ ಕರೆದುಕೊಂಡು ಹೊರಟೆ. ಮೊದಲು ಕಂಡದ್ದು, ಒಬ್ಬ ಆಯುರ್ವೇದದ ಡಾಕ್ಟರರ ಬೋರ್ಡು. ಅದು ಅವರ ಮನೆ ಆಗಿತ್ತು. ಕಾಲಿಂಗ್ ಬೆಲ್ಲನ ಒತ್ತಿದಾಗ, ಬಾಗಿಲು ತೆರೆದವಳು ಕೆಲಸದವಳು.

"ಡಾಕ್ಟ್ರಮ್ಮ ಇಲ್ಲ, ಆಸ್ಪತ್ರೆಗೆ ಹೊರಟು ಹೋದಳು" ಎಂದಳು.

"ಯಾವ ಆಸ್ಪತ್ರೆ!" ಅಂತ ಕೇಳಿದೆ.

"ದೊಡ್ಡ ಪೇಟೇಲಿರುವ ಸರ್ಕಾರಿ ಆಸ್ಪತ್ರೆ ಎಂದಳು"

ಯಾವ ದೊಡ್ಡ ಪೇಟೆಯೋ, ಆಸ್ಪತ್ರೆ ಎಲ್ಲಿದೆಯೋ ಅಂತಂದು ಕೊಂಡು ನನ್ನ ಮಗಳನ್ನು ತೋರಿಸಿ, ಇವಳಿಗೆ ಹುಶಾರಿಲ್ಲ. ಡಾಕ್ಟ್ರಿಗೆ ತೋರಿಸ್ಬೇಕು. ಇಲ್ಲಿ ಹತರ ಪತ್ರ ಯಾರಾದ್ರೂ ಬೇರೆ ಡಾಕ್ಟರು ಇದಾರಾ?" ಅಂತ ಕೇಳಿದೆ.

"ನಂಗೊತ್ತಿಲ್ಲ, ತಡೀರಿ ದೊಡ್ಡಮ್ಮಾವ್ರನ್ನ ಕರೀತೀನಿ" ಎಂದು ಬೆಳಿಗ್ಗೆ ಹೋಗಿ, ವಯಸ್ಸಾದ ಹೆಂಗಸೊಬ್ಬರನ್ನು ಕರೆತಂದಳು. ಆಕೆ ನಮ್ಮಿಬ್ಬರನ್ನೂ ನೋಡಿದಳು.

"ಡಾಕ್ಟ್ರು ,ಇದೇ ತಾನೇ ಹೋದ್ರಲ್ಲಾ... ಕಾಲು ಗಂಟೆ ಮುಂಚೆ ಬರಬಾರ್ದಾಗಿತ್ತಾ? ಸಾಯಂಕಾಲ ಆರುಗಂಟೆಗೆ ಬನ್ನಿ, ಸಿಕ್ತಾಳೆ" ಎಂದರು.

"ಸಾಯಂಕಾಲದ ತನಕ ಕಾಯುಕ್ಕಾಗುಲ್ಲ. ಇವಳು ಉಸಿರಾಡುಕ್ಕಾಗದೇ ಒದ್ದಾಡ್ತಿದಾಳೆ. ಇಲ್ಲಿ ಹತ್ತಿರ ಬೇರೆ ಯಾವ್ದಾದ್ರೂ ಕ್ಲಿನಿಕ್ ಇದೆಯಾ!? ಕೇಳಿದೆ.

ಆಕೆ ನನ್ನ ಮಗಳ ಕಡೆ ನೋಡಿದರು. ಏನನ್ನಿಸಿತೋ ಏನೋ... "ಹಿಂದಿನ ರಸ್ತೇಲಿ ಒಬ್ರು ಲೇಡಿ ಡಾಕ್ಟರು ಇದಾರೆ. ಅವರು ಸಿಗಬಹುದು

ನೋಡಿ ವಿಚಾರಿಸಿ" ಎಂದರು.

ಅಲ್ಲಿಂದ ಹೊರಟು ಹಿಂದಿನ ರಸ್ತೆಗೆ ಬಂದೆವು. ಅಲ್ಲಿದ್ದ ಬೋರ್ಡನ್ನು ನೋಡಿ, ಗೇಟನ್ನು ತೆಗೆದುಕೊಂಡು ಕಾಂಪೌಂಡ್ ಒಳಕ್ಕೆ ಹೋದೆವು. ಮನೆಯೊಳಗಿದ್ದ ನಾಯಿ ನಿರಂತರವಾಗಿ ಬೊಗಳಲು ಪ್ರಾರಂಭಿಸಿತ್ತು... ಅಷ್ಟರಲ್ಲಿ ಮುಂಬಾಗಿಲು ತೆರೆಯಲ್ಪಟ್ಟಿತ್ತು. ನಾಯಿ ಹೊರಕ್ಕೆ ಬಂದೀತು ಎಂಬ ದಿಗಿಲಿನಿಂದ ನೋಡಿದೆ ಬಂದಿರಲಿಲ್ಲ. ಕಟ್ಟಿ ಹಾಕಿರಬಹುದು. ಆಕೆಯೂ ಆ ಮನೆಯ ಕೆಲಸದವಳೇ.

"ಡಾಕ್ಟ್ರನ್ನ ನೋಡೋಕೆ ಬಂದ್ರಾ? ಕೂತ್ಕೊಳ್ಳಿ" ಎಂದು ಹೇಳಿ ಕುರ್ಚಿಗಳ ಕಡೆ ಕೈ ತೋರಿಸಿದಳು. ಇಬ್ಬರೂ ಕುಳಿತೆವು. ಒಳಗಿನಿಂದ ಒಬ್ಬ ಧಡೂತಿ ಹೆಂಗಸು ಬಂದಳು.

"ಎಸ್..." ಎಂದಳು. ಅವಳೇ ಡಾಕ್ಟ್ರು ಎಂದು ತಿಳಿಯಿತು. ಕೈ ಮುಗಿದು ನಮಸ್ಕಾರ ಎಂದು ಹೇಳಿ, ಮಗಳ ಸಮಸ್ಯೆಯನ್ನು ವಿವರಿಸಿದೆ. ಆಕೆ ಅವಳನ್ನೇ ನೋಡುತ್ತಿದ್ದಳು. ನನ್ನ ಮಾತು ಮುಗಿದ ನಂತರ ನುಡಿದಳು.

"ನಾನು ಸರ್ಜನ್... ಇಂಥಾ ಕೇಸುಗಳನ್ನು ನೋಡೋದಿಲ್ಲ. ಬೇರೆ ಯಾರಾದ್ರೂ ಡಾಕ್ಟರ ಬಳಿಗೆ ಕರೆದುಕೊಂಡು ಹೋಗಿ" ಎಂದಳು. ನನಗೆ ನಿರಾಸೆ ಆಗಿತ್ತು. ನನ್ನ ಮಗಳ ಸಮಸ್ಯೆ ಹೆಚ್ಚಾಗಿತ್ತು.

"ನಾವು ಈ ಊರಿಗೆ ಹೊಸಬರು... ಕ್ಲಿನಿಕ್ಕು, ಡಾಕ್ಟರ್‌ಗಳ ಬಗ್ಗೆ ಗೊತ್ತಿಲ್ಲ, ನಿಮಗೆ ಗೊತ್ತಿರೋ ಡಾಕ್ಟ್ರು ಯಾರಾದ್ರೂ ಇದ್ದರೆ ಹೇಳ್ತೀರಾ? ಕೇಳಿದೆ.

ಆಕೆಗೆ ಉತ್ತರ ಹೇಳಲು ಇಷ್ಟವಿಲ್ಲ ಎನ್ನುವುದು ಆಕೆಯ ಮುಖ ದಲ್ಲಾದ ಬದಲಾವಣೆಯಿಂದಲೇ ತಿಳಿಯಿತು. ಆದರೆ, ನನ್ನ ಮಗಳ ಕಷ್ಟವನ್ನು ಕಂಡು ಸ್ವಲ್ಪ ಕನಿಕರ ಮೂಡಿರಬಹುದು "ಇದೇ ರಸ್ತೇಲಿ ಮುಂದಕ್ಕೆ ಹೋಗಿ ಅಲ್ಲಿ ಒಂದು ಪಾಲಿ ಕ್ಲಿನಿಕ್ ಇದೆ. ಅಲ್ಲಿ ವಿಚಾರಿಸಿ, ಅವರು ನಿಮಗೆ ಹೆಲ್ಪ್ ಮಾಡ್ತಾರೆ." ಎಂದಳು. ಥ್ಯಾಂಕ್ಸ್ ಹೇಳಿ, ನನ್ನ ಮಗಳನ್ನು ಎಳೆದುಕೊಂಡು ಅಲ್ಲಿಂದ ಹೊರಟೆ. ಒಳಗೆ ಕಟ್ಟಿ ಹಾಕಿದ್ದ ನಾಯಿ ಮತ್ತೆ ಬೊಗಳಿತು.

'ಪಾಲಿ ಕ್ಲಿನಿಕ್'ನ ಹುಡುಕಿ ಹೊರಟವಳಿಗೆ, ಮೊದಲು ಕಂಡದ್ದು ಕ್ಲಿನಿಕ್ ಪಕ್ಕದಲ್ಲಿದ್ದ 'ದರ್ಶಿನಿ' ಹೋಟೆಲ್ಲು, ಹೋಟೆಲ್ಲಿನ ಮುಂದೆ ಇದ್ದ ಖಾಲಿ ಜಾಗದಲ್ಲಿ ಇಡಲಾಗಿದ್ದ ಕುರ್ಚಿಗಳು, ಟೇಬಲ್ಲುಗಳು, ತಿಂಡಿ, ಕಾಫಿಗಾಗಿ ಕಾದು ಕುಳಿತಿದ್ದ ಗಿರಾಕಿಗಳು, ಕಾಯುತ್ತಾ ನಿಂತವರು... ಈ ಜನರ ಮಧ್ಯೆ ಹೋಗುವುದು ಹೇಗೆ ಎಂದೇ ಮೊದಲಿಗೆ ಆತಂಕವಾಯಿತು. ಅಕ್ಕಪಕ್ಕದ ಕಣ್ಣು ಹಾಯಿಸುವಾಗ, ಸಣ್ಣದಾಗಿ 'ಪಾಲಿ ಕ್ಲಿನಿಕ್' ಎಂದು ಬರೆದು, ತಗುಲಿ ಹಾಕಿದ್ದ ಫಲಕ ಕಾಣಿಸಿತು. ಫಲಕವೇ ಹಳತಾಗಿ ತುಕ್ಕು ಹಿಡಿದಿರುವಾಗ, ಡಾಕ್ಟರು ಎಂಥವರಿರಬಹುದು ಎಂಬ ಅನುಮಾನ ದಿಂದಲೇ, ಕ್ಲಿನಿಕ್‌ನ ಒಳಗೆ ಬಂದೆವು. ಒಳಗೆ ಯಾರೂ ಕಾಣಲಿಲ್ಲ. ಜನರೇ ಇರಲಿಲ್ಲ. ಅತ್ತಿತ್ತ ಇಣುಕಿ ನೋಡಿ, "ಎಕ್ಸ್‌ಕ್ಯೂಸ್ ಮಿ" ಅಂತ ಒಂದೆರಡು ಬಾರಿ ಹೇಳಿದ ಮೇಲೆ, ಒಳಗಿನ ಕೋಣೆಯಿಂದ ಒಬ್ಬಳು ನರ್ಸು ಹೊರಕ್ಕೆ ಬಂದಳು.

"ಡಾಕ್ಟ್ರು ಇದಾರಾ?" ಕೇಳಿದೆ.

ಇಲ್ಲ, ಇನ್ನೂ ಬಂದಿಲ್ಲ, ಇನ್ನೇನು ಬರುವ ಹೊತ್ತು. ಕೂತ್ಕೊಳ್ಳಿ ಎಂದು ಹೇಳಿ, ಹೆಸರನ್ನು, ವಯಸ್ಸನ್ನು ಬರೆದುಕೊಂಡಳು, ಅಲ್ಲಿದ್ದ ಬೆಂಚಿನ ಮೇಲೆ ಕುಳಿತೆವು. ಈ ವೇಳೆಗೆ ನನ್ನ ಮಗಳು ಸುಸ್ತಾಗಿ ಹೋಗಿದ್ದಳು.

"ತಿನ್ನಕ್ಕೆ ಏನಾದ್ರೂ ಬೇಕಾ?" ಕೇಳಿದೆ.

"ಏನೂ ಬೇಡ" ಸಿಡುಕಿದಳು. ನನಗೂ ಸಿಟ್ಟು ಬಂತು. ಸುಮ್ಮನಾದೆ. ಹತ್ತು ನಿಮಿಷ ಆಯಿತು, ಹದಿನೈದು ನಿಮಿಷಗಳು ಕಳೆದವು. ಅರ್ಧಗಂಟೆ ಆದರೂ, ಡಾಕ್ಟರ ಸುಳಿವಿಲ್ಲ. ಎರಡು ಬಾರಿ ವಿಚಾರಿಸಿದರೂ, ನರ್ಸಿನ ಉತ್ತರ ಒಂದೇ 'ಇನ್ನೇನು ಬರ್ತಾರೆ ಕೂತ್ಕೊಳ್ಳಿ' ಅಂತ.

"ಕೂತೂ ಕೂತು ಸಾಕಾಗಿತ್ತು. ಎದ್ದು ಹೋಗುವಂತೆಯೂ ಇಲ್ಲ. ಅಷ್ಟರಲ್ಲಿ ಕ್ಲಿನಿಕ್ ಫೋನ್ ರಿಂಗಾಗಿತ್ತು. ನರ್ಸು ಎತ್ತಿಕೊಂಡು ಮಾತಾಡಿದಳು. ಸ್ವಲ್ಪ ಸ್ವಲ್ಪ ಕೇಳಿಸಿತ್ತು. ಮಾತು ಮುಗಿಸಿ ಹೊರಬಂದಳು.

"ಡಾಕ್ಟ್ರು ಒಂದು ಗಂಟೆಗೆ ಬರ್ತಾರಂತೆ. ವೇಟ್ ಮಾಡೋದಾದ್ರೆ

ಮಾಡಿ, ಇಲ್ದಿದ್ರೆ ಸಾಯಂಕಾಲ ಬನ್ನಿ" ಎಂದಳು.

ನನ್ನ ಮಗಳ ತೊಂದರೆಗೆ ಕಾಯುವುದಂತೂ ಅಸಾಧ್ಯ ಎಂದು ಕೊಂಡು ಅವಳಿಗೆ ಏನನ್ನು ಹೇಳದೇ ಹೊರ ಬಂದೆವು. ಅಷ್ಟು ಹೊತ್ತಿಗೆ ದರ್ಶಿನಿಯ ಬಳಿಯ ರಶ್ ಕಮ್ಮಿ ಆಗಿತ್ತು. ಈಗ ಏನು ಮಾಡೋದು? ಮನೆಗೆ ಹಿಂತಿರುಗಿ ಹೋಗೋದಾ! ಅಥವಾ ಬೇರೆ ಯಾರಾದ್ರೂ ಡಾಕ್ಟ್ರನ್ನ ಹುಡುಕೋದಾ? ಅಂತ ಅಂದುಕೊಳ್ಳುವಷ್ಟರಲ್ಲಿ ಒಂದು ಆಲೋಚನೆ ಬಂತು.

ಬಳಿಯಲ್ಲಿ ಎಲ್ಲಾದ್ರೂ ಒಂದು ಮೆಡಿಕಲ್ ಸ್ಟೋರ್ ಇದ್ದೇ ಇರ್ಬೇಕು. ಅಲ್ಲಿಗೆ ಹೋಗಿ ಕೇಳಿದರೆ ಸರಿಯಾದ ಮಾಹಿತಿ ಸಿಗುತ್ತೆ. ಡಆಕ್ಟ್ರು ಸಿಗದಿದ್ದರೆ ತಕ್ಷಣಕ್ಕೆ ಯಾವುದಾದ್ರೂ ಮಾತ್ರೆಯನ್ನೋ, ಸಿರಫ್‌ನೋ ಅವನೇ ಕೊಡ್ತಾನೆ ಎಂದುಕೊಂಡು, ಹೋಟೆಲ್ಲಿನ ಗಲ್ಲಾದ ಮೇಲೆ ಕುಳಿತಿದ್ದವನ ಕಡೆಗೆ ನಡೆದೆ. ಇಲ್ಲಿ ಹತ್ತಿರದಲ್ಲಿ ಯಾವುದಾದ್ರೂ ಮೆಡಿಕಲ್ ಸ್ಟೋರ್ಸ್ ಇದೆಯಾ ಅಂತ ಕೇಳಿದೆ.

ಅವನು ನಮ್ಮಿಬ್ಬರನ್ನು ನೀರಸವಾಗಿ ನೋಡಿ, ಈ ರಸ್ತೆಯಲ್ಲೇ ಹೋಗಿ ಬಲಕ್ಕೆ ತಿರುಕ್ಕೊಳಿ ಅಲ್ಲೊಂದು ಹಣ್ಣಿನ ಅಂಗಡಿ ಇದೆ. ಅದರ ಪಕ್ಕದ್ದೇ ಮೆಡಿಕಲ್ ಸ್ಟೋರ್ಸ್ ಎಂದ.

ತಲೆಯಾಡಿಸಿ, ಥ್ಯಾಂಕ್ಸ್ ಹೇಳಿ, ಮೆಡಿಕಲ್ ಸ್ಟೋರ್ಸ್‌ನ್ನು ಹುಡುಕುತ್ತಾ ಮುಂದುವರೆದೆವು. ಎಷ್ಟೋ ದೂರ ನಡೆದ ಮೇಲೆ, ಹಣ್ಣಿನ ಅಂಗಡಿ ಕಣ್ಣಿಗೆ ಬಿತ್ತು. ಅದರ ಪಕ್ಕದಲ್ಲೇ ಮೆಡಿಕಲ್ ಸ್ಟೋರ್ಸ್. ಅಲ್ಲಿ ಕೆಲವರು ಗಿರಾಕಿಗಳು ಇದ್ದು ಅವರೊಂದಿಗೆ ನಾನೂ ನಿಂತೆ. ಹಣ್ಣಿನ ಅಂಗಡಿಯಲ್ಲಿ ಕುಳಿತಿದ್ದವನೊಬ್ಬ ಹಣ್ಣಿನ ಮೇಲೆ ಕುಳಿತ ನೊಣಗಳನ್ನು ಪೇಪರ್ರನ್ನು ಬೀಸಿ ಓಡಿಸುತ್ತಿದ್ದ. ಅಲ್ಲಿ ಇಲ್ಲಿ ಹಾರಾಡುವ ನೊಣಗಳು, ಇಲ್ಲಿಯ ಗಿರಾಕಿಗಳ ಮೇಲೂ ಕುಳಿತುಕೊಳ್ಳುತ್ತಿದ್ದವು. ಎಂಥಾ ದಿನ ಇದು? ಹೀಗೆ ಎಲ್ಲೆಲ್ಲೋ ತಿರುಗಾಡಿ, ಏನೇನು ಹಿಂಸೆಗಳನ್ನು ಅನುಭವಿಸಿದರೂ ಡಾಕ್ಟರು ಸಿಗಲಿಲ್ಲವಲ್ಲ ಅಂತ ಬಹಳ ಬೇಸರವಾಗಿತ್ತು. ಅಷ್ಟರಲ್ಲಿ ನನ್ನ ಸರದಿ ಬಂದಿತು. ಅಕ್ಕ ಪಕ್ಕ ಇರುವವರ ಕಡೆ ಸಂಶಯದಿಂದ ನೋಡಿ, ನನ್ನ

ಮಗಳನ್ನು ತೋರಿಸಿ ಹೇಳಿದೆ.

"ಬೆಳಗ್ನಿಂದ ಹೀಗೇ, ಅಲರ್ಜಿಯಿಂದ ವೀಜಿಂಗ್‌ನಿಂದ ಒದ್ದಾಡ್ತಾ ಇದಾಳೆ. ರಿಲೀಫ್ ಸಿಗುವಂತೆ ಯಾವುದಾದ್ರೂ ಮಾತ್ರೆ ಕೊಡ್ತೀರಾ?..." ಅಂತ ಕೇಳಿದೆ.

ಅವನು ಯಾವುದಾದ್ರೂ ಮಾತ್ರೆಗಳನ್ನು ಕೊಡುತ್ತಿದ್ದನೋ, ಏನೋ, ಅಷ್ಟರಲ್ಲಿ ನನ್ನ ಪಕ್ಕ ನಿಂತಿದ್ದವರು, ಹಾಗೆಲ್ಲಾ ಪ್ರಿಸ್ಕಿಪ್ಷನ್ ಇಲ್ಲದೇ ಮಾತ್ರೆ ಬರೆಸ್ಕೊಂಡಿ ಬನ್ನಿ ಇಲ್ದಿದ್ರೆ ಒಂದು ಹೋಗಿ ಇನ್ನೊಂದಾಗುತ್ತೆ. ಆಮೇಲೆ ಸಫರ್ ಮಾಡುವವರು ನೀವೆ... ಎಂದರು. ಅಂಗಡಿಯವನೂ ಹೌದು ಎನ್ನುವಂತೆ ತಲೆಯಾಡಿಸಿದ.

"ಅಷ್ಟು ಹೊತ್ನಿಂದ ಡಾಕ್ಟ್ರನ್ನೇ ಹುಡುಕ್ತಿದೀನಿ. ಯಾರು ಸಿಕ್ಕಿಲ್ಲ. ಇವಳು ಬೆಳಗ್ನಿಂದ ಹೀಗೇ ಒದ್ದಾಡ್ತಿದಾಳೆ..." ನಾನೆಂದೆ.

"ಇದೇ ರಸ್ತೇಲಿ ಸ್ವಲ್ಪ ಕೆಳಗೆ ಹೋದರೆ ಶಂಕರ್ ಕ್ಲಿನಿಕ್ ಅಂತ ಇದೆ. ಅಲ್ಲಿಯ ಡಾಕ್ಟರು ಇಷ್ಟು ಹೊತ್ತಿಗೆ ಬಂದಿರ್ತಾರೆ. ಎಮೆರ್ಜನ್ಸಿ ಅಂತ ಹೇಳಿದ್ರೆ ಮೊದಲೇ ನಿಮ್ಮನ್ನು ನೋಡ್ತಾರೆ ಆತ ಸಲಹೆಯನ್ನಿತ್ತರು.

ಆತನಿಗೆ ಕಣ್ಣಿನಲ್ಲೆ ಥ್ಯಾಂಕ್ಸ್ ಹೇಳಿ, ಮಗಳ ಕೈ ಹಿಡಿದು, ರಸ್ತೆಯಲ್ಲಿ ಮುಂದೆ ಸಾಗಿದೆ. ಅಷ್ಟರಲ್ಲಿ ನನಗೂ, ನನ್ನ ಮಗಳಿಗೂ ಸುಸ್ತಾಗಿತ್ತು. ಇನ್ನು ನಡೆಯಲು ಸಾಧ್ಯವಿಲ್ಲ ಎಂದುಕೊಂಡು, ಖಾಲಿ ಇದ್ದ ಆಟೋರಿಕ್ಷಾ ನಿಲ್ಲಿಸಿ ಹತ್ತಿದೆವು. "ಹೀಗೇ ಇದೇ ರಸ್ತೇಲಿ ಹೋಗಪ್ಪಾ... ಎಲ್ಲಿ ಇಳಿಯಬೇಕು ಅಂತ ನಾನು ಹೇಳ್ತೀನಿ" ಎಂದು ಹೇಳಿದೆ. ಆಟೋ ಓಡಿತು. ಎಷ್ಟೋ ದೂರ ಓಡಿತು ಎಂದರೆ, ಕ್ಲಿನಿಕ್ ಕಾಣಲೇ ಇಲ್ಲ. ತುಂಬಾ ಮುಂದು ಬಂದು ಬಿಟ್ಟಿದೆವೇನೋ ಅಂತ ಅಂದುಕೊಂಡು, ಮತ್ತೆ ಹಿಂದೆ ಹೋಗುವಂತೆ ಹೇಳಿದೆ.

"ಮೊದಲೇ ಹೇಳ್ಬಾರ್ದಾಗಿತ್ತಾ" ಎಂದು ಅಸಮಾಧಾನದಿಂದ, ಗಾಡಿಯನ್ನು ಹಿಂದಕ್ಕೆ ತಿರುಗಿಸಿದ.

"ಸ್ವಲ್ಪ ನಿಧಾನಕ್ಕೆ ಓಡಿಸಪ್ಪಾ... ಕ್ಲಿನಿಕ್‌ನ ಬೋರ್ಡೇ ಕಾಣ್ಲಿಲ್ಲ ಎನ್ನುತ್ತಾ, ಕತ್ತು ಬಗ್ಗಿಸಿ, ಬೋರ್ಡ್ ಕಾಣುತ್ತದೇನೋ ಅಂತ ನೋಡುತ್ತಿದ್ದೆ. ಅಷ್ಟರಲ್ಲಿ

ಒಂದು ಬೋರ್ಡ್ ಕಾಣಿಸಿತು. ಅದು ಶಂಕರ್ ಕ್ಲಿನಿಕ್ ಆಗಿರಲಿಲ್ಲ. ಬರೀ ಕ್ಲಿನಿಕ್ ಅಂತ ಇತ್ತು.

ಯಾರ ಕ್ಲಿನಿಕ್ ಆದ್ರೇನು! ಯಾವ ಡಾಕ್ಟರಾದ್ರೇನು? ಇವಳ ಕಷ್ಟಕ್ಕೆ ಒಂದು ಪರಿಹಾರ ಸಿಕ್ಕರೆ ಸಾಕೆಂದುಕೊಂಡು, ಆಟೋದವನಿಗೆ ನಿಲ್ಲಿಸಲು ಹೇಳಿದೆ. ಇಬ್ಬರೂ ಇಳಿದ ನಂತರ ಅವನಿಗೆ ಹೇಳಿದೆ, "ಸ್ವಲ್ಪ ಹೊತ್ತು ಕಾಯ್ತಿಯೇನಪ್ಪಾ, ಇಲ್ಲಿಂದ ಸೀದಾ ಮನೆಗೇ ಹೋಗ್ಬೇಕು ಎಕ್ಸ್ಟ್ರಾ ದುಡ್ಡು ಕೊಡ್ತೀನಿ" ಎಂದು.

ಅವನು ಒಪ್ಪಲಿಲ್ಲ, " ನಾನೀಗ ಮನೆಗೆ ಹೋಗ್ತಿದೀನಿ. ಕಾಯಕ್ಕಾಗಲ್ಲ. ರೀಡಿಂಗ್ ಎಷ್ಟಿದೆಯೋ, ಅಷ್ಟನ್ನೂ ಕೊಟ್ಬಿಡಿ" ಎಂದ.

ರೀಡಿಂಗ್ ನೋಡಿದೆ. ಒಂಭತ್ತು ರುಪಾಯಿ... ಅಷ್ಟಾಗಲು ಸಾಧ್ಯವೇ ಇರಲಿಲ್ಲ. ಮಿನಿಮಮ್ ಐದು ರುಪಾಯಿ ಇದ್ದ ಕಾಲ ಅದು. ಅಷ್ಟರೊಳಗೇ ಆಗಬೇಕಾಗಿತ್ತು. ಹತ್ತುವಾಗ, ಅವನು ಮೀಟರ್‌ನ್ನು ಹಿಂದಕ್ಕೆ ತಿರುಗಿಸಿರಲಿಲ್ಲ. ಅದನ್ನೇ ಹೇಳಿದೆ.

"ಒಂಭತ್ತು ರೂಪಾಯಿ ಹೇಗಪ್ಪಾ ಆಗುತ್ತೆ? ಮಿನಿಮಮ್‌ನಲ್ಲೇ ಆಗುತ್ತೆ ನೀನೆಲ್ಲೋ ಮೀಟರ್‌ನ ಬೇರೊಗೆ ಮಾಡಿರ್ಲಿಲ್ಲ ಅಂತ ಕಾಣುತ್ತೆ."

"ನಿಮ್ಮ ಎದುರಿಗೆ ಮೀಟರ್‌ನ ಹಿಂದಕ್ಕೆ ಮಾಡಿದ್ನಲ್ಲಾ ಮೇಡಂ ಈಗ ಹೀಗಂತೀರಿ... ನಿಮ್ಮಂಥ ಕಸ್ಟಮರ್‌ಗಳಿಂದ ತಲೆನೋವು. ಸುಮ್ನೆ ಒಂಭತ್ತು ರುಪಾಯಿ ಕೊಡಿ. ನಾನು ಹೋಗ್ತೀನಿ." ಎಂದ. ಅಷ್ಟರಲ್ಲಾಗಲೇ ಒಂದಿಬ್ಬರು ಜನ ಸೇರಿದ್ದರು. ಅಷ್ಟರಲ್ಲಿ ನನ್ನ ಮಗಳು ರೇಗಿದಳು.

"ಅತ್ಲಾಗೆ ಕೊಟ್ಟು ಕಳಿಸಮ್ಮ. ನಂಗೆ ನಿಂತ್ಕೊಳ್ಳೋಕೇ ಆಗ್ತಿಲ್ಲ" ಎಂದಳು. ಹತ್ತು ರೂಪಾಯಿಯ ನೋಟೊಂದನ್ನು ಕೊಟ್ಟೆ. ಅವನು ಒಂದು ರೂಪಾಯಿಯನ್ನು ವಾಪಸ್ಸು ಕೊಡಲಿಲ್ಲ. ಕೇಳೋಣ ಅನ್ನುವಷ್ಟರಲ್ಲಿ ಅವನು ರಿಕ್ಷಾವನ್ನು ವೇಗವಾಗಿ ಓಡಿಸಿಕೊಂಡು ಹೊರಟೇ ಹೋಗಿದ್ದ. ಸುತ್ತಲೂ ನಿಂತಿದ್ದ ಜನರು ನಮ್ಮನೇ ನೋಡುತ್ತಿದ್ದಾರೆಂದೆನಿಸಿತ್ತು. ಅಲ್ಲಿ ಒಂದು ಪೈಂಟ್ ಮಾರುವ ಅಂಗಡಿ ಇತ್ತು. ಬಹುಶಃ ಅದು ಬಸ್‌ಸ್ಟಾಪ್ ಕೂಡಾ ಆಗಿರಬಹುದು. ಕೆಲವರು ನಿಂತಿದ್ದರು, ಕೆಲವರು ಕೂತಿದ್ದರು.

ನಾನು ಬೋರ್ಡ್‌ನ್ನು ನೋಡಿದೆ. ಕ್ಲಿನಿಕ್ ರಸ್ತೆಗೇ ಇರಲಿಲ್ಲ. ಹಿಂದಕ್ಕೆ ಷೆಡ್‌ನಲ್ಲಿತ್ತು. ಸಣ್ಣಗೇಟನ್ನು ತೆರೆದು ಒಳಗೆ ಹೋದೆ. ಅಲ್ಲಾಗಲೇ ಅನೇಕರು ಕಾಯುತ್ತಾ ಕುಳಿತಿದ್ದರು. ಎಲ್ಲರ ಮುಖದಲ್ಲೂ ಅಸಹನೆ ಎದ್ದು ಕಾಣುತ್ತಿತ್ತು. ನಮ್ಮಿಬ್ಬರ ಕಡೆ ವಿಚಿತ್ರವಾಗಿ ನೋಡಿದರು. ಅಲ್ಲಿ ಕುಳಿತುಕೊಳ್ಳಲು ಜಾಗವಿರಲಿಲ್ಲ. ಅತ್ತಿತ್ತ ನೋಡುವಾಗ ಯಾರೋ ಹೇಳಿದರು "ಒಳಗೆ ಹೋಗಿ ಹೆಸರು ಬರೆಸಿ, ಟೋಕನ್ ತಗೊಳ್ಳಿ" ಎಂದು.

ಒಳಗೆ ಹೋಗಿ, ರಿಸೆಪ್ಷನ್‌ನಲ್ಲಿ ಕುಳಿತಿದ್ದವಳನ್ನು, "ಡಾಕ್ಟರು ಇದಾರ? ಸ್ವಲ್ಪ ಅರ್ಜೆಂಟು" ಎಂದೆ.

"ಅವಳು ಸಣ್ಣದಾಗಿ ನಕ್ಕಳು. ಡಾಕ್ಟರು ಇನ್ನು ಬಂದಿಲ್ಲ" ಎಂದಳು.

"ಹೌದಾ! ಹಾಗಾದ್ರೆ ಎಷ್ಟು ಹೊತ್ತಿಗೆ ಬರ್ತಾರೆ? ಅಂತ ಕೇಳಿದೆ"

"ಗೊತ್ತಿಲ್ಲ. ಅವರು ಹೊರಗೆ ಎಲ್ಲೋ ವಿಸಿಟ್ಸ್‌ಗೆ ಹೋಗಿದಾರಂತೆ ಬೇಗಲೂ ಬರಬಹುದು. ತಡವಾಗಲೂ ಬಹುದು" ನನ್ನ ಮುಖ ಕೆಟ್ಟಿತು. ಅಂತೂ ಇವತ್ತು ಯಾವ ಡಾಕ್ಟರಿಂದಲೂ ನನಗೆ ಸಹಾಯ ಸಲಹೆ ಇಲ್ಲ ಅಂತಂದುಕೊಂಡು ಹೆಸರನ್ನು ಬರೆಸಿ ಆಚೆಗೆ ಬಂದೆ. ಅಷ್ಟರಲ್ಲಿ ಬಿಸಿಲು ಚೆನ್ನಾಗಿ ಏರಿದ್ದರಿಂದ ಆಯಾಸವಾಗಿತ್ತು. ಬಾಯರಿಕೆ ಆಗಿತ್ತು. ಜೊತೆಯಲ್ಲಿ ನೀರಿನ ಬಾಟಲ್ ಇರಲಿಲ್ಲ. ಹೊರಗೆಲ್ಲಾದರೂ, ಹಣ್ಣಿನ ಜ್ಯೂಸ್ ಸಿಕ್ಕಿದರೆ ಕುಡಿಯಬೇಕೆಂದುಕೊಂಡು ಹೊರ ಬಂದೆವು. ಪೈಂಟ್ ಅಂಗಡಿಯಲ್ಲಿ ವಿಚಾರಿಸೋಣ ಎಂದುಕೊಂಡು ಅತ್ತ ಬಂದೆ. ಅಂಗಡಿಯಾತನೊಡನೆ ಮಾತನಾಡುತ್ತಾ ನಿಂತಿದ್ದವನೊಬ್ಬ ವ್ಯಕ್ತಿ ಇತ್ತ ತಿರುಗಿದ.

"ನೀವು ಡಾಕ್ಟರಿಗೋಸ್ಕರ ಕಾಯ್ತಾ ಇದೀರಾ?" ಆತ ಕೇಳಿದ.

"ಹೂಂ" ಎಂದೆ ಅನುಮಾನಿಸುತ್ತಾ

"ಈ ಹುಡ್ಗಿಗೆ ಏನೋ ಸಮಸ್ಯೆ ಇದೆ. ನೀವು ಆಟೋದಿಂದ ಇಳಿದಾಗಲೆ ಅಂದ್ಕೊಂಡೆ" ಎಂದ.

ಇವನಿಗೆ ಉತ್ತರ ಬೇರೆ ಹೇಳ್ಬೇಕಾ ಅಂತ ಅಂದುಕೊಂಡರೂ,

ಸೌಜನ್ಯದಿಂದ 'ಅದಕ್ಕೇ...?' ಎಂದು ಕೇಳಿದೆ.

"ಇಲ್ಲೇ ಎದುರ್ಗಿಗೆ ನನ್ನ ಕ್ಲಿನಿಕ್ ಇದೆ. ನೀವು ಬೇಕಾದರೆ ಬರಬಹುದು. ನಾನು ಟೆಸ್ಟ್ ಮಾಡ್ತೀನಿ".

"ನಾನು ಎದುರಿಗೆ ನೋಡಿದೆ. ಅಲ್ಲೆಲ್ಲೂ ಕ್ಲಿನಿಕ್ ಇದ್ದಂತೆ ಕಾಣಲಿಲ್ಲ. ಆತನ ಕಡೆ ಪ್ರಶ್ನಾರ್ಥಕವಾಗಿ ನೋಡಿದೆ. ಆತ ನಸುನಕ್ಕ.

"ನಿಮಗೆ ನಾನು ಡಾಕ್ಟರು ಹೌದೋ ಅಲ್ಲವೋ ಎಂಬ ಅನುಮಾನ ಕಾಡ್ತಿರಬೇಕು. ಬೇಕಾದರೆ ಇವರನ್ನೇ ಕೇಳಬಹುದು. ನಿಮಗೆ ನಂಬಿಕೆ ಇದ್ದರೆ ಬನ್ನಿ. ಇಲ್ಲದಿದ್ದರೆ ಬೇಡ. ಏನೋ ನಿಮ್ಮ ಪರದಾಟವನ್ನು ನೋಡಿ. ನಿಮಗೆ ಹೆಲ್ಪ್ ಮಾಡಬೇಕೆನಿಸಿತು ಎಂದು ಹೇಳಿ ರಸ್ತೆಯನ್ನು ದಾಟಿ ತನ್ನ ಕ್ಲಿನಿಕ್ ಕಡೆಗೆ ನಡೆದ.

ನಾನು ಇದೆಂಥಾ ಪರೀಕ್ಷೆಗಳಪ್ಪಾ ಎಂದುಕೊಂಡು ದೇವರ ಮೇಲೆ ಭಾರ ಹಾಕಿ ರಸ್ತೆಗೆ ಇಳಿದು, ಕ್ರಾಸ್ ಮಾಡಿ, ಆ ವ್ಯಕ್ತಿಯ ಹಿಂದೆ ಹಿಂದೆ ನನ್ನ ಮಗಳೊಂದಿಗೆ ನಡೆದೆ. ಅವನು ದೊಡ್ಡ ಗೇಟನ್ನು ತೆಗೆದು ಒಂದು ಮನೆಯೊಳಗೆ, ಹೋಗುವ ಮೊದಲು ಹಿಂತಿರುಗಿ ನೋಡಿ, ಅವನ ಹೆಸರು ವಿದ್ಯಾರ್ಹತೆ ಇದ್ದ ಫಲಕವನ್ನು ತೋರಿಸಿ, ನಾನೇ ಎನ್ನುವಂತೆ ಒಳರೋಗಿಗಳಾಗಲೀ ಇರಲಿಲ್ಲ. ಬಾಗಿಲಿಗೆ ಕಟ್ಟಿದ ತೋರಣ, ಒಣಗಿದ್ದರೂ ಹಸುರಾಗಿತ್ತು. ಎಲ್ಲೋ ಹೊಸಬ ಡಾಕ್ಟರಿರಬೇಕು.. ಏನೇ ಇರಲಿ, ಇವಳಿಗ ರಿಲೀಫ್ ಸಿಕ್ಕಿದರೆ ಸಾಕು ಎಂದುಕೊಂಡು ನಿಧಾನವಾಗಿ ಒಳಗೆ ಬಂದೆ. ಅಲ್ಲಿ ಒಂದು ಕ್ಲಿನಿಕ್‌ಗೆ ಬೇಕಾದ ಫರ್ನೀಚರ್‌ಗಳಿದ್ದವು. ಡಾಕ್ಟರಿಗೆ ಬೇಕಾ ಉಪಕರಣಗಳಿದ್ದವು. ಸ್ವಲ್ಪ ನಿರಾಳವೆನಿಸಿತು.

ಡಾಕ್ಟರು ಸಿಂಕ್‌ನಲ್ಲಿ ಕೈ ತೊಳೆದು, ಸ್ಟೆಥೋಸ್ಕೋನ್ನು ಕೊರಳಿಗೆ ಧರಿಸಿ, "ಬಾಮ್ಮಾ... ಇಲ್ಲಿ ಮಲಕ್ಕೋ... ನಿನ್ನ ಹೆಸರೇನು, ಏನು ಓದು ತ್ತಿದ್ದೀಯಾ" ಎಂದೆಲ್ಲಾ ವಿಚಾರಿಸಿ, ನಿಧಾನವಾಗಿ ಪರೀಕ್ಷಿಸಿದ. ಇವಳು ಸಹಕರಿಸದಿದ್ದರೂ, ಆತ ಪರೀಕ್ಷೆಯನ್ನು ಮುಂದುವರೆಸಿದ. ನಂತರ ಒಂದು ಚೀಟಿಯಲ್ಲಿ ಇವಳ ಹೆಸರನ್ನು, ವಯಸ್ಸನ್ನು ಬರೆದು "ಅಲರ್ಜಿಕ್ ಬ್ರಾಂಕೈಟೆಸ್" ಎಂದು ಬರೆದ ನಂತರ ಅದಕ್ಕೆ ಸಂಬಂಧಿಸಿದಂತೆ ಹಿಸ್ಟರಿ

ಯನ್ನೆಲ್ಲಾ ಕೇಳಿ ತಿಳಿದುಕೊಂಡು ಎರಡು ಬಗೆಯ ಮಾತ್ರೆಗಳನ್ನು ಬರೆದು ಕೊಟ್ಟು ಯಾವ್ಯಾವಾಗ ತೆಗೆದುಕೊಳ್ಳಬೇಕೆಂದು ತಿಳಿಸಿದ. ತನ್ನ ಬಳಿ ಇದ್ದ, ಸ್ಯಾಪಲ್‌ಗೆಂದು ಕೊಟ್ಟಿದ್ದ ಮಾತ್ರೆಗಳಲ್ಲಿ ಒಂದನ್ನು ಕೊಟ್ಟು ತಾನೇ, ಒಳಗಿನಿಂದ ನೀರನ್ನೂ ತಂದುಕೊಟ್ಟು ನುಂಗುವಂತೆ ಹೇಳಿದ. ಇಷ್ಟವಿಲ್ಲ ದಿದ್ದರೂ, ನನ್ನ ಮಗಳಿಗೆ ಮಾತ್ರೆಯನ್ನು ನುಂಗಿಸಿದೆ. ಅವಳು ನನ್ನನ್ನು ದುರು ದುರು ನೋಡಿದಳು. ಅವನು ಮುಗುಳ್ನಕ್ಕ.

"ಇನ್ನು ಅರ್ಧ ಗಂಟೇಲಿ, ಉಸಿರಾಟ ಸರಿಯಾಗುತ್ತೆ. ಈ ಮಾತ್ರೆ ಗಳನ್ನು ಟೈಂಗೆ ಸರಿಯಾಗಿ ಕೊಡಿ. ತಂಡಿ ಇರುವ ಪದಾರ್ಥಗಳನ್ನು ತಿನ್ನೋದು ಬೇಡ." ಎಂದು ಹೇಳಿದ.

"ಥ್ಯಾಂಕ್ಸ್ ಹೇಳಿ ಫೀಸು ಎಷ್ಟು" ಅಂತ ಕೇಳಿದೆ.

"ಹತ್ತು ರೂಪಾಯಿ ಕೊಡಿ" ಸಾಕು ಎಂದ. ಆ ಕಾಲಕ್ಕ ಹತ್ತು ರೂಪಾಯಿ ಡಾಕ್ಟರರರ ಫೀಸು ಜಾಸ್ತಿ ಅಂತ ಎನಿಸಿದರೂ, ಬೆಳಗಿನಿಂದ ಪರದಾಡಿದ್ದರ ಮುಂದೆ ಇದು ಕಡಿಮೆ ಎನಿಸಿತು. ಅವನು ಇಪ್ಪತ್ತೈದು ರೂಪಾಯಿ ಕೇಳಿದ್ದರೂ ನಾನು ಸಿದ್ಧಳಾಗಿದ್ದೆ. ಆಟೋದವನು ಕಿತ್ಕೊಂಡು ಮೋಸ ಮಾಡಿದ್ದ. ಈತ ಹತ್ತು ರೂಪಾಯಿಗೆ ಸಹಾಯ ಮಾಡಿದ್ದ. ದುಡ್ಡು ಕೊಟ್ಟು ಥ್ಯಾಂಕ್ಸ್ ಹೇಳಿ ಹೊರ ಬಂದೆ. ಆತ ನನ್ನ ಹಿಂದೆಯೇ ಬಂದ. ಹೊರಗೆ ಕಾಯುತ್ತಾ ಕುಳಿತಿದ್ದ ರೋಗಿಗಳು ಯಾರೂ ಇರಲಿಲ್ಲ. ಈಗ ಅವನ ಹೆಸರಿನ ಫಲಕದ ಗಮನದಿಂದ ನೋಡಿದೆ. ಅವನ ಹೆಸರಿನ ಕೆಳಗೆ ಮಕ್ಕಳ ತಜ್ಞರು ಅಂತ ಇತ್ತು. ನನ್ನ ಮಗಳು ಚಿಕ್ಕ ಮಕ್ಕಳ ಗುಂಪಿಗೆ ಸೇರುತ್ತಿರಲಿಲ್ಲವಾದರೂ, ಆತನ ಸೌಹಾರ್ದತೆ, ಸೌಜನ್ಯತೆಯಿಂದ ನಮಗೆ ಅನುಕೂಲವೇ ಆಗಿತ್ತು. ಕಾಂಪೌಂಡ್ ದಾಟಿ, ರಸ್ತೆ ಬಂದು ಆಟೋ ಹಿಡಿದೆ.

ಒಂದು ಇಲಿಯನ್ನ ಕೊಂದಿದ್ದಕ್ಕೆ ಎಂಥಾ ಪರದಾಟ... ಇವತ್ತು ಈ ಡಾಕ್ಟರೂ ಸಿಗದಿದ್ದರೆ, ಇವಳನ್ನಾ ಆಸ್ಪತ್ರೆಗೆ ಸೇರಿಸಬೇಕಾಗ್ತಿತ್ತೋ ಏನೋ ಗಣಪತಿ, ನೀನೇ ನಮ್ಮನ್ನು ಕಾಪಾಡಿದೆ ಎಂದುಕೊಂಡು ದೇವರನ್ನು ಮನದಲ್ಲೇ ನೆನೆಯುವಾಗ, ಆ ಡಾಕ್ಟರ ಹೆಸರು ನೆನಪಿಗೆ

ಬಂತು. ಫಲಕದ ಮೇಲೆ ಡಾ॥ ವಿನಾಯಕರಾವ್ ಅಂತ ಬರೆದಿತ್ತು. ಅಂತೂ ವಿನಾಯಕನೇ ನಮ್ಮ ನೆರವಿಗೆ ಬರಬೇಕಾಯ್ತು. ಆದರೆ, ಆ ಇಲಿ ಮನೆಯೊಳಕ್ಕೆ ಯಾಕೆ ಬಂತೋ? ನಮ್ಮ ಕಣ್ಣಿಗೆ ಯಾಕೆ ಬಿತ್ತೋ? ಎಷ್ಟು ಫಜೀತಿಯನ್ನು ಪಟ್ಟಿದ್ದಾಯ್ತಲ್ಲ ಅಂತ ಅಂದುಕೊಂಡೆ.

ಮನೆ ಸೇರಿದಾಗ, ಗಂಟೆ ಎರಡಾಗಿತ್ತು. ನಮಗಾಗಿ ಕಾಯುತ್ತಾ ನಿಂತಿದ್ದ ಇವರು, ಯಾಕೆ ಇಷ್ಟು ಹೊತ್ತಾಯ್ತು ತುಂಬಾ ರಷ್ ಇತ್ತಾ? ಅಂತ ಕೇಳಿದಾಗ ಇವರ ಮೇಲೆ ರೇಗುವಂತಾಗಿತ್ತು. ನಾನು ಸುಮ್ಮನಿದ್ದರೂ ನನ್ನ ಮಗಳು ಬಿಡಲಿಲ್ಲ.

"ಇಲೀನ ಕೊಂದೋರು ನೀವು, ಅನುಭವಿಸ್ಕೋಳು ನಾನು. ಇನ್ಮುಂದೆ ನೀವು ಇಲೀನ ಕೊಲ್ಲಕೂಡದು" ಎಂದು ಜಬರ್ದಸ್ತಿನಿಂ[illegible] ಹೇಳಿ ಒಳಗೆ ಹೋದಳು. ನಾನು ಮಾತಾಡಲಿಲ್ಲ. ಆ ದಿನದ ಪರ[illegible] ದಿಂದ ನಾನಿನ್ನೂ ಹೊರಕ್ಕೆ ಬಂದಿರಲಿಲ್ಲ. ನನಗೆ ಮಾತು ಕ[illegible] ಚರ್ಚೆ ಯಾವುದೂ ಬೇಡವಾಗಿತ್ತು.

***

೨೫. ನಮೋ ನಮಃ

ನಮ್ಮ ತಂದೆಯ ಮನೆಯ ನೆಂಟರೊಬ್ಬರ ಮನೆಯಲ್ಲಿ ಮನೆ ತುಂಬಾ ಮಕ್ಕಳು. ಮಧ್ಯಮ ವರ್ಗದವರಾಗಿದ್ದರೂ, ಮನೆಯಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ಮಕ್ಕಳನ್ನು ಚೆನ್ನಾಗಿ ಸಾಕಿ ಬೆಳೆಸಿದ್ದರು. ಎಲ್ಲರನ್ನು ವಿದ್ಯಾವಂತರನ್ನಾಗಿ ಮಾಡಿದ್ದರು. ಅವರವರ ವಿದ್ಯಾರ್ಹತೆಗೆ ತಕ್ಕಂತೆ ಅಲ್ಲದಿದ್ದರೂ, ಗಂಡು ಮಕ್ಕಳೆಲ್ಲರೂ ಸಂಪಾದಿಸುತ್ತಿದ್ದರು. ವಯಸ್ಸಿನಲ್ಲಿ ಮದುವೆಯಾಗಿ ಎಲ್ಲರಿಗೂ ಎರಡೆರಡು ಮಕ್ಕಳೂ ಇದ್ದರು.

ಅವರಲ್ಲಿ ಒಬ್ಬನಿಗೆ, ಇಬ್ಬರು ಹೆಣ್ಣು ಮಕ್ಕಳು. ಅವನು ಒಂದು ಸರ್ಕಾರಿ ಕೆಲಸದಲ್ಲಿದ್ದ. ಅವನ ಹೆಂಡತಿ ಗೃಹಿಣಿ. ಅವರಿಗೆ ಒಂದು ಚಿಕ್ಕದಾದ ಸ್ವಂತ ಮನೆಯೂ ಇತ್ತು. ಗಂಡ ಹೆಂಡತಿ ಇಬ್ಬರೂ, ಜಿಪುಣರೆನಿಸಿಕೊಂಡಿದ್ದರು. ಅವರೂ ಯಾರ ಮನೆಗೆ ಹೋಗುತ್ತಿರಲಿಲ್ಲ. ಬೇರೆ ಯಾರೂ ಅವರ ಮನೆಗೆ ವಿಶೇಷವಾಗಿ ಬರುತ್ತಿರಲಿಲ್ಲ. ಅವನು ತಾನಾಯಿತು, ತನ್ನ ಕೆಲಸ ಕಾರ್ಯವಾಯಿತು ಎಂಬಂತೆ ಇದ್ದ. ವಯಸ್ಸಿಗೆ ಮೀರಿದ ಗಾಂಭೀರ್ಯ. ಒಂದು ತರಹ ಸ್ಥಿತ ಪ್ರಜ್ಞತೆ ಅಂತಲೇ ಹೇಳಬೇಕು. ಅವನು ಯಾರನ್ನೂ ದೂಷಿಸುತ್ತಿರಲಿಲ್ಲ, ಆಡಿಕೊಳ್ಳುತ್ತಿರಲಿಲ್ಲ. ಆದರೆ ಅವನ ಬಗ್ಗೆ ಉಳಿದವರು ಆಡಿಕೊಳ್ಳುತ್ತಿದ್ದರು. ಅದರ ಬಗ್ಗೆ ಅವನು ತಲೆ ಕೆಡಿಸಿಕೊಳ್ಳುತ್ತಿದ್ದನೋ ಇಲ್ಲವೋ ಅದು ಅವನಿಗೇ ಗೊತ್ತು.

ಅವನು ಕೆಲಸದಿಂದ ನಿವೃತ್ತಿಯಾದ ಮೇಲೆ, ಅವನು ಆಧ್ಯಾತ್ಮದ ಪುಸ್ತಕಗಳನ್ನು ಓದುತ್ತಿದ್ದ, ವಾಕಿಂಗ್ ಹೋಗುತ್ತಿದ್ದ. ಬೇರೆ ಬೇರೆ ಬಡಾವಣೆ ಗಳಲ್ಲಿದ್ದ ದೇವಸ್ಥಾನಗಳಿಗೆ ಹೋಗಿ ಬರುತ್ತಿದ್ದ. ಅದೂ ಕಾಲು ನಡಿಗೆ

ಯಲ್ಲೇ. ಬಸ್ಸಿಗಾಗಿ, ಆಟೋರಿಕ್ಷಾಕ್ಕಾಗಿ ಖರ್ಚು ಮಾಡುತ್ತಿರಲಿಲ್ಲ. ಅವನು ಒಳ್ಳೆಯ ಹವ್ಯಾಸಗಳನ್ನು ಪರಿಚಯದವರು ಆಡಿಕೊಳ್ಳುತ್ತಿದ್ದರು.

ಅವನು ಎಷ್ಟೋ ಬಾರಿ ನಮ್ಮ ಮನೆಯ ಮುಂದಿನ ರಸ್ತೆಯಲ್ಲೇ ವಾಕಿಂಗ್ ಹೋಗುತ್ತಿದ್ದುದನ್ನು ಕಂಡಿದ್ದೆ. ಅವನೆಂದೂ ನಮ್ಮ ಮನೆಗೆ ಬರಲಿಲ್ಲ. ಮಹಡಿ ಮನೆಯಲ್ಲಿದ್ದ ನಾನು ಕೆಳಗಿಳಿದು ಬರುವಷ್ಟರಲ್ಲಿ ಅವನು ಆ ರಸ್ತೆಯಲ್ಲಿ ಮುಂದೆ ಸಾಗಿರುತ್ತಿದ್ದ. ಅವನು ಮತ್ತೆ ಅದೇ ರಸ್ತೆಯಲ್ಲಿ ಹೋಗುವುದನ್ನು ಕಾಯುತ್ತಿರಲಿಲ್ಲ.

ಒಮ್ಮೆ ಅನಿರೀಕ್ಷಿತವಾಗಿ, ರಸ್ತೆಯಲ್ಲಿ ಸಿಕ್ಕಿದಾಗ, ತಾನು ಅಲ್ಲಿಯ ದೇವಸ್ಥಾನಕ್ಕೆ ಹೋಗುತ್ತಿರುವುದಾಗಿ ಹೇಳಿದ. ಯಾವ ದೇವಸ್ಥಾನ ಎಂದು ನಾನು ಕೇಳಲಿಲ್ಲ. ಏಕೆಂದರೆ ಆ ಬಡಾವಣೆಯಲ್ಲಿ ಎಷ್ಟೋ ದೇವಸ್ಥಾನ ಗಳಿದ್ದವು.

ನಮ್ಮ ಮನೆಗೆ ಹತ್ತಿರದಲ್ಲಿ ಒಂದು ಈಶ್ವರನ ದೇವಸ್ಥಾನವಿತ್ತು. ಈಶ್ವರನ ದೇವಸ್ಥಾನವಾದುದರಿಂದ, ಉಳಿದ ಕೆಲವು ದೇವಸ್ಥಾನಗಳಂತೆ ತುಂಬಾ ಹೊತ್ತು ಬಾಗಿಲನ್ನು ತೆಗೆದಿರುತ್ತಿರಲಿಲ್ಲ. ಸಾಯಂಕಾಲದ ಹೊತ್ತಿನಲ್ಲಂತೂ, ಬೇಗ ತೆಗೆದುದೇ ಅಲ್ಲ. ಆದರೆ ಕಾರ್ತಿಕ ಮಾಸಗಳಲ್ಲಿ ದೇವಸ್ಥಾನಗಳಲ್ಲಿ ಅಭಿಷೇಕ, ವಿಶೇಷ ಪೂಜೆಗಳು ನಡೆಯುತ್ತಿದ್ದವು. ಹಾಗೇ ಸೋಮವಾರಗಳಲ್ಲಿ ರುದ್ರಾಭಿಷೇಕ, ಅಲಂಕಾರ, ಪೂಜೆ, ಮಂಗಳಾರತಿ, ಪ್ರಸಾದ ವಿನಿಯೋಗ ಎಲ್ಲವೂ ನೆರವೇರುತ್ತಿದ್ದವು.

ನಾವುಗಳು ಪ್ರತಿನಿತ್ಯವೂ ದೇವಸ್ಥಾನಗಳಿಗೆ ಹೋಗಿ ಬರುವ ಅಭ್ಯಾಸವನ್ನೇನೂ ಇಟ್ಟುಕೊಂಡಿರಲಿಲ್ಲ. ಆ ರಸ್ತೆಯಲ್ಲಿ ಹೋಗುವಾಗ, ದೇವಸ್ಥಾನದ ಬಾಗಿಲು ತೆರೆದಿದ್ದರೆ, ಒಂದುಗಳಿಗೆ ಹೋಗಿ ದೇವರ ದರ್ಶನ ಮಾಡಿ ಬರುತ್ತಿದ್ದೆವು. ಹಾಗೆ ಒಮ್ಮೆ ಆ ದೇವಸ್ಥಾನಕ್ಕೆ ಹೋದೆ. ಆಗ ರುದ್ರಾಭಿಷೇಕ ನಡೆಯುತ್ತಿತ್ತು. ಕೆಲವು ಋತ್ವಿಕರು ದೇವರ ಮುಂದೆ ಕುಳಿತು, ರುದ್ರವನ್ನು ಪಠಣ ಮಾಡುತ್ತಿದ್ದರು. ಅದು ರುದ್ರ ಚಮಕ ಎಂದು ನನಗೆ ಗೊತ್ತಾಯಿತು. ಏಕೆಂದರೆ ನಮ್ಮ ತಂದೆ ರುದ್ರಾಭಿಷೇಕವನ್ನು ಮಾಡುವಾಗ, ಈ ಮಂತ್ರವನ್ನು ಹೇಳುತ್ತಿದ್ದರು. ಆದರೆ ಈ ರೀತಿ

ಸಾಮೂಹಿಕವಾಗಿ, ಐದಾರು ಜನ ಬ್ರಾಹ್ಮಣರು ಕುಳಿತು ರುದ್ರವನ್ನು ಹೇಳುತ್ತಿದ್ದುದನ್ನು ಕೇಳಿದ್ದು ಇದೇ ಮೊದಲು. ಹಾಗಾಗಿ ಅಲ್ಲಿ ಯಾರ್ಯಾರು ಕುಳಿತಿದ್ದಾರೋ ಎಂದು ಗಮನ ಹರಿಸಿದೆ... ಅವರ ಪೈಕಿ ಒಬ್ಬನ ಮುಖ ಪರಿಚಯ ನನಗಿದೆ ಅಂತ ಎನ್ನಿಸಿತು. ಮತ್ತೊಮ್ಮೆ ನೋಡಿದೆ. ಬಿಳಿಯ ಪಂಚೆಯನ್ನುಟ್ಟು, ಬಿಳಿಯ ಶಲ್ಯವನ್ನು ಹೊದ್ದು ಕುಳಿತಿದ್ದರು. ಹಣೆಯಲ್ಲಿ ಧಾರಾಳವಾಗಿ ಬಳಿದಿದ್ದ ವಿಭೂತಿ... ಆ ವ್ಯಕ್ತಿ ಬೇರೆ ಯಾರೂ ಅಲ್ಲ. ನಾನು ಈ ಮುಂಚೆ ಹೇಳಿದ ನಿವೃತ್ತ ಸರ್ಕಾರಿ ಸೇವಕ. ಅವನ್ಯಾಕೆ ಇವರುಗಳ ಮಧ್ಯೆ ಕುಳಿತಿದ್ದಾನೆ ಎಂದು ನನಗೆ ಹೊಳೆಯಲೇ ಇಲ್ಲ. ಅವನ ಕೈಯಲ್ಲಿ ಒಂದು ಸಣ್ಣ ಪುಸ್ತಕ. ಅವನ ಮುಂದೆ ಒಂದು ಬಿಳಿಯ ಕೈವಸ್ತ್ರ. ಅದರ ಮೇಲೆ ಹತ್ತಾರು ಹತ್ತು ಪೈಸೆಯ ನಾಣ್ಯಗಳು... ಆಗೆಲ್ಲಾ, ಹತ್ತು ಪೈಸೆಯ ವೃತ್ತಾಕಾರ್ರವಾಗಿ ಸುಮಾರಾಗಿ ಅಗಲವಾಗಿದ್ದ ನಾಣ್ಯಗಳ ಅಂಚಿನಲ್ಲಿ ವಂಕಿ ವಂಕಿಯಾಗಿ ಕೊರೆದಿರುತ್ತಿದ್ದರು. ದೂರ ದಿಂದಲೇ ಅದು ಹತ್ತು ಪೈಸೆಯ ನಾಣ್ಯಗಳೆಂದು ಯಾರಿಗಾದರೂ ತಿಳಿಯು ತ್ತಿತ್ತು. ಅವನನ್ನು ಆ ವೇಷದಲ್ಲಿ ನೋಡಿ ನನಗೆ ಹೇಗೆ ಹೇಗೋ ಆಯಿತು. ಅವನ ಬಗ್ಗೆ ಏನೇನೋ ಆಲೋಚನೆಗಳು ಮೂಡಿದವು. ಅವನ ಬಗ್ಗೆ ಅಯ್ಯೋ ಎನಿಸಿತು. "ಉದರ ನಿಮಿತ್ತಂ ಬಹುಕೃತ ವೇಷಂ" ಅನ್ನುವಂತೆ ದಕ್ಷಿಣೆಯ ಆಸೆಗಾಗಿ ಹಾಗೆ ಕುಳಿತಿದ್ದಾನೆಂದೇ ಅನ್ನಿಸಿತು. ಅವನು ಶ್ರೀಮಂತನಲ್ಲ. ಆದರೆ ಬಡವನೂ ಅಲ್ಲ. ದೇವಸ್ಥಾನಗಳಿಗೆ ಹೋಗಿ ಹೀಗೆ ಸಂಪಾದಿಸುವ ಬದಲು ಬೇರೆ ಯಾವುದಾದರೂ ಸಣ್ಣ ಕೆಲಸ ಕ್ಕಾದರೂ ಸೇರಿಕೊಳ್ಳಬಹುದಾಗಿತ್ತು ಅಂತ ಅನ್ನಿಸದೇ ಇರಲಿಲ್ಲ. ಈ ವಿಷಯವನ್ನು ನಮ್ಮ ತಂದೆ ತಾಯಿಗೆ ತಿಳಿಸಬೇಕೆನ್ನಿಸಿತು.

ಅಷ್ಟರಲ್ಲಿ ಒಂದು ಅಭಿಷೇಕ ಮುಗಿದು ಮಂಗಳಾರತಿ ಮಾಡಿದರು. ದೇವರ ಮಂಗಳಾರತಿಯ ನಂತರ, ಅಲ್ಲಿ ಕುಳಿತಿದ್ದ ಋತ್ವಿಕರಿಗೆ ಮಂಗಳಾರತಿಯನ್ನು ಕೊಟ್ಟರು. ನನಗೆ ಆತನ ಮೇಲೆ ಗಮನವಿತ್ತು. ಅವನು ಮಂಗಳಾರತಿಯನ್ನು ತೆಗೆದುಕೊಳ್ಳುವ ಮೊದಲು, ತನ್ನ ಮುಂದೆ ಇಟ್ಟುಕೊಂಡಿದ್ದ, ಹತ್ತು ಪೈಸೆಯ ನಾಣ್ಯವೊಂದನ್ನು ತೆಗೆದು

ಮಂಗಳಾರತಿಯ ತಟ್ಟೆಗೆ ಹಾಕಿ, ಕೈಯಾಡಿಸಿ, ಮಂಗಳಾರತಿಯನ್ನು ತೆಗೆದುಕೊಂಡು ತನ್ನ ಕಣ್ಣುಗಳಿಗೆ ಒತ್ತಿಕೊಂಡು ಕೈ ಮುಗಿದ. ಆಗ ಝುರ‍್ರನೆ ನನ್ನ ಅನಿಸಿಕೆ ಇಳಿಯಿತು. ಮಂಗಳಾರತಿಯ ತಟ್ಟೆಗೆ ಹಾಕಲು ಇವನು ನಾಣ್ಯಗಳನ್ನು ಇಟ್ಟುಕೊಂಡಿದ್ದಾನೆ ಅಂತ ತಿಳಿದಾಗ, ನನ್ನ ಅನಿಸಿಕೆಗೆ ನನಗೇ ಸಂಕೋಚವಾಯಿತು. ಹೊರಗೆ ತಂದಿಟ್ಟ ಮಂಗಳಾರತಿಯನ್ನು ತೆಗೆದುಕೊಂಡು ಅಲ್ಲಿಂದ ಹೊರಟೆ.

ಅಭಿಷೇಕಗಳು ಮುಗಿದು, ಅಲಂಕಾರದ ನಂತರ, ಅರ್ಚನೆ ಪೂಜೆ, ನೈವೇದ್ಯ ಮಂಗಳಾರತಿ ಎಲ್ಲವೂ ಮುಗಿಯುವಾಗ ಒಂಭತ್ತು ಗಂಟೆಯಂತೂ ಆಗುತ್ತದೆ. ಕೆಲವು ಭಕ್ತಾದಿಗಳು ಅಲ್ಲೇ ಕುಳಿತಿದ್ದರು. ಈ ವಿಧಾನ ನನಗೆ ಹೊಸದು. ದೇವಸ್ಥಾನಗಳಲ್ಲಿ ಆಗ ಹೊಸದಾಗಿ, ಹೀಗೆ ಸಾಮೂಹಿಕ ಪೂಜೆಗಳನ್ನು ಪ್ರಾರಂಭಿಸಿದ್ದರು ಅಂತ ನಂತರ ತಿಳಿಯಿತು. ಆದರೆ ನನಗೆ ಆಭಾಸವಾಗಿತ್ತು. ಆ ವ್ಯಕ್ತಿಯ ಬಗ್ಗೆ ತಪ್ಪು ತಿಳಿದುಕೊಂಡಿದ್ದೆ. ಅದನ್ನೆ ಯೋಚಿಸುತ್ತಾ ಮನೆಗೆ ಬಂದೆ. ರಾತ್ರಿ ನಿದ್ದೆ ಬರುವವರೆಗೂ ಇದೇ ಯೋಚನೆ ಸುಳಿದಾಡುತ್ತಿತ್ತು.

ಬಿಳಿಯ ಪಂಚೆ, ಶಲ್ಯ, ಹೊದ್ದು, ವಿಭೂತಿ ಹಚ್ಚಿಕೊಂಡು, ಕನ್ನಡಕ ಧರಿಸಿಕೊಂಡು, ಅತ್ತಿತ್ತ ನೋಡದೇ ಪುಸ್ತಕವನ್ನೇ ನೋಡಿಕೊಂಡು, ಮಂತ್ರವನ್ನು ಉಚ್ಚರಿಸುತ್ತಿದ್ದ ಅವನ ರೂಪ ನನ್ನ ಕಣ್ಣ ಮುಂದೆ ಬರುತ್ತಿತ್ತು. ಕೇವಲ ಕೆಲವೇ ನಿಮಿಷಗಳಲ್ಲಿ ನನ್ನ ಆಲೋಚನೆ ಎಲ್ಲಿಗೆ ಹೋಗಿತ್ತು... ಹೇಗೆ ಇಳಿಯಿತು... ಎಂದು ಮತ್ತೆ ಮತ್ತೆ ಪ್ರಶ್ನೆಗಳು ಕಾಡುತ್ತಿದ್ದವು.

ಹೀಗೊಂದು ಪೂಜಾ ಪದ್ಧತಿ ಇದೆ ಎಂಬ ಕಲ್ಪನೆಯೇ ನನಗಿರಲಿಲ್ಲ. ಕೇವಲ ಮನೆಗಳಲ್ಲಿ ಮಾತ್ರ ಪೂಜೆಯ ಬಗ್ಗೆ ತಿಳಿದಿತ್ತು. ದೇವಸ್ಥಾನಗಳಿಗೆ ಹೆಚ್ಚು ಹೋಗದಿರುವುದು, ಜನ ಜಂಗುಳಿಯಲ್ಲಿ ತೂರಿ ಹೋಗದಿರುವುದು ಇವೆಲ್ಲಾ ನನ್ನ ತಪ್ಪು ಕಲ್ಪನೆಗೆ ಕಾರಣವಾಗಿತ್ತು.

ಈಗ ದೇವಸ್ಥಾನಗಳಲ್ಲಿ ಈ ರೀತಿಯ ಸಾಮೂಹಿಕ, ರುದ್ರಾಭಿಷೇಕ, ಸಂಕಷ್ಟಹರ ಚತುರ್ಥಿ, ಶ್ರೀ ಸತ್ಯನಾರಾಯಣ ಪೂಜೆಯೆಲ್ಲಾ ಸರ್ವೇ ಸಾಮಾನ್ಯವಾಗಿದೆ. ಮೈಕ್‌ಗಳನ್ನಿಟ್ಟುಕೊಂಡು ಮಂತ್ರಗಳನ್ನು ಹೇಳುತ್ತಾರೆ.

ಎಷ್ಟೋ ದೂರದವರೆಗೆ ಕೇಳಿಸುತ್ತದೆ. ಆದರೆ ಯಾವ ಬ್ರಾಹ್ಮಣರೂ, ಇವನಂತೆ, ತನ್ನ ಮುಂದೆ ಕರವಸ್ತ್ರಗಳಲ್ಲಿ ನಾಣ್ಯಗಳನ್ನು ಇಟ್ಟುಕೊಂಡಿದ್ದನ್ನು ಕಂಡಿಲ್ಲ. ಅದು ಅವನ ಮುಗ್ಧತೆಯೋ ನಿರಾಡಂಬರ ಗುಣವೋ, ಆದರೆ, ಅವನಂತೆ ಸ್ಥಿತಪ್ರಜ್ಞರಾಗಿರಲು ಯಾರಿಂದಲೂ ಸಾಧ್ಯವಿಲ್ಲ. ಯಾಕೆಂದರೆ ಯಾರೂ ಅಷ್ಟು ಕಟ್ಟು ನಿಟ್ಟಾಗಿ ನಾಣ್ಯಗಳನ್ನು ಎಣಿಸಿ ಇಟ್ಟುಕೊಳ್ಳುವುದಿಲ್ಲ ಅಂತ ಅನ್ನಿಸುತ್ತೆ.

ಈಗ ಯಾವ ಹತ್ತು ಪೈಸೆಯ ನಾಣ್ಯಗಳೂ ಚಲಾವಣೆಯಲ್ಲಿಲ್ಲ. ಆದರೆ ಯಾವುದಾದರೂ ಹಳೆಯ ನಾಣ್ಯವನ್ನು ಅಲ್ಲೋ ಇಲ್ಲೋ ಕಂಡಾಗ, ನನ್ನ ಈ ತಪ್ಪು ಕಲ್ಪನೆ ನೆನಪಿಗೆ ಬರುತ್ತದೆ. ನಾನು ಎಷ್ಟು ಪೆದ್ದು ಪೆದ್ದಾಗಿ ಯೋಚಿಸಿದೆನಲ್ಲ ಅಂತ ನಾಚಿಕೆಯೂ ಆಗುತ್ತದೆ. ಮುಗ್ಧರನ್ನು ಸಾಮಾನ್ಯ ಜನರು ಅರ್ಥ ಮಾಡಿಕೊಳ್ಳುವುದು ಹೀಗೆಯೋ ಏನೋ ಅಂತ ಅಂದುಕೊಂಡಾಗ, ಹೇಗೆ ಹೇಗೋ ಆಗುತ್ತದೆ....

ಈಗ ಆ ವ್ಯಕ್ತಿಗೆ ಸಾಕಷ್ಟು ವಯಸ್ಸಾಗಿದೆ. ಮುಂಚಿನಂತೆ, ದೇವಸ್ಥಾನ ಗಳಲ್ಲಿ ಬಂದು ಕುಳಿತು ರುದ್ರವನ್ನು ಚಮಕವನ್ನು ಹೇಳುತ್ತಾನೋ ಇಲ್ಲವೋ ತಿಳಿಯದು. ಆದರೆ ಈ ಮೊದಲು ಅವನೆಂದೂ, ತಾನು ದೇವಸ್ಥಾನಗಳಿಗೆ ಹೋಗುತ್ತೇವೆಂದು ಹೆಚ್ಚುಗಾರಿಕೆಯಿಂದ ಹೇಳಿಕೊಂಡ ನೆನಪಿಲ್ಲ. ಆ ವಯೋವೃದ್ಧನಿಗೆ ನಮೋ ನಮಃ.

***

೨೬. 'ಮಾನಪ್ಪ'–ಸಹಪಾಠಿಯ ನೆನಪು

ನಾನು ಕಾಲೇಜಿನಲ್ಲಿ ಬಿ.ಎ. ಪದವಿಯ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ನಮ್ಮ ಸಂಖ್ಯೆ, ಮೂವತ್ತೋ ಮೂವತ್ತೈದೋ ಅಷ್ಟೆ. ಅ ಪೈಕಿ ನಾವು ಹುಡುಗಿಯರು ಒಂಭತ್ತು ಜನ, ಹುಡುಗರಲ್ಲಿ ಎಷ್ಟೋ ಜನ. ಸಮೀಪದ ಹಳ್ಳಿಗಳಿಂದ ಬಂದು, ಇಲ್ಲಿ ವಸತಿ ನಿಲಯದಲ್ಲೋ, ನೆಂಟರಿಷ್ಟರ ಮನೆಯಲ್ಲಿದ್ದುಕೊಂಡು ಓದುತ್ತಿದ್ದರು. ತೀರ್ಥಹಳ್ಳಿಯ ಸಮೀಪದ ಅನೇಕ ಸಣ್ಣ ಸಣ್ಣ ಹಳ್ಳಿಗಳಿಂದ ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಿರುವರೆಂದು, ಅವರವರು ಪರಿಚಯವನ್ನು ಹೇಳಿಕೊಂಡಾಗ ತಿಳಿದಿತ್ತು.

ಅವರ ಪೈಕಿ ಜಿ. ಮಾನಪ್ಪ ಎಂಬ ಹುಡುಗ ನಮ್ಮ ತರಗತಿಯಲ್ಲಿದ್ದ. ತೆಳ್ಳಗೆ, ಬೆಳ್ಳಗೆ, ಗುಂಗುರು ಕೂದಲಿನ ಯುವಕ. ಬಿಳಿಯ ಜುಬ್ಬಾ ಪೈಜಾಮವನ್ನು ಧರಿಸಿ ಕೈಯಲ್ಲಿ ಒಂದೆರಡು ನೋಟ್ ಬುಕ್‌ಗಳನ್ನು ಹಿಡಿದು ತರಗತಿಗೆ ಬರುತ್ತಿದ್ದ. ಅವನ ಊರು ತೀರ್ಥಹಳ್ಳಿಯ ಸಮೀಪದ ಒಂದು ಹಳ್ಳಿ. ಆ ಕಡೆಯಿಂದ ಬಂದು ಓದುತ್ತಿದ್ದ ಹುಡುಗರೆಲ್ಲಾ ಹೆಚ್ಚು ಕಡಿಮೆ, ರಾಷ್ಟ್ರಕವಿ ಕುವೆಂಪುರವರ ಅಭಿಮಾನಿಗಳು.

ಆ ಕಾಲದಲ್ಲಿ ಹುಡುಗ ಹುಡುಗಿಯರು, ಗುಂಪು ಗುಂಪಾಗಿ ನಿಂತು, ಜೋಡಿಯಾಗಿ ತಿರುಗಾಡಿಕೊಂಡು ಮಾತಾಡುವುದು ಇರಲೇ ಇಲ್ಲ. ಕದ್ದು ಮುಚ್ಚಿ ಮಾತನಾಡುವ ಹುಡುಗ ಹುಡುಗಿಯರ ಬಗ್ಗೆ ಒಳ್ಳೆಯ ಅಭಿಪ್ರಾಯಗಳಿರುತ್ತಿರಲಿಲ್ಲ. ಕಾಲೇಜಿನ ಪ್ರಾಂಗಣದಲ್ಲಿ, ಕಾರಿಡಾರಿನಲ್ಲಿ ನಡೆಯುವಾಗ, ಹುಡುಗಿಯರ ಎದುರಿಗೆ ಹುಡುಗರು ಬಂದರೆ,

ಹುಡುಗಿಯರು ಮೌನವಾಗಿ, ಕತ್ತು ಬಗ್ಗಿಸಿ, ಸರಿದು ಹೋಗುತ್ತಿದ್ದ ಕಾಲ ಅದು. ಹುಡುಗರಿಗೆ ಹುಡುಗಿಯರೊಂದಿಗೆ ಮಾತನಾಡಿಸುವ ಆಸೆ ಇತ್ತೋ ಇಲ್ಲವೋ ತಿಳಿಯದು. ಆದರೆ ಹುಡುಗಿಯರನ್ನು ಚುಡಾಯಿಸುವುದರಲ್ಲಿ ಹಿಂದೆ ಬಿದ್ದಿರಲಿಲ್ಲ. ಒಬ್ಬೊಬ್ಬ ಹುಡುಗಿಯರಿಗೆ ಒಂದೊಂದು ಉಪನಾಮಗಳ ಇಟ್ಟುಕೊಂಡಿರುತ್ತಿದ್ದರು ಅನ್ನುವುದೂ ತಿಳಿದಿತ್ತು. ಆದರೆ ಹುಡುಗಿಯರು ಪ್ರಶ್ನಿಸುತ್ತಿರಲಿಲ್ಲ. ಮೌನವಾಗಿ ಸಹಿಸುತ್ತಿದ್ದವರೇ ಹೆಚ್ಚು.

ಆ ಕಾಲದಲ್ಲಿ ಮೂರು ವರ್ಷದ ಅಭ್ಯಾಸದಲ್ಲಿ, ಮೊದಲನೇ ವರ್ಷದ ಪರೀಕ್ಷೆಯಲ್ಲಿ ಹೆಚ್ಚು ಕಡಿಮೆ ಎಲ್ಲರನ್ನು ಪಾಸು ಮಾಡಿ, ಮುಂದಿನ ವರ್ಷದ ತರಗತಿಗೆ ತಳ್ಳುತ್ತಿದ್ದರು. ಎರಡನೇ ವರ್ಷದಲ್ಲಿ ಪಬ್ಲಿಕ್ ಪರೀಕ್ಷೆ ಅಂದರೆ ಯೂನಿರ್ವಸಿಟಿ ಪರೀಕ್ಷೆ. ನಾಲ್ಕು ವಿಷಯಗಳಿಗೆ ಪರೀಕ್ಷೆ ನಡಯುತ್ತಿತ್ತು ಇಂಗ್ಲೀಷ್, ಸೆಕೆಂಡ್ ಲಾಂಗ್ವೇಜ್ (ಎರಡನೇ ಭಾಷೆ) ಮೈನರ್ ವಿಷಯ, ಹಾಗೂ ವಿಜ್ಞಾನದ ವಿಭಾಗದ ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ, ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಜ್ಞಾನದ ಪ್ರಶ್ನೆ ಪತ್ರಿಕೆಗಳಿಗೆ ತಯಾರಾಗಬೇಕಾಗಿತ್ತು.

ಪ್ರೌಢ ಶಾಲೆಯಲ್ಲಿ, ಐಚ್ಛಿಕ ವಿಜ್ಞಾನ ಹಾಗೂ ಐಚ್ಛಿಕ ಗಣಿತ ಶಾಸ್ತ್ರಗಳನ್ನು ಅಭ್ಯಾಸ ಮಾಡಿದ್ದ ನನಗೆ ಸಾಮಾನ್ಯ ವಿಜ್ಞಾನದ ವಿಷಯ ಕಠಿಣ ಎನಿಸುತ್ತಿರಲಿಲ್ಲ. ಪಿ.ಯು.ಸಿ.ಯಲ್ಲೂ ನಾನು ವಿಜ್ಞಾನವನ್ನೇ ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು ಅಭ್ಯಾಸ ಮಾಡಿದ್ದೆ. ಎರಡನೇ ವರ್ಷದ ಪರೀಕ್ಷೆಯಲ್ಲಿ ಕನ್ನಡ ಹಾಗೂ ಸಾಮಾನ್ಯ ವಿಜ್ಞಾನದ ಪರೀಕ್ಷೆ ನನಗೆ ಸುಲಭ.

ಕಡೆಯ ದಿನ ಸಾಮಾನ್ಯ ವಿಜ್ಞಾನದ ಪರೀಕ್ಷೆಗಾಗಿ ನಾನು ಹೆಚ್ಚೇನೂ ಪರಿಶ್ರಮ ಪಟ್ಟಿರಲಿಲ್ಲ. ಆದರೆ ನನ್ನ ಕೆಲವು ಸಹಪಾಠಿಗಳಿಗೆ ವಿಜ್ಞಾನ ಕಬ್ಬಿಣದ ಕಡಲೆ, ಪಾಸಾಗುವಷ್ಟು ಸಹ ಅಂಕಗಳು ಬರುವುದಿಲ್ಲವೆಂದು ಪೇಚಾಡಿಕೊಳ್ಳುತ್ತಿದ್ದರು. ನಾನು ಇದ್ದ ಕೋಣೆಯಲ್ಲೇ ಮಾನಪ್ಪನ ರಿಜಿಸ್ಟ್ರೇಷನ್ ನಂಬರ್ರು ಇದ್ದಿತಾದ್ದರಿಂದ ಅವನೂ ಅದೇ ಕೋಣೆಯಲ್ಲಿದ್ದ ಎಷ್ಟೋ ಮಂದಿ ವಿದ್ಯಾರ್ಥಿಗಳೂ ಅರ್ಧಗಂಟೆಯಾಗುತ್ತಿದ್ದಂತೇ ಬೆಲ್ ಹೊಡೆದ

ತಕ್ಷಣ, ಉತ್ತರ ಪತ್ರಿಕೆಯನ್ನು ಅಧ್ಯಾಪಕರಿಗೆ ಕೊಟ್ಟು ಹೊರಟು ಹೋಗಿದ್ದರು. ಅವರುಗಳು ಬಾಗಿಲು ಹೊರಗೆ ಉಳಿದವರು ಹೊರಕ್ಕೆ ಬರುವುದನ್ನೆ ಕಾಯುತ್ತಿದ್ದರು.

ನಾನು ಉತ್ತರಗಳನ್ನು ಭರಾಟೆಯಿಂದ ಬರೆಯುವ ಉತ್ಸಾಹದಲ್ಲಿದ್ದೆ. ಹಾಗೇ ಒಂದು ಹೆಚ್ಚಿನ ಹಾಳೆಯನ್ನ ಕೇಳಿ ಪಡೆದೆ. ಅಲ್ಲೆ ಕುಳಿತಿದ್ದ ಕೆಲವರು ನನ್ನ ಕಡೆ ತಿರುಗಿ ನೋಡಿದ್ದರು. ಅಷ್ಟೊಂದು ಬರೆಯುವುದು ಏನಿದೆ ಅನ್ನುವ ನೋಟವನ್ನು ನನ್ನ ಕಡೆ ಎಸೆದರು. ಕಡೆಯ ಬೆಲ್ ಆಗುವವರೆಗೂ ಬರೆದು ಮತ್ತೊಮ್ಮೆ ಪರೀಕ್ಷಿಸಿ, ಉತ್ತರ ಪತ್ರಿಕೆಯನ್ನು ಅಧ್ಯಾಪಕರಿಗೆ ಕೊಟ್ಟು ಪೆನ್ಸಿಲ್ಲು ರಬ್ಬರು ಜಾಮಿಟ್ರಿ ಬಾಕ್ಸ್‌ಗೆ ಹಾಕಿಕೊಂಡು ಹೊರಬಂದೆ. ಹೊರಬಾಗಿಲಲ್ಲಿ ನನಗೋಸ್ಕರ ಕಾಯುತ್ತಿದ್ದ ಹುಡುಗ ಹುಡುಗಿಯರು ನನ್ನನ್ನು ಸುತ್ತುವರೆದರು. ಅವರ ಪೈಕಿ ಮಾನಪ್ಪನೂ ಇದ್ದ. ಅವನು, ನಾನು ಹೆಚ್ಚಿನ ಹಾಳೆಯನ್ನು ತೆಗೆದುಕೊಂಡಿದ್ದನ್ನು ಉಳಿದವರಿಗೆ ಹೇಳಿದ್ದ ಅಂತ ಕಾಣುತ್ತೆ. ಮಿಸ್... ರ್‍ಯಾಂಕ್ ಗ್ಯಾರಂಟಿ... ಎಲ್ಲರೂ ಒಕ್ಕೊರಲಿನಿಂದ ನುಡಿದರು. ನನಗೆ ಮುಜುಗರವಾಗಿತ್ತು.

"ರ್‍ಯಾಂಕ್ ಎಲ್ಲಾ ಏನಿಲ್ಲ, ಗೊತ್ತಿದ್ದನ್ನು ಬರೆದಿದೀನಿ. ಜಾಗ ಸಾಕಾಗ್ಲಿಲ್ಲ. ಹಾಳೆ ತೆಗೆದುಕೊಂಡೆ" ಎಂದು ತಡವರಿಸುತ್ತಾ.

"ಇಲ್ಲ ಮಿಸ್ ನಿಮ್ಮಷ್ಟು ಯಾರೂ ಬರೆಯಲಿಲ್ಲ ಎಂದು ಚುಡಾಯಿಸುವ ಧ್ವನಿಯಲ್ಲಿ ಹೇಳಿದರು. ಅವರುಗಳ ಮಧ್ಯೆಯಿಂದ ತಪ್ಪಿಸಿಕೊಂಡು ಹುಡುಗಿಯರ ವೈಯಿಟಿಂಗ್ ರೂಂಗೆ ಬಂದೆ. ಕೆಲವರು ನನ್ನನ್ನು ಹಿಂಬಾಲಿಸಿದ್ದರು.

ಅವತ್ತೆ ಕಡೆಯ ದಿನವಾದುದರಿಂದ ಬಚಾವಾದೆ. ಮಾರನೇ ದಿನದಿಂದ ಕಾಲೇಜಿಗೆ ರಜ. ಮತ್ತೆ ಕಾಲೇಜು ಪ್ರಾರಂಭವಾದಾಗ, ಫಲಿತಾಂಶ ಪ್ರಕಟವಾಗಿರಲಿಲ್ಲ. ಎಲ್ಲರೂ ಮುಂದಿನ ತರಗತಿಗೆ ತಳ್ಳಲ್ಪಟ್ಟಿದ್ದೆವು.

ಕಡೆಯ ವರ್ಷದಲ್ಲಿ ಕೇವಲ ಮೇಜರ್ ವಿಷಯಗಳ ಅಭ್ಯಾಸ ಮಾತ್ರ, ಫೇಲಾದವರು ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತು ಪಾಸಾಗಬಹು

ದಾಗಿತ್ತು. ಹಾಗಾಗಿ ಫಲಿತಾಂಶದ ಬಗ್ಗೆ ಎಲ್ಲರಿಗೂ ಕುತೂಹಲದ ನಿರೀಕ್ಷೆ. ಆ ಸಮಯದಲ್ಲಿ ಫಲಿತಾಂಶ ದಿನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. ಕನ್ನಡ ಹಾಗೂ ಸಾಮಾನ್ಯ ವಿಜ್ಞಾನದ ವಿಷಯದಲ್ಲಿ ನಾನು ಮೊದಲ ದರ್ಜೆಯಲ್ಲಿ ಪಾಸಾಗಿದ್ದೆ. ಮೈನರ್ ವಿಷಯದಲ್ಲಿ ಎರಡನೇ ದರ್ಜೆಯಲ್ಲಿ ಹಾಗೂ ಇಂಗ್ಲೀಷ್‌ನಲ್ಲಿ ಎರಡನೇ ದರ್ಜೆಗೆ ಒಂದೆರಡು ಅಂಕಗಳ ವ್ಯತ್ಯಾಸದಿಂದ ಪಾಸಾಗಿದ್ದೆ. ಈ ವಿಷಯವನ್ನು ನಾನು ಹೆಳುವ ಮೊದಲೇ, ನನ್ನ ಸಹಪಾಠಿಗಳಿಗೆ ತಿಳಿದು ಹೋಗಿತ್ತು. ಅಂಕಪಟ್ಟಿ ಸಿಗುತ್ತಿದ್ದಂತೆಯೇ ನನಗಿಂತ ಹೆಚ್ಚಿನ ಕುತೂಹಲ ಅವರುಗಳಿಗೆ. ನನ್ನ ಕೈಯಿಂದ ಕಿತ್ತುಕೊಂಡು ನೋಡುವುದೊಂದು ಬಾಕಿ ಮತ್ತೊಮ್ಮೆ ಎಲ್ಲರು ಸುತ್ತುವರೆದಿದ್ದರು.

ಇದೇ ಸಮಯದಲ್ಲಿ ಯೂನಿರ್ವಸಿಟಿಯಿಂದ ರ್‍ಯಾಂಕ್ ಲಿಸ್ಟ್ ಬಂದಿತ್ತು. ಕನ್ನಡ ಹಾಗೂ ಸಾಮಾನ್ಯ ವಿಜ್ಞಾನದಲ್ಲಿ ನನಗೆ ರ್‍ಯಾಂಕ್ ಸಿಕ್ಕಿತ್ತು. ಆದರೆ, ನಾನು ನೋಟೀಸ್ ಬೋರ್ಡ್‌ನ್ನು ನೋಡಿರಲಿಲ್ಲ ವಾದುದರಿಂದ ನನಗೆ ತಿಳಿಯಲಿಲ್ಲ. ನನ್ನ ರಿಜಿಸ್ಟರ್ ನಂಬರ್‍ರು ತಿಳಿದವರಿಗೆ ಮಾತ್ರ ಈ ವಿಷಯ ತಿಳಿದಿತ್ತು. ಹಾಗಾಗಿ ಈ ವಿಷಯ ಕೆಲವರಿಗೆ ಮಾತ್ರ ತಿಳಿದಿತ್ತು. ಕೆಲವರು ಮೆಚ್ಚುಗೆಯನ್ನು ಪ್ರಕಟಿಸದ್ದರು. ಸಿಹಿ ಕೊಡ ಬೇಕೆಂದು ಒತ್ತಾಯಿಸಿದರು. ನಮ್ಮ ಮನೆಯಲ್ಲಿ ಈ ಪದ್ಧತಿ ಎಲ್ಲಾ ಇರಲಿಲ್ಲ. ಈ ಬಗ್ಗೆ ತಂದೆ ತಾಯಿಗೆ ತಿಳಿಸುವುದಂತೂ ಇರಲಿಲ್ಲ ಅಥವಾ ಯಾರಿಗೂ ತಿಳಿಯದಂತೆ ಸಿಹಿ ತಂದುಕೊಡುವುದಂತೂ ಸಾಧ್ಯವೇ ಇರಲಿಲ್ಲ. ಕೈಯಲ್ಲಿ ಹಣವಿರುತ್ತಿರಲಿಲ್ಲ. ಹೋಟೆಲ್ಲಿಗೆ ಹೋಗಿ ಸಿಹಿ ಕೊಡಿಸುವುದಂತೂ ಊಹೆಗೂ ದೂರ. ಮನೆಯಿಂದ ಮಾಡಿಕೊಂಡು ತರುವುದಂತೂ ದೂರದ ಮಾತು. ಈಗಿನಂತೆ ಬಗೆ ಬಗೆಯ ಸಿಹಿ ತಿಂಡಿಗಳು ಸಿಗುತ್ತಿದ್ದವೋ ಇಲ್ಲವೋ ಅದೂ ಸಹ ತಿಳಿಯದು. ಸಹಪಾಠಿಗಳು ಕೇಳಿ ಕೇಳಿ ಸುಸ್ತಾದರು. ಸುಮ್ಮನಾದರು ಕೆಲವರು ಸಪ್ಲಿ ಮೆಂಟರಿ ಪರೀಕ್ಷೆಗೆ ತಯಾರಾಗಬೇಕಿತ್ತು.

ಈ ಮಧ್ಯೆ ಪರೀಕ್ಷೆ ಮುಗಿದ ನಂತರ, ಎಲ್ಲಿಗಾದರೂ ಒಂದೆರಡು ದಿನಗಳಿಗಾಗಿ ಪಿಕ್‌ನಿಕ್ ಹೋಗಿ ಬರಬೇಕೆಂಬ ಆಸೆಯನ್ನು ತರಗತಿಯಲ್ಲಿ

ಪ್ರಕಟಿಸಿದರು. ಆ ಪ್ರಸ್ತಾಪವೇ ನನಗೆ ಆತಂಕವನ್ನು ಹುಟ್ಟಿಸಿತ್ತು. ಇದೇ ಕಡೆಯ ವರ್ಷವಾದುದರಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಎಲ್ಲರೂ ಬರಲೇಬೇಕೆಂಬ ಒತ್ತಾಯವನ್ನು ಹೇರಿದರು. ನನ್ನ ಚಿಂತೆ ಹೆಚ್ಚಾಗಿತ್ತು.

ನನ್ನ ತಂದೆ ಕಳಿಸುವುದಿಲ್ಲವೆಂದು ನನಗೆ ಖಂಡಿತವಾಗಿ ತಿಳಿದ ವಿಷಯ. ಆದರೆ ಹುಡುಗಿಯರಿಗೂ ನನ್ನ ಕಷ್ಟ ಅರ್ಥವಾಗುವಂತಿರಲಿಲ್ಲ. ನೀನು ಬರದಿದ್ದರೆ, ನಾವೂ ಯಾರೂ ಹೋಗುವುದಿಲ್ಲ ಎಂಬ ಶರತ್ತನ್ನು ಮುಂದಿಟ್ಟರು.

ಕಡೆಗೆ ದುಡ್ಡನ್ನು ಕೊಟ್ಟು ಹೆಸರನ್ನೂ ಬರೆಸುವುದು. ಆ ದಿನ ಏನಾದರೂ ಒಂದು ನೆಪ ಹೇಳಿ ತಪ್ಪಿಸಿಕೊಳ್ಳುವುದು ಎಂದು ತೀರ್ಮಾನಿಸಿ ಕೊಂಡೆ. ಈ ಸಮಯದಲ್ಲೂ ಮಾತನಾಡಲು ಮುಂದೆ ಬಂದವನು ಮಾನಪ್ಪನೇ. ನಮ್ಮ ತಂದೆಯ ಸ್ವಭಾವದ ಬಗ್ಗೆ ತಿಳಿಸಿದೆ. ಅವರು ನನ್ನನ್ನು ಓದಲು ಕಾಲೇಜಿಗೆ ಕಳಿಸಿರುವುದೇ ಹೆಚ್ಚು. ಪಿಕ್‌ನಿಕ್ ಇರಲಿ, ಹುಡುಗರೊಡನೆ ಕಾಲೇಜಿನಲ್ಲಿ ಮಾತಾಡುವುದೂ ಅವರಿಗೆ ಒಪ್ಪದ ವಿಷಯ. ಅವರಿಗೆ ಈ ಅನುಮಾನ ಬಂದರೆ, ನನ್ನ ವಿದ್ಯಾಭ್ಯಾಸವನ್ನು ಇಲ್ಲಿಗೇ ನಿಲ್ಲಿಸಿ ಬಿಡ್ತಾರೆ... ನಾನೊಬ್ಬಳು ಬರದಿದ್ದರೇನಾಯ್ತು. ಯಾರ್‍ಯಾರಿಗೆ ಇಷ್ಟವೋ ನೀವುಗಳು ಹೋಗಿ ಬನ್ನಿ" ಎಂದೆ.

"ನೀವು ಬರದಿದ್ದರೆ, ಉಳಿದ ಹುಡುಗಿಯರೂ ಬರುವುದಿಲ್ಲ. ಹುಡುಗಿಯರು ಇರದಿದ್ದರೆ ಪಿಕ್‌ನಿಕ್‌ನಲ್ಲಿ ಏನೂ ಮಜಾ ಇರಲ್ಲ" ಬೇರೊಬ್ಬ ಹುಡುಗ ಹೇಳಿದ.

"ನೀವುಗಳು ಬಲವಂತ ಮಾಡಿದರೆ ನಾನು ಕಾಲೇಜಿಗೇ ಬರುಕ್ಕಾಗಲ್ಲ".

"ನಾವುಗಳು ಬಂದು ನಿಮ್ಮ ತಂದೆಯ ಹತ್ತಿರ ಮಾತಾಡಿ ಒಪ್ಪಿಸ್ತೀವಿ. ಹುಡುಗಿಯರ ಮಾತಿಗೆ ಹುಡುಗರು ತಲೆಯಾಡಿಸಿರು.

"ಅದು ಇನ್ನೂ ಅಪಾಯ. ನಮ್ಮ ತಂದೆಯಿಂದ ನನ್ನನ್ನು ಬೈಯಿಸಬೇಕು ಅಂತ ಆಸೇನಾ?" ಕೇಳಿದೆ. ಹೇಳ್ತಾ ಹೇಳ್ತ ನನಗೆ ಅಳು ಬಂದಿತು. ಅದು ನನ್ನ ಅಸಹಾಯಕತೆಯ ಗುರುತಾಗಿತ್ತು. ನನಗೂ

ಹುಡುಗಿಯರೊಂದಿಗೆ, ಸಿನಿಮಾ ಹೋಟೆಲ್ಲು ಪಿಕ್‌ನಿಕ್‌ಗೆ ಹೋಗ ಬೇಕೆಂಬ ಆಸೆ ಇತ್ತು. ಇದುವರೆಗೂ ಒಂದು ದಿನವೂ ಹೀಗೆ ಪಿಕ್‌ನಿಕ್‌ಗಾಗಲೀ, ಸಿನಿಮಾಕ್ಕಾಗಲೀ ಹೋದದ್ದೇ ಇಲ್ಲ. ನಮ್ಮ ತಂದೆಗೆ ಇದೆಲ್ಲಾ ಇಷ್ಟವಿಲ್ಲ ವೆಂದು ತಿಳಿದ ನಾವು ಮಕ್ಕಳು, ಅವರನ್ನು ಕೇಳುತ್ತಲೇ ಇರಲಿಲ್ಲ. ಅವರುಗಳಿಗೆ ಏನನ್ನಿಸಿತೋ ಏನೋ ಸುಮ್ಮನಾದರು.

ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಕೆಲವರು ಪಾಸಾಗಿದ್ದರು. ಕೆಲವರು ಮತ್ತೆ ಫೇಲಾಗಿದ್ದರು. ಕೆಲವರು ಆ ಬಗ್ಗೆ ಗಂಭೀರವಾಗಿ ಯೋಚಿಸಿದ್ದಂತೆ ಅನ್ನಿಸಲಿಲ್ಲ. ಕೆಲವರು, ಒಂದೇ ದಿನದ ಕಾರ್ಯಕ್ರಮವನ್ನು ಹಾಕಿಕೊಂಡು ಪಿಕ್‌ನಿಕ್‌ಗೆ ಹೋಗಿ ಬಂದರು. ಆ ಬಗ್ಗೆ ನಾನು ಯಾರನ್ನೂ ಏನನ್ನೂ ಕೇಳಲಿಲ್ಲ.

ಆ ನಂತರ ಕಾಲೇಜ್ ಡೇ ಕಾರ್ಯಕ್ರಮದ ಬಗ್ಗೆ ಮತ್ತೆ ಪ್ರಸ್ತಾಪ ವನ್ನೆತ್ತಿದರು. ಗ್ರೂಪ್ ಫೋಟೋ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಹೋಟೆಲ್ಲಿನಲ್ಲಿ ರಾತ್ರಿಯ ಊಟ ಮತ್ತೆ ಈ ಕಾರ್ಯಕ್ರಮಗಳನ್ನು ಯಾಕಾ ದರೂ ಹಾಕಿಕೊಂಡರೋ ಎಂದು ಆತಂಕ ಪಡುವಂತಾಗಿತ್ತು.

ಹಣವನ್ನು ಸಂಗ್ರಹ ಮಾಡಿ, ಹೆಸರನ್ನು ಬರೆಸುವ ಸಮಯ ಬಂದಾಗ, ನಾನು ಮತ್ತೊಮ್ಮೆ ಅರ್ಧ ನಕಾರವನ್ನು ಸೂಚಿಸಿದೆ. ಗ್ರೂಪ್ ಫೋಟೋಗೆ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ರಾತ್ರಿಯ ಊಟಕ್ಕೆ ಹೋಟೆಲ್ಲಿಗೆ ನಾನು ಬರಲ್ಲ ಎಂದೆ.

ಎಲ್ಲರೂ ಮುಖ ಮುಖ ನೋಡಿಕೊಂಡರು. ಎಲ್ಲಾ ಬೇಗ ಬೇಗ ಮಾಡಿ ಬಿಡ್ತೀವಿ ಮಿಸ್. ಲೇಟ್ ಏನೂ ಆಗುಲ್ಲ. ಒಂಭತ್ತು ಗಂಟೆಯೊಳಗೆ ನಿಮ್ಮನ್ನು ಮನೆ ತಲುಪಿಸುವ ಜವಾಬ್ದಾರಿ ನಮ್ಮದು. ನಾವುಗಳು ಯಾರಾದರೂ ಜೊತೆಗೆ ಬರ್ತೀವಿ. ಬೇಕಾದರೆ ಟ್ಯಾಕ್ಸಿ ಗೊತ್ತು ಮಾಡ್ತೀವಿ ಎಂದರು.

ನನ್ನ ಭಯ ಆತಂಕ ಇನ್ನು ಹೆಚ್ಚಾಗಿತ್ತು. ಟ್ಯಾಕ್ಸಿಯಲ್ಲಿ ಹುಡುಗ ರೊಂದಿಗೆ ಮನೆಗೆ ಹೋದರೆ, ನಮ್ಮ ತಂದೆ ಮನೆಯೊಳಗೆ ಸೇರಿಸುತ್ತಾರೋ ಇಲ್ಲವೋ... ಇದನ್ನು ಹೇಗೆ ಹೇಳುವುದ? ಸುಮ್ಮನಾದೆ.

ನಮ್ಮ ತರಗತಿಯಲ್ಲಿ ಬಸವರಾಜ್ ಅಂತ ಒಬ್ಬ ಸಹಪಾಠಿ ಇದ್ದ. ಅವನಿಗೆ ಮದುವೆಯಾಗಿತ್ತು. ಸ್ಕೂಲ್ ಟೀಚರ್ ಆಗಿದ್ದವನು, ಮಧ್ಯದಲ್ಲಿ ವಿದ್ಯಾಭ್ಯಾಸಕ್ಕಾಗಿ, ಉದ್ಯೋಗವನ್ನು ಬಿಟ್ಟಿದ್ದನಂತೆ. ಅವನನ್ನು ನನ್ನ ಜೊತೆಯಲ್ಲಿ ಟ್ಯಾಕ್ಸಿಯಲ್ಲಿ, ಆದಷ್ಟು ಬೇಗ ಊಟ ಹಾಕಿಸಿ ಕಳಿಸುವುದಾಗಿ ಹೇಳಿದರು. ಆ ದಿನ, ಊಟದ ಕಾರ್ಯಕ್ರಮವನ್ನು ಹೇಗೆ ತಪ್ಪಿಸಿಕೊಳ್ಳುವುದು ಎಂಬ ಉಪಾಯವನ್ನು ಹುಡುಕತೊಡಗಿದೆ.

ಈ ಮಧ್ಯೆ ಆಟೋಗ್ರಾಫ್ ಪುಸ್ತಕ ಸಿದ್ಧವಾಗಿತ್ತು. ಅದರಲ್ಲಿ ತರಗತಿಯ ಎಲ್ಲಾ ಹುಡುಗ ಹುಡುಗಿಯರ ಹೆಸರು, ವಿಳಾಸವನ್ನು ಮುದ್ರಿಸಲಾಗಿತ್ತು. ಈ ಪುಸ್ತಕವನ್ನು ನಮ್ಮ ತಂದೆಯ ಕಣ್ಣಿಗೆ ಕಾಣದಂತೆ ಇಡಬೇಕಾಗಿತ್ತು. ಅವರಿಗೆ ಇದೆಲ್ಲಾ ಇಷ್ಟವಾಗದ ವಿಷಯ. ಕೆಲವು ಹುಡುಗರು, ನನ್ನಿಂದ ಆಟೋಗ್ರೈಆಫ್ ಬರೆಸಿಕೊಳ್ಳುವ ನೆವದಲ್ಲಿ ತಮ್ಮ ತಮ್ಮ ಆಟೋಗ್ರಾಫ್‌ನ್ನು ಬರೆದುಕೊಡುವ ಆತುರ ಕಾತುರದಲ್ಲಿದ್ದರು. ಬೇಡ ಅನ್ನುವಂತಿರಲಿಲ್ಲ. ಅದೊಂದು ತರಹ ಕಡ್ಡಾಯ ಎಂಬಂತೆ, ಎಲ್ಲರಿಗೂ ಬರೆದುಕೊಡುವ, ಬರೆಸಿಕೊಳ್ಳುವ ಹಂಬಲ. ನಲ್ಮೆಯ ನುಡಿಗಳು, ಶುಭಹಾರೈಕೆ, ಹಾಗೂ ಅವರವರ ಸಹಿ ಹಾಕಿಕೊಡುತ್ತಿದ್ದರು. ಪ್ರಾಸಬದ್ಧವಾದ ನುಡಿಗಳನ್ನು ಹುಡುಕಿ ಹುಡುಕಿ ಬರೆದುಕೊಡಬೇಕಾಗಿತ್ತು. ನನಗೆ ಎಷ್ಟೋ ಜನ ಹುಡುಗರ ಹೆಸರೇ ಗೊತ್ತಿರಲಿಲ್ಲ. ಅವರೇ ತಮ್ಮ ಪರಿಚಯವನ್ನು ಹೇಳಿ ಕೊಂಡು ಬರೆಸಿಕೊಳ್ಳುತ್ತಿದ್ದರು. ಇದರೊಂದಿಗೆ ತರಗತಿಗಳ ಪಾಠ, ಪರೀಕ್ಷೆಯ ತಯಾರಿ, ಎಲ್ಲವೂ ನಡೆದಿತ್ತು.

'ಕಾಲೇಜ್ ಡೇ' ದಿನ ಬಂದಿತು. ಸಾಯಂಕಾಲ ನಾಲ್ಕು ಗಂಟೆಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಗ್ರೂಪ್ ಫೋಟೋ ಕಾರ್ಯಕ್ರಮ ಮುಗಿಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮ, ಸ್ವಾಗತ ಭಾಷಣ, ಅಧ್ಯಾಪಕರ ಅಭಿನಂದನೆ, ಗೀತೆಗಳು, ನಾಟಕ ಎಲ್ಲವೂ ಇತ್ತು. ಅದೆಲ್ಲಾ ಮುಗಿಯುವ ಹೊತ್ತಿಗೆ ಎಷ್ಟು ಸಮಯವಾಗಿತ್ತೋ ತಿಳಿಯದು. ಆಗ ನನ್ನ ಬಳಿ ಕೈಗಡಿಯಾರವಿರಲಿಲ್ಲ. ಅಲ್ಲಿಂದ ಹೋಟೆಲ್ಲಿಗೆ ತೆರಳಿದೆವು. ಊಟ ಹೇಗಿತ್ತೋ, ಗಂಟಲಿನಿಂದ ಕೆಳಗೆ ಇಳಿಯುವುದು ಕಷ್ಟವಾಗಿತ್ತು.

ಮನೆಯಿಂದ ಹೊರಗೆಲ್ಲೋ ಇದ್ದುದು, ಏನೋ ಮಾಡಬಾರದ ಅಪರಾಧ ವನ್ನು ಮಾಡಿದ ಅನುಭವ.

ಊಟ ಮುಗಿಯುತ್ತಿದ್ದಂತೆ, ಟ್ಯಾಕ್ಸಿಯಲ್ಲಿ ನನ್ನನ್ನೂ ಮೊದಲು ಬಿಟ್ಟು ಬರುವ ವ್ಯವಸ್ಥೆ ಮಾಡಿದರು. ನನ್ನೊಡನೆ ಕೆಲವರು ಹುಡುಗಿಯರು, ಹಾಘೂ ಬಸವರಾಜ್ ಎಂಬ ವಿವಾಹಿತ ವ್ಯಕ್ತಿ.

ಬಸ್‌ಸ್ಟಾಪ್ ಬಳಿಗೆ ಬರುತ್ತಿದ್ದಂತೆ, ನನಗಾಗಿ, ಬಸ್‌ಗಾಗಿ ಕಾಯುತ್ತಾ ನಿಂತಿದ್ದ ನನ್ನ ತಮ್ಮನನ್ನು ಕಂಡು ಅಲ್ಲಿಯೇ ನಿಲ್ಲಿಸುವಂತೆ ಹೇಳಿದೆ. ಸಿಡುಕುತ್ತಾ ನನ್ನ ತಮ್ಮ ನಿಂತಿದ್ದ. ಅವನೊಡನೆ ಮನೆಯ ಕಡೆ ಹೆಜ್ಜೆ ಹಾಕಿದೆ. ಮನೆ ತಲುಪಿದಾಗ, ರಾತ್ರಿ ಒಂಭತ್ತೂವರೆ ಆಗಿತ್ತು. ನನ್ನ ತಂದೆ ಎಷ್ಟು ಬೈದರೆಂದು ಹೇಳುವುದೇ ಬೇಡ ನನ್ನ ಸಹಾಯಕ್ಕಾಗಿ ನನ್ನ ತಾಯಿಯಾಗಲೀ, ತಮ್ಮಂದಿರಾಗಲೀ, ನನ್ನ ಅಕ್ಕನಾಗಲೀ ಬರಲಿಲ್ಲ.

ಹೆದರುತ್ತಾ ಅಳುಕುತ್ತಾ ಸಾಯಂಕಾಲವನ್ನು ಕಳೆದಿದ್ದೆ. ಮನೆಗೆ ಬಂದರೆ ವಾಚಾಮಗೋಚಾರದ ಬೈಗುಳ. ಕಾಲೇಜ್ ಡೇಯನ್ನು ನೆನೆಸಿ ಕೊಳ್ಳುವಂಥ ಯಾವುದೇ ಘಳಿಗೆ ಇರಲಿಲ್ಲ. ಆದರೆ ಈ ವಿಷಯವನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುವುದೂ ಬೇಕಿರಲಿಲ್ಲ.

ಇದಾದ ನಂತರ, ಪರೀಕ್ಷೆಯ ತಯಾರಿಗೆಂದು ರಜಾದಿನಗಳು ಶುರುವಾಗಿದ್ದವು. ಮನೆಯಲ್ಲೇ ಇರುತ್ತಿದ್ದುದರಿಂದ ಎಲ್ಲವೂ ಅಲ್ಲಲ್ಲೇ ಉಳಿದವು. ಬೇಸರವಂತೂ ಆಗಿತ್ತು. ಓದಲು ಬೇಕಾದಷ್ಟು ಇದ್ದವು. ಹಾಗೇ ಒಮ್ಮೊಮ್ಮೆ ಆಟೋಗ್ರಾಫ್ ಪುಸ್ತಕವನ್ನು ತಿರುವಿ ಹಾಕುತ್ತಿದ್ದೆ. ಕೆಲವರ ಕೈ ಬರಹ ಕೂಡಾ ಅಷ್ಟಷ್ಟರಲ್ಲೇ. ಆದರೆ ಮಾನಪ್ಪನ ಕೈ ಬರಹ ಚೆನ್ನಾಗಿತ್ತು. "ಆಕಳಿನಂತೆ ಇರುವ ನಿಮ್ಮ ಆಸೆಗಳು ಆಗಸವನ್ನು ತಲುಪಲಿ" ಎಂದು ಬರೆದು ಶುಭವನ್ನು ಹಾರೈಸಿ ತನ್ನ ಸಹಿಯನ್ನು ಹಾಕಿದ್ದ. ಈ ನುಡಿಗಳನ್ನು ಯಾಕೆ ಬರೆದಿದ್ದನೋ...? ಗೂಟಕ್ಕೆ ಕಟ್ಟಿ ಹಾಕಿದ ಹಸುವಿ ನಂತೆ ಇದ್ದದ್ದೇನೋ ನಿಜ. ಸಣ್ಣ ಪುಟ್ಟ ಆಸೆಗಳನ್ನು ಸಹ ವ್ಯಕ್ತಪಡಿಸ ಲಾಗದಂತಹ ಪರಿಸ್ಥಿತಿ. ಆಸೆಗಳನ್ನು ಆಗಸದೆತ್ತರಕ್ಕೆ ಬೆಳೆಯಲು ಬಿಡುವ ಕಾಲ ಅದು ಆಗಿರಲಿಲ್ಲ.

ಪರೀಕ್ಷೆಯ ದಿನಗಳಲ್ಲಿ ಯಾರನ್ನೂ ಭೇಟಿ ಮಾಡುತ್ತಿರಲಿಲ್ಲ. ಯಾರೊಡನೆಯೂ ಮಾತನಾಡಲು ಸಮಯವಿರಲಿಲ್ಲ. ಕೇವಲ ಎಂಟು ಹತ್ತು ದಿನಗಳಲ್ಲಿ ಪರೀಕ್ಷೆ ಮುಗಿದಿತ್ತು. ಕೇವಲ ಫಲಿತಾಂಶದ ನಿರೀಕ್ಷೆ ಉಳಿದಿತ್ತು. ಈಗಿನಂತೆ ಒಬ್ಬರನ್ನೊಬ್ಬರು ಭೇಟಿಯಾಗುವುದಿರಲಿ, ಫೋನಿನಲ್ಲಿ ಮಾತನಾಡುವ ಸುವಿಧವೂ ಇರಲಿಲ್ಲ. ಇದ್ದರೂ ನಮ್ಮ ಮನೆಯಲ್ಲಿ ಅದು ಸಾಧ್ಯವಿರಲಿಲ್ಲ. ಆಮೇಲೆ ನಾನು ಯಾರನ್ನು ಮತ್ತೆ ಭೇಟಿಯಾಗಲೇ ಇಲ್ಲ. ಫಲಿತಾಂಶ, ದಿನಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು.

ಎರಡು ವರ್ಷಗಳ ನಂತರ ನನ್ನ ಮದುವೆಯಾಗಿತ್ತು. ಆ ಸಮಯದಲ್ಲಿ ಮಾನಪ್ಪ, ಮಾನಸ ಗಂಗೋತ್ರಿಯಲ್ಲಿ ಕನ್ನಡ ಎಂ.ಎ. ವ್ಯಾಸಾಂಗ ಮಾಡುತ್ತಿರವನೆಂದು ನನ್ನ ತಮ್ಮ ತಿಳಿಸಿದ್ದ. ನನ್ನ ತಮ್ಮ ಜೂನಿಯರ್ ವಿಭಾಗದಲ್ಲಿದ್ದ. ಇವನು ರಸಾಯನ ಶಾಸ್ತ್ರದಲ್ಲಿ ಎಂ.ಎಸ್ಸಿ.ಗೆ ಸೇರಿಕೊಂಡಿದ್ದ.

ಮದುವೆಯ ನಂತರ ತವರಿಗೆ ಬಂದದ್ದು ಎರಡು ವರ್ಷಗಳ ನಂತರವೇ. ಆ ವೇಳೆಗೆ ಮಾನಪ್ಪ, ಮಾನು ಆಗಿ, ಚಿತ್ರನಟನಾಗಿದ್ದ. ಊರಿಗೆ ಬಂದ ನಂತರ ನನ್ನ ಚಿಕ್ಕ ತಮ್ಮ ಈ ವಿಷಯವನ್ನು ತಿಳಿಸಿದ್ದ. ನಿನ್ನ ಜೊತೆ ಕಾಲೇಜ್ನಲ್ಲಿ ಓದುತ್ತಿದ್ನಲ್ಲ ಅವನು, ಈಗ ನಟನಾಗಿದ್ದಾನೆ. **ತಬ್ಬಲಿಯು ನೀನಾದೆ ಮಗನೇ** ಎಂಬ ಸಿನಿಮಾದಲ್ಲಿ ನಾಯಕನ ಪಾತ್ರವನ್ನು ಮಾಡಿದ್ದಾನೆ ಅಂತೆ. ಸಿನಿಮಾ ಹೇಗಿದೆ, ಹೇಗೆ ಅಭಿನಯಿಸಿದ್ದಾನೆ ಅಂತ ನೋಡುವ ಆಸೆಯಾದರೂ ಅದನ್ನು ಪ್ರಕಟಗೊಳಿಸಲಿಲ್ಲ. ನಮ್ಮ ತಂದೆಯ ಎದುರಿಗೆ ಯಾವುದೇ ಹುಡುಗರ ಬಗ್ಗೆ ಮಾತನಾಡುವುದು ಆಸಕ್ತಿ ತೋರುವುದು ಅಸಾಧ್ಯ. ನನ್ನ ಗಂಡನೂ ಅದೇ ಸ್ವಭಾವದವರು. ಆ ಬಾರಿ ಆ ಸಿನಿಮಾವನ್ನು ನೋಡದೇ ಹಾಗೇ ವಾಪಸ್ಸು ಊರಿಗೆ ಹೊರಟು ಹೋದೆವು.

ಆ ನಂತರ, ಮೂರು ವರ್ಷಗಳು ಕಳೆದ ಮೇಲೆ, ಬೆಂಗಳೂರಿಗೆ ವರ್ಗವಾಗಿ ಬಂದೆವು. ಅಷ್ಟು ಹೊತ್ತಿಗೆ ಮಾನು ಕೆಲವಾರು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದನಂತೆ. ಇದುವರೆಗೂ ಅವನ ಯಾವ ಚಲನ

ಚಿತ್ರವನ್ನೂ ನೋಡಿರಲಿಲ್ಲ.

ಜಯನಗರದಲ್ಲಿ ನಮ್ಮ ಮನೆಗೆ ಸಮೀಪದಲ್ಲಿದ್ದ ಒಂದು ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾನೆಂದು ಯಾರೋ ತಿಳಿಸಿದ್ದರು. ಅವನು ಬೆಂಗಳೂರಿನಲ್ಲೇ ಇರುವನೆಂದು ತಿಳಿದರೂ ನನಗೇನೂ ಅವನನ್ನು ಹೋಗಿ ನೋಡಿ ಮಾತನಾಡಿಸುವ ಉದ್ದೇಶ ಇರಲಿಲ್ಲ. ನಮ್ಮ ಸಹಪಾಠಿಯೊಬ್ಬ ಸಿನಿಮಾ ನಟನಾಗಿದ್ದಾನೆಂದರೆ, ಅದೊಂದು ತರಹ ವಿಶೇಷತೆಯೇ. ಆ ಸಮಯದಲ್ಲಿ ತಬ್ಬಲಿಯು ನೀನಾದೆ ಮಗನೇ ಎನ್ನುವ ಸಿನಿಮಾವನ್ನು ನೋಡುವ ಅವಕಾಶ ಸಿಕ್ಕಿತು. ಸಿನಿಮಾ ಏನೂ ಇಷ್ಟವಾಗಲಿಲ್ಲ. ಇದೇ ಹೆಸರಿನ ಕಾದಂಬರಿಯನ್ನು ಓದಿದ್ದೆ. ಕಾದಂಬರಿಯೇ ಚೆನ್ನಾಗಿದೆ ಅಂತೆನ್ನಿಸಿತ್ತು. ಮಾನು ಮೊದಲಿನಂತೆ ತೆಳ್ಳಗಿರಲಿಲ್ಲ. ದಪ್ಪನಾಗಿದ್ದ. ಆನಂತರ ದೂರ ದರ್ಶನದಲ್ಲಿ ಅವನು ನಟಿಸಿದ್ದ ಕೆಲವು ಸಿನಿಮಾಗಳನ್ನು ನೋಡಿದೆ. ರಾಮಾಪುರದ ರಾವಣ, ಅರಿವು, ಹಾಗೂ ಇನ್ನೊಂದೆರಡು.

ಈ ಮಧ್ಯೆ ಮಾನಪ್ಪನಿಗೆ ರಾಜಕೀಯದದಲ್ಲಿ ಯಾವಾಗ ಆಸಕ್ತಿ ಬೆಳೆಯಿತೋ ತಿಳಿಯದು.

ರಾಮಕೃಷ್ಣ ಹೆಗಡೆಯವರ ಪರವಾಗಿ ಚುನಾವಣೆಯ ಪ್ರಚಾರಕ್ಕಾಗಿ ಹೋಗಿದ್ದ ಸಮಯದಲ್ಲಿ ಕಾರು ಅಪಘಾತದಲ್ಲಿ ಮಾನಪ್ಪ ತೀರಿಹೋದ ಎನ್ನುವ ವಿಷಯ ತಿಳಿದು ಆಘಾತವಾಗಿತ್ತು. ಖಂಡಿತವಾಗಿಯೂ ಹೀಗಾಗ ಬಾರದಾಗಿತ್ತು. ನನ್ನ ಕಾಲೇಜು ಸಹಪಾಠಿಯಾಗಿದ್ದ ಎನ್ನುವುದಷ್ಟೇ ನನಗೆ ಅವನ ಬಗ್ಗೆ ಇದ್ದ ಪರಿಚಯ. ಆ ನಂತರ ಅವನನ್ನು ಮತ್ತೆಂದೂ ನೋಡಿರಲಿಲ್ಲ. ನಟನಾಗಿ ಚಲನಚಿತ್ರದಲ್ಲಿ ಮೇಲೇರುತ್ತಿದ್ದ ಸಮಯ, ಅಧ್ಯಾಪಕನಾಗಿ ವಿದ್ಯಾರ್ಥಿಗಳ ಮಾರ್ಗದರ್ಶಿಯಾಗಿದ್ದವ, ರಾಜಕೀಯ ರಂಗವನ್ನು ಪ್ರವೇಶಿಸಿದ ಮೇಲೆ, ಯಾವ ಮಟ್ಟಕ್ಕೆ ಏರುತ್ತಿದ್ದನೋ... ಅದಕ್ಕೆ ಮೊದಲೇ ಹೀಗಾಗಿತ್ತು. ಇದೇ ಸಮಯದಲ್ಲಿ ನಮ್ಮ ತಂದೆ ತೀರಿ ಹೋಗಿ ಕೆಲವು ತಿಂಗಳುಗಳಾಗಿದ್ದವು. ಆ ವ್ಯಥೆಯೇ ಕಾಡಿಸುತ್ತಿತ್ತು. ಅದೇ ಸಮಯದಲ್ಲಿ ಈ ವಾರ್ತೆ. ಚಿಕ್ಕವಯಸ್ಸಿನವ... ಹೀಗಾಗಬಾರದಾ ಗಿತ್ತು... ಅವನ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಮನಸ್ಸು ಅನೇಕ ಬಾರಿ

ಪ್ರಾರ್ಥಿಸಿತು.

ಕಾಲೇಜಿನಲ್ಲಿ ಓದುತ್ತಿದ್ದಾಗ, ಕೇವಲ ನನ್ನ ಸಹಪಾಠಿಯಾಗಿದ್ದ. ಮೂರು ವರ್ಷ ಅವನು ನಮ್ಮೊಡನೆ ಇದ್ದ... ಇದಷ್ಟೇ ನಮ್ಮ ಪರಿಚಯ. ಆದರೂ ಬಹಳ ಬಹಳ ವ್ಯಥೆಯಾಗಿತ್ತು. ಅವನು ನಟಿಸಿದ್ದ 'ಅರಿವು' ಎಂಬ ಸಿನಿಮಾ ನೆನಪಾಗಿತ್ತು. ಮರಣದಂಡನೆಯ ಶಿಕ್ಷೆಗೆ ಗುರಿಯಾಗಿದ್ದ ಖೈದಿಯೊಬ್ಬನು, ಅವನಿಗೇ ಅರಿವಾಗದಂತೆ, ಸುಖವಾದ ಚಿರನಿದ್ರೆಗೆ ಇಳಿಯುತ್ತಾನೆ. ಅದು ಅಭಿನಯವಾಗಿತ್ತು. ಆದರೆ, ಈಗ ಈ ಅಪಘಾತ ಅವನು ಮತ್ತೆಂದೂ ಏಳದಂತೆ ಚಿರನಿದ್ರೆಗೆ ಎಳೆದಿತ್ತು. ಹೃದಯ ಬಹಳ ಭಾರವಾಗಿತ್ತು.

***

೨೭. ಏಗ್ದಾಗೆಲ್ಲ ಐತೆ

ನನ್ನ ಪರಿಚಯದವರೊಬ್ಬರು, ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ನಿವೃತ್ತಿಯಾದವರು. ನಿವೃತ್ತಿಯ ನಂತರ, ದೇವರನಾಮಗಳನ್ನು ಕಲಿಯುವ ಆಸಕ್ತಿಯನ್ನು ಹೊಂದಿ ನನ್ನ ಶಿಷ್ಯೆಯಾದರು. ಆಕೆಗೆ ಸ್ವಲ್ಪ ಅಹಂ ಎನ್ನುವುದು ಅವರ ನಡೆ ನುಡಿಗಳಲ್ಲಿ ಎದ್ದು ಕಾಣುತ್ತಿತ್ತು. ತಾನು ಶಿಕ್ಷಕಿಯಾಗಿ ಅನೇಕ ಮಕ್ಕಳಿಗೆ ಮಾರ್ಗದರ್ಶನ ನೀಡಿ ಮಕ್ಕಳನ್ನು ಸತ್ಪ್ರಜೆಯನ್ನಾಗಿ ಮಾಡಿದೀನಿ. ಅದೆಲ್ಲಾ ನನ್ನ ಪರಿಶ್ರಮ ಎಂದು ಪದೇ ಪದೇ ಹೇಳಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದರು. ಕೆಲವರು ಅವರ ಹಿಂದೆ ಆಕೆಗೆ ಅಹಂಕಾರ, ತನ್ನದೇ ಸರಿ ಎಂಬ ವಾದ ಎಂದು ಆಕೆಯನ್ನು ಜರಿಯುತ್ತಿದ್ದರು. ನನಗೂ ಅದು ನಿಜ ಎನಿಸಿತ್ತು. ಆದರೆ, ಎಲ್ಲರಂತೆ ಆಕೆಯೂ ನನ್ನ ಶಿಷ್ಯೆ ಎಂದು ಸುಮ್ಮನಿದ್ದೆ.

ನನಗೆ ಆಕೆಯ ಮೇಲೆ ಗೌರವವಿತ್ತು. ಎಷ್ಟಾಗಲೀ ಶಿಕ್ಷಕಿಯಾಗಿದ್ದವರು. ಸಚ್ಚರಿತ, ಸದ್ಭಾವನೆಗಳನ್ನು ಹೊಂದಿದಾರೆಂದು ಸ್ವಲ್ಪ ವಿಶೇಷವೇ. ತಾನು ಹೇಳುವುದೇ ಸರಿ, ತಾನು ಮಾಡುವುದೇ ಮೇಲು ಎಂಬ ಆಕೆಯ ಧೋರಣೆ ನನಗೂ ಹಿಡಿಸುತ್ತಿರಲಿಲ್ಲ. ಆದರೆ ಆಕೆಯನ್ನು ಖಂಡಿಸುತ್ತಿರಲಿಲ್ಲ.

ಆಕೆಗೆ ಆಧ್ಯಾತ್ಮದ ಕಡೆ ಒಲವು. ಆಧ್ಯಾತ್ಮ ಚಿಂತನೆ ಚಿಕ್ಕ ವಯಸ್ಸಿನಿಂದಲೆ ಬರಬೇಕು. ನನಗೆ ಆಧ್ಯಾತ್ಮದ ಅರಿವು ಇರುವುದರಿಂದಲೇ ನಾನು ಇಷ್ಟ ಮಟ್ಟಿಗೆ ಮುಂದೆ ಬಂದಿರುವುದು. ನನ್ನದು ಶಿಸ್ತಿನ ಜೀವನ. ಮನೇಲಿ ನಾನು ಹೇಳಿದ್ದೇ ನಡೆಯುತ್ತೆ. ಶಾಲೆಗಳಲ್ಲಿ ನನ್ನ ಸಹೋದ್ಯೋಗಿ

ಗಳು ನಾನು ಹೇಳಿದ್ದೇ ಕೇಳುತ್ತಿದ್ದರು ಅಂತ ತನ್ನನ್ನು ತಾನೇ ಹೊಗಳಿ ಕೊಳ್ಳುತ್ತಿದ್ದರು.

ನನಗೆ ಆಧ್ಯಾತ್ಮದಲ್ಲಿ ಆಸಕ್ತಿ ಇರಲಿಲ್ಲ. ಆದರೆ ಹಾಗಂತ, ಲೌಕಿಕದ ಮೇಲೆ ಒಲವೂ ಇಲ್ಲ. ಆಧ್ಯಾತ್ಮದ ಉದಾತ್ತವಾದ ವಿಷಯಗಳನ್ನು ಹುಡುಕಿಕೊಂಡು ಹೋಗುವ ಆಸೆ ನನಗಿರಲಿಲ್ಲ. ಲೌಕಿಕವನ್ನು ಬಿಟ್ಟು ಹೋಗುವುದು ಬೇಕಿರಲಿಲ್ಲ.

ಈಗೆಲ್ಲಾ ಆಧ್ಯಾತ್ಮ ಆಧ್ಯಾತ್ಮ ಅಂತ ಹೇಳುವ ಪ್ರಬುದ್ಧ ವ್ಯಕ್ತಿಗಳು ಸಾಮಾನ್ಯ ಜನರನ್ನು ಎಲ್ಲೆಲ್ಲಿಗೆ ಎಳೆಯುತ್ತಾರೆ ಎನ್ನುವುದನ್ನು ಎಷ್ಟೆಷ್ಟೋ ಕಾಣುತ್ತೀವಿ. ಆಧ್ಯಾತ್ಮ ಚಿಂತನೆಯ ಹೆಸರಿನಲ್ಲಿ ದುರ್ಬಲ ಮನಸ್ಸಿನವರನ್ನು ಸೆಳೆದು, ಅವರ ತನುಮನ ಧನಗಳನ್ನು ಲೂಟಿ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ನಮ್ಮ ತಂದೆಗೆ ಮೊದಲಿನಿಂದಲೂ, ಇಂಥದ್ದರ ಮೇಲೆ ಆಸಕ್ತಿ ಇರಲಿಲ್ಲ. ನಂಬಿಕೆ ವಿಶ್ವಾಸವೂ ಇರಲಿಲ್ಲ. ನಮಗೂ ಅದೇ ಅಭ್ಯಾಸ.

ಈಕೆ, ನನ್ನ ಶಿಷ್ಯೆ, 'ಹಾಗಿರುವುದು ಸರಿಯಲ್ಲ. ಮನುಷ್ಯನಾಗಿ ಹುಟ್ಟಿದ ಮೇಲೆ ಬರೀ ಲೌಕಿಕ ಲೋಕದಲ್ಲಿರಬಾರದು. ಆಧ್ಯಾತ್ಮ ಪ್ರಪಂಚಕ್ಕೂ ಹೋಗಬೇಕು. ಆಗಲೇ ಆತ್ಮೋದ್ಧಾರ, ಆತ್ಮೋದ್ಧಾರವಾಗದಿದ್ದರೆ, ಬದುಕಿದ್ದೂ ನಿರರ್ಥಕ ಹಾಗೆ, ಹೀಗೆ ಅಂತ ಎಲ್ಲರ ಕಿವಿಯನ್ನೂ ತುಂಬು ತ್ತಿದ್ದರು. ಸ್ವಾಮಿಗಳು, ಗುರುಗಳು, ಗುರುಪೂಜೆ, ಆಶೀರ್ವಾದ, ಪ್ರವಚನ ಎಲ್ಲದರಲ್ಲೂ ಭಾಗವಹಿಸುತ್ತಿದ್ದರು. ಅದು ಅವರ ಆಸಕ್ತಿ ಅವರ ಅನುಕೂಲ. ಇದಕ್ಕೆ ನನ್ನ ಯಾವ ಆಕ್ಷೇಪಣೆಯೂ ಇರಲಿಲ್ಲ. ಆದರೆ ಬೇರೆಯವರನ್ನು ನನ್ನಂತೆ ನೀವು ಇಲ್ಲ ಅಂತ ಆಕೆ ಹೇಳುವ ಧಾಟಿ ನನಗೆ ಸರಿ ಹೋಗುತ್ತಿರಲಿಲ್ಲ. ಆದರೆ ಈ ಬಗ್ಗೆ ಆಕೆಯೊಡನೆ ವಾದ ಮಾಡುತ್ತಿರಲಿಲ್ಲ. ಆ ಸಹನೆಯೂ ನನಗಿರಲಿಲ್ಲ. ಸಮಯವೂ ಇರಲಿಲ್ಲ. ಆಕೆ ಹೇಳಿದ್ದನ್ನು ಕೇಳಿಸಿಕೊಂಡು ಸುಮ್ಮನಾಗುತ್ತಿದ್ದೆ. ನನಗೆ ನನ್ನ ಮನೆ ಕೆಲಸ, ನನ್ನ ಹವ್ಯಾಸಗಳ ಕಡೆ ಗಮನಕೊಟ್ಟರೆ ಸಾಕಾಗಿತ್ತು.

ನಾನು ಹೆಚ್ಚಾಗಿ ಯಾರ ಮನೆಗೂ ಹೋಗುತ್ತಿರಲಿಲ್ಲ. ಆ ಅಭ್ಯಾಸ

ಬಾಲ್ಯದಿಂದಲೂ ಬರಲಿಲ್ಲ. ಈ ಬಗ್ಗೆ ನನ್ನನ್ನೂ ಎಷ್ಟೋ ಜನ ಎಷ್ಟೋ ಸಲ ಆಕ್ಷೇಪಿಸಿದ್ದರು.

ಒಮ್ಮೆ ನಾನು ಅವರ ಮನೆಗೆ ಹೋಗಬೇಕಾದ ಪ್ರಮೇಯ ಬಂತು. ನಮ್ಮ ಮನೆಯಲ್ಲಿ ಒಟ್ಟಿಗೇ ಮೂರು ಬಾಳೆಗೊನೆಗಳು ಬಿಟ್ಟು, ಹಣ್ಣಾದವು. ಹಣ್ಣುಗಳನ್ನು ನನಗೆ ಬೇಕಾದವರಿಗೆ ಕೊಡುವ ಕೆಲಸ ನನಗೆ ಒದಗಿ ಬಂತು. ಅವರ ಮನೆ ನಮ್ಮ ಮನೆಗೆ ಸಮೀಪದಲ್ಲೇ ಇತ್ತು. ಒಂದು ಚಿಪ್ಪು ಬಾಳೆ ಹಣ್ಣನ್ನು ತೆಗೆದುಕೊಂಡು ಅವರ ಮನೆಗೆ ಹೋದೆ. ಆತ್ಮೀಯವಾಗಿ ಸವಾಗತಿಸಿ ವೆರಾಂಡದಲ್ಲಿ ಕೂರಿಸಿದರು. ಅಲ್ಲಿ ಒಂದು ಸಣ್ಣ ಟೇಬಲ್ ಮೇಲೆ ಕೆಲವು ಪುಸ್ತಕಗಳಿದ್ದವು. ಆಕೆ ಒಳಗೆ ಎದ್ದು ಹೋಗಿದ್ದಾಗ, ಪುಸ್ತಕಗಳ ಮೇಲೆ ಗಮನ ಹರಿಸಿ, ಕೈಗೆತ್ತಿಕೊಂಡು ನೋಡಿದೆ. ಒಂದು ಶ್ರೀ ಶಂಕರಾಚಾರ್ಯರಿಗೆ ಸಂಬಂಧಿಸಿದ ಪುಸ್ತಕ... ಇನ್ನೊಂದು ಬೆಳಗೆರೆ ಕೃಷ್ಣಶಾಸ್ತ್ರಿಗಳು ಬರೆದ "ಏಗ್ಮಾಗೆಲ್ಲ ಐತೆ" ಎಂಬ ಹೆಸರಿನ ಪುಸ್ತಕ. ಕುತೂಹಲದಿಂದ ಪುಟಗಳನ್ನು ತಿರುವಿದೆ. ಕಣ್ಣು ಹಾಯಿಸಿದ. ಅಷ್ಟರಲ್ಲಿ ಆಕೆ ಹೊರಕ್ಕೆ ಬಂದಿದ್ದರು.

"ಈ ಪುಸ್ತಕನ ಓದಿದೀರಾ?..." ಕೇಳಿದರು.

"ಇಲ್ಲ. ಅದಕ್ಕೆ ನೋಡ್ತಿದ್ದೆ. ಕೃಷ್ಣಶಾಸ್ತ್ರಿಗಳು ಬರೆದಿರೋದು. ಇವರು ರವಿ ಬೆಳೆಗೆರೆಯ ತಾತ..." ನನಗೆ ತಿಳಿದಿದ್ದನ್ನು ಹೇಳಿ ಪುಸ್ತಕವನ್ನು ಅತ್ತ ಇಟ್ಟೆ. ಆಕೆ ಪುಸ್ತಕವನ್ನು ಕೈಗೆತ್ತಿಕೊಂಡರು. "ಏಗ್ದಾದೆಲ್ಲಾ ಐತೆ" ಎನ್ನುವ ಹೆಸರಿನ ಮೇಲೆ ಬೆರಳುಗಳನ್ನಾಡಿಸಿದರು.

"ಹೀಗಂದ್ರೆ ಏನು ಅರ್ಥ ಹೇಳಿ..." ಸವಾಲನ್ನು ಎಸೆಯುವಂತೆ ನನ್ನನ್ನು ಪ್ರಶ್ನಿಸಿದರು.

ನನಗೆ ಈ ಪ್ರಶ್ನೆ ಅನಿರೀಕ್ಷಿತ. ಉತ್ತರ ಹೇಳಲು ತಡವರಿಸಿದೆ. "ಯೋಗದಲ್ಲಿ ಎಲ್ಲವೂ ಇದೆ" ಅಂತ ಅರ್ಥ ಇರಬಹುದು... ಎಂದೆ. ನನ್ನ ಉತ್ತರ ಸರಿ ಎಂದು ನನಗೆ ತಿಳಿದಿದ್ದರೂ, ಅನುಮಾನದೊಂದಿಗೆ ಹೇಳಿದ್ದೆ.

ಆಕೆ ತಕ್ಷಣ ವಿಲಕ್ಷಣವಾಗಿ ನಕ್ಕು ಅಡ್ಡ ತಲೆಯನ್ನಾಡಿಸಿದರು.

ಆಕೆಯ ಮುಖದಲ್ಲಿ ನೀವೆಂಥ ದಡ್ಡಿ, ಅದಕ್ಕೆ ಹೇಳೋದು, ಚಿಂತನೆಯ ಪುಸ್ತಕಗಳನ್ನು ಓದಬೇಕು ಎನ್ನುವ ಭಾವನೆ ಕಂಡಿತು. ನಾನು ಪೆಚ್ಚಾದೆ...

"ಏಗೋದು ಅಂದ್ರೆ ಗೊತ್ತಲ್ವಾ?... ಏಗೋದು.. ಪರಿಶ್ರಮ ಪಡೋದು ಅಂತ. ಅದರಲ್ಲೇ ಎಲ್ಲಾ ಅಡಗಿದೆ ಅಂತ ಅರ್ಥ ಆಕೆ ಬಿಡಿಸಿ ಹೇಳಿದರು. ಎಷ್ಟಾಗಲೀ ಶಿಕ್ಷಕಿ ಅಲ್ಲವೇ... ಆ ಉತ್ತರ ಸರಿಯಲ್ಲ ಅಂತ ಅನ್ನಿಸಿದರೂ ಹೇಳುವ ಮನಸ್ಸು ಮಾಡಲಿಲ್ಲ. ನಾನು ಹಳ್ಳಿಯಲ್ಲಿ ಬೆಳೆದವಳು ಸ್ವಲ್ಪ ಮಟ್ಟಿಗೆ ಹಳ್ಳಿಯ ಆಡು ಭಾಷೆಯ ಜ್ಞಾನ ನನಗಿತ್ತು. ಯೋಗ ಎನ್ನುವುದಕ್ಕೆ ಹಳ್ಳಿ ಭಾಷೆಯಲ್ಲಿ ಏಗ ಅನ್ನುತ್ತಾರೆ ಅನ್ನೋದು ಚೆನ್ನಾಗಿ ಗೊತ್ತಿತ್ತು. ಆಕೆ ಮತ್ತೆ ಎದ್ದು ಒಳಕ್ಕೆ ಹೋಗಿದ್ದಾಗ ಪುಸ್ತಕದ ಒಳಗೆ ಮತ್ತೆ ನೋಟ ಹರಿಸಿದೆ. ಕೆಲವು ಕಡೆ ಯೋಗ, ಯೋಗ ಎನ್ನುವ ಪದಗಳು ಕಂಡು ಬಂದವು. ಆಗ ನನ್ನ ಉತ್ತರ ಸರಿ ಎನ್ನುವುದು ಖಚಿತವಾಗಿತ್ತು. ಪುಸ್ತಕವನ್ನು ಅತ್ತ ಇಟ್ಟು, "ನೀವು ಈ ಪುಸ್ತಕವನ್ನು ಓದಿದೀರಾ?" ಅಂತ ಕೇಳಿದೆ.

"ಓ... ಎರಡು ಸಾರಿ ಓದಿದೀನಿ" ಆಕೆ ಜರ್ಜಾಗಿ ಹೇಳಿಕೊಂಡರು. "ನೀವೂ ಓದಿ... ಆದರೆ ಒಂದು ವಾರದೊಳಗೆ ಓದಿ ಕೊಡ್ಬೇಕು ಇದು ನನ್ನ ಮಗಳ ಪುಸ್ತಕ" ಜತೆಯಲ್ಲಿ ಆಕೆ ನಿರ್ಬಂಧವನ್ನು ಹೇರಿದರು.

"ಏಗ್ದಾದ್ಗೆಲ್ಲಾ ಏನೈತೆ" ಅಂತ ಓದಿಯೇ ಬಿಡೋಣ ಎಂದುಕೊಂಡು ಪುಸ್ತಕವನ್ನು ಕುತೂಹಲದಿಂದ ಎತ್ತಿಟ್ಟುಕೊಂಡೆ. ಅದರೊಂದಿಗೆ, ಆಕೆ ಶಂಕರಾಚಾರ್ಯರ ಪುಸ್ತಕವನ್ನು ಕೊಟ್ಟರು. ಕಾಫಿಯನ್ನು ಕುಡಿದು, ಅರಿಶಿನ ಕುಂಕುಮವನ್ನು ತೆಗೆದುಕೊಂಡು ಅಲ್ಲಿಂದ ಹೊರಟೆ.

ಕೆಲಸ ನಡುವೆ ಬಿಡುವು ಮಾಡಿಕೊಂಡು ಕೃಷ್ಣಶಾಸ್ತ್ರಿಯವರು ಬರೆದ ಪುಸ್ತಕವನ್ನು ಓದಿದೆ. 'ಮುಕುಂದೂರ ಸ್ವಾಮಿ' ಎಂಬುವರ ವಿಶೇಷತೆ ಗಳನ್ನು ಪವಾಡಗಳನ್ನು ವಿವರಿಸಿರುವ ಪುಸ್ತಕ ಅದು... ವಿದ್ಯಾವಂತರಲ್ಲದ ಒಬ್ಬ ಸ್ವಾಮೀಜಿಯನ್ನು ಜನ ಸಾಮಾನ್ಯರು ಹೇಗೆ ಅವರ ಜ್ಞಾನವನ್ನು ಗುರುತಿಸಿದರು, ಅವರ ಹಿರಿಮೆಯನ್ನೂ ಅರಿತರು ಎಂದು ತಿಳಿಸುವ ಪುಸ್ತಕ ಅದು. ಮುಕಂದೂರು ಸ್ವಾಮಿಗಳ ಚರಿತ್ರೆಯನ್ನು ಬಿಂಬಿಸುವ

ಪುಸ್ತಕ. ಯಾವ, ಸುಖ, ಸೌಲಭ್ಯದ ಅಪೇಕ್ಷೆ ಇಲ್ಲದೆ, ಜನರ ಕಷ್ಟಗಳಿಗೆ ಸ್ಪಂದಿಸುವ, ಹಳ್ಳಿಯ ಭಾಷೆಯನ್ನಾಡುವ ಒಬ್ಬ ಮನುಷ್ಯನ ವ್ಯಕ್ತಿ ಚಿತ್ರಣ. "ಎಲ್ಲಾ ಅವನದ್ದೇ.. ಅವನನ್ನೆ ಕೇಳಿ... ಅವನಿದಾನಲ್ಲ... ಅಂತ ಅವನು ಅವನು ಅಂತ ಹೇಳುವುದು ಬೇರೆ ಯಾರನ್ನೂ ಕುರಿತಲ್ಲ. ದೇವರನ್ನು, ದೇವರನ್ನು ಅತೀ ಸಲುಗೆಯಿಂದ ತನ್ನ ಗೆಳೆಯನಂತೆ ಕಾಣುವ ಆ ಸ್ವಾಮಿಯ ಮೇಲೆ ಅಲ್ಲಿಯ ಜನರಿಗೆ ಅಪಾರ ನಂಬಿಕೆ. ಕೆಲವೊಮ್ಮೆ ಪವಾಡಗಳೂ ನಡೆದು, ಸ್ವಾಮೀಜಿ ಪವಾಡ ಪುರುಷರೆಂದೇ ಪ್ರಸಿದ್ಧ ರಾದವರು. ನಂದೇನೈತೆ? ಎಲ್ಲಾ ಏಗ್ದಾಗೇ ಐತೆ" ಎಂದು ಹೇಳುವ ನಿಜವಾದ ಅರ್ಥ, ಎಲ್ಲವೂ ಯೋಗದಲ್ಲೇ ಇದೆ. ಅಂತ. ಯೋಗದಲ್ಲಿ ಹೇಗೆ ಬರೆದಿದೆಯೋ... ಹಾಗೆ ಹುಟ್ಟು ಸಾವು, ಹೆಂಡ್ತಿ ಮಕ್ಕಳು, ಮನೆ ಮಠ ಎಲ್ಲವೂ ಯೋಗದಲ್ಲೇ ಇರುವುದು. ಎಲ್ಲಾ ಅವನೇ ನೋಡ್ಕೋತಾನೆ ಎಂದು ಸ್ವಾಮೀಜಿ ಗ್ರಾಮ್ಯ ಭಾಷೆಯಲ್ಲಿ ಹೇಳುತ್ತಿದ್ದುದು, 'ಏಗ್ದಾಗೆಲ್ಲಾ ಐತೆ' ಅಂತ ಎಲ್ಲವೂ ಯೋಗಾಯೋಗದಿಂದ ಕೂಡಿ ಬರುತ್ತದೆ ಎಂದು ಹೇಳುವ ಅರ್ಥವೂ ಹೌದು. ಹಾಗಂತ ಶಾಸ್ತ್ರಿಗಳೇ ಪುಸ್ತಕದ ಕಡೆಯ ಪುಟಗಳಲ್ಲಿ ಬರೆದಿದ್ದಾರೆ... ಇದನ್ನು ಓದಿ ನನಗೆ ಜ್ಞಾನೋದಯವಾಯಿತು.

ಆಕೆಯ ಮಾತನ್ನು ಕೇಳಿಕೊಂಡು ಮೂಢಳೋ, ಮೂರ್ಖಳೋ ಆಗುವುದು ತಪ್ಪಿತು. ಇದು ನನ್ನ ಯೋಗದಲ್ಲಿ ಬರೆದಿತ್ತು. "ಏನೇನೋ ಅಂದ್ಕೊಂಡು ಏಗೋದು ತಪ್ಪಿತು. ಆಕೆ ನನ್ನನ್ನು ಒರೆಗೆ ಹಚ್ಚಿದರೋ, ತನ್ನನ್ನು ತಾನು ಒರೆಗೆ ಹಚ್ಚಿಕೊಂಡರೋ ನನಗಂತೂ ಖಂಡಿತಾ ಗೊತ್ತಿಲ್ಲ.

ಕೆಲವು ದಿನಗಳ ನಂತರ ಆಕೆಗೆ ಪುಸ್ತಕಗಳನ್ನು ವಾಪಸ್ಸು ಕೊಟ್ಟೆ. "ಓದಿದ್ರಿ ಅಲ್ವಾ? ಏನನ್ನಿಸ್ತು?" ಆಕೆ ಕೇಳಿದರು.

"ಚೆನ್ನಾಗಿದೆ" ಎಂದಷ್ಟೇ ಹೇಳಿದೆ. ಬಿಡಿಸಿ ಹೇಳಿ, ಚರ್ಚೆ ಮಾಡುವ ವ್ಯವಧಾನ ನನಗಿರಲಿಲ್ಲ.

ಅದಕ್ಕೇ ಹೇಳೋದು, ಇಂಥಾ ಮಹಾನುಭಾವರ ಕತೆಗಳನ್ನು ಓದ್ಬೇಕು ಅಂತ. ಅವರು ಜೀವನವೆಲ್ಲಾ ಏಗಿದರು. ಏಗಿ ಏಗಿ ಪ್ರಖ್ಯಾತರಾದರು ಎಂದರು... ಸ್ವತಃ ಅವರ ಪರಿಚಯ ತಮಗೆ ಇದೆ ಎನ್ನುವಂತೆ.

ನಾನು ಸುಮ್ಮನೆ ನಕ್ಕಂತೆ ಮಾಡಿದೆ, "ಗಂಡ ಮಕ್ಕಳ ಜೊತೆ, ಸ್ಕೂಲಿನಲ್ಲಿ ಮಕ್ಕಳ ಜೊತೆ ದಿನ ನಿತ್ಯ ನಾನು ಏಗಿ ಏಗಿಯೇ ಈ ಮಟ್ಟಕ್ಕೆ ಬಂದಿರೋದು. ನನಗಿರುವ ಆತ್ಮಶಕ್ತಿ ಯಾರಿಗೂ ಇಲ್ಲ." ತನ್ನನ್ನು ತಾನು ಹೊಗಳಿಕೊಂಡರು. ಇದಕ್ಕೂ ಚಾಕಚಕ್ಯತೆ ಬೇಕು. ಎಲ್ಲರಿಗೂ ಹೀಗೆ ಹೇಳಿಕೊಳ್ಳುವ ಪ್ರವೀಣತೆ ಇರುವುದಿಲ್ಲ ಎಂದುಕೊಂಡೆ.

ಈಕೆಯೊಡನೆ ದಿನ ನಿತ್ಯ ಏಗುವ ಗಂಡನ ಬಗ್ಗೆ ಮರುಕ ಎನಿಸಿತು. ನಿತ್ಯವೂ ಏಗುವ ಪರಿಶ್ರಮಿಯೋ, ಇದನ್ನೇ ಒಂದು ಯೋಗ ಎಂದು ಭಾವಿಸಿರುವ ಯೋಗಿಯೋ... ಅಥವಾ ಎಲ್ಲವನ್ನೂ ಮೀರಿದ ಯೋಗ್ಯ ವ್ಯಕ್ತಿಯೋ... ಅಂತೂ ಈ ಒಂದು 'ಯೋಗಾಯೋಗ' ಕೂಡಿ ಬಂದು ನಾನು ಏನಾದೆನೋ...?

***



'ನೆನಪಿನ ನವರಸ'ಗಳು ಪ್ರಸಂಗಗಳ ಸಂಕಲನ. ಕಂಡಿದ್ದು, ಕೇಳಿದ್ದ, ನೆನಪಿನ ನೆಲ ಮಾಳಿಗೆಯಲ್ಲಿ ಉಳಿದಿದ್ದ ಪ್ರಸಂಗಗಳನ್ನು, ವಿಷಯಗಳನ್ನು ಬರೆದಿದ್ದೇನೆ. ಯಾವುದೇ ವಿಷಯವನ್ನು ಹೇಳುವಾಗ, ಬರೆಯುವಾಗ, ಸವಿಸ್ತಾರವಾಗಿ ತಿಳಿಸುವ ಚಪಲ ನನ್ನದು. ಹಾಗಾಗಿ ಪ್ರಸಂಗಗಳಿಗೆ, ಪೀಠಿಕೆ, ಮಧ್ಯಭಾಗ ಹಾಗೂ ಹಿನ್ನುಡಿಗಳಿವೆ. ನನಗೆ ತಿಳುವಳಿಕೆ ಬಂದಾಗಿನಿಂದ, ಬೆಳೆಯುವಾಗ, ಓದುವಾಗ, ಓಡಾಡುವಾಗ, ಸಿಕ್ಕ ಅನೇಕ ವಿಷಯಗಳನ್ನು ಬರೆದಿದ್ದೇನೆ. ಹಳ್ಳಿಯಲ್ಲಿ ಬೆಳೆಯುವಾಗ, ದನಕರುಗಳು, ಕ್ರಿಮಿ ಕೀಟಗಳೊಡನೆ ಆದ ಅನುಭವಗಳು, ವಿದ್ಯಾಭ್ಯಾಸ ಮಾಡುವಾಗ, ಸ್ಕೂಲಿನಲ್ಲಿ ಕಾಲೇಜಿನಲ್ಲಿ ನಡೆದ ಫಜೀತಿಗಳು, ಮದುವೆಯಾಗಿ ಗಂಡನ ಮನೆಗೆ ನವವಧುವಾಗಿ ಹೋದ ಸಂದರ್ಭ, ಬೇರೆ ಬೇರೆ ಊರುಗಳಲ್ಲಿ ನಡೆದ ಘಟನೆಗಳು, ಪರದಾಟಗಳು, ಬೆಂಗಳೂರಿಗೆ ಬಂದು ಇರತೊಡಗಿದ ಮೇಲೆ, ಅಲ್ಲಿ ಇಲ್ಲಿ ವನವಿಹಾರ, ವಾಯುವಿಹಾರಕ್ಕೆಂದು ತೆರಳಿದಾಗ ನಡೆದ ತಮಾಷೆಯ ಸಂಗತಿಗಳು... ಎಲ್ಲವನ್ನು ಬರೆದಿದ್ದೇನೆ. ಇಲ್ಲಿ ನವರಸಗಳೆಲ್ಲವೂ ಇಲ್ಲದಿದ್ದರೂ, ರಸಮಯವಾಗಿರಬಹುದು ಎಂಬ ಅನಿಸಿಕೆ ನನ್ನದು.

– ಪದ್ಮಾ ಶ್ರೀಧರ್